ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ





ಎಸ್ಸೆಸ್ಸೆಲ್ಸಿ- ಪಿಯುಸಿ

ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ,
ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವೀ ಶಿಕ್ಷಕರಿಂದ ಸಿದ್ಧಪಡಿಸಿರುವ ‘ಮಾದರಿ ಪ್ರಶ್ನೋತ್ತರ’ ಗಳ ಪರೀಕ್ಷಾ ದಿಕ್ಸೂಚಿ ಶೀಘ್ರದಲ್ಲೇ...

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪಿಂಚಣಿ ಭವಿಷ್ಯಕ್ಕೆ ಸಾಲದು ಎನ್ನುವ ಕೂಗು • ಬೀದಿಗಿಳಿದ ನೌಕರರು

ಇಳಿಗಾಲಕ್ಕೆ ಕಾಡುವ ಚಿಂತೆ

• ಸಚ್ಚಿದಾನಂದ ಕುರಗುಂದ

ಒಳನೋಟ
ಎನ್‌ಪಿಎಸ್ ವಿರುದ್ಧ ಹೋರಾಟ
ಪ್ರತಿಕ್ರಿಯಿಸಿ: 9606038256
feedback@prajavani.co.in

ಬೆಂಗಳೂರು: ಬಾಗೇಪಲ್ಲಿಯ ಪ್ರೌಢಶಾಲೆಯ ನಿವೃತ್ತ ಶಿಕ್ಷಕರೊಬ್ಬರ ಪಿಂಚಣಿ ಕೇವಲ 1,322 ರೂಪಾಯಿ. ಬಾಳಿನ ಮುಸ್ಸಂಜೆಯಲ್ಲಿ ಆರ್ಥಿಕ ಅಭದ್ರತೆ ಬದುಕಿನ ನೆಮ್ಮದಿ ಕಸಿದುಕೊಂಡಿರುವುದು ಆತಂಕ ಮೂಡಿಸಿದೆ. ಬಾಗಲಕೋಟೆಯ ನಿವೃತ್ತ ಪಿಎಸ್‌ಐವೊಬ್ಬರ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಸೇನೆಯಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾದ ಬಳಿಕ ಪೊಲೀಸ್ ಇಲಾಖೆ ಸೇರಿದ್ದರು. ಈಗ ಇವರಿಗೆ ದೊರೆಯುತ್ತಿರುವ ಪಿಂಚಣಿ 2,500 ರೂಪಾಯಿ.

ಹೊಸ ಪಿಂಚಣಿ ಯೋಜನೆಯ (ಎನ್‌ಪಿಎಸ್) ತಂದ ಆಪತ್ತು ಇದು ಎನ್ನುವುದು ರಾಜ್ಯ ಸರ್ಕಾರಿ ನೌಕರರ ಅಳಲು. ‘ಈಗಿನ ದುಬಾರಿ ಯುಗದಲ್ಲಿ ಪುಡಿಗಾಸಿನ ಪಿಂಚಣಿಯಲ್ಲಿ ಬದುಕಲು ಸಾಧ್ಯವೇ? ಏರುತ್ತಿರುವ ಬೆಲೆ, ದುಬಾರಿಯಾದ ಚಿಕಿತ್ಸೆ, ಇಳಿಯುತ್ತಿರುವ ಠೇವಣಿ ಮೇಲಿನ ಬ್ಯಾಂಕ್ ಬಡ್ಡಿ ದರದಲ್ಲಿ ನೆಮ್ಮದಿಯಾಗಿ ಬದುಕಲು ಸಾಧ್ಯವೇ’ ಎನ್ನುವ ಪ್ರಶ್ನೆಯನ್ನು ನೌಕರರು ಮುಂದಿಡುತ್ತಾರೆ.ಎನ್‌ಪಿಎಸ್ ಹಣಕಾಸಿನ ಸಂಕಷ್ಟದ ಜತೆ ಸಾಮಾಜಿಕ ಅಭದ್ರತೆಯನ್ನೂ ಸೃಷ್ಟಿಸಿದೆ ಎನ್ನುವ ದೂರುಗಳು ಕೇಳಿಬರುತ್ತಿವೆ.

ಎನ್‌ಪಿಎಸ್ ರದ್ದುಗೊಳಿಸಿ, ಹಳೆ ಪಿಂಚಣಿ ಯೋಜನೆಯನ್ನೇ (ಒಪಿಎಸ್) ಜಾರಿಗೊಳಿಸುವಂತೆ ನೌಕರರು ನಡೆಸುತ್ತಿರುವ ಹೋರಾಟ ಈಗ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಉದ್ಯೋಗದ ಭದ್ರತೆಯಲ್ಲಿ ಸಂಭ್ರಮಿಸುವ ಸರ್ಕಾರಿ ನೌಕರರು ಎನ್‌ಪಿಎಸ್ ತಮ್ಮ ಬದುಕಿಗೆ ಮಾರಕ ಎಂದೇ ಪ್ರತಿಪಾದಿಸುತ್ತಿದ್ದಾರೆ.

ಈ ಪಿಂಚಣಿ ಯೋಜನೆ ಪ್ರಮುಖ ರಾಜಕೀಯ ವಿಷಯವಾಗಿಯೂ ಪರಿವರ್ತನೆಗೊಂಡಿದೆ. ವಿಧಾನಸಭೆ ಚುನಾವಣೆ ನಡೆಯುತ್ತಿರುವ ರಾಜ್ಯಗಳಲ್ಲಿ ರಾಜಕೀಯ ಪಕ್ಷಗಳು ಮತ ಸೆಳೆಯುವ ತಂತ್ರವಾಗಿ ಒಪಿಎಸ್ ಜಾರಿಗೊಳಿಸುವುದಾಗಿ ಪ್ರಣಾಳಿಕೆಯಲ್ಲಿ ಪ್ರಕಟಿಸಿ ಸರ್ಕಾರಿ ನೌಕರರಿಗೆ ಭರವಸೆಯ ಮಹಾಪೂರವನ್ನೇ ಹರಿಸುತ್ತಿವೆ. ಪಂಜಾಬ್, ರಾಜಸ್ಥಾನ, ಛತ್ತೀಸಗಡ, ಜಾರ್ಖಂಡ್ ರಾಜ್ಯ ಸರ್ಕಾರಗಳು ಎನ್‌ಪಿಎಸ್ ರದ್ದುಪಡಿಸಿವೆ. ಪಶ್ಚಿಮ ಬಂಗಾಳದಲ್ಲಿ ಎನ್‌ಪಿಎಸ್ ಜಾರಿಗೊಳಿಸಿಯೇ ಇಲ್ಲ.

ಹಳೆ ಪಿಂಚಣಿ ಯೋಜನೆಯನ್ನು ಮರುಜಾರಿಗೊಳಿಸಲು ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷದ ಸರ್ಕಾರ ಅನುಮೋದನೆ ನೀಡಿದೆ. 2004ರಲ್ಲಿ ಪಂಜಾಬ್‌ನಲ್ಲಿ ಈ ವ್ಯವಸ್ಥೆ ಸ್ಥಗಿತಗೊಳಿಸಲಾಗಿತ್ತು. ಎನ್‌ಪಿಎಸ್ ವಂತಿಗೆ ₹16,746 ಕೋಟಿ ಸಂಗ್ರಹವಾಗಿದ್ದು, ಈ ಮೊತ್ತವನ್ನು ಪಿಂಚಣಿ ನಿಧಿ ನಿಯಂತ್ರಣ ಹಾಗೂ ಅಭಿವೃದ್ಧಿ ಪ್ರಾಧಿಕಾರ(ಪಿಎಫ್‌ಆರ್‌ಡಿಎ) ಮರುಪಾವತಿಸಬೇಕು ಎಂದು ಪಂಜಾಬ್ ಸರ್ಕಾರ ಕೋರಿದೆ. ಛತ್ತೀಸಗಡ ಸರ್ಕಾರ ಸಹ ತನ್ನ ನೌಕರರ ₹17 ಸಾವಿರ ಕೋಟಿ ಮೊತ್ತವನ್ನು ಮರುಪಾವತಿಸುವಂತೆ ಮನವಿ ಮಾಡಿದೆ. ಈ ಮೊತ್ತವನ್ನು ಸಾಮಾನ್ಯ ಭವಿಷ್ಯ ನಿಧಿಯಲ್ಲಿ (ಜಿಪಿಎಫ್) ತೊಡಗಿಸಲಾಗುವುದು ಎಂದು ಅದು ತಿಳಿಸಿದೆ.

ಗುಜರಾತ್‌ನಲ್ಲಿಯೂ ಅಧಿಕಾರಕ್ಕೆ ಬಂದರೆ ಒಪಿಎಸ್ ಮರುಜಾರಿಗೊಳಿಸುವುದಾಗಿ ಆಮ್ ಆದ್ಮಿ ಪಕ್ಷ ಮತ್ತು ಕಾಂಗ್ರೆಸ್ ನೌಕರರಿಗೆ ಭರವಸೆ ನೀಡುತ್ತಿವೆ. ಹಿಮಾಚಲ ಪ್ರದೇಶದ ವಿಧಾನ ಸಭಾ ಚುನಾವಣಾ ಪ್ರಚಾರ ದಲ್ಲೂ ಇದೇ ವಿಷಯ ಪ್ರಮುಖ ಚರ್ಚೆಗೆ ಕಾರಣವಾಗಿತ್ತು. ಅಸ್ಸಾಂನಲ್ಲೂ ಸರ್ಕಾರಿ ನೌಕರರು ಒಪಿಎಸ್ ಜಾರಿಗೆ ನಿರಂತರ ಹೋರಾಟ ನಡೆಸುತ್ತಿದ್ದಾರೆ.

‘ಹಳೇ ಪಿಂಚಣಿ ವ್ಯವಸ್ಥೆಯಲ್ಲಿ ಕೊನೆಯ ತಿಂಗಳ ಸಂಬಳದ ಅರ್ಧದಷ್ಟಾದರೂ ಪಿಂಚಣಿ ದೊರೆಯುವುದು ನಿಶ್ಚಿತವಾಗಿತ್ತು. ಜತೆಗೆ, ಸರ್ಕಾರ ಆಗಾಗ ಕೈಗೊಳ್ಳುವ ನಿರ್ಧಾರದಂತೆ ಇತರ ಭತ್ಯೆಗಳ ಹೆಚ್ಚಳದ ಸೌಲಭ್ಯ ದೊರೆಯುತ್ತಿತ್ತು. ಆದರೆ, ಎನ್‌ಪಿಎಸ್ ಹಣಕಾಸಿನ ಸಂಕಷ್ಟದ ಜತೆ ಸಾಮಾಜಿಕ ಅಭದ್ರತೆ ಸೃಷ್ಟಿಸಿದೆ. ಪುಡಿಗಾಸಿನ ಪಿಂಚಣಿಯಲ್ಲಿ ಬದುಕುವುದು ಹೇಗೆ? ಬಾಳಿನ ಸಂಧ್ಯಾ ಕಾಲದಲ್ಲಿ ನಮ್ಮ ಗೌರವ ಮತ್ತು ಘನತೆ ಉಳಿಸುವುದು ಸರ್ಕಾರದ ಹೊಣೆಗಾರಿಕೆಯಲ್ಲವೇ’ ಎಂದು ನೌಕರರು ಪ್ರಶ್ನಿಸುತ್ತಾರೆ.

ರಾಜ್ಯದಲ್ಲಿ ಎನ್‌ಪಿಎಸ್ ಜಾರಿಯಾಗಿ 16 ವರ್ಷಗಳು ಸಂದಿವೆ. 2006ರ ಏಪ್ರಿಲ್ 1ರಿಂದ ಸೇರಿದ ಸರ್ಕಾರಿ ನೌಕರರಿಗೆ ಎನ್‌ಪಿಎಸ್ ಜಾರಿಗೊಳಿಸಲಾಗಿದೆ. ಸುಮಾರು 2.5 ಲಕ್ಷ ನೌಕರರು ಈ ವ್ಯವಸ್ಥೆ ವ್ಯಾಪ್ತಿಯಲ್ಲಿದ್ದಾರೆ. ಈ ಯೋಜನೆ ಅಡಿಯಲ್ಲಿ ಮೂಲ ವೇತನದಲ್ಲಿನ ಶೇ 10ರಷ್ಟು ವಂತಿಗೆಯನ್ನು ನೌಕರರು ಹಾಗೂ ಶೇ 14ರಷ್ಟು ವಂತಿಗೆಯನ್ನು ಸರ್ಕಾರ ಪಾವತಿಸುತ್ತದೆ.

ಎನ್‌ಪಿಎಸ್‌ಗೆ ಒಳಪಟ್ಟು ನಿವೃತ್ತಿಗೊಂಡಿರುವ ಹಲವು ನೌಕರರು ಮಾಸಿಕ ಪಡೆಯುತ್ತಿರುವ ಪಿಂಚಣಿ ಮೊತ್ತವು ವೃದ್ಧಾಪ್ಯ ವೇತನ ಯೋಜನೆಯಡಿ ಪಡೆಯುವ ಮೊತ್ತದಷ್ಟಿದೆ. ಇದಕ್ಕೆ ಕಳೆದ ಏಪ್ರಿಲ್‌ನಲ್ಲಿ ನಿವೃತ್ತರಾದ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಬದನಗೋಡು–ಕಾನಗೋಡು ಗ್ರಾಮದ ಮುತ್ತು ಪೂಜಾರಿ ಅವರ ಪಿಂಚಣಿ ಮೊತ್ತವೇ ಒಂದು ನಿದರ್ಶನ.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

‘ಸಂವಿಧಾನ ಬದ್ಧ ಹಕ್ಕು ಪಡೆಯಲು ಹೋರಾಟ’



ಸಂವಿಧಾನ ಬದ್ಧವಾಗಿ ದೊರೆಯುವ ನನ್ನ ದುಡ್ಡಿಗೆ ನಾನೇ ಒಡೆಯನಾಗಿರಬೇಕು. ಅದು ನನ್ನ ಹಕ್ಕು. ಆದರೆ, ಈಗ ಸರ್ಕಾರಿ ನೌಕರರನ್ನು ಬಲಿಪಶು ಮಾಡಲಾಗುತ್ತಿದೆ. ವಿಶ್ವಬ್ಯಾಂಕ್ ಮತ್ತು ಐಎಂಎಫ್ ಸೂಚನೆಗಳ ಅನ್ವಯ ಇಂತಹ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಹಳೆ ಪಿಂಚಣಿ ಯೋಜನೆಯನ್ನು ಮತ್ತೆ ಜಾರಿಗೊಳಿಸಿದರೆ ಯಾವುದೇ ರೀತಿ ಕಾನೂನು ತೊಡಕುಗಳಿಲ್ಲ. ಇದು ಎನ್‌ಪಿಎಸ್ ಟ್ರಸ್ಟ್ ಮತ್ತು ಸರ್ಕಾರದ ನಡುವಣ ಒಪ್ಪಂದವಾಗಿರುವುದರಿಂದ ಸಮಸ್ಯೆ ಇಲ್ಲ

ಶಾಂತಾರಾಮ, ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ಅಧ್ಯಕ್ಷ

ಅಂಕಿ-ಅಂಶಗಳು

2.54 ಲಕ್ಷ ಎನ್‌ಪಿಎಸ್ ವ್ಯಾಪ್ತಿಯ ನೌಕರರ ಸಂಖ್ಯೆ

₹6,154.4 ಕೋಟಿ ಎನ್‌ಪಿಎಸ್‌ಗೆ ನೌಕರರ ನಿಯಮಿತ ವಂತಿಗೆ(2022ರ ಏಪ್ರಿಲ್‌ವರೆಗೆ)

₹7,298.36 ಕೋಟಿ ಎನ್‌ಪಿಎಸ್‌ಗಾಗಿ ಸರ್ಕಾರದ ನಿಯಮಿತ ವಂತಿಗೆ (2022ರ ಏಪ್ರಿಲ್‌ವರೆಗೆ)

₹4.01 ಕೋಟಿ 2021–22ನೇ ಸಾಲಿಗೆ ಎನ್‌ಎಸ್‌ಡಿಎಲ್‌ಗೆ ಪಾವತಿಸಿರುವ ಒಟ್ಟು ಸೇವಾ ಮೊತ್ತ



ಕಂಬಳ ಸಂಭ್ರಮ ಕರಾವಳಿಯಲ್ಲಿ ಆಧುನಿಕ ಕಂಬಳದ ಋತು ಆರಂಭಗೊಂಡಿದ್ದು, ಈ ಋತುವಿನ ಮೊದಲ ಕಂಬಳ ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಉಳಿ ಗ್ರಾಮದ ಕಕ್ಯಪದವು ಮೈರ ಬರ್ಕೆಜಾಲಿನಲ್ಲಿ ಶನಿವಾರ ನಡೆಯಿತು. ಸತ್ಯ-ಧರ್ಮ ಜೋಡುಕರೆ ಬಯಲು ಕಂಬಳದ ಓಟದ ಮೋಹಕ ನೋಟ

–ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್

ಪುಂಡಾಟಿಕೆ ನಿಯಂತ್ರಣಕ್ಕೆ ಆಗ್ರಹ

ಸಿ.ಎಂ ಸೂಚನೆ: ಮಹಾರಾಷ್ಟ್ರ ಸಿಎಸ್ ಜತೆ ರಾಜ್ಯದ ಎಸಿಎಸ್ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಜ್ಯ ಗಡಿ ವಿವಾದ ಮತ್ತು ಭಾಷೆಯ ಕಾರಣದಿಂದ ಕನ್ನಡಿಗರ ಮೇಲೆ ಪುಂಡಾಟಿಕೆ ನಡೆಸುವವರನ್ನು ನಿಯಂತ್ರಿಸುವಂತೆ ರಾಜ್ಯ ಸರ್ಕಾರವು ಮಹಾರಾಷ್ಟ್ರ ಸರ್ಕಾರವನ್ನು ಆಗ್ರಹಪಡಿಸಿದೆ. ಈ ಸಂಬಂಧ ಉಭಯ ರಾಜ್ಯಗಳ ಅಧಿಕಾರಿಗಳ ಹಂತದಲ್ಲಿ ಮಾತುಕತೆಗಳು ಆರಂಭವಾಗಿವೆ.

ಗಡಿ ವಿವಾದಕ್ಕೆ ಸಂಬಂಧಿಸಿದ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬರುತ್ತಿದ್ದಂತೆಯೇ ಎರಡೂ ರಾಜ್ಯಗಳ ಗಡಿ ಭಾಗದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಪುಣೆಯಿಂದ ಅಥಣಿಗೆ ಬರುತ್ತಿದ್ದ ಬಸ್ ಮೇಲೆ ಶುಕ್ರವಾರ ರಾತ್ರಿ ದುಷ್ಕರ್ಮಿಗಳು ಕಲ್ಲು ತೂರಾಟ ನಡೆಸಿದ್ದಾರೆ. ಈ ಘಟನೆಯ ಬಳಿಕ ಮಹಾರಾಷ್ಟ್ರ ಸರ್ಕಾರದ ಅಧಿಕಾರಿಗಳನ್ನು ಸಂಪರ್ಕಿಸಿರುವ ರಾಜ್ಯದ ಅಧಿಕಾರಿಗಳು, ಎರಡೂ ರಾಜ್ಯಗಳ ನಡುವೆ ಸಂಘರ್ಷದ ಸ್ಥಿತಿ ಉದ್ಭವಿಸಲು ಕಾರಣವಾಗುವಂತಹ ಘಟನೆಗಳಿಗೆ ಅವಕಾಶ ನೀಡಬಾರದು ಎಂದು ಆಗ್ರಹಿಸಿದ್ದಾರೆ.

ಮಹಾರಾಷ್ಟ್ರ ಸರ್ಕಾರದ ಅಧಿಕಾರಿಗಳನ್ನು ಸಂಪರ್ಕಿಸಿ ತಕ್ಷಣ ಮಾತುಕತೆ ನಡೆಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜ್ಯದ ಹಿರಿಯ ಅಧಿಕಾರಿಗಳಿಗೆ ಶನಿವಾರ ಬೆಳಿಗ್ಗೆ ಸೂಚಿಸಿದ್ದರು. ಸಾಮರಸ್ಯ ಕದಡುವಂತಹ ಘಟನೆಗಳಿಗೆ ಅವಕಾಶ ನೀಡಬಾರದು ಹಾಗೂ ಕರ್ನಾಟಕದ ಬಸ್, ಜನರು ಮತ್ತು ಅವರ ಆಸ್ತಿಗಳಿಗೆ ರಕ್ಷಣೆ ನೀಡುವಂತೆ ಅಲ್ಲಿನ ಅಧಿಕಾರಿಗಳಿಗೆ ಆಗ್ರಹಿಸಲು ಸೂಚಿಸಿದ್ದರು.

6ನೇ ಪುಟ ನೋಡಿ

ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಲ್ಲ: ಬೊಮ್ಮಾಯಿ

ದಾವಣಗೆರೆ: ‘ಕರ್ನಾಟಕದ ಯಾವುದೇ ಪ್ರದೇಶದಲ್ಲೂ ಬದಲಾವಣೆ ಆಗದು. ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರುವುದಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಪಾದಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗಡಿ ವಿಚಾರವಾಗಿ ಮಹಾರಾಷ್ಟ್ರ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಹೂಡಿರುವ ದಾವೆಯು ಸಂವಿಧಾನ ಬದ್ಧವಾಗಿಲ್ಲ ಎಂಬದಕ್ಕೆ ಒತ್ತು ನೀಡಿ ನಾವು ವಾದ ಮಂಡಿಸುತ್ತಿದ್ದೇವೆ ಎಂದರು. ‘ರಾಜ್ಯದ ಪರ ವಾದ ಮಂಡಿಸಲು ಹಿರಿಯ ವಕೀಲರನ್ನು ನೇಮಿಸಿದ್ದೇವೆ. ಸಲಹೆ ನೀಡಲು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲರನ್ನು ನೇಮಕ ಮಾಡಿದ್ದೇವೆ. ನಾವು ಸಂವಿಧಾನ ಹಾಗೂ ಕಾನೂನು ಬದ್ಧವಾಗಿದ್ದು, ಯಾವುದೇ ಸಮಸ್ಯೆಯಾಗದು’ ಎಂದು ಅಭಿಪ್ರಾಯಪಟ್ಟರು.







ಏಟ್ರಿಯಾ ವಿಶ್ವವಿದ್ಯಾಲಯದ ಕ್ಯಾಂಪಸ್ ಅನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಉದ್ಘಾಟಿಸಿದರು. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಏಟ್ರಿಯಾ ಗುಂಪಿನ ಅಧ್ಯಕ್ಷ ಸಿ.ಎಸ್.ಸುಂದರ್ ರಾಜು ಇದ್ದರು.

'ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ₹ 2 ಲಕ್ಷ ಕೋಟಿ ಹೂಡಿಕೆ'

ಬೆಂಗಳೂರು: 'ಕರ್ನಾಟಕದಲ್ಲಿ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ₹ 2 ಲಕ್ಷ ಕೋಟಿ ಬಂಡವಾಳ ಹೂಡಿಕೆ ಆಗಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಏಟ್ರಿಯಾ ವಿಶ್ವವಿದ್ಯಾಲಯದಲ್ಲಿ ಶನಿವಾರ ನಡೆದ 'ಬಿಯಾಂಡರ್ ಎಮರ್ಜೆನ್ಸಿ ಆ್ಯಂಡ್ ಗ್ರೀನ್ ಫ್ಯೂಚರ್ ಸಮ್ಮಿಟ್'ನಲ್ಲಿ ಉದ್ಯಮಿಗಳ ಜೊತೆ ಅವರು ಸಂವಾದ ನಡೆಸಿದರು. ಇದೇ ಸಂದರ್ಭದಲ್ಲಿ ಏಟ್ರಿಯಾ ವಿಶ್ವವಿದ್ಯಾಲಯದ ಕ್ಯಾಂಪಸ್ ಅನ್ನು ಮುಖ್ಯಮಂತ್ರಿ ಉದ್ಘಾಟಿಸಿದರು.

'ಮುಂದಿನ ದಿನಗಳಲ್ಲಿ ಪೆಟ್ರೋಲ್, ಡೀಸೆಲ್‌ಗೆ ಪರ್ಯಾಯವಾಗಿ ನವೀಕರಣ ಇಂಧನ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗಲಿದೆ. ಹೈಡ್ರೋಜನ್ ಉದ್ಯಮದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಯಾಗಲಿದ್ದು, ಕಡಿಮೆ ದರದಲ್ಲಿ ಇಂಧನ ದೊರೆಯುವಂತೆ ಮಾಡಲು ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ'. 'ಎಲೆಕ್ಟ್ರಿಕ್ ವಾಹನಗಳ ಸಂಖ್ಯೆ ಹೆಚ್ಚಿದಂತೆ ಬೆಲೆ ಕಡಿಮೆಯಾಗಲಿದೆ' ಎಂದರು.

'ಎನ್‌ಇಪಿಯನ್ನು ಜಾರಿಗೊಳಿಸಲು ಖಾಸಗಿಯವರ ಪಾತ್ರವೂ ದೊಡ್ಡದಿದೆ. ಶಿಕ್ಷಣ ಸಂಸ್ಥೆಗಳು ಸರ್ಕಾರದೊಂದಿಗೆ ಸಹಯೋಗ ಮಾಡಿ ಕೊಂಡು ಕಾರ್ಯನಿರ್ವಹಿಸಬಹುದು' ಎಂದರು.

'ಭಾರತದಲ್ಲಿ ಜನಸಂಖ್ಯೆ ದೊಡ್ಡ ಪ್ರಮಾಣದಲ್ಲಿದೆ. ಇಲ್ಲಿ ಉದ್ಯೋಗ ಸೃಷ್ಟಿಸುವುದು ದೊಡ್ಡ ಜವಾಬ್ದಾರಿ. ಮಾನವ ಸಂಪನ್ಮೂಲ ಹಾಗೂ ತಂತ್ರಜ್ಞಾನ ಹೊಂದಾಣಿಕೆ ಮಾಡಿಕೊಂಡು ಶಿಕ್ಷಣ ನೀಡುವ ವ್ಯವಸ್ಥೆಯಾಗಬೇಕು' ಎಂದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಏಟ್ರಿಯಾ ಗುಂಪಿನ ಅಧ್ಯಕ್ಷ ಸಿ.ಎಸ್. ಸುಂದರ್ ರಾಜು ಇದ್ದರು.

'ಆಡಳಿತಕ್ಕೆ ತಾಯ್ತನದ ಸ್ಪರ್ಶವಿರಲಿ'

ಲೇಖಕಿ ಬಿ.ಟಿ.ಲಲಿತಾ ನಾಯಕ್ ಅಭಿಮತ • 'ಇಂದಿರಾ ರತ್ನ ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜದಲ್ಲಿನ ಸಮಸ್ಯೆಗಳು ಸರಿಹೋಗಲು ಆಡಳಿತದಲ್ಲಿ ತಾಯ್ತನದ ಸ್ಪರ್ಶ ಇರಬೇಕು. ಹಾಗಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ರಾಜಕೀಯಕ್ಕೆ ಬರುವಂತಾಗಬೇಕು' ಎಂದು ಲೇಖಕಿ ಬಿ.ಟಿ. ಲಲಿತಾನಾಯಕ್ ತಿಳಿಸಿದರು.

ಕರ್ನಾಟಕ ಲೇಖಕಿಯರ ಸಂಘವು ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 'ಇಂದಿರಾ ರತ್ನ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದರು.

'ನಮ್ಮ ದೇಶದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅವುಗಳ ಬಗ್ಗೆ ಲೇಖಕಿಯರು ಚಿಂತಿಸಿ, ಸರ್ಕಾರದ ಗಮನಕ್ಕೆ ತರಬೇಕು. ಈಗ ಬಣ್ಣಗಳ ಮೇಲೆ ರಾಜಕೀಯವಾಗುತ್ತಿದೆ. ಬಿಳಿಯ ಬಣ್ಣವೇ ಶ್ರೇಷ್ಠ ಎಂಬಂತಾಗಿದೆ. ಬಿಳಿಯ ಬಣ್ಣ ಶುಭ್ರತೆಯ ಸಂಕೇತ. ಇದನ್ನು ನಾವು ಅರಿಯಬೇಕು. ಕೌದಿಯಂತಹ ಬಣ್ಣ ಬಣ್ಣಗಳಿಂದ ತುಂಬಿದ ದೇಶ ನಮ್ಮದಾಗಬೇಕು' ಎಂದು ಹೇಳಿದರು.

'ಇಂದಿರಾ ಮತ್ತು ರತ್ನ ಇಬ್ಬರು ತಂಗಿಯರ ಹೆಸರಿನಲ್ಲಿ ಒಬ್ಬ ಅಣ್ಣ ಪ್ರಶಸ್ತಿ ಇಟ್ಟಿರುವುದು ನಿಜಕ್ಕೂ ಆಶ್ಚರ್ಯ. ನಾನು ಕೂಡ ಗತಿಸಿಹೋದ ತಂಗಿ ಕುಮುದಾ ನಾಯಕ್ ಹೆಸರಿನಲ್ಲಿ ಲೇಖಕಿಯರ ಸಂಘದಲ್ಲಿ ಪ್ರಶಸ್ತಿ ಸ್ಥಾಪಿಸುತ್ತೇನೆ' ಎಂದು ತಿಳಿಸಿದರು.

ಕವಯಿತ್ರಿ ಶಶಿಕಲಾ ವೀರಯ್ಯಸ್ವಾಮಿ, 'ಸಾಹಿತಿಗಳು ಯಾವಾಗಲೂ ವಿರೋಧ ಪಕ್ಷದ ನಾಯಕರ ಹಾಗಿರಬೇಕು. ಆಡಳಿತ ಪಕ್ಷದ ನ್ಯೂನತೆಗಳನ್ನು ಎತ್ತಿ ತೋರಿಸಿ, ಅವರು ಸರಿ ದಾರಿಯಲ್ಲಿ ಹೋಗುವಂತೆ ನೋಡಿಕೊಳ್ಳಬೇಕು. ತಾಯ್ತನ, ಸಾಮಾಜಿಕ ಪ್ರಜ್ಞೆ, ಸಮಾಜಮುಖಿಯಾದ ವಿಷಯಗಳನ್ನು ಎತ್ತಿ ಬರೆಯಬೇಕು' ಎಂದರು.

'ಕವಿತೆ ಬರೆಯುವುದು ಸುಲಭದ ಕೆಲಸವಲ್ಲ. ಅದರಲ್ಲಿ ನಮ್ಮನ್ನೂ ಸಂಪೂರ್ಣವಾಗಿ ತೊಡಗಿಸಿಕೊಂಡಾಗ ಮಾತ್ರ ಉತ್ತಮ ಕವಿತೆಗಳು ಹೊರಬರಲು ಸಾಧ್ಯ. ಕನ್ನಡ ಮಹಿಳಾ ಕವಿಗಳ ಸತ್ವ ನೋಡುವಾಗ ಮಹಿಳೆಯರ ಮೇಲಿನ ದೌರ್ಜನ್ಯ ಎದ್ದು ಕಾಣುತ್ತದೆ. ಇದು ಎಲ್ಲ ನೆಲದಲ್ಲೂ ಆಗಿದೆ' ಎಂದ ಅವರು, ಗ್ರೀಕ್, ಜರ್ಮನ್, ರೋಮ್, ಪಂಜಾಬಿ ಕವಯಿತ್ರಿಯರನ್ನು ಉದಾಹರಿಸಿದರು.

ಜನಪರ ಚಿಂತನೆ: ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ, 'ಕನ್ನಡ ಪರ ಚಟುವಟಿಕೆ, ಹೋರಾಟ ಮಾಡಿದವರಿಗೆ ಈ ಪ್ರಶಸ್ತಿ ನೀಡಬೇಕೆಂಬುದು ಇಂದಿರಾ ರತ್ನ ಪ್ರಶಸ್ತಿ ಸ್ಥಾಪಿಸಿದ ತುಮಕೂರಿನ ರಾಜನ್ ಅವರ ಆಸೆಯಾಗಿತ್ತು. ಬಿ.ಟಿ. ಲಲಿತಾ ನಾಯಕ್ ಅವರ ಜನಪರ ಚಿಂತನೆ ಮತ್ತು ಕಾಳಜಿಗಾಗಿ ಈ ಪ್ರಶಸ್ತಿಯನ್ನು ಅವರಿಗೆ ನೀಡಲಾಗುತ್ತಿದೆ' ಎಂದರು.

ಇದೇ ವೇಳೆ ಪದ್ಮಿನಿ ನಾಗರಾಜ್, ಕೃಷ್ಣಾಬಾಯಿ ಹಾಗಲವಾಡಿ, ಸುಜಾತಾ ವಿಶ್ವನಾಥ್, ಸುಜಾತಾ ಕೆ., ವಿಶಾಲಾ ಆರಾಧ್ಯ, ರಾಜಶ್ರೀ ಕಿಶೋರ್ ಸೇರಿ ಹಲವು ಕವಯಿತ್ರಿಯರು ತಮ್ಮ ಕವಿತೆಗಳನ್ನು ಓದಿದರು.



ಬಿ.ಟಿ. ಲಲಿತಾ ನಾಯಕ್ ಅವರಿಗೆ ಶಶಿಕಲಾ ವೀರಯ್ಯಸ್ವಾಮಿ ಅವರು 'ಇಂದಿರಾ ರತ್ನ ದತ್ತಿ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು. ಸಂಘದ ಅಧ್ಯಕ್ಷೆ ಎಚ್.ಎಲ್ ಪುಷ್ಪಾ, ಉಪಾಧ್ಯಕ್ಷೆ ಜಯಲಕ್ಷ್ಮಿ ಪಾಟೀಲ, ಖಜಾಂಜಿ ಮಂಜುಳಾ ಶಿವಾನಂದ ಹಾಗೂ ಸಹಕಾರ್ಯದರ್ಶಿ ಮಂಜುಳಾ ಬಿ.ವಿ. ಇದ್ದಾರೆ. – ಪ್ರಜಾವಾಣಿ ಚಿತ್ರ

ಮತದಾರರ ಪಟ್ಟಿ ಪರಿಷ್ಕರಣೆ: ಪಿಐಎಲ್‌ಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಚಿಲುಮೆ ಸಂಸ್ಥೆ ಮತ್ತು ಈ ಅಕ್ರಮದ ಹಿಂದಿರುವವರನ್ನು ಪತ್ತೆಹಚ್ಚಿ ಕಠಿಣ ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು' ಎಂದು ಕೋರಿ, 'ನೈಜ ಹೋರಾಟಗಾರರ ವೇದಿಕೆ' ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಅವರಿಗೆ ಮನವಿ ಸಲ್ಲಿಸಿದೆ.

ವೇದಿಕೆಯ ಮುಖಂಡ ಎಚ್.ಎಂ.ವೆಂಕಟೇಶ್ ಈ ಸಂಬಂಧ ಮನವಿ ಪತ್ರ ಬರೆದಿದ್ದು, 'ಮತದಾರರ ಖಾಸಗಿ ಮಾಹಿತಿ ಕಳವು ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಡುಗೋಡಿ ಮತ್ತು ಹಲಸೂರು ಗೇಟ್ ಪೊಲೀಸ್ ಠಾಣೆಗಳಲ್ಲಿ 2 ಕ್ರಿಮಿನಲ್ ಪ್ರಕರಣ ದಾಖಲಾಗಿವೆ. ಸರ್ಕಾರದಿಂದ ಸತ್ಯಾಸತ್ಯತೆ ಹೊರಬರುವ ನಂಬಿಕೆಯಿಲ್ಲ. ಕಾರಣ, ತಾವು ಮಧ್ಯ ಪ್ರವೇಶಿಸಿ ನ್ಯಾಯಮೂರ್ತಿಗಳ ಸುಪರ್ದಿಯಲ್ಲಿಯೇ ಈ ತನಿಖೆ ನಡೆಯುವಂತೆ ನೋಡಿಕೊಳ್ಳಬೇಕು. 'ಕಾನೂನಿನ ಚೌಕಟ್ಟಿನಡಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು. ನಮ್ಮ ಈ ಮನವಿಯನ್ನು ಪಿಐಎಲ್ ಆಗಿ ಪರಿಗಣಿಸಬೇಕು' ಎಂದಿದ್ದಾರೆ.

ಅದ್ದೂರಿ ಕನಕ ಜಾತ್ರಾ ಮಹೋತ್ಸವ

ಪ್ರಜಾವಾಣಿ ವಾರ್ತೆ



ಕನಕ ಜಾತ್ರಾ ಮಹೋತ್ಸವದಲ್ಲಿ ಮಹಿಳೆಯರು ಕಳಶ ಹೊತ್ತು ಸಾಗಿದರು

ಕೆ.ಆರ್.ಪುರ: ಇಲ್ಲಿನ ರಾಮಮೂರ್ತಿನಗರದ ಎನ್ ಆರ್ ಐ ಬಡಾವಣೆಯಲ್ಲಿ ಶ್ರೀಕನಕ ಜನ ಜಾಗೃತಿ ಕುರುಬರ ಸಂಘದ ವತಿಯಿಂದ ಸಂತಕವಿ ದಾಸ ಶ್ರೇಷ್ಠ ಭಕ್ತ ಕನಕದಾಸರ 535ನೇ ಜಯಂತಿ ಪ್ರಯುಕ್ತ ಅದ್ದೂರಿಯಾಗಿ ಕನಕ ಜಾತ್ರಾ ಮಹೋತ್ಸವ ನಡೆಯಿತು.

108 ಕುಂಭ ಹೊತ್ತ ಮಹಿಳೆಯರು ಹಾಗೂ ಭವ್ಯ ಪಲ್ಲಕ್ಕಿ ರಥದ ಮೂಲಕ ಹೊರಟ ಭಕ್ತ ಕನಕದಾಸರ ಕಂಚಿನ ಮೂರ್ತಿಯ ಮೆರವಣಿಗೆ, ಡೊಳ್ಳು ಕುಣಿತ ಮತ್ತು ತಮಟೆ ವಾದ್ಯದೊಂದಿಗೆ ಕಲ್ಕೆರೆ ಗ್ರಾಮದ ಶ್ರೀ ಕಾಶಿ ವಿಶ್ವನಾಥ ದೇವಸ್ಥಾನದಿಂದ ಎನ್ ಆರ್ ಐ ಬಡಾವಣೆಯ ಬೃಹತ್ ವೇದಿಕೆಗೆ ತಲುಪಿತು.

ಕೋಲಾರ ತಾಲ್ಲೂಕು ವೇಮಗಲ್ ಚಂದ್ರಪ್ಪ ತಂಡದವರು ಭಕ್ತರ ಮೇಲೆ ತೆಂಗಿನಕಾಯಿ ಹೊಡೆಯುವ ಮಹಾ ಪವಾಡ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಕಾಗಿನೆಲೆ ಮಹಾಸಂಸ್ಥಾನ ಹೊಸದುರ್ಗ ಶಾಖಾಮಠದ ಪೀಠಾಧ್ಯಕ್ಷ ಈಶ್ವರಾನಂದಪುರಿಸ್ವಾಮಿ ಮಾತನಾಡಿ, 'ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿ ಸಂತ ದಾಸ ಶ್ರೇಷ್ಠ ಭಕ್ತ ಕನಕದಾಸರ ಜಯಂತಿ ಆಚರಿಸುವಂತಾಗಬೇಕು' ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ, ಕಲಬುರಗಿ ವಿಭಾಗೀಯ ತಿಂಥಿಣಿ ಮಹಾಸಂಸ್ಥಾನ ಮಠದ ಸಿದ್ದರಾಮಾನಂದ ಸ್ವಾಮೀಜಿ, ಸುಕ್ಷೇತ್ರ ಭೂಕೈಲಾಸ ಹುಲಜಂತಿ ಮಠದ ಮಾಳಿಂಗರಾಯ ಸ್ವಾಮೀಜಿ, ಮುಖಂಡರಾದ ಕಲ್ಕೆರೆ ಎಂ ರೇವಣ್ಣ, ಸಂಘದ ಅಧ್ಯಕ್ಷ ಕೃಷ್ಣಪ್ಪ ಇದ್ದರು.

'ಆರೋಗ್ಯ ಆರೈಕೆ ವೃತ್ತಿಪರರ ನೋಂದಣಿಯಲ್ಲಿ ರಾಜ್ಯಕ್ಕೆ ಅಗ್ರಸ್ಥಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಅಡಿ ಆರೋಗ್ಯ ವೃತ್ತಿಪರರು ಮತ್ತು ಆರೋಗ್ಯ ಸೌಲಭ್ಯ ನೋಂದಣಿಯಲ್ಲಿ ರಾಜ್ಯವು ಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಸ್ಥಾನದಲ್ಲಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ರಾಜ್ಯದ ಆರೋಗ್ಯ ಕ್ಷೇತ್ರದ ಸಾಧನೆಗಳನ್ನು ಹಂಚಿಕೊಂಡಿರುವ ಅವರು, 'ಆರೋಗ್ಯ ಆರೈಕೆ ವೃತ್ತಿಪರರ ನೋಂದಣಿ (ಎಚ್.ಪಿ.ಆರ್) ವಲಯದಲ್ಲಿ 28,643 ವೈದ್ಯರು ಮತ್ತು ದಾದಿಯರು ನೋಂದಣಿಯಾಗಿದ್ದಾರೆ. ಈ ಮೂಲಕ ರಾಜ್ಯ ಮೊದಲ ಸ್ಥಾನದಲ್ಲಿದೆ. ಆರೋಗ್ಯ ಸೌಲಭ್ಯ ನೋಂದಣಿಯಲ್ಲಿ (ಎಚ್.ಎಫ್.ಆರ್) ಕರ್ನಾಟಕ 2ನೇ ಸ್ಥಾನದಲ್ಲಿದ್ದು, 27,244 ಸೌಲಭ್ಯಗಳನ್ನು ಕಲ್ಪಿಸಲಾಗಿದೆ' ಎಂದು ಹೇಳಿದರು.

'ದೇಶದಲ್ಲಿ 1.35 ಕೋಟಿ ಜನರು ಆಯುಷ್ಮಾನ್ ಭಾರತ್ ಆರೋಗ್ಯ ಖಾತೆ (ಎಬಿಎಚ್‌ಎ) ಹೊಂದಿದ್ದಾರೆ. ರಾಜ್ಯದಲ್ಲಿ 4.58 ಲಕ್ಷ ಜನರ ದಾಖಲೆಗಳನ್ನು ಈಗಾಗಲೇ ಎಬಿಎಚ್‌ಎಗೆ ಲಿಂಕ್ ಮಾಡಲಾಗಿದೆ. ರೋಗಿಗಳು ಸರದಿಯಲ್ಲಿ ನಿಂತು ಕಾಯುವುದನ್ನು ತಪ್ಪಿಸಲು ಇಲ್ಲಿನ ಸರ್.ಸಿ.ವಿ.ರಾಮನ್ ಸಾರ್ವಜನಿಕ ಆಸ್ಪತ್ರೆಯು ಕ್ಯೂಆರ್ ಕೋಡ್ ವ್ಯವಸ್ಥೆಯನ್ನು ಪರಿಚಯಿಸಲಾಗಿದೆ. ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ' ಎಂದು ಅವರು ಹೇಳಿದರು.

'ಕ್ಯೂಆರ್ ಕೋಡ್ ವ್ಯವಸ್ಥೆಯನ್ನು ಎಲ್ಲಾ ವೈದ್ಯಕೀಯ ಕಾಲೇಜು, ಜಿಲ್ಲಾ ಆಸ್ಪತ್ರೆಗಳು ಮತ್ತು ಹೆಚ್ಚಿನ ಒತ್ತಡ ಇರುವ ತಾಲ್ಲೂಕು ಆಸ್ಪತ್ರೆಗಳಲ್ಲಿ ಜಾರಿಗೊಳಿಸಲಾಗುವುದು' ಎಂದು ಹೇಳಿದರು.

ಸುದ್ದಿ 2 ನಿಮಿಷ

ಪ್ಲಾಸ್ಟಿಕ್ ನಿಷೇಧ: ಬೈಕ್ ಜಾಥಾ ಇಂದು

ಬೆಂಗಳೂರು: ಪ್ರವಾಸಿ ತಾಣ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ಪ್ಲಾಸ್ಟಿಕ್ ನಿಷೇಧ ಮಾಡಬೇಕು ಎಂದು ಒತ್ತಾಯಿಸಿ ಬೈಕ್ ಜಾಥಾವನ್ನು ಭಾನುವಾರ ಆಯೋಜಿಸಲಾಗಿದೆ.

ನಗರದ ಸ್ವಯಂ ಜಾಗೃತಿ ಸೇವಾ ಟ್ರಸ್ಟ್ ವತಿಯಿಂದ ಜಾಥಾ ಹಮ್ಮಿಕೊಳ್ಳಲಾಗಿದೆ. ಈ ಬಾರಿಯ ರಾಜ್ಯೋತ್ಸವದ ಅಂಗವಾಗಿ ಶಿವಗಂಗೆಯಲ್ಲಿ ಸ್ವಚ್ಛತೆಯ ಜೊತೆಗೆ ಸಾರ್ವಜನಿಕರು ಮತ್ತು ಸ್ಥಳೀಯ ಅಂಗಡಿಯವರಿಗೆ ಪ್ಲಾಸ್ಟಿಕ್ ಬಳಕೆಯಿಂದಾಗುವ ಪರಿಣಾಮದ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ ಎಂದು ಟ್ರಸ್ಟ್‌ನ ಶ್ರೀಕಾಂತ್ ಅವರು ತಿಳಿಸಿದರು.

ಬೈಕ್ ಜಾಥಾಗೆ ಹಲವು ತಂಡಗಳು ಕೈಜೋಡಿಸಿವೆ. ಈ ಅಭಿಯಾನದಲ್ಲಿ ಕಿರಿಯ ಸರ್ಕಾರಿ ಶಾಲೆ ಮಕ್ಕಳಿಗೆ ಬ್ಯಾಗ್ ವಿತರಣೆ ಮಾಡಲಿದ್ದೇವೆ. ನಗರದ 8ನೇ ಮೈಲಿ, ಪಾರ್ಲೆ ಬಿಸ್ಕಟ್ ಫ್ಯಾಕ್ಟರಿ ಸಮೀಪದಿಂದ ನ.27ರ ಭಾನುವಾರ ಬೆಳಿಗ್ಗೆ 7.30ಕ್ಕೆ ಜಾಥಾ ಆರಂಭಿಸುತ್ತೇವೆ. ಆಸಕ್ತರೂ ಭಾಗವಹಿಸಬಹುದು ಎಂದರು. ಮಾಹಿತಿಗೆ 9902902096.



ಪಿಂಚಣಿ ಹೋರಾಟ ಮುಂದುವರಿಕೆ

ಬೆಂಗಳೂರು: 'ಪಿಂಚಣಿ ಸೌಲಭ್ಯ ಕಲ್ಪಿಸಬೇಕು' ಎಂದು ಒತ್ತಾಯಿಸಿ ಅನುದಾನಿತ ಶಾಲಾ-ಕಾಲೇಜುಗಳ ನೌಕರರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿರುವ ಪ್ರತಿಭಟನೆ ಶನಿವಾರವೂ ಮುಂದುವರಿಯಿತು.

ರಾಜ್ಯ ಅನುದಾನಿತ ಶಾಲಾ-ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ವತಿಯಿಂದ ಹಮ್ಮಿಕೊಂಡಿರುವ ಪ್ರತಿಭಟನೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ನೌಕರರು ಸರದಿ ಪ್ರಕಾರ ಪಾಲ್ಗೊಳ್ಳುತ್ತಿದ್ದಾರೆ.

'ಅನುದಾನಿತ ಶಾಲೆ–ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು, ಪಿಂಚಣಿ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಪಿಂಚಣಿಗೆ ಆಗ್ರಹಿಸಿ ಹಲವು ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡುತ್ತಿದ್ದು, ಸರ್ಕಾರದಿಂದ ಭರವಸೆ ಮಾತ್ರ ಸಿಗುತ್ತಿದೆ. ಹೀಗಾಗಿ, ಈ ಬಾರಿ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಲಾಗಿದೆ. ನಮ್ಮ ಹೋರಾಟ ಶನಿವಾರ 51ನೇ ದಿನ ಪೂರೈಸಿದೆ. 'ಹಳೆಯ ನಿಶ್ಚಿತ ಪಿಂಚಣಿ' ಸೌಲಭ್ಯ ಕಲ್ಪಿಸುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ' ಎಂದು ಪ್ರತಿಭಟನಕಾರರು ಹೇಳಿದರು.

ಐಆರ್‌ಬಿ ಯೋಧನಿಂದ ಇಬ್ಬರು ಸಹೋದ್ಯೋಗಿಗಳ ಹತ್ಯೆ

ಪೋರ್‌ಬಂದರ್ (ಪಿಟಿಐ): ಗುಜರಾತ್‌ನ ಪೋರ್‌ಬಂದರ್ ಬಳಿಯ ತುಕ್ಡಾ ಗೋಸಾ ಗ್ರಾಮದಲ್ಲಿ ಇಂಡಿಯನ್ ರಿಸರ್ವ್ ಬೆಟಾಲಿಯನ್‌ನ (ಐಆರ್‌ಬಿ) ಯೋಧರೊಬ್ಬರು ಶನಿವಾರ ಗುಂಡು ಹಾರಿಸಿ ಇಬ್ಬರು ಸಹೋದ್ಯೋಗಿಗಳನ್ನು ಹತ್ಯೆಗೈದಿದ್ದು, ಇನ್ನಿಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಡಿಸೆಂಬರ್ 1ರಂದು ವಿಧಾನಸಭಾ ಚುನಾವಣೆಯ ಮೊದಲ ಹಂತದ ಮತದಾನ ಇಲ್ಲಿ ನಡೆಯಲಿದ್ದು, ಐಆರ್‌ಬಿಯ ಮಣಿಪುರ ಎಸ್‌ಎಪಿ ಕಂಪನಿಯ ಯೋಧರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು ಎಂದಿದ್ದಾರೆ.

'ಯೋಧರೊಬ್ಬರು ತಮ್ಮ ಬಳಿಯಿದ್ದ ಎ.ಕೆ.47 ರೈಫಲ್‌ನಿಂದ ಸಹೋದ್ಯೋಗಿಗಳತ್ತ ಗುಂಡು ಹಾರಿಸಿದ್ದಾರೆ. ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದರೆ, ಇನ್ನಿಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಯಾವ ಕಾರಣಕ್ಕೆ ಗುಂಡು ಹಾರಿಸಿದ್ದಾರೆ ಎಂಬುದು ತಿಳಿದುಬಂದಿಲ್ಲ. ಈ ಕುರಿತು ತನಿಖೆ ನಡೆಯುತ್ತಿದೆ' ಎಂದು ಹೇಳಿದ್ದಾರೆ.

ಆಟೊರಿಕ್ಷಾ ಕದಿಯುತ್ತಿದ್ದ ಆರೋಪಿ ಬಂಧನ

ಬೆಂಗಳೂರು: ತಂಗುದಾಣ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ಆಟೊರಿಕ್ಷಾ ಕಳ್ಳತನ ಮಾಡುತ್ತಿದ್ದ ಆರೋಪಿ ಅಮ್ಜದ್ ಖಾನ್ (36) ಎಂಬುವರನ್ನು ಕೆ.ಪಿ. ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಜಗಜೀವನರಾಮ್ ನಗರ ಸಂಗಮ ವೃತ್ತದ ನಿವಾಸಿ ಅಮ್ಜದ್, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಈತನನ್ನು ಬಂಧಿಸಿ ₹ 4.10 ಲಕ್ಷ ಮೌಲ್ಯದ ನಾಲ್ಕು ಆಟೊರಿಕ್ಷಾ ಜಪ್ತಿ ಮಾಡಲಾಗಿದೆ' ಎಂದರು.

'ಹ್ಯಾಂಡಲ್ ಲಾಕ್ ಮುರಿದು ಆಟೊರಿಕ್ಷಾ ಕದ್ದೊಯ್ಯುತ್ತಿದ್ದ ಆರೋಪಿ, ಕೆಲದಿನ ನಿರ್ಜನ ಪ್ರದೇಶಗಳಲ್ಲಿ ನಿಲ್ಲಿಸುತ್ತಿದ್ದ. ನಂತರ, ತನ್ನದೇ ಆಟೊರಿಕ್ಷಾ ಎಂಬುದಾಗಿ ಹೇಳಿ ಮಾರುತ್ತಿದ್ದ. ಬಂದ ಹಣವನ್ನು ಐಷಾರಾಮಿ ಜೀವನಕ್ಕೆ ಖರ್ಚು ಮಾಡುತ್ತಿದ್ದ. ಕೆ.ಪಿ.ಅಗ್ರಹಾರದಲ್ಲಿ ಎರಡು ಆಟೊರಿಕ್ಷಾ ಹಾಗೂ ವಿಜಯನಗರ, ಕಲಾಸಿಪಾಳ್ಯದಲ್ಲಿ ತಲಾ ಒಂದು ಆಟೊರಿಕ್ಷಾ ಕದ್ದಿದ್ದ' ಎಂದರು.

ಕರ್ನಾಟಕ ರಾಜ್ಯ ಬಂಜಾರ ನೌಕರರ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘ (ರಿ), ಬೆಂಗಳೂರು
ಬಂಜಾರ ಸಾಂಸ್ಕೃತಿಕ ಉತ್ಸವ ಮತ್ತು ದೀಪಾವಳಿ ಮೇರಾ – 2022

ಮಾನ್ಯ ಬಂಜಾರ ಬಂಧುಗಳೇ...

ಕರ್ನಾಟಕ ಬಂಜಾರ ನೌಕರರ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘ (ರಿ), ಬೆಂಗಳೂರು ಹಾಗೂ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಸಂಘದ 25ನೇ ವರ್ಷದ ಬೆಳ್ಳಿಮಹೋತ್ಸವ ಸಂಭ್ರಮಾಚರಣೆಯ ಪ್ರಯುಕ್ತ ದಿನಾಂಕ: 27.11.2022ರಂದು ಸಂಜೆ 4.00 ಗಂಟೆಗೆ ಡಾ|| ಬಿ.ಆರ್.ಅಂಬೇಡ್ಕರ್ ಭವನ, ವಸಂತನಗರ ಬೆಂಗಳೂರು ಇಲ್ಲಿ "ಸಾಂಸ್ಕೃತಿಕ ಉತ್ಸವ & ಮೇರಾ-2022 ಯನ್ನು" ಹಮ್ಮಿಕೊಂಡಿರುತ್ತೇವೆ. ಈ ಕಾರ್ಯಕ್ರಮದಲ್ಲಿ ಬಂಜಾರ ಸಮುದಾಯದ ಎಲ್ಲಾ ಚುನಾಯಿತ ಪ್ರತಿನಿಧಿಗಳು, ಬಂಜಾರ ಸಂಘಟನೆಗಳ ಪದಾಧಿಕಾರಿಗಳು, ಸಮುದಾಯದ ಪ್ರಮುಖರು, ನೌಕರರು, ಕಲಾವಿದರು ಮತ್ತು ಬಂಜಾರ ಸಮುದಾಯದವರು "ಸಾಂಸ್ಕೃತಿಕ ಉತ್ಸವ & ಮೇರಾ2022 ದಲ್ಲಿ"ಭಾಗವಹಿಸಿ ಯಶಸ್ವಿಗೊಳಿಸಲು ಕೋರಿದೆ.

"ಸರ್ವರಿಗೂ ಆದರದ ಸ್ವಾಗತ"

ಡಾ|| ಕುಮಾರ್ ನಾಯ್ಕ್, ಅಧ್ಯಕ್ಷರು | ಡಾ|| ಬಿ.ಆರ್.ಹರೀಶ್ ನಾಯ್ಕ, ಪ್ರಧಾನ ಕಾರ್ಯದರ್ಶಿಗಳು

ನೈಋತ್ಯ ರೈಲ್ವೆ

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಸೂಚನೆ ಸಂ.: HE-11-2022-23

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	ಹುಬ್ಬಳ್ಳಿಯ ಓಆರ್‌ಹೆಚ್‌ನಲ್ಲಿ 10 ಕೊಠಡಿಗಳ ಜೀರ್ಣೋದ್ಧಾರಕ್ಕೆ ಸಂಬಂಧಿಸಿದಂತೆ ಮಾಡಬೇಕಾದ ವಿದ್ಯುತ್ ಕಾಮಗಾರಿ.	ರೂ. 8,43,500/-
2	ಧಾರವಾಡ ಮತ್ತು ಬೆಳಗಾವಿ ರೈಲ್ವೇ ನಿಲ್ದಾಣಗಳಲ್ಲಿ ಸೋಲಾರ್ ವಿದ್ಯುತ್ ಸ್ಥಾವರದ ಪೂರೈಕೆ.	ರೂ. 1,95,39,200/-
3	ಹುಬ್ಬಳ್ಳಿ ವಿಭಾಗದ ವಿವಿಧ ಸೇವಾ ಕಟ್ಟಡಗಳಿಗೆ ಬೇಕಾದ ಸೋಲಾರ್ ವಿದ್ಯುತ್ ಸ್ಥಾವರಗಳ ಪೂರೈಕೆ.	ರೂ. 1,61,80,900/-
4	ಹುಬ್ಬಳ್ಳಿ ವಿಭಾಗದ ವಿವಿಧ ಕಟ್ಟಡಗಳಲ್ಲಿ ವಿದ್ಯುತ್ ತಟಸ್ಥಗೊಳಿಸಲು ಬೇಕಾದ ಸೋಲಾರ್ ವಿದ್ಯುತ್ ಸ್ಥಾವರಗಳ ಪೂರೈಕೆ.	ರೂ. 2,10,65,700/-
5	ರೈಲುಸೌಧದಲ್ಲಿ ಹವಾ ನಿಯಂತ್ರಣ ಅನುಸ್ಥಾಪನೆಗಳಲ್ಲಿ ಸರ್ಕ್ಯೂಟ್ ವೈರಿಂಗ್ ಅನ್ನು ಮರುವಿತರಣೆ ಮಾಡುವುದು.	ರೂ. 32,92,688/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19.12.2022, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ವಿದ್ಯುತ್ ಇಂಜಿನಿಯರ್/ಸಾಮಾನ್ಯ, ಹುಬ್ಬಳ್ಳಿ
PUB/512/AAD/PRB/SWR/2022-23
S.W.Railways SWRRLY SWRRLY

ನೈಋತ್ಯ ರೈಲ್ವೆ

ಸಾರ್ವಜನಿಕ ಪ್ರಕಟಣೆ

ಟೆಂಡರು ಸೂಚನೆಗಳನ್ನು ಹಿಂತೆಗೆದುಕೊಳ್ಳುವುದು

ಈ ಮೂಲಕ ಸಂಬಂಧಪಟ್ಟ ಎಲ್ಲರಿಗೂ ತಿಳಿಸುವುದೇನೆಂದರೆ ಕೆಳಗೆ ನಮೂದಿಸಲಾದ ಟೆಂಡರುಗಳನ್ನು ಆಡಳಿತ ಖಾತೆಯಿಂದ ಹಿಂತೆಗೆದುಕೊಳ್ಳಲಾಗಿದೆ.

1. ಕೇಟರಿಂಗ್ ಯೂನಿಟ್‌ಗಳಿಗಾಗಿ ಆಹ್ವಾನಿಸಲಾದ ಟೆಂಡರು:NIT B/C.79/GMU/CS/Tender/01/2015, ದಿನಾಂಕ: 09.04.2015
2. ಬಂಗಾರಪೇಟೆಯಲ್ಲಿ ಸಸ್ಯಾಹಾರಿ ಉಪಹಾರ ಕೇಂದ್ರಕ್ಕಾಗಿ ಆಹ್ವಾನಿಸಲಾದ ಟೆಂಡರು: NIT B/C.79/ Catg./VRR/BWT/2015, ದಿನಾಂಕ: 26.08.2015
3. ಬೆಂಗಳೂರು ಸಿಟಿ ರೈಲು ನಿಲ್ದಾಣದಲ್ಲಿ ಫ್ರೂಟ್ & ಫ್ರೂಟ್ ಜ್ಯೂಸ್ ಸ್ಟಾಲ್‌ಗಳಿಗಾಗಿ ಆಹ್ವಾನಿಸಲಾದ ಟೆಂಡರು: NIT B/C.79/Fruit & Fruit Juice Stalls /A1/2015, ದಿನಾಂಕ: 23.01.2015

ಮೇಲಿನ ಟೆಂಡರ್ ಸೂಚನೆ/ಗಳಿಗೆ ಪ್ರತಿಕ್ರಿಯೆಯಾಗಿ ತಮ್ಮ ಪ್ರಸ್ತಾಪವನ್ನು ಸಲ್ಲಿಸಿದ ಟೆಂಡರ್‌ದಾರರು ಇಎಮ್‌ಡಿ ಮರುಪಾವತಿಗಾಗಿ ಈ ಕಚೇರಿಗೆ ವಿನಂತಿಯನ್ನು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು
PUB/511/AAD/PRB/SWR/2022-23
S.W.Railways SWRRLY SWRRLY

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂ.: 15/2022, ದಿನಾಂಕ: 16.11.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಐಆರ್‌ಇಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ-ಟೆಂಡರನ್ನು ಆಹ್ವಾನಿಸಲಾಗಿದೆ :

ಸಂಕ್ಷಿಪ್ತ ವಿವರಣೆ: ಕಂಟಿನ್ಯೂಯಸ್ ಕಾಸ್ಟ್ ಕಾಪರ್ ವೈರ್ ರಾಡುಗಳಿಂದ ತಯಾರಿಸಲಾದ ಜಾಯಿಂಟ್ ಲೆಸ್ ಗ್ರೂವ್ಡ್ ಕಾಪರ್ ಕಾಂಟಾಕ್ಟ್ ವೈರ್, 107 ಚ.ಮಿಮೀ2, ವಿನ್ಯಾಸ ಟಿಐ ಎಸ್‌ಪಿಸಿ ಓಹೆಚ್‌ಇ ಸಿಡಬ್ಲ್ಯೂ 0971, ಎಸ್‌ಟಿಆರ್: ಟಿ1, ಎಸ್‌ಟಿಆರ್: 017, ಆರ್‌ಇಸಿ 02. (ಪರಿಮಾಣ: 3.75 ಕಿಮೀ) (ಟೆಂಡರು ಸಂ: L8226063A)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.12.2022, 14:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು
PUB/509/AAD/PRB/SWR/2022-23
S.W.Railways SWRRLY SWRRLY

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಈ ಕೆಳಕಂಡ ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಮತ್ತು ಇಲ್ಲಿ ಕೆಳಗಿನ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಹಾಗೂ ಇಲ್ಲಿ ಇನ್ನುಮುಂದೆ "ಷೆಡ್ಯೂಲ್ ಪ್ರಾಪರ್ಟಿ" ಎನ್ನಲಾಗುವ 1) ಸರ್ವೆ ನಂ. 94/2 ವಿಸ್ತೀರ್ಣ ಸುಮಾರು 13 ಗುಂಟಾ 2) 85/3 (ಹಿಂದಿನ ಸರ್ವೆ ನಂ. 85/1ರ ಭಾಗ) ವಿಸ್ತೀರ್ಣ ಸುಮಾರು 8.75 ಗುಂಟಾ 3) ಸರ್ವೆ ನಂ. 83/2ಬಿ ವಿಸ್ತೀರ್ಣ ಸುಮಾರು 09 ಗುಂಟಾ 4) ಸರ್ವೆ ನಂ. 85/4 (ಹಿಂದಿನ ಸರ್ವೆ ನಂ. 85/1ರ ಭಾಗ) ವಿಸ್ತೀರ್ಣ ಸುಮಾರು 8.5 ಗುಂಟಾ 5) ಸರ್ವೆ ನಂ. 79/1 ವಿಸ್ತೀರ್ಣ ಸುಮಾರು 13.5 ಗುಂಟಾ 6) ಸರ್ವೆ ನಂ. 84/2 ವಿಸ್ತೀರ್ಣ ಸುಮಾರು 13 ಗುಂಟಾ ಮತ್ತು 7) ಸರ್ವೆ ನಂ. 93/6ಎ ವಿಸ್ತೀರ್ಣ ಸುಮಾರು 33 ಗುಂಟಾ (8 ಗುಂಟಾ ಖರಾಬ್ ಹೊರತುಪಡಿಸಿ) ಕ್ಷೇತ್ರಫಲವುಳ್ಳ ಎಲ್ಲಾ ಕೃಷಿ ಜಮೀನು ಸ್ವತ್ತುಗಳನ್ನು, ಸಂಬಂಧಿತ ಸ್ವತ್ತಿನ ಎದುರು ನಮೂದಿಸಲಾಗಿರುವ ಅವುಗಳ ಮಾಲೀಕರಿಂದ ("ಮಾಲೀಕರು") ಖರೀದಿಸಲು ಉತ್ಸುಕರಾಗಿರುತ್ತಾರೆ.

ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಳು ಯಾವುದೇ ರೀತಿಯ ಅಥವಾ ಸ್ವರೂಪದ ಯಾವುದೇ ಹಕ್ಕು, ಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮ್‌ಗಳನ್ನು ಹೊಂದಿದ್ದಲ್ಲಿ ಅಥವಾ ಷೆಡ್ಯೂಲ್ ಪ್ರಾಪರ್ಟಿಯ ವಿರುದ್ಧ ಅಥವಾ ಮಾಲಿಕರ ವಿರುದ್ಧ ಯಾವುದೇ ಕ್ಲೇಮ್ ಅಥವಾ ದಾಖಲಾತಿಗಳನ್ನು ಹೊಂದಿದ್ದಲ್ಲಿ ಅಥವಾ ನಮ್ಮ ಕಕ್ಷಿದಾರರ ವ್ಯವಹಾರಕ್ಕೆ ಆಕ್ಷೇಪಣೆಗಳನ್ನು ಹೊಂದಿದ್ದಲ್ಲಿ, ಅಂತಹವರು ಕಡ್ಡಾಯವಾಗಿ ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ **ಹದಿನೈದು ದಿನಗಳೊಳಗೆ** (15 ದಿನಗಳು) ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಭಾಗಕ್ಕೆ ಸಂಬಂಧಿತ ತಮ್ಮ ಹಕ್ಕುಗಳನ್ನು ಸಾಬೀತುಪಡಿಸುವ ಎಲ್ಲಾ ದಾಖಲಾತಿ ಆಧಾರ ಪುರಾವೆಗಳ ಸಮೇತ ಈ ಕೆಳಗೆ ಸಹಿ ಹಾಕಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು, ನಿಗದಿತ ಅವಧಿಯ ನಂತರ ನಮ್ಮ ಕಕ್ಷಿದಾರರು, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಯಾವುದೇ ಸ್ವರೂಪದ ಕ್ಲೇಮ್‌ಗಳು ಇರುವುದಿಲ್ಲ ಎಂದು ಪರಿಗಣಿಸಿ ತಮ್ಮ ವಹಿವಾಟನ್ನು ಪೂರ್ಣಗೊಳಿಸಿಕೊಳ್ಳುತ್ತಾರೆ.

ಷೆಡ್ಯೂಲ್

ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, ಒಟ್ಟಾರೆ 02 ಎಕರೆ 18.75 ಗುಂಟಾ ವಿಸ್ತೀರ್ಣವುಳ್ಳ, ಐಟಂ ನಂ.1 ರಿಂದ 7 ರವರೆಗಿನ ಎಲ್ಲಾ ಕೃಷಿ ಜಮೀನುಗಳ ಭೂಭಾಗಗಳು ಸೇರಿರುತ್ತವೆ ಮತ್ತು ಸರ್ವೆ ನಂಬರ್ ಹಾಗೂ ಚಕ್ಕುಬಂದಿ ವಿವರ ಕೆಳಗಿನಂತಿರುತದೆ:–

ಐಟಂ ನಂ.	ಸರ್ವೆ ನಂ.	ಮಾಲಿಕರ ಹೆಸರು	ವಾಸ್ತವ ಕ್ಷೇತ್ರಫಲ		ಖರಾಬ್ ವಿಸ್ತೀರ್ಣ		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
			ಎಕರೆ	ಗುಂಟೆ	ಎಕರೆ	ಗುಂಟೆ				
1.	94/2	ಪಿ ಕಿರಣಕುಮಾರ್ ಬಿನ್ ಪುಟ್ಟಮಾದಯ್ಯ	0	13	00	00	ಸರ್ವೆ ನಂ. 77/11	ಕಾಲುವೆ & ಸರ್ವೆ ನಂ. 95	ಕಾಲುವೆ & ಸರ್ವೆ ನಂ. 94/1	ಕಾಲುವೆ & ಸರ್ವೆ ನಂ. 94/3
2.	85/3 (ಹಳೆಯ ನಂ.85/1)	ಪುಟ್ಟಮ್ಮ	0	8.75	00	00	ಭೀಮಕನಹಳ್ಳಿ ಗ್ರಾಮದ ಸರಹದ್ದು	ಕಾಲುವೆ	ಸರ್ವೆ ನಂ. 85/4	ಸರ್ವೆ ನಂ. 85/1
3.	83/2ಬಿ	ಎನ್.ಆಂಜಿನಪ್ಪ	0	9.0	00	00	ಸರ್ವೆ ನಂ. 83/1ಎ	ಸರ್ವೆ ನಂ. 93/6ಎ, 93/6 ಬಿ & 93/7	ಸರ್ವೆ ನಂ. 84/10	ಸರ್ವೆ ನಂ. 84/6
4.	85/4 (ಹಳೆಯ ನಂ.85/1)	ಬಿ.ಎಸ್.ತೋಟದಪ್ಪ @ ತೋಟಪ್ಪ	0	8.5	00	00	ಭೀಮಕನಹಳ್ಳಿ ಗ್ರಾಮದ ಸರಹದ್ದು	ಕಾಲುವೆ ಮತ್ತು ನಂತರ ಸರ್ವೆ ನಂ. 82	ಕಾಲುವೆ & ನಂತರ ಸರ್ವೆ ನಂ. 79/2	ಸರ್ವೆ ನಂ. 85/3
5.	79/1	ಬಿ.ಎಸ್.ತೋಟದಪ್ಪ @ತೋಟಪ್ಪ	0	13.5	00	00	ಭೀಮಕನಹಳ್ಳಿ ಗ್ರಾಮದ ಸರಹದ್ದು	ಸರ್ವೆ ನಂ. 77/8	ಸರ್ವೆ ನಂ. 79/4	ಸರ್ವೆ ನಂ. 79/2
6.	84/2	ರಾಜಣ್ಣ	0	13	00	00	ಕಾಲುವೆ &ಬಳಿಕ ಸರ್ವೆ ನಂ.85/3 & 85/1	ಸರ್ವೆ ನಂ. 83/2 & 84/1	ಸರ್ವೆ ನಂ. 82	ಸರ್ವೆ ನಂ. 84/6
7.	93/6ಎ	ರಾಮಚಂದ್ರಪ್ಪ; ಕೃಷ್ಣಪ್ಪ; ಯಶೋದಮ್ಮ; ಸುವರ್ಣಮ್ಮ; ರಾಮಾಂಜಿನಗೌಡ; ಸುಂದರಮ್ಮ ಹನುಮಂತೇಗೌಡರ ಎಲ್ಲಾ ಮಕ್ಕಳು	0	33	00	08	ಕಾಲುವೆ, ಸರ್ವೆ ನಂ. 82, 83/2ಬಿ & 84/10	ಸರ್ವೆ ನಂ. 92/4	ನಾಲಾ & ಸರ್ವೆ ನಂ. 93/5 & 93/4	ಸರ್ವೆ ನಂ. 93/6ಬಿ
		ಒಟ್ಟು	2	18.75	00	08				

ಸಹಿ/– (ಕೆ.ಎನ್. ಗೀತಾ)
ಇಂಡಸ್‌ಲಾ
7ನೇ ಅಡ್ಡರಸ್ತೆ, ವಸಂತನಗರ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560001, ಫೋನ್ ನಂ.: 91–80–42423000

220 ಕೆ.ಜಿ. ಪ್ಲಾಸ್ಟಿಕ್ ವಶ

ಬೆಂಗಳೂರು: ನಗರದ ಯಶವಂತಪುರ ಮಾರುಕಟ್ಟೆ ಹಾಗೂ ಜಾಲಹಳ್ಳಿ ಜೆ.ಪಿ ಪಾರ್ಕ್ ವಾರ್ಡ್ ವ್ಯಾಪ್ತಿಯಲ್ಲಿ ಪಾಲಿಕೆ ಹಾಗೂ ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ 220 ಕೆ.ಜಿ. ನಿಷೇಧಿತ ಪ್ಲಾಸ್ಟಿಕ್ ಉತ್ಪನ್ನಗಳನ್ನು ವಶಪಡಿಸಿಕೊಂಡು, ₹5,800 ದಂಡ ವಿಧಿಸಿದ್ದಾರೆ.

ಜಾಲಹಳ್ಳಿಯ ಪೊಲೀಸ್ ಠಾಣೆ ಹಿಂಭಾಗ ಶ್ರೀ ಗಣೇಶ ಎಂಟರ್‌ಪ್ರೈಸಸ್ ಎಂಬ ಹೆಸರಿನಲ್ಲಿ ಪ್ಲಾಸ್ಟಿಕ್ ಕೋಟೆಡ್ ಪೇಪರ್ ಪ್ಲೇಟ್ ತಯಾರಿಕಾ ಘಟಕಕ್ಕೆ ತಂಡ ಹೋದಾಗ, ಘಟಕದವರು ಒಳಗಿನಿಂದ ಬೀಗ ಹಾಕಿಕೊಂಡರು. ಮಾರ್ಷಲ್ ತಂಡ ಹೊರಗಿನಿಂದ ಬೀಗ ಹಾಕಲು ಮುಂದಾದಾಗ ವಾಗ್ವಾದ ನಡೆಯಿತು. ನಂತರ ಘಟಕದಲ್ಲಿದ್ದ ಸುಮಾರು 20 ಕೆ.ಜಿ ಪ್ಲಾಸ್ಟಿಕ್ ಉತ್ಪನ್ನಗಳನ್ನು ವಶಪಡಿಸಿಕೊಂಡು ದಂಡ ವಿಧಿಸಲಾಯಿತು.

ಕೆ.ಆರ್.ಮಾರುಕಟ್ಟೆಯ ಸುತ್ತಮುತ್ತಲಿನ ಪ್ರದೇಶ, ಹೂವಿನ ಮಾರುಕಟ್ಟೆಯಲ್ಲಿ ಹಾಗೂ ಬೀದಿಬದಿ ವ್ಯಾಪಾರಿಗಳ ಬಳಿ ತಪಾಸಣೆ ನಡೆಸಿದ ವೇಳೆ ಸುಮಾರು 25 ಕೆ.ಜಿ ಪ್ಲಾಸ್ಟಿಕ್ ಕವರ್‌ಗಳನ್ನು ವಶಪಡಿಸಿಕೊಳ್ಳಲಾಯಿತು. ಮತ್ತೆ ಕವರ್‌ಗಳನ್ನು ಬಳಸದಂತೆ ಎಚ್ಚರಿಕೆ ನೀಡಿ ತಲಾ ₹200 ದಂಡ ವಿಧಿಸಲಾಯಿತು.



ಪ್ರತಿಭಟನೆ ಅಂತರರಾಷ್ಟ್ರೀಯ ಮಹಿಳೆಯರ ಮೇಲಿನ ಹಿಂಸಾಚಾರ ನಿರ್ಮೂಲನಾ ದಿನದ ಅಂಗವಾಗಿ 'ನಾವೆದ್ದು ನಿಲ್ಲದಿದ್ದರೆ ಕರ್ನಾಟಕ' ಸಂಘಟನೆ ನೇತೃತ್ವದಲ್ಲಿ ಪುರಭವನದ ಬಳಿ ಮಹಿಳೆಯರು ಫಲಕ ಹಿಡಿದು ಪ್ರತಿಭಟನೆ ನಡೆಸಿದರು

ರಾಜ್ಯ ಮಹಿಳಾ ಆಯೋಗದ ರಜತ ಮಹೋತ್ಸವ ಸಮಾರಂಭ

ಮಹಿಳಾ ಆಯೋಗಕ್ಕೆ ಮತ್ತಷ್ಟು ಬಲ: ಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಆಯೋಗವನ್ನು ಬಲಿಷ್ಠಗೊಳಿಸಲು ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗುವುದು. ದೂರು ನೀಡಿದ ಎಂಟು ತಾಸುಗಳ ಒಳಗೆ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಆರಂಭಿಸುವಂತೆ ಪೊಲೀಸ್ ಮಹಾ ನಿರ್ದೇಶಕರಿಗೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಮಹಿಳಾ ಆಯೋಗದ ರಜತ ಮಹೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸ್ತ್ರೀ ದೌರ್ಜನ್ಯಕ್ಕೆ ಕಠಿಣ ಶಿಕ್ಷೆ ಅಗತ್ಯ. ಈಗಿರುವ ಕಾನೂನುಗಳು ಬಲಿಷ್ಠವಾಗಿದ್ದರೂ, ದೌರ್ಜನ್ಯ ತಡೆ ಸಂಪೂರ್ಣ ಸಾಧ್ಯವಾಗಿಲ್ಲ. ಕಾನೂನಿನ ಜತೆಗೆ, ಪುರುಷರ ಮನಸ್ಸುಗಳ ಪರಿವರ್ತನೆಯೂ ಅಗತ್ಯ. ನಿರ್ಭಯ ಯೋಜನೆಯಡಿ ಜಾರಿ ಮಾಡಿರುವ ಕಾನೂನಿನ ಕುರಿತು ಪುರುಷರಿಗೆ ಜಾಗೃತಿ ಮೂಡಿಸುವ ಅಗತ್ಯವಿದೆ. ಅನ್ಯಾಯ ಆಗುವ ಮೂಲದಿಂದಲೇ ಅರಿವು ಮೂಡಿಸುವ ಕೆಲಸ ಆಗಬೇಕು ಎಂದರು.

ಮಹಿಳೆಯರ ರಕ್ಷಣೆಗೆ ಸೂಕ್ಷ್ಮ ಪ್ರದೇಶಗಳಲ್ಲಿ ಏಳೂವರೆ ಸಾವಿರ ಕೃತಕ ಬುದ್ಧಿಮತ್ತೆಯ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗುತ್ತಿದೆ. ರಾತ್ರಿ ಕೆಲಸ ಮುಗಿಸಿ ಬರುವ ಮಹಿಳೆಯರಿಗೆ ಇದು ಸುರಕ್ಷತೆ ಒದಗಿಸುತ್ತದೆ ಎಂದರು.

ಸಮಾಜದಲ್ಲಿ ಮೌಲ್ಯಗಳ ಪರಿವರ್ತನೆಯ ಅಗತ್ಯವಿದೆ. ಮಹಿಳೆಯರಿಗೆ ಸಿಗುತ್ತಿದ್ದ ಗೌರವ ಪುನಃ ಸ್ಥಾಪನೆಯಾದರೆ ಸಮಾನತೆ ಅವಕಾಶಗಳು ಸಹಜವಾಗಿ ತೆರೆದುಕೊಳ್ಳುತ್ತವೆ. ಈ ಕೆಲಸವನ್ನು ಆಯೋಗ ಮಾಡಬೇಕು ಎಂದರು.

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಶಿಕ್ಷಣ, ಆರ್ಥಿಕ ಸಬಲತೆಯಿಂದ ದೇಶದ ಮಹಿಳೆಯರು ಬಲಗೊಳ್ಳುವರು ಎನ್ನುವ ನಂಬಿಕೆ ಇತ್ತು. ಇಂದು ಬಹುತೇಕ ಮಹಿಳೆಯರು ಶಿಕ್ಷಣ, ಆರ್ಥಿಕ ಸಬಲತೆ ಸಾಧಿಸಿದರೂ ದೌರ್ಜನ್ಯಗಳಿಂದ ಮುಕ್ತವಾಗಿಲ್ಲ. ತಮ್ಮನ್ನು ರಕ್ಷಣೆ ಮಾಡಿಕೊಳ್ಳುವಷ್ಟು ವಾತಾವರಣವಿಲ್ಲ. ಐಎಎಸ್ ಅಧಿಕಾರಿಗಳೂ, ಮಹಿಳಾ ಪೊಲೀಸರೂ ಕಿರುಕುಳ ಅನುಭವಿಸುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಹಾಲಪ್ಪ ಆಚಾರ್, ಶಾಸಕಿ ರೂಪಾಲಿ ನಾಯಕ್, ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ಮಂಜುಳಾ ಅವರು ಉಪಸ್ಥಿತರಿದ್ದರು.

> ಮಹಿಳೆ ಸೃಷ್ಟಿಕರ್ತನ ವಿಶೇಷ ಸೃಷ್ಟಿ. ತಾಯಿ ಸಂಬಂಧ ಜನ್ಮ ಪೂರ್ವದ ಅನುಬಂಧ. ತಾಯಿ ಮತ್ತು ತಾಯ್ತನ ಅನನ್ಯ. ಪ್ರೀತಿ, ವಾತ್ಸಲ್ಯ ಶೇ 100ರಷ್ಟು ಪರಿಶುದ್ಧ.
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ



ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಮಹಿಳಾ ಆಯೋಗದ ರಜತ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದ ಮಹಿಳೆಯರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕ್ಯಾಂಪಸ್‌ನ ಚಿತ್ರಣ

ಗೆದ್ದಲಿಗೆ ಆಹಾರ ಈ ಪುಸ್ತಕಗಳ ರಾಶಿ

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಅವಿಭಜಿತ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಮುದ್ರಿಸಿದ ವಿವಿಧ ಲೇಖಕರ ಸಾವಿರಾರು ಪುಸ್ತಕಗಳು ಬೆಂಗಳೂರು ನಗರ ವಿಶ್ವವಿದ್ಯಾಲಯ ಕಟ್ಟಡದ ಕಾರಿಡಾರ್‌ನಲ್ಲಿ ಗೆದ್ದಲಿಗೆ ಆಹಾರವಾಗುತ್ತಿವೆ.

ಶತಮಾನದಷ್ಟು ಹಳೆಯದಾದ ಸೆಂಟ್ರಲ್ ಕಾಲೇಜು ಬೆಂಗಳೂರು ವಿಶ್ವವಿದ್ಯಾಲಯದ ಪ್ರಮುಖ ಕಾಲೇಜುಗಳಲ್ಲಿ ಒಂದಾಗಿತ್ತು. ಹೊಸದಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯ ಸ್ಥಾಪನೆಯಾದ ನಂತರ ಈ ಕಾಲೇಜು ಕ್ಯಾಂಪಸ್ ಹೊಸ ವಿಶ್ವವಿದ್ಯಾಲಯದ ಕೇಂದ್ರ ಸ್ಥಾನವಾಯಿತು.

ವಿಶ್ವವಿದ್ಯಾಲಯದ ಕೇಂದ್ರ ಸ್ಥಾನದ ವ್ಯಾಪ್ತಿಯ 44 ಎಕರೆ ಪ್ರದೇಶದಲ್ಲಿ ಹಲವು ಪಾರಂಪರಿಕ ಕಟ್ಟಡಗಳಿವೆ. ವಿಶ್ವವಿದ್ಯಾಲಯದ ಪಾರಂಪರಿಕ ಕಟ್ಟಡಗಳ ನವೀಕರಣ, ನೂತನ ಆಡಳಿತ ಭವನ ನಿರ್ಮಾಣ ಸೇರಿ ₹ 150 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಮೊದಲ ಹಂತದಲ್ಲಿ ₹ 100 ಕೋಟಿ ವೆಚ್ಚದಲ್ಲಿ ಕಟ್ಟಡಗಳನ್ನು ನವೀಕರಿಸಿ, ಸಂರಕ್ಷಿಸುವ ಕೆಲಸ ನಡೆಯುತ್ತಿದೆ.

ಅತ್ತ ಕಟ್ಟಡಗಳ ನವೀಕರಣ ಕಾರ್ಯ ಆರಂಭವಾಗುತ್ತಿದ್ದಂತೆ ಬೆಂಗಳೂರು ವಿಶ್ವವಿದ್ಯಾಲಯ ಹಲವು ದಶಕಗಳು ಮುದ್ರಿಸಿ, ಸಂಗ್ರಹಿಸಿದ್ದ ಭಾರಿ ಸಂಖ್ಯೆಯ ಪುಸ್ತಕಗಳನ್ನು ಕಟ್ಟಡದ ಕಾರಿಡಾರ್‌ನಲ್ಲಿ ರಾಶಿ ಹಾಕಲಾಗಿದೆ. ಬಹಳಷ್ಟು ಗೆದ್ದಲಿಗೆ ಆಹುತಿಯಾಗಿವೆ. ರಾಶಿಯ ಮಧ್ಯೆ ಹೊರಭಾಗಕ್ಕೆ ಚಾಚಿಕೊಂಡಿರುವ ಪುಸ್ತಕಗಳು ಮಳೆಗೆ ಸಿಲುಕಿ ಹಾಳಾಗಿವೆ.

ಗಾಂಧಿ ಅಧ್ಯಯನ ಕೇಂದ್ರ ಮಾಲೆಯ ನಮ್ಮ ಸುತ್ತಣ ಗಾಂಧಿಗಳು, ಬಹುಮುಖಿ ಆವೃತ್ತಿಗಳು, ಚಂಪೂ ರಾಮಾಯಣ, ಸಂಸ್ಕೃತ ಕಾವ್ಯಗುಚ್ಛ, ವೆಂಕಟಾಧ್ವರಿ ಅವರ ವಿಶ್ವಗುಣಾದರ್ಶ ಚಂಪೂ, ಸಮಕಾಲೀನ ಕನ್ನಡ ಕವಿತೆ, ಎಂ.ವಿ.ಸತ್ಯನಾರಾಯಣ, ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಸಂಪಾದಕತ್ವದ ಸಂಗ್ರಹ ಷಟ್ಪದಿ, ವ್ಯಾಸ ಸಂಕಲನ, ಭಾರತೀಯ ತತ್ವಶಾಸ್ತ್ರದ ಇತಿಹಾಸ, ಸಮಕಾಲೀನ ಕನ್ನಡ ಕವಿತೆ, ಆಯ್ದ ಕಥನ ಕವನಗಳು, ಮಣಿ ದರ್ಪಣಂ ಮತ್ತಿತರ ಕೃತಿಗಳು ಬಯಲಿನಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ.

ಕನ್ನಡ ಪುಸ್ತಕಗಳಲ್ಲದೇ ಇಂಗ್ಲಿಷ್, ಹಿಂದಿ ಭಾಷೆಯ ಹಲವು ಲೇಖಕರ ಕೃತಿಗಳು, ಬರಹ ಚಟುವಟಿಕೆಗಳ ಪುಸ್ತಕಗಳು, ಚುನಾವಣೆಯ ಕೈಪಿಡಿಗಳು ಸೇರಿ ಸಾವಿರಾರು ಪುಸ್ತಕಗಳ ಬಂಡಲ್‌ಗಳು ರಾಶಿಯ ಮಧ್ಯೆ ಕುಳಿತಿವೆ.

‘ವಿಶ್ವವಿದ್ಯಾಲಯದ ಪ್ರಸಾರಾಂಗ ಹಲವು ದಶಕಗಳಿಂದ ಸಂಗ್ರಹಿಸಿದ್ದ ಪುಸ್ತಕಗಳು ಲೆಕ್ಕವಿಲ್ಲದಷ್ಟಿವೆ. ಕಟ್ಟಡದ ನವೀಕರಣ ಆರಂಭಿಸುವ ಮೊದಲೇ ತೆರವುಗೊಳಿಸುವಂತೆ ಪತ್ರ ಬರೆಯಲಾಗಿತ್ತು. ತೆಗೆದುಕೊಂಡು ಹೋಗುವುದಾಗಿ ಅಲ್ಲಿಂದ ಪ್ರತಿಕ್ರಿಯೆಯೂ ಬಂದಿತ್ತು. ಆದರೆ, ತೆರವುಗೊಳಿಸಿಲ್ಲ. ಅವುಗಳಲ್ಲಿ ಅನುಪಯುಕ್ತ ಪುಸ್ತಕಗಳೇ ಅಧಿಕ ಸಂಖ್ಯೆಯಲ್ಲಿವೆ. ವಾರದ ಒಳಗೆ ತೆಗೆದುಕೊಂಡು ಹೋಗದಿದ್ದರೆ ನಾವೇ ವಿಲೇವಾರಿ ಮಾಡುತ್ತೇವೆ’ ಎನ್ನುತ್ತಾರೆ ವಿಶ್ವವಿದ್ಯಾಲಯದ ಕಲಸಚಿವ ಶ್ರೀಧರ್.



ಬೆಂಗಳೂರು ಕೇಂದ್ರ ವಿವಿ ಆವರಣದಲ್ಲಿ ಪುಸ್ತಕಗಳನ್ನು ಕಸದ ರಾಶಿಯ ರೀತಿ ಹಾಕಿರುವ ದೃಶ್ಯ —ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.



ಪುಸ್ತಕಗಳಿಗೆ ಬೆಲೆ ಕಟ್ಟಲಾಗದು. ರಾಶಿಯಲ್ಲಿನ ಕೆಲ ಪುಸ್ತಕಗಳು ಮಾರುಕಟ್ಟೆಯಲ್ಲಿ ಲಭ್ಯವಿಲ್ಲ. ಅಂತಹ ಅಮೂಲ್ಯ ಕೃತಿಗಳು ಕಣ್ಣೆದುರೇ ಹಾಳಾಗುತ್ತಿವೆ.

ಡಾ.ಪದ್ಮಿನಿ ನಾಗರಾಜು, ಲೇಖಕಿ



‘ಕಬ್ಬಿನ ಎಫ್‌ಆರ್‌ಪಿ ದರ ಏರಿಕೆ ಮಾಡಬೇಕು’ ಎಂದು ಒತ್ತಾಯಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರು ಶನಿವಾರ ಸರ್ಕಾರದ ಅಣಕು ಶವಯಾತ್ರೆಗೆ ಮುಂದಾದಾಗ ಪೊಲೀಸರು ಬಂಧಿಸಿದರು —ಪ್ರಜಾವಾಣಿ ಚಿತ್ರ

ಅಣಕು ಶವಯಾತ್ರೆಗೆ ಯತ್ನ: ರೈತರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಬ್ಬಿನ ಎಫ್‌ಆರ್‌ಪಿ ದರ ಹೆಚ್ಚಿಸಬೇಕು’ ಎಂದು ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಸರ್ಕಾರದ ಅಣಕು ಶವಯಾತ್ರೆ ನಡೆಸಲು ಮುಂದಾಗಿದ್ದ ರೈತರನ್ನು ಪೊಲೀಸರು ಶನಿವಾರ ವಶಕ್ಕೆ ಪಡೆದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿರುವ ರೈತರ ಪ್ರತಿನಿಧಿಗಳು, ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುತ್ತಿದ್ದಾರೆ.

‘ಹೋರಾಟಕ್ಕೆ ರಾಜ್ಯ ಸರ್ಕಾರದ ಸ್ಪಂದಿಸುತ್ತಿಲ್ಲ’ ಎಂದು ಆರೋಪಿಸಿದ ರೈತರು, ಉದ್ಯಾನ ಎದುರಿನ ಮುಖ್ಯರಸ್ತೆಯಲ್ಲಿ ಅಣಕು ಶವಯಾತ್ರೆ ನಡೆಸಲು ಶನಿವಾರ ಬೆಳಿಗ್ಗೆ ಸಿದ್ಧತೆ ಮಾಡಿಕೊಂಡಿದ್ದರು. ಈ ಬಗ್ಗೆ ಮಾಹಿತಿ ಪಡೆದ ಪೊಲೀಸರು, ಶವಯಾತ್ರೆ ನಡೆಸಲು ತಂದಿದ್ದ ವಸ್ತುಗಳನ್ನು ಜಪ್ತಿ ಮಾಡಿದರು. ಪೊಲೀಸರ ವರ್ತನೆಗೆ ಆಕ್ರೋಶ ವ್ಯಕ್ತಪಡಿಸಿದ ರೈತರು, ಶವಯಾತ್ರೆ ನಡೆಸುವುದಾಗಿ ಪಟ್ಟು ಹಿಡಿದಿದ್ದರು.

ಉದ್ಯಾನದಲ್ಲಿದ್ದ ಗಿಡಗಳ ತಪ್ಪಲಿನ ಸರವನ್ನು ವ್ಯಕ್ತಿಯೊಬ್ಬರಿಗೆ ಹಾಕಿ ಶವದ ರೀತಿಯಲ್ಲಿ ಸಿದ್ಧಪಡಿಸಿದ್ದ ಪ್ರತಿಭಟನಕಾರರು, ಅದೇ ವ್ಯಕ್ತಿಯನ್ನು ಹೊತ್ತುಕೊಂಡು ಮುಖ್ಯರಸ್ತೆಯತ್ತ ಹೆಜ್ಜೆ ಹಾಕಿದರು.

ಅವರನ್ನು ಅಡ್ಡಗಟ್ಟಿದ ಪೊಲೀಸರು, ‘ಮುಖ್ಯರಸ್ತೆಯಲ್ಲಿ ಪ್ರತಿಭಟನೆ ನಡೆಸಿದರೆ, ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಆಗುತ್ತದೆ. ಪ್ರತಿಭಟನೆ ಕೈಬಿಡಿ’ ಎಂದು ಕೋರಿದರು. ಅದಕ್ಕೆ ಪ್ರತಿಭಟನಕಾರರು ಒಪ್ಪಲಿಲ್ಲ.

ಪರಿಸ್ಥಿತಿ ಕೈ ಮೀರುತ್ತಿದ್ದಂತೆ ಮುಖಂಡ ಕುರುಬೂರು ಶಾಂತಕುಮಾರ್ ಹಾಗೂ ಇತರೆ ರೈತರನ್ನು ವಶಕ್ಕೆ ಪಡೆದ ಪೊಲೀಸರು, ಬಿಎಂಟಿಸಿ ಬಸ್‌ಗಳಲ್ಲಿ ಕರೆದೊಯ್ದರು.

ಮಹಾರಾಷ್ಟ್ರಕ್ಕೆ ಬಸ್ ಸಂಚಾರ ಸ್ಥಗಿತ

ಅಫಜಲಪುರ (ಕಲಬುರಗಿ ಜಿಲ್ಲೆ): ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ಗಡಿ ವಿವಾದ ತಲೆದೋರಿರುವ ಕಾರಣ ತಾಲ್ಲೂಕಿಗೆ ಮಹಾರಾಷ್ಟ್ರದ ಸೊಲ್ಲಾಪುರ, ಅಕ್ಕಲಕೋಟೆ ಮತ್ತು ವಿವಿಧ ಜಿಲ್ಲೆಗಳಿಂದ ಸಂಚರಿಸುವ ಬಸ್‌ಗಳು ಶನಿವಾರದಿಂದ ಸ್ಥಗಿತವಾಗಿವೆ. ಅಫಜಲಪುರ ಡಿಪೋದಿಂದ ಶನಿವಾರ ಮಹಾರಾಷ್ಟ್ರದ ಗಡಿ ಜಿಲ್ಲೆಗಳಿಗೆ ಬಸ್ ಸಂಚರಿಸದ ಕಾರಣ ಪ್ರಯಾಣಿಕರು ದುಬಾರಿ ಹಣ ನೀಡಿ ಖಾಸಗಿ ವಾಹನಗಳಲ್ಲಿ ಪ್ರಯಾಣಿಸಿದರು.

ಜೇವರ್ಗಿ, ವಿಜಯಪುರದ ಸಿಂದಗಿ, ಬಸವನಬಾಗೇವಾಡಿ, ಇಂಡಿ ಡಿಪೊಗಳಿಂದಮಹಾರಾಷ್ಟ್ರಕ್ಕೆ ಮತ್ತು ಅಫಜಲಪುರ–ಅಕ್ಕಲಕೋಟ ಮಧ್ಯೆ ಬಸ್ ಸಂಚಾರ ಇರುತ್ತಿತ್ತು. ಗಡಿ ಪ್ರದೇಶದಲ್ಲಿ ತ್ವೇಷಮಯ ವಾತಾವರಣ ಇರುವ ಕಾರಣ ಅಫಜಲಪುರದಿಂದ ಒಂದು ಬಸ್ ಸಹ ಮಹಾರಾಷ್ಟ್ರದತ್ತ ಹೋಗಿಲ್ಲ. ಮಹಾರಾಷ್ಟ್ರ ಸಾರಿಗೆ ಸಂಸ್ಥೆಯ ಬಸ್‌ಗಳೂ ಇತ್ತ ಬಂದಿಲ್ಲ’ ಎಂದು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆ ಅಧಿಕಾರಿಯೊಬ್ಬರು ಹೇಳಿದರು.

ಕದ್ದ ವಸ್ತು ಮಾರಿ ಮೋಜು–ಮಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನ ಕಳ್ಳತನ ಸೇರಿ ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಇಬ್ಬರು ಆರೋಪಿಗಳನ್ನು ವಿದ್ಯಾರಣ್ಯಪುರ ಪೊಲೀಸರು ಬಂಧಿಸಿದ್ದಾರೆ.

‘ರಂಜಿತ್ ಅಲಿಯಾಸ್ ಸಂತು (27) ಹಾಗೂ ಅಜಿತ್ (25) ಬಂಧಿತರು. ಇವರಿಂದ ₹ 6.87 ಲಕ್ಷ ಮೌಲ್ಯದ ಐದು ದ್ವಿಚಕ್ರ ವಾಹನ, 9 ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೇಶಬಂಧು ನಗರದ ಮನೆಯೊಂದರಲ್ಲಿದ್ದ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಕಳ್ಳತನವಾಗಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದರು.

‘ಅಪರಾಧ ಹಿನ್ನೆಲೆಯುಳ್ಳ ಆರೋಪಿಗಳು, ನಗರದ ಹಲವೆಡೆ ದ್ವಿಚಕ್ರ ವಾಹನಗಳ ಕಳ್ಳತನ ಮಾಡಿದ್ದರು. ಮೊಬೈಲ್, ಲ್ಯಾಪ್‌ಟಾಪ್ ಸಹ ಕದಿಯುತ್ತಿದ್ದರು. ಕದ್ದ ವಸ್ತುಗಳ ಮಾರಾಟದಿಂದ ಬಂದ ಹಣವನ್ನು ಹಂಚಿಕೊಳ್ಳುತ್ತಿದ್ದರು. ಅದೇ ಹಣವನ್ನು ಮೋಜು–ಮಸ್ತಿಗೆ ಖರ್ಚು ಮಾಡುತ್ತಿದ್ದರು’ ಎಂದು ಅವರು ತಿಳಿಸಿದರು.

‘ಕೊಡಿಗೇಹಳ್ಳಿ, ಯಶವಂತಪುರ, ನಂದಿನಿ ಲೇಔಟ್ ಹಾಗೂ ಸಂಜಯನಗರ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದೂ ಪೊಲೀಸರು ಹೇಳಿದರು.

ಲಾಲ್‌ಬಾಗ್: ಕುರ್ಚಿಗಳೇ ಇಲ್ಲ

‘ಜನಸ್ಪಂದನ’ ನಡೆಸಿ, ಲಾಲ್‌ಬಾಗ್‌ನಲ್ಲಿನ ಸಮಸ್ಯೆಗಳ ಕುರಿತು ಜನರಿಗೆ ಪರಿಹಾರ ಒದಗಿಸಬಹುದೆಂಬ ‘ಪ್ರಜಾವಾಣಿ’ಯ ವಿನಂತಿಗೆ ತೋಟಗಾರಿಕಾ ಸಚಿವ ಮುನಿರತ್ನ ಒಪ್ಪಿಗೆ ನೀಡಲಿಲ್ಲ. ಅಂತಹ ಜನದನಿಗೆ ಪತ್ರಿಕೆಯು ಈ ಮೂಲಕ ವೇದಿಕೆ ಒದಗಿಸಿದೆ.

‘ವಚನಗಳ ಸಾಲು ಬರೆಸಿ’



ಲಾಲ್‌ಬಾಗ್ ಎಷ್ಟೋ ಜನರಿಗೆ ವಿಶ್ರಾಂತಿಯ ತಾಣವಾಗಿದೆ. ಇಲ್ಲಿ ಎಷ್ಟೋ ವಿದ್ಯಾರ್ಥಿಗಳು ತಮ್ಮ ಸಮಯ ಕಳೆಯಲು ಬರುತ್ತಾರೆ. ಅವರಿಗೆ ತಾವು ಮಾಡುವ ತಪ್ಪಿನ ಅರಿವಾಗುವಂತೆ ವಚನಗಳನ್ನು, ಕವಿತೆಗಳ ಸಾಲುಗಳನ್ನು ಅಲ್ಲಲ್ಲಿ ಬರೆಸಬೇಕು. ರವೀಂದ್ರನಾಥ ಟ್ಯಾಗೋರ್ ಅವರ ಆಸೆಯಂತೆ ಮಕ್ಕಳಿಗೆ ನಿಸರ್ಗದ ಜತೆಯಲ್ಲೇ ಕೂತು ಓದುವ ಹವ್ಯಾಸ ಬೆಳೆಸಬೇಕು. ಕೆರೆಗಳಲ್ಲಿ ಹೂವುಗಳನ್ನು ಬೆಳೆಸಲು ಕ್ರಮ ಕೈಗೊಳ್ಳಬೇಕು.

ವಿನಾಯಕ ಎಂ.ಬಿ., ವಿಜಯನಗರ

‘ನಶಿಸಿಹೋಗಿರುವ ಔಷಧ ಗಿಡಗಳು’

ಲಾಲ್‌ಬಾಗ್‌ನಲ್ಲಿ ಹಿರಿಯ ನಾಗರಿಕರು ವಿಶ್ರಮಿಸಲು ಕುರ್ಚಿಗಳಿಲ್ಲ. ಇದ್ದ ಕುರ್ಚಿಗಳು ಮುರಿದುಬಿದ್ದಿದ್ದು, ಜನರಿಗೆ ತೊಂದರೆಯುಂಟಾಗಿದೆ. ಲಾಲ್‌ಬಾಗ್‌ನಲ್ಲಿ ಅಪರಾಧ ತಡೆಯಲು ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು.



ರಸ್ತೆಗಳು ಹಾಳಾಗಿದ್ದು, ಮಳೆ ಬಂದರೆ ನೀರು ನಿಂತು ಜಾರಿ ಬೀಳುವುದು ತಪ್ಪಿಲ್ಲ. ಅವುಗಳನ್ನು ಸರಿಪಡಿಸಬೇಕು. ಉದ್ಯಾನದಲ್ಲಿ ಆಯುರ್ವೇದ ಔಷಧಿಯ ಮತ್ತು ಸುಗಂಧದ ಮರಗಳು ನಶಿಸಿವೆ. ಈ ಕಡೆಗೂ ಸರ್ಕಾರ ಗಮನ ಹರಿಸಬೇಕು.

ಕೆ.ಎಂ.ಮುನಿಯಪ್ಪ, ಕನಕನಪಾಳ್ಯ

ಪ್ರಜಾವಾಣಿ@75

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು ‘ಪ್ರಜಾವಾಣಿ’ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

9606038256

ಡ್ರಗ್ಸ್ ದಂಧೆ: 12 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾರಿಗೂ ಅನುಮಾನ ಬಾರದಂತೆ ಕೋಡ್ ವರ್ಡ್‌ಗಳ ಮೂಲಕ ಡ್ರಗ್ಸ್ ದಂಧೆ ನಡೆಸುತ್ತಿದ್ದ ಜಾಲವನ್ನು ಅಮೃತಹಳ್ಳಿ ಪೊಲೀಸರು ಭೇದಿಸಿದ್ದು, ಮಹಿಳೆಯರು ಸೇರಿ 12 ಮಂದಿಯನ್ನು ಬಂಧಿಸಿದ್ದಾರೆ.

‘ಜಾಲದ ಮೂಲಕ ಡ್ರಗ್ಸ್ ಮಾರುತ್ತಿದ್ದ ಏಳು ಆರೋಪಿಗಳು ಹಾಗೂ ಅವರಿಂದ ಡ್ರಗ್ಸ್ ಖರೀದಿಸಿ ಸೇವಿಸುತ್ತಿದ್ದ ಐವರು ಗ್ರಾಹಕರನ್ನು ಬಂಧಿಸಲಾಗಿದೆ. 7 ಗ್ರಾಂ ಕೊಕೇನ್, 15 ಎಕ್ಸ್‌ಟೆಸಿ ಮಾತ್ರೆಗಳು, 2 ದ್ವಿಚಕ್ರ ವಾಹನ ಹಾಗೂ 8 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಹೊರವರ್ತುಲ ರಸ್ತೆಯ ಲುಂಬಿನಿ ಗಾರ್ಡನ್ ಬಳಿಯ ಸರ್ವೀಸ್ ರಸ್ತೆಯಲ್ಲಿ ನಿಂತಿದ್ದ ಇಬ್ಬರು ಆರೋಪಿಗಳು, ಗ್ರಾಹಕರಿಗೆ ಕೊಕೇನ್ ಮಾರುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಇಬ್ಬರನ್ನೂ ಬಂಧಿಸಲಾಯಿತು. ಅವರಿಬ್ಬರು ಜಾಲದ ಉಳಿದ ಆರೋಪಿಗಳ ಹೆಸರು ಬಾಯ್ಬಿಟ್ಟರು.’

‘ಆರೋಪಿಗಳು, ಡ್ರಗ್ಸ್‌ಗಳಿಗೆ ಅಝ್ಞಾ ಹಾಗೂ ಇತರೆ ಕೋಡ್ ವರ್ಡ್ ಇಟ್ಟಿದ್ದರು. ಗ್ರಾಹಕರಿಗೂ ಕೋಡ್ ವರ್ಡ್ ನಿಗದಿ ಮಾಡಿದ್ದರು. ಅದರ ಮೂಲಕವೇ ಡ್ರಗ್ಸ್ ಪೂರೈಕೆ ಹಾಗೂ ಹಣದ ವಹಿವಾಟು ನಡೆಸುತ್ತಿದ್ದರು. ಇದರಿಂದಾಗಿ ಕೃತ್ಯದ ಬಗ್ಗೆ ಯಾರಿಗೂ ಅನುಮಾನ ಬಂದಿರಲಿಲ್ಲ’ ಎಂದು ಪೊಲೀಸರು ತಿಳಿಸಿದರು.

ಬಂಧಿತರು: ಜಾಲದ ಆರೋಪಿಗಳು ಮಡಿವಾಳದ ಹಫೀಜ್ ರಮ್ಲಾನ್ (28), ದೇವನ ಚಿಕ್ಕನಹಳ್ಳಿಯ ಕೆ.ಕೆ. ಮನ್ಸೂರ್ ಅಲಿಯಾಸ್ ಮಂಚು (33), ದಕ್ಷಿಣ ಕನ್ನಡ ಜಿಲ್ಲೆಯ ಉಮರ್ ಫಾರೂಕ್ (23), ಮುಂಬೈನ ವೈಶಾಲಿ ದಾಸ್ (29), ಸಿಂಗನಾಯಕನಹಳ್ಳಿಯ ಬೆಂಜಮಿನ್ ಅಲಿಯಾಸ್ ಗೆರಾಲ್ಡ್ (32), ರಾಮಮೂರ್ತಿನಗರದ ತ್ರಿವೇಣಿ ಅಲಿಯಾಸ್ ಜೆನ್ನಿ (25), ನೈಜೀರಿಯಾದ ಹಿಲ್ಲರಿ ಈಗ್ವೊಬಾ (29).

ಗ್ರಾಹಕರಾದ ರಾಮಮೂರ್ತಿನಗರದ ಗ್ಲ್ಯಾಡಿ ಸುನೀತಾ (27), ಸುಜಾನಾ (27), ಇಂದಿರಾನಗರದ ಆರ್. ಮುಗೇಶ್ (23), ಜಯನಗರದ ಮೊಹಮ್ಮದ್ ಬಿಲಾಲ್ (23), ಶೇಷಾದ್ರಿಪುರದ ಮನೀಶ್ ಚೌಹಾಣ್ (32).

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

‘ಸಂವಿಧಾನ ದಿನಾಚರಣೆ ವೈರುಧ್ಯವಲ್ಲವೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾತಿವಾದಿಗಳಿಗೆ, ಮತಾಂಧರಿಗೆ ಸಂವಿಧಾನವನ್ನು ಧಿಕ್ಕರಿಸಲು ಅನುಮತಿ ಕೊಟ್ಟು, ಮತ್ತೊಂದೆಡೆ ಸಂವಿಧಾನ ದಿನ ಆಚರಿಸುತ್ತಿರುವುದು ವೈರುಧ್ಯ ಅಲ್ಲವೇ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಾಶ ಮಾಡಿದಂತೆ ಅಲ್ಲವೇ. ಆಯ್ಕೆ ಮಾಡಿದ ಪ್ರಜೆಗಳಿಗೆ ಮಾಡಿದ ವಂಚನೆಯಲ್ಲವೇ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಚಿಂತಕರು, ಲೇಖಕರು ಪ್ರಶ್ನಿಸಿದ್ದಾರೆ.

ಎಸ್.ಜಿ. ಸಿದ್ದರಾಮಯ್ಯ, ಜಿ. ರಾಮಕೃಷ್ಣ, ಕೆ. ಮರುಳಸಿದ್ದಪ್ಪ, ರಾಜೇಂದ್ರ ಚೆನ್ನಿ, ಕೆ.ಎಸ್. ವಿಮಲ, ಬಂಜಗೆರೆ ಜಯಪ್ರಕಾಶ್, ಗುರುಪ್ರಸಾದ್ ಕೆರಗೋಡು, ಬಿ. ಶ್ರೀಪಾದ ಭಟ್, ಮಾವಳ್ಳಿ ಶಂಕರ್, ಕೆ. ನೀಲಾ, ಎಸ್.ವೈ. ಗುರುಶಾಂತ್ ಈ ಬಗ್ಗೆ ಜಂಟಿ ಹೇಳಿಕೆ ನೀಡಿದ್ದಾರೆ.

‘ಇತ್ತೀಚೆಗೆ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಜಾತ್ರೆಯಲ್ಲಿ ಮುಸ್ಲಿಮರಿಗೆ ಅಂಗಡಿ ಹಾಕಲು ಅನುಮತಿ ಕೊಡಬಾರದೆಂದು ಬ್ಯಾನರ್ ಹಾಕಲಾಗಿದೆ. ನಗರದ ಸಜ್ಜನರಾವ್ ವೃತ್ತದ ಬಳಿ ಭಾನುವಾರ ನಡೆಯಲಿರುವ ಜಾತ್ರೆಯಲ್ಲಿ ಮುಸ್ಲಿಮರಿಗೆ ಅಂಗಡಿ ತೆರೆಯಲು ಅನುಮತಿ ಕೊಡಬಾರದೆಂದು ಬಜರಂಗದಳದವರು ಬ್ಯಾನರ್ ಹಾಕಿದ್ದಾರೆಂದು ವರದಿಯಾಗಿದೆ. ಮತಾಂಧರಿಂದ ದೈಹಿಕ ಹಲ್ಲೆಗೆ ಒಳಗಾಗುವ ಭೀತಿಯಿಂದ ಅನ್ಯಮತೀಯರು ಅಂಗಡಿ ತೆರೆಯಲು ಹಿಂಜರಿಯುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಸರ್ಕಾರ ಮೌನವಾಗಿದ್ದು, ದುಷ್ಕರ್ಮಿಗಳಿಗೆ ಮುಕ್ತ ಅವಕಾಶ ಕಲ್ಪಿಸಿರುವುದು ಕಳವಳಕಾರಿ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

‘ಮುಸ್ಲಿಮ್ ವರ್ತಕರಿಂದ ವಸ್ತುಗಳನ್ನು ಖರೀದಿಸಬಾರದೆಂದು ಕೋವಿಡ್ ಸಂದರ್ಭದಲ್ಲಿ ಹಿಂದೂ ಮತಾಂಧ ಸಂಘಟನೆಗಳು ನಡೆಸಿದ ದೌರ್ಜನ್ಯ ಇನ್ನೂ ಹಸಿಹಸಿಯಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ, ದೇವಸ್ಥಾನಗಳಲ್ಲಿ ದಲಿತರಿಗೆ ಇಂದಿಗೂ ಪ್ರವೇಶವಿಲ್ಲ. ಚಾಮರಾಜನಗರದಲ್ಲಿ ದಲಿತ ಮಹಿಳೆ ಸಾರ್ವಜನಿಕ ಟ್ಯಾಂಕ್‌ನಿಂದ ನೀರು ಕುಡಿದ ಕಾರಣಕ್ಕೆ ಅಲ್ಲಿನ ಸವರ್ಣೀಯರು ಇಡೀ ಟ್ಯಾಂಕ್‌ನ್ನು ಗೋಮೂತ್ರದಿಂದ ಸ್ವಚ್ಛಗೊಳಿಸಿದರು. ದಲಿತರ ಮೇಲಿನ ದೌರ್ಜನ್ಯ ನಿಯಂತ್ರಿಸಲು ಸರ್ಕಾರ ಸಂಪೂರ್ಣ ವಿಫಲವಾಗಿದೆ. ಈ ಘಟನೆಗಳು ಸಂವಿಧಾನದ ಪರಿಚ್ಛೇದ 14-21ರ ಸಮಾನತೆ ಮತ್ತು ಸ್ವಾತಂತ್ರ್ಯದ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ. ಆದರೂ, ಸಂಬಂಧಿಸಿದ ವ್ಯಕ್ತಿಗಳಿಗೆ ಶಿಕ್ಷೆಯಾಗಿಲ್ಲ. ಸಂವಿಧಾನವನ್ನು ರಕ್ಷಿಸುವ ಇಚ್ಛಾಶಕ್ತಿಯಿದ್ದರೆ ಮೇಲಿನ ಘಟನೆಗಳಲ್ಲಿ ಆರೋಪಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಿ. ಅನ್ಯಮತೀಯರ, ದಲಿತರ ಘನತೆಗೆ ಚ್ಯುತಿ ಬರದಂತೆ ಎಚ್ಚರ ವಹಿಸಬೇಕು’ ಎಂದೂ ಆಗ್ರಹಿಸಿದ್ದಾರೆ.







ವಿ.ವಿ ಪುರ ಹಬ್ಬಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ ಎಂ. ವಿಶ್ವೇಶ್ವರಯ್ಯ ಅವರ ನಕ್ಷೆಯಂತೆ ನಿರ್ಮಾಣವಾದ ವಿ.ವಿ. ಪುರ ಬಡಾವಣೆಗೆ 100 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಆಯೋಜಿಸಲಾಗಿರುವ ಎರಡು ದಿನಗಳ 'ವಿ.ವಿ ಪುರ ಹಬ್ಬ' ಹಬ್ಬಕ್ಕೆ ಶನಿವಾರ ಚಾಲನೆ ನೀಡಲಾಯಿತು.

ಸಾಂಸ್ಕೃತಿಕ ಉತ್ಸವ, ಕಲಾಮೇಳ ಮತ್ತು ಆಹಾರ ಮೇಳ, ರಂಗೋಲಿ ಸ್ಪರ್ಧೆ, ಸಾಧನೆ ಮಾಡಿದ ಹಿರಿಯ ನಾಗರಿಕರಿಗೆ ಸನ್ಮಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ವಿ.ವಿ.ಪುರ ಹಬ್ಬ ಹಾಗೂ ಸಜ್ಜನ್ ರಾವ್ ವೃತ್ತ ಉದ್ಯಾನಕ್ಕೆ ಶಾಸಕ ಉದಯ್ ಬಿ.ಗರುಡಾಚಾರ್ ಶನಿವಾರ ಚಾಲನೆ ನೀಡಿದರು.

'ನಗರದ ಇತಿಹಾಸಕ್ಕೆ ಮೆರುಗು ನೀಡುವಂತೆ ಮೊದಲ ಬಾರಿಗೆ ವಿ.ವಿ. ಪುರ ಹಬ್ಬವನ್ನು ಆಚರಿಸಲಾಗುತ್ತಿದೆ. ಬೆಳ್ಳಿ ತೇರು ಉತ್ಸವ ನಡೆಯುತ್ತದೆ. ಪ್ರತಿವರ್ಷವೂ ಹಬ್ಬವನ್ನು ಅದ್ದೂರಿಯಾಗಿ ಆಚರಣೆ ಮಾಡುತ್ತೇವೆ. ಹಬ್ಬದಲ್ಲಿ ಎಲ್ಲಾ ಧರ್ಮೀಯರಿಗೂ ವ್ಯಾಪಾರ ವಹಿವಾಟಿಗೆ ಅವಕಾಶ ಕಲ್ಪಿಸಲಾಗುವುದು. ಯಾವುದೇ ವಿವಾದ ಇಲ್ಲದೆ ಮುಕ್ತವಾಗಿ ವ್ಯಾಪಾರ ಮಾಡಲು ಎಲ್ಲರಿಗೂ ಅವಕಾಶ ಕಲ್ಪಿಸಲಾಗುವುದು. ನಾನು ಸಂವಿಧಾನದ ಮೇಲೆ ಪ್ರಮಾಣ ಮಾಡಿ ಅಧಿಕಾರ ಸ್ವೀಕಾರ ಮಾಡಿದ್ದೇನೆ. ಸಂವಿಧಾನ ಎಲ್ಲರಿಗೂ ಹಕ್ಕು ನೀಡಿದೆ. ಹೀಗಾಗಿ, ಈ ಹಬ್ಬದಲ್ಲಿ ಜಾತಿ, ಧರ್ಮದ ಭೇದವಿಲ್ಲದೆ ಎಲ್ಲರೂ ಸೇರಿ ವಿಜೃಂಭಣೆಯಿಂದ ಹಬ್ಬ ಆಚರಣೆ ಮಾಡಬೇಕು' ಎಂದು ತಿಳಿಸಿದರು.

'ಸರ್.ಎಂ.ವಿ. ಅವರು ಶಿಸ್ತು, ನಿಯಮ ಪಾಲನೆ, ಶ್ರದ್ಧೆಯಿಂದ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಿದ್ದಾರೆ. ಮುಂದಿನ ಪೀಳಿಗೆಗೆ ವಿಶ್ವೇಶ್ವರಯ್ಯರವರ ಜೀವನ, ಸಾಧನೆ ಅರಿತುಕೊಳ್ಳಲಿ ಎಂಬ ಉದ್ದೇಶದಿಂದ ಈ ಹಬ್ಬ ಆಚರಿಸಲಾಗುತ್ತಿದೆ' ಎಂದರು.

ಸರ್.ಎಂ.ವಿಶ್ವೇಶ್ವರಯ್ಯರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಜೊತೆಗೆ, ಸಸಿ ನೆಡುವ ಮೂಲಕ ವಿ.ವಿ.ಪುರ ಹಬ್ಬಕ್ಕೆ ಚಾಲನೆ ನೀಡಲಾಯಿತು. ಗರುಡಾ ಫೌಂಡೇಷನ್ ಸಂಸ್ಥಾಪಕಿ ಮೇದಿನಿ ಗರುಡಾಚಾರ್ ಇದ್ದರು.

ಕಲಾ ತಂಡಗಳು ಸಾಂಸ್ಕೃತಿಕ ನೃತ್ಯ, ಕಾರ್ಯಕ್ರಮಗಳನ್ನು ನಡೆಸಿಕೊಟ್ಟವು.



ವಿ.ವಿ.ಪುರ ಹಬ್ಬ ಹಾಗೂ ಸಜ್ಜನ್ ರಾವ್ ವೃತ್ತ ಉದ್ಯಾನಕ್ಕೆ ಶಾಸಕ ಉದಯ್ ಬಿ.ಗರುಡಾಚಾರ್ ಶನಿವಾರ ಚಾಲನೆ ನೀಡಿದರು

'ದೇಶದ ಮಹಾಗ್ರಂಥ ಸಂವಿಧಾನ'

ಬೆಂಗಳೂರು: 'ನಮ್ಮಲ್ಲಿ ಒಂದೊಂದು ಧರ್ಮಕ್ಕೂ ಒಂದೊಂದು ಗ್ರಂಥವಿದೆ. ಆದರೆ, ನಮ್ಮ ದೇಶದ ಮಹಾಗ್ರಂಥ ಸಂವಿಧಾನ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಈ ದೇಶಕ್ಕೆ ಕಾಂಗ್ರೆಸ್ ಪಕ್ಷ ಕೊಟ್ಟಿರುವ ಸಂವಿಧಾನದಲ್ಲಿ ನಮಗೆ ಹಕ್ಕು, ಧ್ವನಿ, ಅವಕಾಶ, ರಕ್ಷಣೆ ಅಡಗಿದೆ' ಎಂದರು.

'ಬಿಜೆಪಿ ಏಕರೂಪ ನಾಗರಿಕ ಕಾಯ್ದೆ ಕುರಿತು ಮಾತನಾಡುತ್ತಿದೆ. ಗೊಂದಲ ಸೃಷ್ಟಿಸಿ, ಜನರ ಭಾವನೆ ಕೆರಳಿಸುತ್ತಿದೆ. ಜನರ ವಿಶ್ವಾಸ ಕಳೆದುಕೊಳ್ಳುತ್ತಿರುವ ಕಾರಣಕ್ಕೆ ಅವರು ಈ ಪ್ರಯತ್ನಕ್ಕೆ ಮುಂದಾಗಿದ್ದಾರೆ' ಎಂದು ದೂರಿದರು.

'ಬಿಜೆಪಿಯವರು ಮತ ಕದಿಯಲು ಮುಂದಾಗಿದ್ದಾರೆ. ಸರ್ಕಾರಿ ಅಧಿಕಾರಿಗಳ ನಕಲಿ ಗುರುತಿನ ಚೀಟಿ ಮುದ್ರಣ ಮಾಡಿ ಹಂಚಿದ್ದಾರೆ. ನಾಳೆ ನಕಲಿ ಐಎಎಸ್ ಅಧಿಕಾರಿ ಎಂದು ಹೇಳಬಹುದು. ನಾವೆಲ್ಲರೂ ಜಾಗೃತರಾಗಬೇಕು' ಎಂದರು.

ಹೈಕೋರ್ಟ್‌ನಲ್ಲಿ ಡಿಕೆಶಿ ಪರ ವಕೀಲರ ಆಕ್ಷೇಪ
'ಪ್ರಕರಣಗಳೆಲ್ಲಾ ರಾಜಕೀಯ ದುರುದ್ದೇಶ'

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿ ದಾಖಲಿಸಲಾಗಿರುವ ಪ್ರಕರಣಗಳ ಹಿಂದೆ ರಾಜಕೀಯ ದುರುದ್ದೇಶವಿದೆ' ಎಂಬ ಆಕ್ಷೇಪವನ್ನು ಶಿವಕುಮಾರ್ ಪರ ವಕೀಲರು ಹೈಕೋರ್ಟ್‌ನಲ್ಲಿ ಪುನರುಚ್ಚರಿಸಿದರು.

ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ದಾಖಲಿಸಿರುವ ಪ್ರಕರಣವನ್ನು ಪ್ರಶ್ನಿಸಿ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣ'ಗಳ ಮೇಲ್ಮನವಿ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಹೈಕೋರ್ಟ್‌ನ ಧಾರವಾಡದ ವಿಶೇಷ ನ್ಯಾಯಪೀಠ ಶುಕ್ರವಾರ (ನ.25) ಮುಂದುವರಿಸಿತು.

ಈ ವೇಳೆ ಶಿವಕುಮಾರ್ ಪರ ಹಿರಿಯ ವಕೀಲ ಸಂದೇಶ್ ಚೌಟ,'ಒಂದು ವರ್ಷದ ಹಿಂದೆ ನೀಡಿರುವ ವಿವರಣೆಯ ಬಗ್ಗೆ ಏನೂ ಕ್ರಮ ಕೈಗೊಳ್ಳದೆ ತನಿಖೆ ಬಾಕಿ ಉಳಿಸಿಕೊಂಡಿರುವ ತನಿಖಾ ಸಂಸ್ಥೆಗಳು, ಈಗ ಬೇರೊಂದು ಪ್ರಕರಣ ದಾಖಲಿಸಲು ಜಾರಿ ನಿರ್ದೇಶನಾಲಯಕ್ಕೆ ಮಾಹಿತಿ ಒದಗಿಸುವ ಮೂಲಕ ಅರ್ಜಿದಾರರಿಗೆ ಸುಖಾಸುಮ್ಮನೆ ಕಿರುಕುಳ ನೀಡುತ್ತಿವೆ' ಎಂದರು.

ದೋಷಪೂರಿತ ಪ್ರಕ್ರಿಯೆ: 'ವಿವಿಧ ತನಿಖಾ ಸಂಸ್ಥೆಗಳು ಶಿವಕುಮಾರ್ ಅವರನ್ನು 2017ರಿಂದಲೂ ತನಿಖೆಗೆ ಒಳಪಡಿಸಿವೆ. ಆದಾಯ ತೆರಿಗೆ ಇಲಾಖೆ, ಇ.ಡಿ ಸೇರಿದಂತೆ ವಿವಿಧ ತನಿಖಾ ಸಂಸ್ಥೆಗಳಿಂದ ಮಾಹಿತಿ ಸಂಗ್ರಹಿಸಿ, ಪ್ರಾಥಮಿಕ ತನಿಖೆ ನಡೆಸಿ, ಕುಟುಂಬದ ಸದಸ್ಯರೆಲ್ಲರ ಆದಾಯವನ್ನು ಒಟ್ಟಿಗೆ ಸೇರಿಸಿ, ಶಿವಕುಮಾರ್ ಆದಾಯ ಮೀರಿ ಶೇ 44ರಷ್ಟು ಆಸ್ತಿ ಹೊಂದಿದ್ದಾರೆ ಎಂಬ ಸಿಬಿಐ ಆರೋಪ ಕಾನೂನು ಬಾಹಿರ' ಎಂದು ಆಕ್ಷೇಪಿಸಿದರು.

'ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಕಲಂ 13 ವ್ಯಕ್ತಿಗತ ಅಪರಾಧವಾಗಿದ್ದು, ಈ ವಿಚಾರದಲ್ಲಿ ಕುಟುಂಬದ ಸದಸ್ಯರ ಆದಾಯ, ಆಸ್ತಿ ಮತ್ತು ವೆಚ್ಚವನ್ನು ತೋರಿಸಲಾಗದು. ಇಡೀ ಪ್ರಕ್ರಿಯೆ ದೋಷಪೂರಿತವಾಗಿದೆ' ಎಂದರು.

'ಅರ್ಜಿದಾರರ ವಿರುದ್ಧ ಆದಾಯ ತೆರಿಗೆ, ಇ.ಡಿ, ಸಿಬಿಐ ಪ್ರಕರಣ ದಾಖಲಿಸಿವೆ. ಪ್ರತಿ ಪ್ರಕರಣದಲ್ಲೂ ಅವರು ತಮ್ಮ ರಕ್ಷಣೆಗೆ ನ್ಯಾಯಾಲಯದ ಕದ ತಟ್ಟುವಂತೆ ಮಾಡಲಾಗುತ್ತಿದೆ. ಈ ಮೂಲಕ ಶಿವಕುಮಾರ್ ರಾಜಕೀಯ ಚಟುವಟಿಕೆಗೆ ತಡೆ ಒಡ್ಡಲಾಗುತ್ತಿದೆ' ಎಂದರು. ವಿಚಾರಣೆಯನ್ನು ಡಿ. 2ಕ್ಕೆ ಮುಂದೂಡಿದೆ.

ಪ್ರಕರಣವೇನು?: 'ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 13 (2), 13 (1)(ಇ) ಅಡಿಯಲ್ಲಿ ಸಿಬಿಐ 2020ರ ಅ. 3ರಂದು ಪ್ರಕರಣ ದಾಖಲಿಸಿದೆ. 'ಸಿಬಿಐ ದಾಖಲಿಸಿರುವ ಎಫ್‌ಐಆರ್ ಕಾನೂನು ಬಾಹಿರವಾಗಿದ್ದು ಇದನ್ನು ರದ್ದುಗೊಳಿಸಬೇಕು' ಎಂದು ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

SRI KRISHNA INTERNATIONAL EDUCTIONAL TRUST®
GIBS B SCHOOL
ITI Layout, (Near Vidyapeeta Circle), BSK III Stage, Bengaluru-560085
FACULTY RECRUITMENT
Application are invited from eligible candidates for the following positions
ASSISTANT PROFESSORS FOR MBA PROGRAM WITH THE SPECIALISATION IN FINANCE, HR & MARKETING
ELIGIBILITY First class in MBA / PGDM, Minimum 3 years of academic experience, NET/SLET qualified.
Candidates satisfying the above specified eligibility criteria can send their CV to principalpg-gibs@skdc.edu.in or gibsbschool2018@gmail.com within 7 days.
080-26691680 9663890999, 9686027261
Website: www.gibsskies.in

WANTED Full Time Lecturers in Commerce, English Computer Science Political Science & Economics Candidates with P.G, NET/UGC, Preferably youngsters, can apply to the Secretary Vidyavahini First Grade College, Anandanagar Bangalore-24

TEACHERS FOR subjects from one to tenth standards, including nursery (reputed CBSE school). Attend interview with originals. Attractive salary. 9449835744, 9535601743

ACHIEVE SCHOOL OF EDUCATION Basavanagudi Bangalore- 560004 Requires immediately Pre School TEACHERS with great English communication. Phone: 9164222288 Email to: info@asoe.in

WANTED QUALIFIED TEACHERS Wanted For High School (English Kannada and Hindi) near Manyata Tech Park. Whatsapp 9481722333 Email: dominicgroup89@gmail.com

WANTED TEACHERS with BA/MA (Eng and SS) with BEd, Salary 14000 to 25000. Contact Sidhartha International School, Peenya, Dasarahalli. Contact Nos. 9620100046/ 9964670328

General

BHUMIKA BUILDERS requires experienced PROJECT SUPERVISORS for projects in Bangalore Call 9538223507

REQUIRED LADY Candidate B.com Computer tally Experienced Public Relation Officer for ACE INDIA IAS/ IPS/KAS/ Groupc/ Banking Training Centre Apply within 7 days Panchasheela welfare Association #10, 21st Cross BHEL Layout RR.Nagar Bangalore-98. 9448669359 9845567355 9845655761

SAFEGUARD SYSTEMS Looking for SALES MANAGERS, OFFICE EXECUTIVES Graduates 5Years Experience 9343544350/8050035002 safeguard_systems@yahoo.com

REQUIRE ENGINEERS with Electrical, Mechanical Or equivalent with minimum experience, Project Engineers, B.Com-Graduates for Accounts, for our Motor and special-pumps Manufacturing-Unit at Devarachikkanahalli, Bannergatta Road, Bangalore. Email: flowoilpumps@hotmail.com

INTRA LABS
WANTED Since 42 years
WHO-GMP certified company
INTRA LABS
Accounts Assistant & Sales Executive with Good Communication Skills: Hindi, English, Kannada
Contact No.: 9901333611 / 9019112223
No. 39, 1st Floor, New Timberyard Layout, Byatarayanpura, Mysore Road, Bangalore-560 026.
Ph : 080-26754892 / 93, E-Mail : feedbackintralabs@gmail.com, marketingintralabsmys@gmail.com

COMMERCIAL EXECUTIVE: Female Candidate Graduate with knowledge of Typing, MS-Office with good communication skills for office in Banashankari 2nd Stage, Bangalore. Email: jobs@econceptonline.com

Multiple Vacancy

JOBS
Accounts: PUC/ B.Com (25 No.s)
Article Assistant: (5 No.s)
Female Telecaller: (5 No's)
Salary: 8k to 25k,
Location: Girinagar, B'lore.
Email: parabolahr@gmail.com
Only WhatsApp No Phone Call: 90190 43325.

Accounts & Finance

WANTED IMMEDIATELY ACCOUNTANT 1- 2, years experience in Tally and MS-Excel. Walk-in with CV Mon-Sat 11am- 5pm. KouChan Technologies Pvt Ltd, #205 Brigade Gardens Church Road Bangalore 560001. 080-41122580

ACCOUNTANT FOR Botswana,Africa Good pay with accommodation&visa Min 5y exp in ERP/Cloud accun must whatsapp +26774352942

WANTED EXPERIENCED Accountants, Data Entry Operators for Transport Company in Koramangala 9845118961

WANTED SALES Girls & Account Assistant with Billing Knowledge, Chickpet, Contact: 9880045004

Engg/ Production Technical

SALES ENGINEER: BE/ Diploma/ B.Sc. with Electronics/ Electrical background with Good Communication Skills, also own two wheeler to market MNC brand Electronics Test and Measuring Instruments, preferably with 2- 3 years experience. Fresher who have flair for Marketing may apply for a trainee post. Email: jobs@econceptonline.com

WELLREPUTED CONSTRUCTION Company in Bangalore Having Various Construction worksthroughout Karnataka, Requires Site Engineers- Diploma/ BE Graduates withMinimum of 3 to 15 Years of Experience in Multi storied building. Send theresume to balaji.recurit2022@gmail.com

Drivers

"WANTED FULL-TIME Experienced CAR DRIVER Salary- Rs.16000/-, staying near J.P.Nagar. Contact: 8088174438"

Hospital & Medical Jobs

FPA INDIA requires MEDICAL OFFICER/ LAB TECHNICIAN, Bengaluru candidates apply. Recruitment reflects our commitment to safety protection of children/ young people. Email: bengaluru@fpaindia.org

Marketing & Sales

TECHNICAL SALES OFFICER 40 to 45 years needed by 45 year old Bangalore Engineering Sales Company, Fraser Town area dealing with multiple imported products like Fuel, Oil Transfer and Adblue Pumps, Dispensers and Meters. Propellor Shafts, Railway Brake Cables, Slewing Rings and Spare. To be technically and commercially experienced with ability to meet Senior OEM officials and Dealers, make presentations, close business, generate new business, prepare targets. Should know Word, Excel, Power Point. Report to Sales Manager. Job involves travelling. Salary Rs.21,000 to 24,000 plus 2-wheeler allowance. Apply with details to- officestaffblr@gmail.com

WANTED,SALES EXECUTIVE FOR A FAST GROWING SPECIALISED IN SURFACE TREATMENT OF METAL PARTS, ALSO MFG OF MEDICAL & AEROSPACE COMPONENTS. WITH HUGE MARKET POTENTIAL. CANDIDATE SHOULD BE WILLING TO TRAVEL EXTENSIVELY, SALARY WITH INCENTIVES WILL BE BEST IN INDUSTRY. CONTACT: INDACO METAL COATS PVT LTD DEEPAK JINAGOUDA 6362496960 EMAIL:DEEPAKJINAGOUDA@INDACOCOATS.COM

EDUCATION CORNER ಕ್ಲಾಸಿಫೈಡ್ಸ್

ಶಾಲೆಯ ಬಗ್ಗೆ ಚಿಂತೆಯೇ?
Partner with HIPPOCAMPUS to become "the top school"
Contact us if you run a school charging tution fee between 15k to 35k and with 150 to 400 children strength.
Hippocampus (started by IT professionals) operates a network of 10 schools in Karnataka to provide high quality education at affordable fees.
Call or WhatsApp 6366968336
HIPPOCAMPUS SCHOOL

The Mysore Education Society
MES COLLEGE OF ARTS, COMMERCE AND SCIENCE
Affiliated to Bengaluru City University
NAAC Accredited 'A' Grade (Fourth Cycle)
15th Cross, Malleshwaram, Bangalore – 560 003.
www.mesacs.in Ph:080 23347045, 080 23341225
POST GRADUATION ADMISSIONS
For the academic year 2022-23 are open for M.Sc. (Mathematics) & M.A. (Kannada) (Under Management Seats) at the Postgraduate Departments of Mathematics and Kannada both with Research Centres.
Eligibility: 40% in aggregate and 50% in Mathematics / Kannada Subjects at the Bachelor's Degree
Issue of Applications: 10.30 A.M. to 4:00 P.M. at the College Office

Part-Time Jobs

REPUTED MNC COMPANY will Provide WORK FROM HOME, Earn 35000 to 40000 Malleshwaram: 7019215243/ 9886641282

Receptionist/ Secretary

WANTED FULL-TIME Male Office Secretary Knowledge in MS Excel, Salary Rs.12000/- staying near J.P.Nagar. Contact: 8088174438

WANTED LADY RESIPSINEST Real Estate office in Yelahanka Contact:9945079777

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Blr - 34. Ph. 080-25534194
TENDER NOTICE
Quotations are invited from reputed Companies for the supply of following items:
a) Authorized Microsoft Gold and Silver Partners for the Supply of Microsoft Cloud Campus Agreement to Vemana Institute of Technology.
b) Library Steel Almira with Glass Doors – 6 Nos. - VIPT & CJR RJS Marathalli
c) Students Desks/ Benches 4/5 Seater – 30 Nos. - VIPT
d) Class Room Boards (4x12 feet) - 2 Nos. - VIPT
for more details, visit our : www.reddyjanasangha.org
Quotations should be addressed to " The General Secretary" at the above address within 7 days from this advertisement.
President General Secretary

TOURS & TRAVEL

Travel

KERALA TEMPLE Tour 23 to 28 January 2023. Contact: Ramachandra Swamy, Mob: 9945715162.

PUBLIC NOTICE

KERALASAMAJAM DOORAVANINAGAR. (REGD)
D-69, North Avenue, ITI Township, Dooravaninagar, Bengaluru.-16
NOTICE INVITING TENDER
Sealed quotations are invited from reputed contractors for the construction of eight class rooms and washrooms (6000sq,ft.) at Second floor of existing North block of Jubilee English High School (CBSE) situated in Survey No.9, Jinkathimmanahalli, 12th Main, NRI Layout Phase II, Bengaluru -36. Last Date for submission of tender shall be 10/12/2022 before 5 pm. Tender document can be collected from the above address from 28/11/2022 on payment of prescribed fees.
Sd/-
General Secretary
Keralasamajam Dooravaninagar (Regd)

BUSINESS

Business to Business

Business

COLLATERAL PAPERS required in Bangalore and any where in Karnataka for Bank and private finance on-50:50 sharing basis, 7019739066

WANTED BUSINESS Partner for Mannadiar Ayurvedic. Monthly income One Lakh. Contact: 9916448195

WANTED FINANCIAL Partner for upcoming School, College at koratagere Tq, Tumkur District (Returns Assured) 8296778087

WANTED INVESTORS for New Specialized Hospital, Contact: 080- 26720048, 9632083342.

Finance

WANTED 30 Lakhs Finance for Educational Building Construction at Koratagere, Tumkur. Security Assured. Contact 8296778087

Business Offers

Finance

WANTED FINANCE & Loans Property worth 2 Crore 50Lakhs House A-khatha Basaveshwaranagar Bangalore 9035883017

WANTED BUSINESS Partner Veg Hotel 3 Lakhs Investment Monthly Income 1 Lakhs Contact: 8892501007/ 9606701007

LOW INTEREST LOANS for Secured, Unsecured, NPA, Projects, Business, Colleges, Hospitals, Hotels, Agents WELCOME 9843830066

Business For Sale

HOTEL FOR Sale: 19 Rooms BDA Property 3 star construction 2.75 lac Rental income in Koramangala 3.50 CR- 9449521384/ 7259132674

General

SUYAMB MANAGEMENT, A Genuine Share Market Trading Company offers Genuine and Principle Safe Returns for your investment. 6% a Month Fixed Returns. Office in Koramangla. Successful 5th Year. All Investments supported with Legal Document. For Details call 9070990709

Machinery & Tools

MADHAVA HVAC & R.Consultancy AMC for Chiller plant, Duct ventilation and problem rectification Mob; 9794810309

SRI KRISHNA CORRESPONDENCE COLLEGE (R)
(Singhania University) UGC Approved
ADMISSION OPEN FOR 2022-23
D.Ed, B.Ed, M.Ed, B.P.Ed & M.P.Ed
UGC & PG Courses
B.A, B.Com, B.Sc, M.A, M.Com, M.Sc & MBA
English & Hindi Medium
3rd & 4th Cross, Lakshmannagar, Hegganahalli Cross, Bangalore-91
6366321465, 6366321357, 080-23489698

FOR SALE- Billing Machine (POS), Brand: Posiflex, Android Operating System, 2.5 years old. Price: Rs. 25000. Display Refrigerator (Brand New), Suitable for Super Market/ Bakery, Brand: William Refrigiration, Model: Steffi 4R, Price: Rs.2,00,000. Contact: 9632615254.

MATRIMONIAL

Brides Wanted

Hindu

BRIDE WANTED
AryaVysya Boy 32 Years I 5'6"
Data Analyst Income: 20L-30L
Qualification: B.Tech, MBA
Preferred Caste: AryaVysya, Vaishnavas, Agarwal, Brahmin & Guptas
Preferred Language: Kannada & Telegu
Call/Whatsapp: 9886669821
Email: laxit@betterhalf.ai

Grooms Wanted

Telugu

ALLIANCE INVITED from qualified, employed, unmarried Bangalore settled boy for telugu yadava bangalore girl 42 yrs/5'4' MCA nw, nv' whatsapp 9380397152, vijaykumarn2000@rediffmail.com

Matrimonial Bureaus

USHODHAYA MATRIMONIAL (Estd: 1998)
FOR HIGH CLASS FIRST/ SECOND MARRIAGES Personalised Services All Age Groups INDIA/ ABROAD,
9611919477 9886884291

EDUCATIONAL

General

WANTED B.COM College for Outright Purchase Bangalore University Central Limit. Contact: 9845049539

Language Classes

Fluent Spoken English In 60 Days. Coaching For Competitive Exams. IELTS Training.Overseas Job Placements Guidance. Tuitions IX, X All Syllabus.Basic Advanced Grammar Classes. Contact 9113883321

PERSONAL

Change of Name

I, SHRAVYA resident of No.6, Flat No.103, 1st Floor, Gomati Shanthiniketan, Andree Road, Shantinagar, Bangalore-560027 have changed my name to SHRAVYA KAYYAR HOLLA vide affidavit dated 22/11/2022 sworn before notary Meer Hassan, Bangalore

MCM
MQI COLLEGE OF MANAGEMENT
Recognised by Govt. of Karnataka
Approved by AICTE, New Delhi
Affiliated To Bengaluru City University
Congratulations to all graduates upon successful completion of their degree
Avail Merit
SCHOLARSHIP* IN MBA (2022 Batch)
*Up to 50% Scholarship
is given to students who have secured 75% and above
Last Date to avail the benefit: 03-12-2022
Limited seats available on first come basis
SCAN THE QR
Campus Address: #8, Bore Bank Road, Benson Town, Bengaluru – 560 046
E-Mail: mqicollegeofmanagement@gmail.com
Website: www.mcm.edu.in
Contact : 080 – 48904713
Whatsapp : +91 7975961901
ROUNAQH

I,ANIL PRASAD WUPALAPADU Residing at_No.21,1st Main,BHCS Layout,Near Akshaya Ganapati Temple, Chikkallasandra, Bangalore-560061 have Changed My-name-to ANIL PRASAD WUPPALAPADU vide_Affidavit Dated: 26.11.2022 sworn_before Notary N.H.Poornima, Bangalore

I NASEER KHAN AMEER KHAN RESIDENCE OF NO 380 6TH BLOCK BDA FLATS OPP ATFFA SCHOOL NEELASANDRA BENGALURU 560047 I HAVE CHANGE MY NAME TO NEW NAME VIDE AFFIDAVIT DATE 19/11/2022 NOTARY NAME K.V MANI BA LLB ADVOCATE AND NOTARY BENGALURU HENCEFORTH I SHALL BE CALLED NASEER KHAN.

JC670890A, SUB, Pradeep Kumar Panda 388 ASC (SUP) mother name record's SURAMA KUMARI PANDA to SURAMA PANDA Notary L. Gopalakrishna.

I,CHANDRVADANA GADICHERLA Residing at_No.21,1st Main,BHCS Layout,Near Akshaya Ganapati Temple, Chikkallasandra, Bangalore-560061 have Changed My-name-to CHANDRIKA WUPPALAPADU vide_Affidavit Dated: 26.11.2022 sworn_before Notary N.H.Poornima, Bangalore

MORE Classifieds IN SUPPLEMENT

JC670890A, SUB, Pradeep Kumar Panda 388 ASC (SUP) daughter name record's SONALI PRIYADARSHINI PANDA to SONALI PRIYADARSINI PANDA Notary L. Gopalakrishna.

Lost

LOST
I, Nachiappan have lost my Property Document Identification No. KRI-1-11473-2005-06, dated: 29.12.2005, while shifting the house.
Finders please contact: 96632 55555, 98455 96968

ORIGINAL LAND Document Lost I, Muralidhara K., S/o Sharada K., aged 60 years, residing at 3688, 13th 'D' Main, 9th Cross, HAL II Stage, Bengaluru 560008 do here by inform to the general public that I have lost the original land document pertaining to my property registered in document no: 7425/2015, dated 01/09/2017 registered at Kelamangalam Sub registrar office. If any one finds the said document, please contact me over phone No: 9845538150 or at the above address.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಸಂವಿಧಾನ ಸಮರ್ಪಣಾ ದಿನ: ಚಾತುರ್ವರ್ಣದ ವೈಭವಕ್ಕೆ ದಸಂಸ ವಿರೋಧ

ಸುತ್ತೋಲೆ ಹರಿದು ಆಕ್ರೋಶ

ಪ್ರಜಾವಾಣಿ ವಾರ್ತೆ



ಸ್ವಾತಂತ್ರ್ಯ ಉದ್ಯಾನದಲ್ಲಿ ಸುತ್ತೋಲೆಯ ಪ್ರತಿಗಳನ್ನು ದಲಿತ ಮುಖಂಡರು ಹರಿದು ಪ್ರತಿಭಟನೆ ನಡೆಸಿದರು

ಬೆಂಗಳೂರು: ಸಂವಿಧಾನ ಸಮರ್ಪಣಾ ದಿನವನ್ನು ಬ್ರಾಹ್ಮಣ ಶ್ರೇಷ್ಠತೆ ಪ್ರತಿಪಾದಿಸುವ ಚಾತುರ್ವರ್ಣ ಮತ್ತು ಜಾತಿಪದ್ಧತಿಯ ವೈಭವೀಕರಣ ದಿನವಾಗಿ ಬದಲಿಸಲಾಗುತ್ತಿದೆ ಎಂದು ಆರೋಪಿಸಿ ಸುತ್ತೋಲೆ ಪ್ರತಿಗಳನ್ನು ಹರಿದು ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿತು.

ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ದಲಿತ ಹೋರಾಟಗಾರ ಮಾವಳ್ಳಿ ಶಂಕರ್, 'ಜಾತಿ ವೈಷಮ್ಯ ಬಿತ್ತಿ ಸಮಾಜವನ್ನು ಒಡೆದು ಆಳುತ್ತಿದ್ದ ಬ್ರಾಹ್ಮಣ್ಯವನ್ನು ಕಿತ್ತು ಹಾಕಿದ ಸಂವಿಧಾನವನ್ನು ಸಮರ್ಪಿಸಿದ ದಿನವಿದು. ಬಹುಜನರ ಪಾಲಿಗೆ ಇದೊಂದು ಶ್ರೇಷ್ಠವಾದ ದಿನ. ಆರ್‌ಎಸ್‌ಎಸ್ ಪ್ರೇರಿತ ಚಿಂತನೆಗಳನ್ನು ಜನರ ಮೇಲೆ ಹೇರಲು ಪ್ರಯತ್ನಿಸಲಾಗುತ್ತಿದೆ. ಅದಕ್ಕೆ ವಿರುದ್ಧವಾಗಿ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕಿದೆ' ಎಂದರು.

ಹೋರಾಟಗಾರ ಇಂದೂಧರ ಹೊನ್ನಾಪುರ ಮಾತನಾಡಿ, 'ಬಿಜೆಪಿ ಸರ್ಕಾರವು ಸಂವಿಧಾನದ ಆಶಯಗಳಿಗೆ ನಿರಂತರವಾಗಿ ಧಕ್ಕೆ ತರುವ ಕೆಲಸ ಮಾಡುತ್ತಿದೆ. ಸಂವಿಧಾನದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಸರ್ಕಾರ, ಈಗ ಅದೇ ಸಂವಿಧಾನವನ್ನು ನಾಶ ಮಾಡುವ ಹಂತಕ್ಕೆ ಕೈ ಹಾಕಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಸಂವಿಧಾನ ಸಮರ್ಪಣಾ ದಿನದಂದು ಅಂಬೇಡ್ಕರ್ ನೆನೆಯುವ ಬದಲು ಅವಮಾನಿಸುವ ಕೆಲಸ ಮಾಡಿದೆ. ಇದು ಒಕ್ಕೂಟ ವ್ಯವಸ್ಥೆಯನ್ನು ಹಾಳು ಮಾಡುವ ಮುನ್ನುಡಿ' ಎಂದು ದೂರಿದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, 'ಬಿಜೆಪಿಯವರು ಸುಳ್ಳು ಹೇಳಿ ಭ್ರಮೆ ಹುಟ್ಟಿಸುವುದರಲ್ಲಿ ನಿಪುಣರು. ಸಂವಿಧಾನಕ್ಕೆ ಇಂದು ಅಪಾಯ ಎದುರಾಗಿದೆ. ಸುಪ್ರೀಂ ಕೋರ್ಟ್‌ನ ತೀರ್ಪುಗಳನ್ನು ಗಮನಿಸಿದರೆ ಅದು ಗೊತ್ತಾಗುತ್ತದೆ' ಎಂದರು.

ಕಾರ್ಮಿಕ ಮುಖಂಡ ಜಿ.ಎನ್. ನಾಗರಾಜ್, ದಲಿತ ಮುಖಂಡರಾದ ಜಿಗಣಿ ಶಂಕರ್, ಶ್ರೀಪಾದ ಭಟ್, ಡಿ.ಜಿ. ಸಾಗರ್, ಭೂ ವಸತಿ ವಂಚಿತರ ಹೋರಾಟ ಸಮಿತಿ ಮುಖಂಡ ಸಿರಿಮನೆ ನಾಗರಾಜ್ ಇದ್ದರು.

'ನ್ಯಾಯ ಕೇಳುವ ಎಚ್ಚರಿಕೆ ಬಂದಾಗ ಸಂವಿಧಾನ ಉಸಿರಾಡುತ್ತದೆ'

ಪ್ರಜಾವಾಣಿ ವಾರ್ತೆ



ವೆಂಕಟೇಶ್ ನೆಲ್ಲುಕುಂಟೆ

ಬೆಂಗಳೂರು: ಪ್ರತಿಯೊಬ್ಬ ಪ್ರಜೆಗೂ ನ್ಯಾಯ ಕೇಳುವ ನೈತಿಕ ಎಚ್ಚರಿಕೆ ಬಂದ ದಿನದಿಂದ ಸಂವಿಧಾನ ಸರಿಯಾದ ವೇಗದಲ್ಲಿ ಉಸಿರಾಡುತ್ತದೆ ಎಂದು ಚಿಂತಕ ವೆಂಕಟೇಶ್ ನೆಲ್ಲುಕುಂಟೆ ಅಭಿಪ್ರಾಯಪಟ್ಟರು.

ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಭಾರತ ಎಂದರೆ ಅನೇಕ ಭಾಷೆ ಮತ್ತು ವೃತ್ತಿಗಳಿಂದ ಕೂಡಿರುವ ಬಹುತ್ವದ ದೇಶ. ವೈವಿಧ್ಯಮಯವಾದ ದೇಶವನ್ನು ಒಟ್ಟಿಗೆ ಸೇರಿಸಿ ಮುನ್ನಡೆಸುವುದು ಹೇಗೆ ಎಂಬ ಪ್ರಶ್ನೆ ಎದುರಾದಾಗ ಸಂವಿಧಾನ ರಚನೆ ಮಾಡಿಕೊಳ್ಳುವ ಅನಿವಾರ್ಯ ಸೃಷ್ಟಿಯಾಯಿತು. ಬಾಬಾ ಸಾಹೇಬ್ ಅಂಬೇಡ್ಕರ್ ನೇತೃತ್ವದಲ್ಲಿ ಸಂವಿಧಾನ ರಚನೆಯಾಯಿತು. ಇದಕ್ಕೂ ಮೊದಲು ರಾಜರು ಅವರದೇ ಆದ ಶಾಸನಗಳನ್ನು ರೂಪಿಸಿಕೊಂಡಿದ್ದರು. ಅವುಗಳಿಗೆಲ್ಲಾ ಮೂಲವಾಗಿ ಮನುಸ್ಮೃತಿ ಇತ್ತು. ಚಾತುರ್ವರ್ಣ ವ್ಯವಸ್ಥೆ ಇತ್ತು, ನ್ಯಾಯವು ಜಾತಿಗಳ ಶ್ರೇಷ್ಠತೆಯ ಆಧಾರದಲ್ಲಿ ನಿರ್ಧಾರವಾಗುತ್ತಿತ್ತು. ಆದರೆ, ಸಂವಿಧಾನ ಈ ಎಲ್ಲಾ ತಾರತಮ್ಯಗಳನ್ನು ಮೀರಿ ಎಲ್ಲರೂ ಸಮಾನರು ಎಂಬುದನ್ನು ಸಾರಿತು' ಎಂದರು.

ದೇಶಕ್ಕೆ ಈಗ ಸಂವಿಧಾನವೇ ಅತ್ಯುನ್ನತ. ಅದನ್ನು ಮೀರಿದ್ದು ಯಾವುದೂ ಇಲ್ಲ. ಈ ಅತ್ಯುನ್ನತಿಯನ್ನು ಕಾಪಾಡುವುದು ದೇಶದ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಎಂದರು.

ನ್ಯಾಷನಲ್ ಎಜುಕೇಷನ್ ಸೊಸೈಟಿ ಅಧ್ಯಕ್ಷ ಎ.ಎಚ್.ರಾಮರಾವ್ ಅಧ್ಯಕ್ಷತೆ ವಹಿಸಿದ್ದರು. ಗೌರವ ಕಾರ್ಯದರ್ಶಿ ಪ್ರೊ. ಎಸ್. ಎನ್. ನಾಗರಾಜರೆಡ್ಡಿ, ಪ್ರಾಂಶುಪಾಲ ಸತೀಶ್ ಕಾರಂತ್, ಉಪಪ್ರಾಂಶುಪಾಲ ಪ್ರೊ. ಪಿ.ಎಲ್. ರಮೇಶ್, ಸಾಹಿತ್ಯ ವೇದಿಕೆಯ ಸಂಚಾಲಕ ರವಿಕುಮಾರ್ ಇದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ 90ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರಕ್ಕೆ ಕರ್ನಾಟಕ ತಿಗಳರ (ಅಗ್ನಿವಂಶ ಕ್ಷತ್ರಿಯ) ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ ಅರ್ಜಿ ಆಹ್ವಾನಿಸಿದೆ.

ದೂರವಾಣಿ ಸಂಖ್ಯೆ ಸಹಿತ ಸ್ವವಿವರ, ಅಂಕಪಟ್ಟಿ, ಜಾತಿ ಪ್ರಮಾಣಪತ್ರ, ಸಮುದಾಯದ ಮುಖಂಡರ ಸಹಿ ಇರುವ ಶಿಫಾರಸು ಪತ್ರವನ್ನು ಡಿ.20ರೊಳಗೆ, ಸಿಎ 13, 10ನೇ ಮುಖ್ಯರಸ್ತೆ, 5ನೇ ವಿಭಾಗ, ರಾಜಾಜಿನಗರ, ಬೆಂಗಳೂರು-10 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಕೋಮು ರಾಜಕಾರಣ ತಿರಸ್ಕರಿಸಿ: ಜ್ಞಾನಪ್ರಕಾಶ ಸ್ವಾಮೀಜಿ

ಪ್ರಜಾವಾಣಿ ವಾರ್ತೆ



ಪ್ರಜಾಪ್ರಭುತ್ವ ಸಮಾನತಾ ಸಮಾವೇಶದಲ್ಲಿ ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಪ್ರಜಾ ಪರಿವರ್ತನಾ ವೇದಿಕೆ ಅಧ್ಯಕ್ಷ ಬಿ.ಗೋಪಾಲ್ ಅವರು ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ದಸಂಸ ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್ ಇದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ಜಾತಿಗಳನ್ನು ವಿಭಜಿಸಿ, ಕೋಮುಗಳ ಮಧ್ಯೆ ದ್ವೇಷ ಬಿತ್ತಿ ಅಧಿಕಾರ ಪಡೆಯುವ ರಾಜಕಾರಣವನ್ನು ತಿರಸ್ಕರಿಸುವ ಮೂಲಕ ದಲಿತರು, ಶೂದ್ರರು ಅಂಬೇಡ್ಕರ್ ಅವರ ಆಶಯಗಳನ್ನು ಪೂರ್ಣಗೊಳಿಸಬೇಕು ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದರು.

ಹೆಣ್ಣೂರು ಶ್ರೀನಿವಾಸ್ ನೇತೃತ್ವದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಪ್ರಜಾಪ್ರಭುತ್ವ ಸಮಾನತಾ ಸಮಾವೇಶದಲ್ಲಿ ಅವರು ಮಾತನಾಡಿದರು.

'ಹಣ, ಆಮಿಷಗಳಿಗೆ ಮತ ಮಾರಿ ಕೊಂಡ ಪರಿಣಾಮಗಳನ್ನು ಅನುಭವಿಸುತ್ತಿದ್ದೇವೆ. ಅಂಬೇಡ್ಕರ್ ಅನುಯಾಯಿಗಳಿಂದ ಮತ ಪಡೆದು ಅಧಿಕಾರಕ್ಕೆ ಬಂದವರೇ ಇಂದು ಸಂವಿಧಾನ ಬದಲಿಸುವ ಮಾತುಗಳನ್ನಾಡುತ್ತಿದ್ದಾರೆ' ಎಂದರು.

ಕೇಂದ್ರ ಸರ್ಕಾರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಹೆಸರಲ್ಲಿ ಮತ್ತೆ ಹಳೆಯ ಪದ್ಧತಿಗೆ ಜಾರುತ್ತಿದೆ. ಸಾವಿರಾರು ವಿದ್ಯಾರ್ಥಿಗಳು ತರಗತಿಗಳಿಂದ ಹೊರಗೆ ಉಳಿಯುತ್ತಿದ್ದಾರೆ. ಪರಿಶಿಷ್ಟರ ಶಿಕ್ಷಣಕ್ಕೆ ಕುತ್ತು ಬಂದಿದೆ ಎಂದರು.

ಪ್ರಜಾ ಪರಿವರ್ತನಾ ವೇದಿಕೆ ಅಧ್ಯಕ್ಷ ಬಿ.ಗೋಪಾಲ್, ಭಾರತದಲ್ಲಿ ಜನಿಸಿದ ಎಲ್ಲ ವರ್ಗಗಳಿಗೂ ಮತದಾನದ ಹಕ್ಕು ಸಿಗುವಂತೆ ಮಾಡಿದ್ದು ಅಂಬೇಡ್ಕರ್. ಇಂತಹ ಹಕ್ಕಿನ ಸದ್ಬಳಕೆಯಾಗಬೇಕು ಎಂದರು.

ಪ್ರಾಸ್ತಾವಿಕ ಮಾತನಾಡಿದ ದಸಂಸ ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್, 'ವೇದಗಳಲ್ಲೇ ಪ್ರಜಾಪ್ರಭುತ್ವ ಇತ್ತು ಎನ್ನುವ ವಾದ ಒಪ್ಪಲು ಸಾಧ್ಯವಿಲ್ಲ. ಅಂದು ಪ್ರಜಾಪ್ರಭುತ್ವ ಇದ್ದಿದ್ದರೆ ಅಸ್ಪೃಶ್ಯತೆ, ಸಾಮಾಜಿಕ ಬಹಿಷ್ಕಾರದಂತಹ ವರ್ತನೆಗಳು ಏಕೆ ಜೀವಂತವಾಗಿ ಇರುತ್ತಿದ್ದವು' ಎಂದರು.

ನಿವೃತ್ತ ನ್ಯಾಯಾದೀಶ ಜಿ.ಕೆ. ಗೋಕುಲೆ, ಮುಖಂಡರಾದ ಬಸವರಾಜ್ ಕೌತಾಳ್, ವಿಜಯನರಸಿಂಹ, ಸತ್ಯ ಭದ್ರಾವತಿ ಮತ್ತಿತರರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಕನ್ನಡ ರಾಜ್ಯೋತ್ಸವ: ಉದ್ಘಾಟನೆ: ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ಸ್ವಾಮಿಗೌಡ, ಸನ್ಮಾನಿತರು: ನಾಗಚಂದ್ರಿಕಾ ಭಟ್, ಬಹುಮಾನ ವಿತರಣೆ: ಅರಮನೆ ಶಂಕರ್, ಮುಖ್ಯ ಅತಿಥಿ: ಜಿ. ವೆಂಕಟೇಶ್, ಆಯೋಜನೆ: ಸ್ನೇಹಬಳಗ, ಸ್ಥಳ: ಹರಿಹರೇಶ್ವರ ದೇವಾಲಯ, ತಿಮ್ಮೇಶಪ್ರಭು ಉದ್ಯಾನ, ಬೆಳಿಗ್ಗೆ 7.30

ಕೌದೇನಹಳ್ಳಿ ಕೆರೆ ಹಬ್ಬ: ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಜಾನಪದ ಗಾಯನ: ಪಿಚ್ಚಳ್ಳಿ ಶ್ರೀನಿವಾಸ್, ಆಯೋಜನೆ: ಕೆ.ಆರ್.ಪುರ ಕೆರೆ ಮತ್ತು ಪರಿಸರ ಸಂರಕ್ಷಣಾ ಟ್ರಸ್ಟ್, ಸ್ಥಳ: ಕೌದೇನಹಳ್ಳಿ ಕೆರೆ ಆವರಣ, ಬೆಳಿಗ್ಗೆ 8

ಸಂಗೀತಾರಾಧನಾ ಮಹೋತ್ಸವ: ಉದ್ಘಾಟನೆ: ಎಲ್.ಎನ್. ಮುಕುಂದ ರಾಜ್, ಅಧ್ಯಕ್ಷತೆ: ಕೆ.ಎಚ್. ಕುಮಾರ್, ಮುಖ್ಯ ಅತಿಥಿಗಳು: ಬಿ.ಎಂ. ಪಟೇಲ್ ಪಾಂಡು, ಮೊಹಮ್ಮದ್ ಜಬಿವುಲ್ಲಾ, ಬಿ. ನೀಲಮ್ಮ, ಸಂಗಮೇಶ ಬಾದವಾಡಗಿ, ರಾಜ್ ಕೃಷ್ಣ ಮೂರ್ತಿ ಎನ್., ಆಯೋಜನೆ: ವಿಶ್ವಮಾನವ ಸಂಗೀತ ಯಾನ, ಸ್ಥಳ: ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 9

'ಪೆಟ್-ಎ-ಥಾನ್': ಪ್ರಾಣಿ ಹಕ್ಕುಗಳ ಬಗ್ಗೆ ನಾಯಿ ಮಾಲೀಕರಿಂದ ಜಾಗೃತಿ, ಆಯೋಜನೆ: ರೋಟರಿ ಬೆಂಗಳೂರು ಐಟಿ ಕಾರಿಡಾರ್, ಸ್ಥಳ: ಕಬ್ಬನ್ ಉದ್ಯಾನ, ಕೇಂದ್ರ ಗ್ರಂಥಾಲಯದ ಬಳಿ, ಬೆಳಿಗ್ಗೆ 9

ಉಚಿತ ಕಣ್ಣು ಪರೀಕ್ಷೆ ಹಾಗೂ ದಂತ ತಪಾಸಣಾ ಶಿಬಿರ: ಉದ್ಘಾಟನೆ: ಜೆ.ರಾಜು, ಆಯೋಜನೆ ಹಾಗೂ ಸ್ಥಳ: ಉದಯಭಾನು ಕಲಾ ಸಂಘ, ಕೆಂಪೇಗೌಡ ನಗರ, ಬೆಳಿಗ್ಗೆ 10

ಹಾಸ್ಯಮೇಳ: ಉದ್ಘಾಟನೆ: ಎಸ್. ಷಡಕ್ಷರಿ, ಮೈಸೂರು ಆನಂದ, ಇಂದುಶ್ರೀ, ಉಮೇಶ ಗೌಡ, ಅಚ್ಯುತ ರಾವ್ ಪದಕಿ, ಎಚ್.ವಿ. ನಟರಾಜ್, ಆಯೋಜನೆ: ಅಂತರಂಗ, ಸ್ಥಳ: ಪತ್ತಿ ಸಭಾಂಗಣ, ರಾಮಮಂದಿರ ಆವರಣ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಪುತ್ಥಳಿ ಸಂಭ್ರಮ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ವಿಶೇಷ ಅತಿಥಿ: ಶರಣ್, ಮುಖ್ಯ ಅತಿಥಿ: ಎಂ.ಎಸ್. ನರಸಿಂಹ ಮೂರ್ತಿ, ದತ್ತಾತ್ರೇಯ, ರಾಧಾಕೃಷ್ಣ ಉರಾಳ, ಸುಬ್ಬಯ್ಯ, ಆಯೋಜನೆ: ರಂಗಪುತ್ಥಳಿ ಯಶೋದ ಪಪೆಟ್ರ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಪ್ರಥಮ ರಾಜ್ಯ ಸಮಾವೇಶ: ಉದ್ಘಾಟನೆ: ಕುಪ್ಪುಸ್ವಾಮಿ, ಮುಖ್ಯ ಅತಿಥಿಗಳು: ಮೀನಾಕ್ಷಿ ಸುಂದರಂ, ಲಕ್ಷ್ಮಯ್ಯ, ಕೆ. ಪ್ರಕಾಶ್, ಬಿ.ವಿ. ರಾಘವೇಂದ್ರ, ಎಚ್.ಡಿ. ರೇವಪ್ಪ, ಆರ್. ಮಂಜುನಾಥ್, ಕೃಷ್ಣಪ್ಪ, ಅಧ್ಯಕ್ಷತೆ: ಎಚ್.ಎಸ್. ಮಂಜುನಾಥ್, ಆಯೋಜನೆ: ಆಲ್ ಇಂಡಿಯಾ ರೋಡ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಫೆಡರೇಷನ್, ಸ್ಥಳ: ಗುಂಡೂರಾವ್ ಕ್ರೀಡಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 11

ಕಾಳಿದಾಸ-ಸಂಗೊಳ್ಳಿ ರಾಯಣ್ಣ ವಿದ್ಯಾರ್ಥಿನಿಲಯದ ಹಳೆಯ ವಿದ್ಯಾರ್ಥಿಗಳ ಸಂಘದ ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ನಿರಂಜನಾನಂದಪುರಿ ಸ್ವಾಮೀಜಿ, ಆಯೋಜನೆ: ಕಾಳಿದಾಸ ಮತ್ತು ಸಂಗೊಳ್ಳಿ ರಾಯಣ್ಣ ವಿದ್ಯಾರ್ಥಿನಿಲಯದ ಹಳೇ ವಿದ್ಯಾರ್ಥಿಗಳ ಸಂಘ, ಸ್ಥಳ: ಡಿ. ದೇವರಾಜ ಅರಸು ಭವನ, ವಸಂತನಗರ, ಮಧ್ಯಾಹ್ನ 2

ಕನ್ನಡ ರಾಜ್ಯೋತ್ಸವ: ವಿಶೇಷ ಆಹ್ವಾನಿತರು: ಡಿ.ಕೆ. ಸುರೇಶ್, ಮುಖ್ಯ ಅತಿಥಿ: ಕುಸುಮಾ ಹನುಮಂತರಾಯಪ್ಪ, ಆಯೋಜನೆ: ಜ್ಞಾನಭಾರತಿ ವಾರ್ಡ್ ಕಾಂಗ್ರೆಸ್ ಸಮಿತಿ, ಸ್ಥಳ: ಟಿ.ಎನ್. ಬಾಲಕೃಷ್ಣ ರಂಗಮಂದಿರ, ರಾಜರಾಜೇಶ್ವರಿ ನಗರ, ಬೆಳಿಗ್ಗೆ 10

'ಕನ್ನಡ ಎಂದರೆ ಬರಿ ನುಡಿ ಅಲ್ಲ' ಸುಗಮ ಸಂಗೀತ ಮತ್ತು ಮಕ್ಕಳ ಕಾರ್ಯಕ್ರಮ: ಅಧ್ಯಕ್ಷತೆ: ಕೆ.ವಿ. ಕೋದಂಡರಾಮಯ್ಯ, ಮುಖ್ಯ ಅತಿಥಿಗಳು: ಎಂ. ಪ್ರಕಾಶಮೂರ್ತಿ, ಜೋಗಿಲ ಸಿದ್ಧರಾಜು, ಅಭಿನಂದನೆ: ವೆಂಕಟೇಶಮೂರ್ತಿ ಶಿರೂರ್, ಎಚ್. ಓಂಕಾರಮ್ಮ, ಸುಗಮ ಸಂಗೀತ: ಇಂಚರ ಪ್ರವೀಣ್‌ಕುಮಾರ್, ಎಚ್. ಸಂಜನಾ, ಆಯೋಜನೆ: ಗೌರಮ್ಮ ಕೆ. ವೆಂಕಟರಾಮಯ್ಯ ಸ್ಮಾರಕ ಪ್ರತಿಷ್ಠಾನ, ಸ್ಥಳ: ಶ್ರೀ ರಾಘವೇಂದ್ರ ಸೇವಾಶ್ರಮದ ಆವರಣ, ಎಲ್.ಆರ್. ಬಂಡೆ, ಕಾವಲು ಬೈರಸಂದ್ರ, ಮಧ್ಯಾಹ್ನ 3.30

ಭರತನಾಟ್ಯ ರಂಗಪ್ರವೇಶ: ಪವಿತ್ರಾ ದೀಪಕ್, ಸಂಯುಕ್ತಾ ದೀಪಕ್, ಗೌರವ ಅತಿಥಿಗಳು: ರಂಗನಾಯಕಲು, ಚೆಲುವರಾಜ್, ವೈ.ಕೆ. ಸಂಧ್ಯಾ ಶರ್ಮಾ, ಶೀಲು ಮೆಹ್ತಾ, ಆಯೋಜನೆ: ನಳರಾಜ ಕಲಾನಿಕೇತನ,ಸ್ಥಳ: ಎಡಿಎ ರಂಗ ಮಂದಿರ,ಜೆ.ಸಿ. ರಸ್ತೆ, ಸಂಜೆ 5



'ಒಸ್ಯಾಟ್' ಸಾಧನೆ: ಮುಖ್ಯ ಅತಿಥಿ: ಯು.ಬಿ. ಪ್ರವೀಣ್ ರಾವ್, ಗೌರವ ಅತಿಥಿ: ಗಾಯತ್ರಿ ಕುಂಜಿತಾಯ, ಆಯೋಜನೆ: ಒಸ್ಯಾಟ್, ಸ್ಥಳ: ಎಚ್.ಎನ್. ಕಲಾಕ್ಷೇತ್ರ, ಜಯನಗರ, ಸಂಜೆ 4

ಸಂಗೀತೋತ್ಸವ: ರಂಜನಿ, ಗಾಯತ್ರಿ, ಸಹಕಾರ: ಎಲ್. ರಾಮಕೃಷ್ಣ, ಮನೋಜ್ ಶಿವ, ನಾರಾಯಣಮೂರ್ತಿ ಎಸ್.ಎನ್. ಆಯೋಜನೆ: ಎಂ.ಇ.ಎಸ್. ಕಲವೇದಿ, ಸ್ಥಳ: ಎಂಇಎಸ್ ಕಾಲೇಜು, ಮಲ್ಲೇಶ್ವರ, ಸಂಜೆ 4

ಸಾಂಸ್ಕೃತಿಕ ಉತ್ಸವ ಮತ್ತು ಮೇರಾ 22: ಆಯೋಜನೆ: ಕರ್ನಾಟಕ ಬಂಜಾರ ನೌಕರರ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಬಿ.ಆರ್. ಅಂಬೇಡ್ಕರ ಭವನ, ವಸಂತನಗರ, ಸಂಜೆ 4

'ಬ್ರಹ್ಮ ಕಪಾಲ' ಯಕ್ಷಗಾನ ಪ್ರದರ್ಶನ: ಮೇಳ: ಶ್ರೀ ಬ್ರಾಹ್ಮಿದುರ್ಗಾಪರಮೇಶ್ವರೀ ಕೃಪಾಪೋಷಿತ ಯಕ್ಷಗಾನ ಮಂಡಳಿ ಕಮಲಶಿಲೆ, ಆಯೋಜನೆ: ಸುವರ್ಣ ಪ್ರಸಾಧನ ಯಕ್ಷರಂಗ ಆರ್.ಟಿ.ನಗರ, ಸ್ಥಳ: ತರಳಬಾಳು ಕೇಂದ್ರ ಆರ್.ಟಿ.ನಗರ, ಸಂಜೆ 4

ಕನ್ನಡ ರಾಜ್ಯೋತ್ಸವ ಹಾಗೂ ಐದು ಪುಸ್ತಕಗಳ ಲೋಕಾರ್ಪಣೆ: ಡಿ.ವಿ. ಗುರುಪ್ರಸಾದ್ ಅವರ 'ಸಿಸ್ಟರ್ ಅಭಯಾ ಸಾವು ಕೊಲೆಯೋ ಆತ್ಮಹತ್ಯೆಯೋ?', ನಾ. ಸೋಮೇಶ್ವರ ಅವರ 'ನುಡಿದರೆ ಮುತ್ತಿನ ಹಾರದಂತಿರಬೇಕು', ಸಂತೋಷ ಕುಮಾರ್ ಮೆಹೆಂದಳೆ ಅವರ 'ಅಲೆಮಾರಿಯ ಡೈರಿ', ಟಿಎನ್ನೆಸ್ ಅವರ 'ಯೋಧಂ ಶರಣಂ ಗಚ್ಛಾಮಿ', ಮುಧು ಎಸ್. ಚಿನ್ನಸ್ವಾಮಿ ಅವರ 'ಚಾಣಕ್ಯ ಅಮಿತ್ ಷಾ', ವಿಶೇಷ ಆಹ್ವಾನಿತರು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆರ್. ಅಶೋಕ್, ರವೀಂದ್ರ, ಯೋಗಿಶ್ ಪೂವಯ್ಯ, ಬಿ.ಎನ್. ಗರುಡಾಚಾರ್, ನಿತ್ಯಾನಂದ ವಿವೇಕವಂಶಿ, ಮುಖ್ಯ ಅತಿಥಿಗಳು: ವಿ. ನಾಗೇಂದ್ರ ಪ್ರಸಾದ್, ಸುದರ್ಶನ್ ಚನ್ನಂಗಿಹಳ್ಳಿ, ರೋಹಿತ್ ಚಕ್ರತೀರ್ಥ, ಆಯೋಜನೆ: ವಿಕ್ರಂ ಪ್ರಕಾಶನ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಅನುಶ್ರೀ ಎಂ., ವಿಶೇಷ ಆಹ್ವಾನಿತರು: ವೈಜಯಂತಿ ಕಾಶಿ, ಎಂ. ಸೂರ್ಯಪ್ರಸಾದ್, ಪ್ರೊ.ಎಂ.ಆರ್. ಕಮಲಾ, ಸ್ಥಳ: ಕೃಷ್ಣದೇವರಾಯ ರಂಗ ಮಂದಿರ, ವೈಯಾಲಿಕಾವಲ್, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ಶ್ರೀಲಕ್ಷ್ಮೀ ಯದುನಂದನ್, ಮುಖ್ಯ ಅತಿಥಿ ಗಳು: ಎಂ.ಆರ್. ಕೃಷ್ಣಮೂರ್ತಿ, ಆರ್.ವಿ. ರಾಘವೇಂದ್ರ, ಜೆ.ಎಸ್. ಶ್ರೀಕಂಠ ಭಟ್, ಎಂ.ಜಿ. ಶಶಿರೇಖಾ, ಆಯೋಜನೆ: ಕಲಾವಾರಿಧಿ ಇನ್‌ಸ್ಟಿಟ್ಯೂಟ್ ಆಫ್ ಫೈನ್ ಆರ್ಟ್ಸ್, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 6

ಬಾನ್ಸುರಿ ವಾದನ: ಗೌರೀಶ ಅನಂತ ಹೆಗಡೆ, ತಬಲಾ: ವಿನಾಯಕ ಅನಂತ ಹೆಗಡೆ, ಹಿಂದೂಸ್ತಾನಿ ಗಾಯನ: ಪ್ರತಿಮಾ ಆತ್ರೇಯ, ಆಯೋಜನೆ: ನಾದಬ್ರಹ್ಮ ಕಲಾಕೇಂದ್ರ, ಸ್ಥಳ: ನಾದಬ್ರಹ್ಮ ಪ್ರಾರ್ಥನಾ ಮಂದಿರ, ಅರಕೆರೆ, ಬನ್ನೇರುಘಟ್ಟ ರಸ್ತೆ, ಸಂಜೆ 5

'ನವಿಲು ಪುರಾಣ' ನಾಟಕ ಪ್ರದರ್ಶನ: ನಿರ್ದೇಶನ: ಸುರೇಶ್ ಅನಗಳ್ಳಿ, ಆಯೋಜನೆ: ಅನೇಕ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಕನ್ನಡ ರಾಜ್ಯೋತ್ಸವ, ವಾಲ್ಮೀಕಿ ಜಯಂತಿ ಹಾಗೂ ಗಣ್ಯರಿಗೆ ಸನ್ಮಾನ: ಉದ್ಘಾಟನೆ: ಬಿ. ಶ್ರೀರಾಮುಲು, ವಾಲ್ಮೀಕಿ ಭಾವಚಿತ್ರ ಅನಾವರಣ: ಎಂ. ಕೃಷ್ಣಪ್ಪ, ಭುವನೇಶ್ವರಿ ಭಾವಚಿತ್ರ ಅನಾವರಣ: ಜಾಣಗೆರೆ ವೆಂಕಟರಾಮಯ್ಯ, ಅಧ್ಯಕ್ಷತೆ: ಜಮೀರ್ ಅಹಮದ್ ಖಾನ್, ಮದಕರಿ ನಾಯಕ ಭಾವಚಿತ್ರ ಅನಾವರಣ: ಶಶಿಕುಮಾರ್, ಆಯೋಜನೆ: ಕರ್ನಾಟಕ ರಾಜ್ಯ ವಾಲ್ಮೀಕಿ, ನಾಯಕ ಸಂಘಗಳ ಒಕ್ಕೂಟ,ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

ಕಮಿಷನ್ ಆಸೆ: ಅನರ್ಹರ ಪಾಲಾದ ವಿದ್ಯಾರ್ಥಿವೇತನ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: 'ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಗುತ್ತಿಗೆ ನೌಕರ ಮುಜಾಹಿದ್ ಪಾಷಾ, ಕಾರ್ಮಿಕರ ಮಕ್ಕಳಿಗಾಗಿ ನೀಡುತ್ತಿದ್ದ ವಿದ್ಯಾರ್ಥಿ-ವೇತನವನ್ನು ಲಪಟಾಯಿಸಲು ತಮ್ಮನ ಜೊತೆ ಸೇರಿ ತಂಡ ಕಟ್ಟಿದ್ದರು. ಶೇ 50–60ರಷ್ಟು ಕಮಿಷನ್ ಆಸೆಗಾಗಿ ವಿದ್ಯಾರ್ಥಿವೇತನವನ್ನು ಅನರ್ಹರ ಪಾಲಾಗಿಸಿದ್ದರು' ಎಂಬ ಸಂಗತಿ ತನಿಖೆಯಿಂದ ಹೊರಬಿದ್ದಿದೆ.

ತುಮಕೂರು ಜಿಲ್ಲೆಯ ಕ್ಯಾತ್ಸಂದ್ರ ಠಾಣೆಯಲ್ಲಿ ದಾಖಲಾಗಿದ್ದ ವಿದ್ಯಾ-ರ್ಥಿವೇತನ ವಂಚನೆ ಪ್ರಕ-ರಣದಲ್ಲಿ ಮುಜಾಹಿದ್ ಪಾಷಾನನ್ನು ಪೊಲೀಸರು ಈಗಾಗಲೇ ಬಂಧಿಸಿದ್ದು, ಕಸ್ಟಡಿಗೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಪ್ರಜಾವಾಣಿ ವಿಶೇಷ

'ತುಮಕೂರಿನ ಎಚ್‌ಎಂಎಸ್‌ಐಟಿ ಕಾಲೇಜಿನಲ್ಲಿ ವ್ಯಾಸಂಗ ಮುಗಿಸಿದ್ದ ಮುಜಾಹಿದ್, ಕಾರ್ಮಿಕರ ಕಲ್ಯಾಣ ಮಂಡಳಿಯ ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ (ಎಸ್‌ಎಸ್‌ಪಿ) ವಿಭಾಗದಲ್ಲಿ ಗುತ್ತಿಗೆ ನೌಕರನಾಗಿ ಕೆಲಸಕ್ಕೆ ಸೇರಿದ್ದ. ಮಂಡಳಿಯಿಂದ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡುವ ತಂಡದಲ್ಲಿದ್ದ. ಈತನ ಮೇಲೆ ನೋಡಲ್ ಅಧಿಕಾರಿಯೊಬ್ಬರು ಕೆಲಸ ಮಾಡುತ್ತಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಎಸ್‌ಎಸ್‌ಪಿ ಮೂಲಕ ಬರುವ ಅರ್ಜಿಗಳನ್ನು ಪರಿಶೀಲಿಸಿ, ವಿದ್ಯಾರ್ಥಿಗಳ ಖಾತೆಗೆ ಹಣ ಜಮೆ ಮಾಡುವ ವ್ಯವಸ್ಥೆ ಬಗ್ಗೆ ಮುಜಾಹಿದ್ ತಿಳಿದುಕೊಂಡಿದ್ದ. ಹೀಗಾಗಿ, ತಮ್ಮನಾದ ಮೊಹಮ್ಮದ್ ಅಜೀಮ್ ಜೊತೆ ವಿದ್ಯಾರ್ಥಿವೇತನ ದೋಚಲು ಸಂಚು ರೂಪಿಸಿದ್ದ' ಎಂದು ತಿಳಿಸಿದರು.

ಕಮಿಷನ್ ಆಸೆಗೆ ಕೃತ್ಯ: 'ತುಮಕೂರು ಎಚ್‌ಎಂಎಸ್‌ಐಟಿ ಸೇರಿದಂತೆ ಹಲವು ಕಾಲೇಜುಗಳಿಗೆ ಹೋಗುತ್ತಿದ್ದ ಆರೋಪಿಗಳು, ಅಲ್ಲಿಯ ವಿದ್ಯಾರ್ಥಿಗಳನ್ನು ಪರಿಚಯ ಮಾಡಿಕೊಳ್ಳುತ್ತಿದ್ದರು. ಕಟ್ಟಡ ಕಾರ್ಮಿಕರ ಮಕ್ಕಳಲ್ಲದಿದ್ದರೂ ಅವರ ಆಧಾರ್ ಹಾಗೂ ಇತರೆ ದಾಖಲೆಗಳನ್ನು ಪಡೆಯುತ್ತಿದ್ದರು. ತಂದೆಯ ದಾಖಲೆಗಳನ್ನೂ ಸಂಗ್ರಹಿಸುತ್ತಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ವಿದ್ಯಾರ್ಥಿವೇತನ ವಂಚನೆ ಪ್ರಕರಣದ ತನಿಖೆ ಚುರುಕುಗೊಳಿಸಲಾಗಿದೆ. ಕಾರ್ಮಿಕ ಇಲಾಖೆ ಅಧಿಕಾರಿಗಳು ತನಿಖೆಗೆ ಸಹಕರಿಸುತ್ತಿದ್ದು, ಅಗತ್ಯ ಮಾಹಿತಿ ಹಂಚಿಕೊಳ್ಳುತ್ತಿದ್ದಾರೆ

ರಾಹುಲ್ ಕುಮಾರ್ ಶಹಪೂರವಾಡ್, ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

'ನಕಲಿ ದಾಖಲೆ ಮೂಲಕ ಕಾರ್ಮಿಕರ ನೋಂದಣಿಯ ಗುರುತಿನ ಚೀಟಿ ಸಿದ್ಧಪಡಿಸಿ, ವಿದ್ಯಾರ್ಥಿಗಳ ಹೆಸರಿನಲ್ಲಿ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಹಾಕುತ್ತಿದ್ದರು. ವಿದ್ಯಾರ್ಥಿಗಳ ಪಟ್ಟಿಯನ್ನು ಮುಜಾಹಿದ್‌ಗೆ ಕಳು-ಹಿಸುತ್ತಿದ್ದರು. ಎಸ್‌ಎಸ್‌ಪಿ ವಿಭಾಗಕ್ಕೆ ಬರುತ್ತಿದ್ದ ಅರ್ಜಿಗಳನ್ನು ಪರಿಶೀಲನೆ ನಡೆಸದೇ ಮುಂದಕ್ಕೆ ಕಳುಹಿಸು-ತ್ತಿದ್ದ ಮುಜಾಹಿದ್, ವಿದ್ಯಾರ್ಥಿಗಳ ಖಾತೆಗೆ ಹಣ ಜಮೆಯಾಗುವಂತೆ ನೋಡಿಕೊಳ್ಳುತ್ತಿದ್ದರು. ನಂತರ, ವಿದ್ಯಾರ್ಥಿಗಳ ಬಳಿಯಿಂದ ಶೇ 50ರಿಂದ ಶೇ 60ರಷ್ಟು ಕಮಿಷನ್ ಪಡೆಯುತ್ತಿದ್ದರು.'

'ಎಂಜಿನಿಯರಿಂಗ್, ವೈದ್ಯಕೀಯ, ಪದವಿ ಸೇರಿ ಹಲವು ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ 100ಕ್ಕೂ ಹೆಚ್ಚು ಅನರ್ಹ ವಿದ್ಯಾರ್ಥಿಗಳಿ-ಗೆ ತಲಾ ₹50 ಸಾವಿರದಿಂದ ₹75 ಸಾವಿರ ವಿದ್ಯಾರ್ಥಿವೇತನ ಮಂಜೂರು ಮಾಡಿಸಿರುವ ಆರೋಪಿಗಳು, ಮಂಡಳಿಗೆ ಲಕ್ಷಾಂತರ ರೂಪಾಯಿ ವಂಚಿಸಿರುವ ಮಾಹಿತಿ ಇದೆ. ಕೃತ್ಯದಲ್ಲಿ ಬೇರೆ ಯಾರೆಲ್ಲ ಭಾಗಿಯಾಗಿದ್ದಾರೆ ಎಂಬುದನ್ನು ತಿಳಿಯಲು ತನಿಖೆ ಮುಂ-ದುವರಿಸಲಾಗಿದೆ' ಎಂದು ತಿಳಿಸಿದರು.

'ಕಾರ್ಮಿಕ ಅಧಿಕಾರಿಗಳೊಂದಿಗೆ ಸೇರಿ ವಸೂಲಿ: ವಿದ್ಯಾರ್ಥಿ ದೂರು'

'ಕಟ್ಟಡ ಕಾರ್ಮಿಕರೊಬ್ಬರ ಮಗ, ಎಚ್‌ಎಂಎಸ್‌ಐಟಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇವರಿಗೆ ಮಂಡಳಿಯಿಂದ ₹ 50 ಸಾವಿರ ವಿದ್ಯಾರ್ಥಿವೇತನ ಮಂಜೂರಾಗಿತ್ತು. ಇವರನ್ನು ಸಂಪರ್ಕಿಸಿದ್ದ ಆರೋಪಿಗಳು, 'ನಾವೇ ವಿದ್ಯಾರ್ಥಿವೇತನ ಕೊಡಿಸಿದ್ದೇವೆ. ಕಮಿಷನ್ ₹ 30,000 ಕೊಡು' ಎಂಬುದಾಗಿ ಹೇಳಿ ಪೀಡಿಸುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಮಿಷನ್ ನೀಡಲು ಒಪ್ಪದ ವಿದ್ಯಾರ್ಥಿ, 'ನಮ್ಮ ತಂದೆ ಕಟ್ಟಡ ಕಾರ್ಮಿಕ. ವಿದ್ಯಾರ್ಥಿವೇತನಕ್ಕೆ ನಾನು ಅರ್ಹನಿದ್ದೇನೆ. ಯಾವುದೇ ಕಮಿಷನ್ ನೀಡುವುದಿಲ್ಲ' ಎಂದಿದ್ದರು. ಕೋಪಗೊಂಡ ಆರೋಪಿಗಳು ಕೊಲೆ ಬೆದರಿಕೆಯೊಡ್ಡಿದ್ದರು. ಬೇಸತ್ತ ವಿದ್ಯಾರ್ಥಿ ಕ್ಯಾತ್ಸಂದ್ರ ಠಾಣೆಗೆ ದೂರು ನೀಡಿದ್ದರು.

'ಕಾರ್ಮಿಕ ಇಲಾಖೆ ಅಧಿಕಾರಿಗಳೊಂದಿ-ಗೆ ಸೇರಿಕೊಂಡು ವಿದ್ಯಾರ್ಥಿಗಳು ಹಾಗೂ ಅವರ ಪೋಷಕರನ್ನು ಬೆದರಿಸಿ ಆರೋಪಿಗಳು ಹಣ ವಸೂಲಿ ಮಾಡುತ್ತಿದ್ದಾರೆ' ಎಂದು ವಿದ್ಯಾರ್ಥಿ ಆರೋಪಿಸಿದ್ದರು. ಆರೋಪಿಗಳಾದ ಮೊಹಮ್ಮದ್ ಅಜೀಮ್, ರಹೀಮ್ ಬೇಗ್, ಎಂ. ವಸೀಮ್ ಹಾಗೂ ಮುಫೀಜ್ ಎಂಬುವರನ್ನು ಬಂಧಿಸಲಾಗಿತ್ತು. ಪ್ರಮುಖ ಆರೋಪಿ ಮುಜಾಹೀದ್ ಪಾಷಾ ತಲೆಮರೆಸಿಕೊಂಡಿದ್ದ. ಇದೀಗ ಸಿಕ್ಕಿಬಿದ್ದಿದ್ದಾನೆ. ಕಾರ್ಮಿಕ ಇಲಾಖೆ ಅಧಿಕಾರಿಗಳು ಭಾಗಿಯಾಗಿರುವ ಬಗ್ಗೆ ಸದ್ಯಕ್ಕೆ ಯಾವುದೇ ಪುರಾವೆಗಳು ಸಿಕ್ಕಿಲ್ಲ' ಎಂದು ಹೇಳಿವೆ.



ಭಾವಚಿತ್ರಕ್ಕೆ ಪುಷ್ಪಾರ್ಚನೆ

ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಆಯೋಜಿಸಿದ್ದ ಸಂವಿಧಾನದ ಆಶಯಗಳು ಈಡೇರಿಲ್ಲ ಯಾಕೆ? ವಿಚಾರ ಸಂಕಿರಣವನ್ನು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಅವರು ಸಂವಿಧಾನದ ಪ್ರತಿ ಮತ್ತು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು. ಒಕ್ಕೂಟದ ಜಂಟಿ ಕಾರ್ಯದರ್ಶಿ ಕನ್ನಳ್ಳಿ ಕೃಷ್ಣಪ್ಪ, ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ವೀರಸಂಗಯ್ಯ, ಜನ ಸಂಗ್ರಾಮ ಪರಿಷತ್ತಿನ ರಾಜ್ಯ ಸಂಚಾಲಕ ಎಸ್.ಆರ್. ಹಿರೇಮಠ, ಒಕ್ಕೂಟದ ಅಧ್ಯಕ್ಷ ಬಿ.ಚನ್ನಕೃಷ್ಣಪ್ಪ, ಪ್ರಧಾನ ಕಾರ್ಯದರ್ಶಿ ಆರ್.ಎಂ.ಎನ್.ರಮೇಶ್ ಇದ್ದರು –ಪ್ರಜಾವಾಣಿ ಚಿತ್ರ

ದಕ್ಷಿಣ ಕನ್ನಡ: ದೇವಸ್ಥಾನಗಳಲ್ಲಿ ಭದ್ರತೆ ಹೆಚ್ಚಳ

ಮಂಗಳೂರು: ನಗರದಲ್ಲಿ ಕುಕ್ಕರ್ ಬಾಂಬ್ ಸ್ಫೋಟದ ಬಳಿಕ ಹಾಗೂ ಹಿಂದೂ ಧರ್ಮದ ದೇವಸ್ಥಾನಗಳನ್ನು ಗುರಿಯಾಗಿಸಿ ಭಯೋತ್ಪಾದನಾ ಕೃತ್ಯ ನಡೆಸುವ ಕುರಿತ ಸಂದೇಶಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ಬಳಿಕ ನಗರದ ಹಾಗೂ ದಕ್ಷಿಣ ಕನ್ನಡ ಜಿಲ್ಲೆ ಪ್ರಮುಖ ದೇವಸ್ಥಾನಗಳ ಭದ್ರತೆ ಹೆಚ್ಚಳ ಮಾಡಲಾಗಿದೆ.

ದೇವಸ್ಥಾನಗಳಿಗೆ ಹೆಚ್ಚುವರಿಯಾಗಿ ಭದ್ರತಾ ಸಿಬ್ಬಂದಿಯನ್ನು ನಿಯೋಜನೆ ಮಾಡಿದ್ದದಲ್ಲದೇ, ಸಶಸ್ತ್ರ ಮೀಸಲು ಪಡೆಯ ವಾಹನಗಳೂ ದೇವಸ್ಥಾನದ ಬಳಿ ಬೀಡುಬಿಟ್ಟಿವೆ.

ಕದ್ರಿ ಮಂಜುನಾಥ ದೇವಸ್ಥಾನದ ಆಡಳಿತ ಮಂಡಳಿಯವರು, ಹೆಚ್ಚಿನ ಭದ್ರತೆ ನೀಡುವಂತೆ ಕೋರಿ ಕದ್ರಿ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಿದ್ದರು. ಬಳಿಕ ದೇವಸ್ಥಾನದ ಭದ್ರತೆ ಹೆಚ್ಚಿಸಲಾಗಿದೆ. ಮಂಗಳಾದೇವಿ ದೇವಸ್ಥಾನ ಹಾಗೂ ಕುದ್ರೋಳಿ ಗೋಕರ್ಣನಾಥ ದೇವಸ್ಥಾನದವರು ವಿಶೇಷ ಭದ್ರತೆಯನ್ನು ಕೋರಿಲ್ಲ. ಆದರೆ, ಪೊಲೀಸರೇ ಈ ದೇವಸ್ಥಾನಕ್ಕೂ ಭದ್ರತಾಸಿ-ಬ್ಬಂದಿಯನ್ನು ನಿಯೋಜಿಸಿದ್ದಾರೆ.

ವೀರಶೈವ ಲಿಂಗಾಯತ ಸಮಾಜದ ಸಭೆ ಡಿಸೆಂಬರ್ 3ಕ್ಕೆ

ಚಿತ್ರದುರ್ಗ: ಮುರುಘಾ ಮಠಕ್ಕೆ ನೂತನ ಪೀಠಾಧ್ಯಕ್ಷ, ಆಡಳಿತಾಧಿಕಾರಿ ನೇಮಕ ಮಾಡಲು ಸರ್ಕಾರ ಮಧ್ಯಪ್ರವೇಶಿಸಬೇ-ಕು ಎಂಬ ಹೋರಾಟ ಕೈಗೆತ್ತಿಕೊಂಡಿ-ರುವ ಮಾಜಿ ಸಚಿವ ಎಚ್.ಏಕಾಂತಯ್ಯ ಡಿ.3ರಂದು ವೀರಶೈವ ಲಿಂಗಾಯತ ಸಮಾಜದ ಸಭೆ ಕರೆದಿದ್ದಾರೆ.

ಚಿತ್ರದುರ್ಗದ ಸೀಬಾರದಲ್ಲಿರುವ ನಿಜಲಿಂಗಪ್ಪ ಸ್ಮಾರಕದಲ್ಲಿ ಅಂದು ಬೆಳಿಗ್ಗೆ 11.30ಕ್ಕೆ ಸಮಾಜದ ಮುಖಂಡರು ಸಭೆ ಸೇರುವಂತೆ ಸೂಚನೆ ನೀಡಿದ್ದಾರೆ. ಸಮಾಜಕ್ಕೆ ಬರೆದಿರುವ ಪತ್ರದಲ್ಲಿ ಈವರೆಗಿನ ಎಲ್ಲ ಬೆಳವಣಿಗೆಯನ್ನು ವಿವರಿಸಿದ್ದಾರೆ.

ಚರಂಡಿ ಕಾಮಗಾರಿ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಬಳಿಯ ಭಜನಾ ಮಂದಿರ ರಸ್ತೆಯಲ್ಲಿ ಒಳಚರಂಡಿ ಕಾಮಗಾರಿ ವೇಳೆ ಸಿಮೆಂಟ್ ಸ್ಲ್ಯಾಬ್ ಕುಸಿದು ಕಾರ್ಮಿಕ ಚಲಪತಿ (25) ಎಂಬುವವರು ಶನಿವಾರ ಮೃತಪಟ್ಟಿದ್ದಾರೆ.

'ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ವೆಂಕಟಾಪುರದ ಚಲಪತಿ, ಗುತ್ತಿಗೆದಾರರೊಬ್ಬರ ಸೂಚನೆಯಂತೆ ಕೆಲಸದಲ್ಲಿ ತೊಡಗಿದ್ದರು. ಘಟನೆಯಲ್ಲಿ ಮತ್ತೊಬ್ಬ ಕಾರ್ಮಿಕ ಮುನಿಯಪ್ಪ (25) ಎಂಬುವರು ಗಾಯಗೊಂಡಿದ್ದು, ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಕೆಂಗೇರಿ ಠಾಣೆ ಪೊಲೀಸರು ಹೇಳಿದರು.

ಗುತ್ತಿಗೆದಾರನ ನಿರ್ಲಕ್ಷ್ಯ: 'ಒಳಚರಂಡಿ ಕಾಮಗಾರಿ ನಡೆಸಲು ಜಲಮಂಡಳಿಯಿಂದ ಗುತ್ತಿಗೆದಾರರೊಬ್ಬರಿಗೆ ಗುತ್ತಿಗೆ ನೀಡಲಾಗಿತ್ತು. ಕೆಲಸದ ಸ್ಥಳದಲ್ಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಲಾಗಿತ್ತು. ಗುತ್ತಿಗೆದಾರನ ನಿರ್ಲಕ್ಷ್ಯದಿಂದ ಈ ಅವಘಡ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಮೃತ ಕಾರ್ಮಿಕರ ಸಂಬಂಧಿಕರು ನೀಡುವ ದೂರು ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ಹೇಳಿದರು.

ಎನ್‌ಜಿಟಿ ದಂಡ ವಿಧಿಸಿದ ಬಳಿಕ ಎಚ್ಚೆತ್ತ ಕರ್ನಾಟಕ ಸರ್ಕಾರ

180 ಲಕ್ಷ ಟನ್ ಹಳೆ ಕಸ ಕರಗಿಸಲು ₹989 ಕೋಟಿ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕದ ಮಹಾ ನಗರ ಪಾಲಿಕೆ ವ್ಯಾಪ್ತಿಗಳ ಭೂಭರ್ತಿ ಘಟಕಗಳಲ್ಲಿ ವರ್ಷಗಳಿಂದ ಕೊಳೆಯುತ್ತಿರುವ 180 ಲಕ್ಷ ಟನ್ ಹಳೆಯ ಕಸವನ್ನು ಕರಗಿಸಲು ₹989 ಕೋಟಿ ಬೇಕಿದೆ.

ಪರಿಸರಕ್ಕೆ ಹಾನಿ ಉಂಟು ಮಾಡುವ ಘನ ಹಾಗೂ ದ್ರವ ತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸದ ಕಾರಣಕ್ಕೆ ಕರ್ನಾಟಕ ಸರ್ಕಾರಕ್ಕೆ ₹2,900 ಕೋಟಿ ದಂಡ ವಿಧಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠವು ಅಕ್ಟೋಬರ್ 14ರಂದು ಆದೇಶಿಸಿತ್ತು. ಅದರ ಬೆನ್ನಲ್ಲೇ ಎಚ್ಚೆತ್ತ ಕರ್ನಾಟಕ ಸರ್ಕಾರವು, ₹2,046 ಕೋಟಿ ಮೊತ್ತದ 'ನಗರ ಕಸ ವಿಲೇವಾರಿ ಕ್ರಿಯಾಯೋಜನೆ'ಯನ್ನು ಅಂತಿಮಗೊಳಿಸಿದೆ. ಹಳೆಯ ಕಸ ವಿಲೇವಾರಿಗೆ ₹989 ಕೋಟಿ ಬೇಕಿದೆ ಎಂದು ಈ ಯೋಜನೆಯಲ್ಲಿ ತಿಳಿಸಲಾಗಿದೆ.

ಸ್ವಚ್ಛ ಭಾರತ ಯೋಜನೆ (ನಗರ) ಪ್ರಗತಿ ಕುರಿತು ಈಚೆಗೆ ನಡೆದ ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ, ಕರ್ನಾಟಕ ಸರ್ಕಾರ ಹಾಗೂ ರಾಜ್ಯ ಯೋಜನಾ ನಿರ್ದೇಶನಾಲಯದ ಉನ್ನತ ಅಧಿಕಾರಿಗಳ ಸಭೆಯಲ್ಲಿ ಕ್ರಿಯಾಯೋಜನೆಗೆ ಅನುಮೋದನೆ ನೀಡುವಂತೆ ಪ್ರಸ್ತಾವ ಮಂಡಿಸಲಾಗಿದೆ. ಬಿಬಿಎಂಪಿ ಹಾಗೂ 309 ನಗರ ಸ್ಥಳೀಯ ಸಂಸ್ಥೆಗಳ ಕಸ ವಿಲೇವಾರಿಯ ಯೋಜನೆ ಇದಾಗಿದೆ.

ಪ್ರಜಾವಾಣಿ ವಿಶೇಷ

309 ನಗರ ಸ್ಥಳೀಯ ಸಂಸ್ಥೆಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡುವಂತೆ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯಕ್ಕೆ 2022ರ ಸೆಪ್ಟೆಂಬರ್ 6ರಂದು ಪ್ರಸ್ತಾವ ಸಲ್ಲಿಸಲಾಗಿತ್ತು. ಬಿಬಿಎಂಪಿಯ ಕ್ರಿಯಾಯೋಜನೆಯನ್ನು ಸೆಪ್ಟೆಂಬರ್ 9ರಂದು ನೀಡಲಾಗಿತ್ತು. ಈ ಪ್ರಸ್ತಾವ ಪರಿಶೀಲಿಸಿರುವ ಸಚಿವಾಲಯದ ರಾಷ್ಟ್ರೀಯ ಸಲಹಾ ಸಮಿತಿಯು ಕೇಂದ್ರ ಸರ್ಕಾರದ ಪಾಲಿನ ₹648 ಕೋಟಿ ಬಿಡುಗಡೆಗೆ ಅನುಮೋದನೆ ನೀಡಿದೆ. ಉಳಿದ ಮೊತ್ತವನ್ನು ಕರ್ನಾಟಕ ಸರ್ಕಾರ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಭರಿಸಬೇಕಿದೆ.

ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅವೈಜ್ಞಾನಿಕ ಕಸ ವಿಲೇವಾರಿ ಕುರಿತು ಸುಪ್ರೀಂ ಕೋರ್ಟ್ 2014ರಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು. ಈ ಸಂಬಂಧ 2017ರಲ್ಲಿ ಆದೇಶ ಹೊರಡಿಸಿತ್ತು. ರಾಜ್ಯಗಳು ಕೈಗೊಂಡ ಕ್ರಮಗಳ ಬಗ್ಗೆ ನಿಗಾ ಇಡುವಂತೆ ಎನ್‌ಜಿಟಿಗೆ ಸೂಚಿಸಿತ್ತು.

ಕೇಂದ್ರ ಸರ್ಕಾರದ 2016ರ ಘನ ತ್ಯಾಜ್ಯ ನಿಯಮದ (ತಿದ್ದುಪಡಿ) ಪ್ರಕಾರ, ಹಸಿ ಕಸ ವಿಂಗಡಿಸಿ ಗೊಬ್ಬರ ಮಾಡಬೇಕು ಹಾಗೂ ಒಣ ಕಸವನ್ನು ವಿಲೇವಾರಿ ಮಾಡಬೇಕು. ಭೂಭರ್ತಿ ಘಟಕಗಳಿಗೆ ಮಿಶ್ರ ಕಸವನ್ನು ಸಾಗಿಸುವಂತಿಲ್ಲ. ಆದರೆ, ಕರ್ನಾಟಕದಲ್ಲಿ ಈಗಲೂ 191 ಭೂಭರ್ತಿ ಘಟಕಗಳಿದ್ದು, ಪ್ರತಿನಿತ್ಯ ಅಪಾರ ಪ್ರಮಾಣದ ಕಸವನ್ನು ಈ ಘಟಕಗಳಲ್ಲಿ ಸುರಿಯಲಾಗುತ್ತಿದೆ. ಬೆಂಗಳೂರಿನ ಮಾವಳ್ಳಿಪುರ, ಮಂಡೂರು ಭೂಭರ್ತಿ ಘಟಕಗಳ ವಿರುದ್ಧ ಸ್ಥಳೀಯರು ಈ ಹಿಂದೆ ಹೋರಾಟ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಮಂಗಳೂರಿನ ಪಚ್ಚನಾಡಿ ಭೂಭರ್ತಿ ಘಟಕದ ಬಗ್ಗೆ ಮಂಗಳೂರು ಮಹಾನಗರ ಪಾಲಿಕೆಯನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡು ಕಸ ವಿಲೇವಾರಿಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿತ್ತು.

ಕಸ ವಿಲೇವಾರಿ ಯೋಜನೆ (ಮೊತ್ತ ₹ಕೋಟಿಗಳಲ್ಲಿ)

ಘಟಕ	ಸಾಮರ್ಥ್ಯ	ಒಟ್ಟು ಮೊತ್ತ	ಕೇಂದ್ರ ಸರ್ಕಾರದ ಪಾಲು	ರಾಜ್ಯ ಸರ್ಕಾರದ ಪಾಲು	ಸ್ಥಳೀಯ ಸಂಸ್ಥೆಗಳ ಪಾಲು
ಮಿಶ್ರಗೊಬ್ಬರ	1813 ಟನ್	208	65	42	101
ಬಯೊಮೆಥನೈಸ್	600 ಟನ್	108	27	17	63
ಕಸದಿಂದ ಉಪಯುಕ್ತವಾದ ಪದಾರ್ಥಗಳ ಮರಳಿ ಪಡೆಯುವುದು	4137 ಟನ್	351	128	84	138
ಕಸದಿಂದ ವಿದ್ಯುತ್	600 ಟನ್	108	27	17	63
ನೈರ್ಮಲ್ಯ ಕಸದ ಭೂಭರ್ತಿ ಘಟಕ	891 ಟನ್	57	19	12	25
ಕಸ ಘಟಕಗಳ ಸ್ಥಾಪನೆ	1192 ಟನ್	71	19	12	39
ಕಸ ವಿಲೇವಾರಿ ಕೇಂದ್ರ	2978 ಟನ್	134	34	22	76
ಮೆಕಾನಿಕಲ್ ಸ್ವೀಪರ್ ಯಂತ್ರ	31	17	4	3	9
ಹಳೆಯ ಕಸ ನಿರ್ವಹಣೆ	180 ಲಕ್ಷ ಟನ್	989	322	210	456

ಎಲ್ಲಿಗೆ ಎಷ್ಟು ವೆಚ್ಚ (₹ಕೋಟಿಗಳಲ್ಲಿ)

ಸ್ಥಳೀಯ ಸಂಸ್ಥೆ	ಒಟ್ಟು ಯೋಜನಾ ವೆಚ್ಚ	ಕೇಂದ್ರ ಸರ್ಕಾರದ ಪಾಲು	ರಾಜ್ಯ ಸರ್ಕಾರದ ಪಾಲು	ಸ್ಥಳೀಯ ಸಂಸ್ಥೆಗಳ ಪಾಲು
309 ಸ್ಥಳೀಯ ಸಂಸ್ಥೆ	833	345	228	259
ಬಿಬಿಎಂಪಿ	1213	303	194	715

ಅಂಕಿ-ಅಂಶಗಳು

₹2,046 ಕೋಟಿ ಯೋಜನಾ ವೆಚ್ಚ

₹648 ಕೋಟಿ ಕೇಂದ್ರದ ಪಾಲು

₹423 ಕೋಟಿ ರಾಜ್ಯದ ಪಾಲು

₹975 ಕೋಟಿ ಸ್ಥಳೀಯ ಸಂಸ್ಥೆಗಳ ಪಾಲು

ಮೂಲಭೂತ ಕರ್ತವ್ಯ ಈಡೇರಿಸುವುದೇ ಜನರ ಪ್ರಥಮ ಆದ್ಯತೆಯಾಗಲಿ: ಮೋದಿ

ಸಕಾಲದಲ್ಲಿ ನ್ಯಾಯ: ಪ್ರಧಾನಿ ಶ್ಲಾಘನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸರ್ವರಿಗೂ ಸಕಾಲದಲ್ಲಿ ನ್ಯಾಯವನ್ನು ಒದಗಿಸಲು ಸುಪ್ರೀಂ ಕೋರ್ಟ್ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಮೆಚ್ಚುಗೆ ವ್ಯಕ್ತಪಡಿಸಿದರು.

ಸುಪ್ರೀಂ ಕೋರ್ಟ್‌ನಲ್ಲಿ ನಡೆದ 'ಸಂವಿಧಾನ ಸರ್ವಜ್ಞಾನ ದಿನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಇಡೀ ಜಗತ್ತು ಇಂದು ಭಾರತದತ್ತ ದೃಷ್ಟಿ ಹರಿಸಿದೆ. ಆರ್ಥಿಕತೆಯಲ್ಲಿ ದೇಶದ ತ್ವರಿತ ಪ್ರಗತಿಯನ್ನು ಗಮನಿಸುತ್ತಿದೆ' ಎಂದು ಹೇಳಿದರು.

ಸಂವಿಧಾನದ ಪೀಠಿಕೆಯಲ್ಲಿನ ಮೊದಲ ಮೂರು ಶಬ್ದಗಳಾದ 'ವೀ ದ ಪೀಪಲ್' ಬದ್ಧತೆ, ಪ್ರತಿಜ್ಞೆ ಮತ್ತು ವಿಶ್ವಾಸವನ್ನು ಬಿಂಬಿಸುತ್ತವೆ. ಇವು ಭಾರತಕ್ಕೆ ಪ್ರಜಾಪ್ರಭುತ್ವದ ತಾಯಿಯ ಸ್ಥಾನವನ್ನು ನೀಡಿದೆ ಎಂದು ಹೇಳಿದರು.

ಸಕಾಲದಲ್ಲಿ ನ್ಯಾಯ ಒದಗಿಸಲು ಕಕ್ಷಿದಾರರು, ವಕೀಲರು, ನ್ಯಾಯಾಂಗಕ್ಕೆ ಅಂತರ್ಜಾಲ ಬೆಂಬಲಿತ ಸಂವಹನ ಸೇವೆ ಒದಗಿಸಿದೆ ಎಂದರು. ಇದೇ ವೇಳೆ ಅವರು ವರ್ಚುವಲ್ ಜಸ್ಟೀಸ್ ಕ್ಲಾಕ್, 'ಜಸ್ಟೀಸ್' ಮೊಬೈಲ್ ಆ್ಯಪ್ 2.0 ಮತ್ತು ಡಿಜಿಟಲ್ ಕೋರ್ಟ್ ಮತ್ತು 'S3WaaS' ವೆಬ್‌ಸೈಟ್ ಸೇವೆಗೆ ಚಾಲನೆ ನೀಡಿದರು.



ನವದೆಹಲಿಯಲ್ಲಿ ನಡೆದ ಸಂವಿಧಾನ ಸರ್ವಜ್ಞಾನ ದಿನ ಮತ್ತು ಇ–ಕೋರ್ಟ್ ಯೋಜನೆಗಳಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸ್ಮರಣಿಕೆ ನೀಡಿದರು –ಪಿಟಿಐ ಚಿತ್ರ

ಮೂಲಭೂತ ಕರ್ತವ್ಯ ನಿಭಾಯಿಸಿ: 'ಮೂಲಭೂತ ಕರ್ತವ್ಯಗಳನ್ನು ಈಡೇರಿಸುವುದೇ ದೇಶದ ನಾಗರಿಕರ ಪ್ರಥಮ ಆದ್ಯತೆಯಾಗಬೇಕು. ಇದರಿಂದ ದೇಶದ ಸ್ಥಾನವನ್ನು ಇನ್ನಷ್ಟು ಎತ್ತರಕ್ಕೆ ಒಯ್ಯಬಹುದು' ಎಂದು ಮೋದಿ ಸಲಹೆ ಮಾಡಿದರು.

'ಭಾರತದ ಸಂವಿಧಾನ ಎಂಬುದು ಸರಳವಾದ ಕಾನೂನು ಕೋಶವಲ್ಲ. ಅದು ಮಾನವ ಸಂಘರ್ಷ ಮತ್ತು ತ್ಯಾಗದ ಫಲ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹೇಳಿದರು.

ನ್ಯಾಯಾಂಗ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ನ್ಯಾಯಾಂಗದೊಂದಿಗೆ ನಿಕಟ ಸಂಬಂಧ ಹೊಂದಲು ಸರ್ಕಾರವು ಎಲ್ಲ ರೀತಿಯಿಂದಲೂ ಪ್ರಯತ್ನಿಸುತ್ತಿದೆ

ಕಿರಣ್ ರಿಜಿಜು, ಕೇಂದ್ರ ಕಾನೂನು ಸಚಿವ

ನ್ಯಾಯಾಲಯಗಳಲ್ಲಿ ತಂತ್ರಜ್ಞಾನ ಬಳಕೆ ಹೆಚ್ಚಿಸಬೇಕು: ಸಿಜೆಐ

ನವದೆಹಲಿ (ಪಿಟಿಐ): 'ದಾವೆ ಪ್ರಕ್ರಿಯೆಗಳನ್ನು ಸರಳೀಕರಿಸುವುದರ ಜತೆಗೆ ಅವುಗಳನ್ನು ನಾಗರಿಕ ಕೇಂದ್ರಿತಗೊಳಿಸಬೇಕಿದೆ. ಇದಕ್ಕಾಗಿ ನ್ಯಾಯಾಂಗದಲ್ಲಿ ಸಾಂಸ್ಥಿಕ ಸುಧಾರಣೆಗಳ ಜತೆಗೆ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸಬೇಕಿದೆ' ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಶನಿವಾರ ಅಭಿಪ್ರಾಯಪಟ್ಟರು.

'ಜನರು ನ್ಯಾಯಕ್ಕಾಗಿ ನ್ಯಾಯಾಲಯಗಳಿಗೆ ಎಡತಾಕುವುದರ ಬದಲಿಗೆ, ನ್ಯಾಯವು ನಾಗರಿಕರನ್ನು ತಲುಪುವಂತಾಗಬೇಕು. ಈ ನಿಟ್ಟಿನಲ್ಲಿ ನ್ಯಾಯಾಲಯ ವ್ಯವಸ್ಥೆಯನ್ನು ಮರು ರೂಪಿಸಬೇಕಾದ ಅಗತ್ಯವಿದೆ' ಎಂದು ಅವರು ಪ್ರತಿಪಾದಿಸಿದರು.

ಸುಪ್ರೀಂಕೋರ್ಟ್‌ನಲ್ಲಿ ನಡೆದ ಸಂವಿಧಾನ ದಿನಾಚರಣೆಯಲ್ಲಿ ಮಾತನಾಡಿದ ಸಿಜೆಐ, 'ದೇಶದಾದ್ಯಂತ ಇರುವ ನ್ಯಾಯಾಧೀಶರು ನ್ಯಾಯ, ಸಮಾನತೆ ಮತ್ತು ಸ್ವಾತಂತ್ರ್ಯ ಪಡೆಯುವ ಸಾಂವಿಧಾನಿಕ ದೃಷ್ಟಿಕೋನವನ್ನು ಪ್ರತಿಬಿಂಬಿಸಬೇಕು' ಎಂದು ಸೂಚಿಸಿದರು.

'ನಿರ್ಲಕ್ಷ್ಯಕ್ಕೆ ಒಳಗಾಗಿರುವ ಸಮುದಾಯಗಳು ಮತ್ತು ಮಹಿಳೆಯ ಪ್ರಾತಿನಿಧ್ಯವನ್ನು ವಕೀಲ ವೃತ್ತಿ ಮತ್ತು ನ್ಯಾಯಾಂಗದಲ್ಲಿ ಹೆಚ್ಚಿಸಬೇಕಾದ ಅಗತ್ಯವಿದೆ' ಎಂದು ಅವರು ಹೇಳಿದರು.

ಪ್ರಸ್ತುತ ಸುಪ್ರೀಂಕೋರ್ಟ್ ಹೈಬ್ರಿಡ್ ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ದೇಶದ ವಿವಿಧ ಭಾಗಗಳ ವಕೀಲರು ಮತ್ತು ಕಕ್ಷಿದಾರರಿಗೆ ವೈಯಕ್ತಿಕವಾಗಿ ಹಾಜರಾಗಲು ಅವಕಾಶ ದೊರೆಯುತ್ತಿದೆ ಎಂದು ಸಿಜೆಐ ತಿಳಿಸಿದರು.

ನ್ಯಾಯಾಲಯಗಳನ್ನು ಕಾಗದ ರಹಿತಗೊಳಿಸುವ ಉದ್ದೇಶವನ್ನು 'ಡಿಜಿಟಲ್ ಕೋರ್ಟ್' ಹೊಂದಿದೆ ಎಂದು ಅವರು ಹೇಳಿದರು.

ವಿದೇಶಕ್ಕೆ ತೆರಳಲು ಡಿಕೆಶಿಗೆ ಅನುಮತಿ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣದ ಆರೋಪಿಯಾಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ದುಬೈಗೆ ತೆರಳಲು ಜಾರಿ ನಿರ್ದೇಶನಾಲಯದ ವಿಶೇಷ ನ್ಯಾಯಾಲಯ ಶನಿವಾರ ಅನುಮತಿ ನೀಡಿದೆ.

ಡಿಸೆಂಬರ್ 1ರಿಂದ 8ರವರೆಗೆ ದುಬೈಗೆ ತೆರಳಲು ಅನುಮತಿ ನೀಡಬೇಕು ಎಂದು ಶಿವಕುಮಾರ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗೆ ಇ.ಡಿ ವಕೀಲರು ಆಕ್ಷೇಪ ವ್ಯಕ್ತಪಡಿಸಿದ್ದರು. ಶನಿವಾರ ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶ ವಿಕಾಸ್ ದುಲ್ ಅವರು ಷರತ್ತುಬದ್ಧ ಅನುಮತಿ ನೀಡಿದರು.

ಆಯೋಗಕ್ಕೆ ನೇಮಕ

ನವದೆಹಲಿ: ಕೇಂದ್ರ ಸರ್ಕಾರವು ಶನಿವಾರ ವಿವಿಧ ಇಲಾಖೆಗಳಲ್ಲಿನ ಹಿರಿಯ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದು, ಹಿರಿಯ ಐಎಎಸ್ ಅಧಿಕಾರಿ ಮನೋಜ್ ಕುಮಾರ್ ಸಾಹು ಅವರನ್ನು ಚುನಾವಣಾ ಆಯೋಗದ ಉಪ ಆಯುಕ್ತರನ್ನಾಗಿ ನೇಮಕ ಮಾಡಿದೆ.

ಸಾಹು ಅವರು ಅರುಣಾಚಲ ಪ್ರದೇಶ, ಗೋವಾ, ಮಿಜೋರಾಂ ಮತ್ತು ಕೇಂದ್ರಾಡಳಿತ ಪ್ರದೇಶಗಳ ಕೇಡರ್‌ನ 2006ನೇ ಬ್ಯಾಚಿನ ಐಎಎಸ್ ಅಧಿಕಾರಿ.

'ಇಮಾಮ್‌ಗಳಿಗೆ ಗೌರವಧನ ಸಂವಿಧಾನದ ಉಲ್ಲಂಘನೆ'

ನವದೆಹಲಿ (ಪಿಟಿಐ): ಮಸೀದಿಗಳ ಇಮಾಮ್‌ಗಳಿಗೆ ಗೌರವಧನ ನೀಡುವ ಕುರಿತ ಸುಪ್ರೀಂ ಕೋರ್ಟ್‌ನ 1993ರ ಆದೇಶವು ಸಂವಿಧಾನದ ಉಲ್ಲಂಘನೆಯಾಗಿದೆ ಎಂದು ಕೇಂದ್ರ ಮಾಹಿತಿ ಆಯೋಗದ ಆಯುಕ್ತರು ಹೇಳಿದ್ದಾರೆ.

ಇದು, ತಪ್ಪು ಸಂಪ್ರದಾಯಕ್ಕೆ ನಾಂದಿ ಹಾಡುವ ಜೊತೆಗೆ, ರಾಜಕೀಯ ತಿಕ್ಕಾಟ ಸಾಮಾಜಿಕ ಸೌಹಾರ್ದಕ್ಕೂ ಧಕ್ಕೆ ತರಲಿದೆ ಎಂದು ಮಾಹಿತಿ ಆಯುಕ್ತ ಉದಯ್ ಮಹುರ್‌ಕರ್ ಅವರು ಅಭಿಪ್ರಾಯಪಟ್ಟಿದ್ದಾರೆ.

ದೆಹಲಿ ಸರ್ಕಾರ ಮತ್ತು ವಕ್ಫ್‌ಮಂಡಳಿಯು ಇಮಾಮ್‌ಗಳಿಗೆ ನೀಡುತ್ತಿರುವ ವೇತನದ ವಿವರ ಕೋರಿದ್ದ ಅರ್ಜಿಯ ವಿಚಾರಣೆ ವೇಳೆ ಈ ಅಭಿಪ್ರಾಯ ವ್ಯಕ್ತಪಡಿಸಿದರು. 'ಸಾರ್ವಜನಿಕರ ತೆರಿಗೆ ಹಣವನ್ನು ನಿರ್ದಿಷ್ಟ ಧರ್ಮದ ಪರವಾಗಿ ಬಳಸಬಾರದು ಎಂಬ ಸಂವಿಧಾನದ ಆಶಯವು ಈ ಆದೇಶದಿಂದ ಉಲ್ಲಂಘನೆಯಾಗಲಿದೆ' ಎಂದು ಹೇಳಿದರು.

1993ರಲ್ಲಿ ಅಖಿಲ ಭಾರತ ಇಮಾಮ್‌ಗಳ ಸಂಘಟನೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ತಾನು ನಿರ್ವಹಿಸುವ ಮಸೀದಿಗಳ ಇಮಾಮ್‌ಗಳಿಗೆ ಗೌರವಧನ ನೀಡಬೇಕು ಎಂದು ವಕ್ಫ್ ಮಂಡಳಿಗೆ ಆದೇಶಿಸಿತ್ತು.

'ಈ ಆದೇಶದ ಪ್ರತಿಯನ್ನು ಕೇಂದ್ರ ಕಾನೂನು ಸಚಿವರಿಗೆ ಕಳುಹಿಸಬೇಕು. ಪೂಜೆ, ಪ್ರಾರ್ಥನೆ ನೆರವೇರಿಸುವ ವಿವಿಧ ಧರ್ಮದವರಿಗೆ ಗೌರವಧನ ನೀಡಲು ತೆರಿಗೆ ಹಣ ಬಳಸದಂತೆ ಕ್ರಮವಹಿಸಲು ಸಂವಿಧಾನದ 25 ರಿಂದ 28ನೇ ವಿಧಿಯ ನಿಯಮಗಳನ್ನು ಅದರ ಮೂಲ ಆಶಯಗಳೊಂದಿಗೆ ಜಾರಿಗೊಳಿಸಬೇಕು' ಎಂದು ಸೂಚಿಸಿದರು.

'ಗೌರವಧನ ನೀಡುವ ಕುರಿತಂತೆ ಸುಪ್ರೀಂ ಕೋರ್ಟ್ 1993ರಲ್ಲಿ ನೀಡಿದ್ದ ಆದೇಶವನ್ನು ಉಲ್ಲೇಖಿಸಿದ ಅವರು, ತೆರಿಗೆ ಹಣವನ್ನು ನಿರ್ದಿಷ್ಟ ಧರ್ಮದ ಪರವಾಗಿ ಬಳಸಬಾರದು ಎಂಬ ಸಂವಿಧಾನದ ವಿಧಿ 27ರ ಉಲ್ಲಂಘನೆಯಾಗಿದೆ' ಎಂದು ಮಾಹಿತಿ ಆಯುಕ್ತರು ಅಭಿಪ್ರಾಯಪಟ್ಟರು.

'ಈ ಅದೇಶವು ತಪ್ಪು ಸಂಪ್ರದಾಯಕ್ಕೆ ನಾಂದಿ ಹಾಡಲಿದೆ. ಅನಗತ್ಯ ರಾಜಕೀಯ ತಿಕ್ಕಾಟ ಹಾಗೂ ಸಮಾಜದಲ್ಲಿ ಸಾಮಾಜಿಕ ಸೌಹಾರ್ದ ಕದಡಲು ಕಾರಣವಾಗಲಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ

ಫೋನ್ ನಂ : 08182-222942, ಇ–ಮೇಲ್: spdivision@gmail.com

ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಐ.ಎಫ್.ಟಿ ಸಂಖ್ಯೆ: 58/2022-23 ದಿನಾಂಕ : 25.11.2022

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ/ಡಬ್ಲ್ಯೂ - 4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ **1ನೇ ದರ್ಜೆ ಗುತ್ತಿಗೆದಾರರಿಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ** 5054-03-337-0-17-154 ರಾಜ್ಯ ಹೆದ್ದಾರಿ ರಸ್ತೆ ಸುಧಾರಣೆ ಅಪೆಂಡಿಕ್ಸ್–ಇ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ **CONSTRUCTION OF BYPASS ROAD TO THIRTHAHALLI-KUNDHAPURA (SH-52) ROAD IN THIRTHAHALLI (INDENT NO. 160552)** ಕಾಮಗಾರಿಗೆ, ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. **ಸದರಿ ಕಾಮಗಾರಿಗೆ ಟೆಂಡರ್‌ಗಿಟ್ಟ ಮೊತ್ತ ರೂ. 672.79 ಲಕ್ಷ ಹಾಗೂ ಇ.ಎಂ.ಡಿ. ಮೊತ್ತ ರೂ. 10.10 ಲಕ್ಷ. ಸದರಿ ಕಾಮಗಾರಿಯ ಟೆಂಡರ್ ಅವಧಿ 18 ತಿಂಗಳು ಮಳೆಗಾಲ ಸೇರಿ.**

ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್–2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ **ದಿನಾಂಕ: 25-11-2022 ರಿಂದ 26-12-2022 ರ 17.00 ಗಂಟೆವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು **ದಿನಾಂಕ: 26-12-2022 ರ ಸಂಜೆ 5:00 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ **ದಿನಾಂಕ: 27-12-2022 ರಂದು ಸಂಜೆ 5.30ಕ್ಕೆ** ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು **ದಿನಾಂಕ: 28-12-2022** ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ವಾಸಾಸಂಇ/ಶಿ/ನಂ.169-11
ಝೇಂಕಾರ್/2022-23

ಬಹು ಮಾಧ್ಯಮ ಪ್ರಜಾವಾಣಿ 75
www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ
ಮಹಾರಾಷ್ಟ್ರ ಗಡಿ ಕ್ಯಾತೆ: ಯಾರು ಕಾರಣ?
ಭಾಗವಹಿಸುವವರು:
ಅಶೋಕ ಚಂದರಗಿ, ಅಧ್ಯಕ್ಷ, ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ, ಬೆಳಗಾವಿ
ಬೃಜೇಶ್ ಕಾಳಪ್ಪ, ವಕೀಲ, ವಕ್ತಾರ, ಆಮ್ ಆದ್ಮಿ ಪಕ್ಷ
ಮಹಾದೇವ ತಳವಾರ, ರಾಜ್ಯ ಸಂಚಾಲಕ ಕರ್ನಾಟಕ ರಕ್ಷಣಾ ವೇದಿಕೆ
ಜ್ಯೋತಿ ಭಾವಿಕಟ್ಟಿ, ಮಾಜಿ ಉಪ ಮೇಯರ್, ಬೆಳಗಾವಿ ಮಹಾನಗರ ಪಾಲಿಕೆ
ಸಂವಾದ ಮಧ್ಯಾಹ್ನ 12 ರಿಂದ 1

'ದೇಶ ಒಕ್ಕೂಟ ರಾಷ್ಟ್ರವಾಗಿ ಉಳಿಯದು'

ನವದೆಹಲಿ: ಕೇಂದ್ರ ಸರ್ಕಾರದ ವಿರುದ್ಧ ಶನಿವಾರ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ಸಂವಿಧಾನವು ಅಸ್ತಿತ್ವದ ಬಿಕ್ಕಟ್ಟು ಎದುರಿಸುತ್ತಿದ್ದು, ದೇಶವು ಇನ್ನು ಮುಂದೆ ಒಕ್ಕೂಟ ರಾಷ್ಟ್ರವಾಗಿ ಉಳಿಯದು' ಎಂದು ಅತಂಕ ವ್ಯಕ್ತಪಡಿಸಿದ್ದಾರೆ.

ಸಂವಿಧಾನದ ದಿನದ ನಿಮಿತ್ತ ನೀಡಿರುವ ಹೇಳಿಕೆಯಲ್ಲಿ '2014ರಲ್ಲಿ ಬಿಜೆಪಿ ಸರ್ಕಾರವು ಅಧಿಕಾರಕ್ಕೆ ಬಂದಾಗಿನಿಂದಲೂ, ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರ್‌ಎಸ್‌ಎಸ್) ಅಧಿಕಾರವನ್ನು ಸಂವಿಧಾನವು ನೀಡಿರುವ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ಬಳಸುತ್ತಿದೆ' ಎಂದು ಆರೋಪಿಸಿದ್ದಾರೆ.

'ಏಳು ದಶಕಗಳಿಂದ ಕಾಲದ ಪರೀಕ್ಷೆಯಲ್ಲಿ ಯಶಸ್ವಿಯಾಗಿರುವ ಸಂವಿಧಾನಕ್ಕೆ ಇಂದು ತನ್ನ ಅಸ್ತಿತ್ವದ ಬಿಕ್ಕಟ್ಟು ಎದುರಾಗಿದೆ' ಎಂದೂ ಅವರು ಹೇಳಿದ್ದಾರೆ.


ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿಕೆ

ಭತ್ತದ ಹುಲ್ಲು ಬಳಸಿ ಉತ್ಪಾದಿಸಿದ ಡಾಂಬರನ್ನೇ ಗ್ರಾಮ, ಜಿಲ್ಲೆ, ರಾಜ್ಯ ರಸ್ತೆಗಳ ಅಭಿವೃದ್ಧಿಗೆ ಬಳಸಬಹುದು

'15 ವರ್ಷ ಹಳೆಯದಾದ ಎಲ್ಲ ಸರ್ಕಾರಿ ವಾಹನಗಳು ಗುಜರಿಗೆ'

ನಾಗಪುರ (ಪಿಟಿಐ): ಕೇಂದ್ರ ಸರ್ಕಾರಕ್ಕೆ ಸೇರಿದ, 15 ವರ್ಷದಷ್ಟು ಹಳೆಯದಾದ ಎಲ್ಲ ವಾಹನಗಳನ್ನು ನಿರುಪಯೋಗಗೊಳಿಸಿ, ಗುಜರಿಗೆ ಹಾಕಲಾಗುವುದು ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದರು.

ಕಾರ್ಯಕ್ರಮವೊಂದರಲ್ಲಿ ಮಾತ ನಾಡಿದ ಅವರು, ಹಳೆಯ ವಾಹನಗಳ ನಿರುಪಯೋಗ ಕುರಿತ ನೀತಿಯನ್ನು ಎಲ್ಲ ರಾಜ್ಯಗಳಿಗೂ ಕಳುಹಿಸಲಾಗಿದೆ. ಈ ಸಂಬಂಧಿತ ಕಡತಕ್ಕೆ ಗುರುವಾರವೇ ಸಹಿ ಹಾಕಿದ್ದೇನೆ. ಈ ನೀತಿಯನ್ನು ರಾಜ್ಯಗಳಲ್ಲಿಯೂ ಅಳವಡಿಸಿಕೊಳ್ಳಬೇಕಾಗಿದೆ ಎಂದು ತಿಳಿಸಿದರು.



ನಿತಿನ್ ಗಡ್ಕರಿ

'ಇಂಡಿಯನ್ ಆಯಿಲ್‌ನ ಎರಡು ಸ್ಥಾವರಗಳು ಪಾಣಿಪತ್‌ನಲ್ಲಿ ಬಹುತೇಕ ಕಾರ್ಯಾರಂಭ ಮಾಡಿವೆ. ಒಂದು ಸ್ಥಾವರದಲ್ಲಿ ನಿತ್ಯ ಒಂದು ಲಕ್ಷ ಲೀಟರ್ ಇಥೆನಾಲ್ ಉತ್ಪಾದನೆಯಾದರೆ, ಇನ್ನೊಂದರಲ್ಲಿ ಭತ್ತದ ಹುಲ್ಲು ಬಳಸಿ 150 ಟನ್ ಜೈವಿಕ ಡಾಂಬರು ಉತ್ಪಾದಿಸಲಿವೆ ಎಂದು ತಿಳಿಸಿದರು.

ಭತ್ತದ ಹುಲ್ಲು ಸುಡುವ ಪ್ರವೃತ್ತಿ ತಡೆ ಹಿನ್ನೆಲೆಯಲ್ಲಿ ಇದು ಮಹತ್ವದ ಬದಲಾವಣೆಯಾಗಿದೆ. ಈಗ ಇಥೆನಾಲ್ ಮತ್ತು ಜೈವಿಕ ಡಾಂಬರು ಉತ್ಪಾದಿಸಲು ಭತ್ತದ ಹುಲ್ಲು ಬಳಕೆಯಾಗಲಿದೆ. ಭೂಸಾರಿಗೆ ಸಚಿವಾಲಯ ಸೇರಿದಂತೆ ಈಗ ಬಹುತೇಕ 80 ಲಕ್ಷ ಟನ್ ಡಾಂಬರು ಅಗತ್ಯವಿದೆ. ದೇಶದಲ್ಲಿ 50 ಲಕ್ಷ ಟನ್ ಡಾಂಬರು ಉತ್ಪಾದನೆ ಆಗುತ್ತಿದ್ದರೆ, 25 ಲಕ್ಷ ಟನ್‌ನಷ್ಟು ಆಮದು ಮಾಡಿಕೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ಡಾಂಬರು ತಯಾರಿಸುವ ಯೋಜನೆಗಳು ಕಾರ್ಯಗತಗೊಂಡರೆ ಡಾಂಬರು ಆಮದು ಅಗತ್ಯವಿರುವುದಿಲ್ಲ ಎಂದರು.

ಮುನ್ನಡೆ ಕಾಯ್ದುಕೊಂಡ ನೇಪಾಳಿ ಕಾಂಗ್ರೆಸ್ ಮೈತ್ರಿಕೂಟ

ಕಠ್ಮಂಡು (ಪಿಟಿಐ): ನೇಪಾಳ ಸಂಸತ್ ಚುನಾವಣೆಯಲ್ಲಿ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ನೇತೃತ್ವದ ನೇಪಾಳಿ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟವು ಶನಿವಾರವೂ ಮುನ್ನಡೆ ಕಾಯ್ದುಕೊಂಡಿದೆ. ಈವರೆಗೂ 150 ಸ್ಥಾನಗಳ ಫಲಿತಾಂಶ ಘೋಷಣೆಯಾಗಿದೆ. ಈ ಪೈಕಿ 77 ಸ್ಥಾನಗಳಲ್ಲಿ ಮೈತ್ರಿಕೂಟ ಗೆದ್ದಿದೆ.

ಸರಳ ಬಹುಮತ ಪಡೆಯಲು ಪಕ್ಷ ಅಥವಾ ಮೈತ್ರಿಕೂಟಕ್ಕೆ 138 ಸ್ಥಾನಗಳ ಅಗತ್ಯವಿದೆ. ನೇರ ಮತದಾನದಲ್ಲಿ ನೇಪಾಳಿ ಕಾಂಗ್ರೆಸ್ ಪಕ್ಷ ಏಕಾಂಗಿಯಾಗಿ ಈವರೆಗೂ 51 ಸ್ಥಾನಗಳನ್ನು ಗೆದ್ದಿದೆ. ಅದರ ಮಿತ್ರ ಪಕ್ಷಗಳಾದ ಸಿಪಿಎನ್- ಮಾವೋಯಿಸ್ಟ್ ಸೆಂಟರ್ ಮತ್ತು ಸಿಪಿಎನ್-ಯುನಿಫೈಡ್ ಸೋಶಿಯಲಿಸ್ಟ್ ಪಕ್ಷಗಳು ಕ್ರಮವಾಗಿ 16 ಮತ್ತು 10 ಸ್ಥಾನಗಳನ್ನು ಗೆದ್ದಿವೆ. ದಿ ಲೋಕತಾಂತ್ರಿಕ್ ಸಮಾಜವಾದಿ ಪಕ್ಷ ಮತ್ತು ರಾಷ್ಟ್ರೀಯ ಜನಮೋರ್ಚಾ ಪಕ್ಷಗಳು ಕ್ರಮವಾಗಿ 4 ಮತ್ತು 1 ಸ್ಥಾನಗಳಲ್ಲಿ ಜಯಗಳಿಸಿವೆ.

ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಓಲಿ ನೃತೃತ್ವದ ಸಿಪಿಎನ್–ಯುಎಂಎಲ್ ಮೈತ್ರಿಕೂಟವು ಇದುವರೆಗೆ 49 ಸ್ಥಾನಗಳನ್ನು ಗೆದ್ದಿದೆ.

ಸಂಸತ್ ಮತ್ತು ಏಳು ಪ್ರಾಂತೀಯ ವಿಧಾನಸಭೆಗಳಿಗೆ ಕಳೆದ ಭಾನುವಾರ ಚುನಾವಣೆ ನಡೆದಿತ್ತು. 275 ಸದಸ್ಯ ಬಲದ ಸಂಸತ್ ಚುನಾವಣೆಯಲ್ಲಿ 165 ಸ್ಥಾನಗಳನ್ನು ನೇರ ಮತದಾನದ ಮೂಲಕ ಆಯ್ಕೆ ಮಾಡಲಾಗುತ್ತದೆ. ಸೋಮವಾರದಿಂದಲೇ ಮತ ಎಣಿಕೆ ಆರಂಭವಾಗಿದೆ.

ಭಾರತ ಸರ್ಕಾರ,
ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ,
ಅಧಿಕೃತ ಲಿಕ್ವಿಡೇಟರ್‌ರ ಕಚೇರಿ, ಉಚ್ಚ ನ್ಯಾಯಾಲಯ, ಮದ್ರಾಸ್,ಕಾರ್ಪೊರೇಟ್ ಭವನ,
2ನೇ ಮಹಡಿ, ನಂ.29, ರಾಜಾಜಿ ಸಲಾಯ್, ಚೆನ್ನೈ – 600 001.
ಫೋನ್ ನಂ. 044–25271149/51 ವೆಬ್‌ಸೈಟ್: www.mca.gov.in

ಮದ್ರಾಸ್ ಉಚ್ಚ ನ್ಯಾಯಾಲಯ ವ್ಯಾಪ್ತಿಯಲ್ಲಿ
ಅಸಲು ನ್ಯಾಯವ್ಯಾಪ್ತಿ ಕಂಪನಿಗಳ ಕಾಯ್ದೆ, 1956ರ ವಿಷಯದಲ್ಲಿ ಮತ್ತು
ಮೆ. ಬೆಸ್ಟ್ & ಕ್ರಾಂಪ್ಟನ್ ಇಂಜಿನಿಯರಿಂಗ್ ಲಿಮಿಟೆಡ್ (ತಾತ್ಕಾಲಿಕವಾಗಿ ಲಿಕ್ವಿಡೇಶನ್‌ನಲ್ಲಿರುವ) ವಿಷಯದಲ್ಲಿ
ಕಂಪನಿ ಪಿಟಿಷನ್ ನಂ. 63/2013
ರಲ್ಲಿ
ಕಂಪನಿ ಅಪ್ಲಿಕೇಶನ್ ನಂ. 552/2022

ಮಾರಾಟ ಪ್ರಕಟಣೆ

ಮಾನ್ಯ ಉಚ್ಚ ನ್ಯಾಯಾಲಯ, ಮದ್ರಾಸ್ ಇವರ ದಿನಾಂಕ 18.11.2022ರ ಆದೇಶದ ಮೇರೆಗೆ, ಮೆ. ಬೆಸ್ಟ್ & ಕ್ರಾಂಪ್ಟನ್ ಇಂಜಿನಿಯರಿಂಗ್ ಲಿಮಿಟೆಡ್ (ತಾತ್ಕಾಲಿಕವಾಗಿ ಲಿಕ್ವಿಡೇಶನ್‌ನಲ್ಲಿರುವ) ಕಂಪನಿಯ ಘಟಕ ಮತ್ತು ಯಂತ್ರೋಪಕರಣ ಹಾಗೂ ಇನ್ನಿತರ ಚರಾಸ್ತಿಗಳನ್ನು **"ಹೇಗಿದೆಯೊ ಎಲ್ಲಿದೆಯೊ ಮತ್ತು ಅಲ್ಲಿ ಏನೇನಿದೆಯೊ ಅದೇ ಸ್ಥಿತಿಯಲ್ಲಿ" ಒಂದೇ ಲಾಟ್‌ನಲ್ಲಿ** ಖರೀದಿಸಲಿಕ್ಕಾಗಿ, ಇಲ್ಲಿ ಕೆಳಗೆ ಸಹಿ ಹಾಕಿರುವವರು ಆಸಕ್ತಿಯುಳ್ಳವರಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಸ್ವತ್ತುಗಳ ವಿವರ	ಸ್ಥಳ	ಅಪ್‌ಸೆಟ್ ಪ್ರೈಸ್ (ಲಕ್ಷ ರೂ.ಗಳಲ್ಲಿ)	ಇಎಂಡಿ @ 10% (ಲಕ್ಷ ರೂ.ಗಳಲ್ಲಿ)
1	ಘಟಕ, ಯಂತ್ರೋಪಕರಣ ಮತ್ತು ಇನ್ನಿತರ ಚರಾಸ್ತಿಗಳು	ನಂ. 33, ಎಂಎಂ ಕೈಗಾರಿಕಾ ಪ್ರದೇಶ, ಜೈನಗರ, 7ನೇ ಬ್ಲಾಕ್, ಯಡಿಯೂರು, ಬೆಂಗಳೂರು – 560 082.	90 ಲಕ್ಷ	9,00,000/–

2. ಬೆಂಗಳೂರಿನಲ್ಲಿ ಚರಾಸ್ತಿಗಳನ್ನು ಪರಿಶೀಲಿಸುವ ದಿನಾಂಕ : 03.12.2022 ಮತ್ತು 04.12.2022 (ಶನಿವಾರ ಮತ್ತು ಭಾನುವಾರ) ಬೆಳಗ್ಗೆ 11.00 ರಿಂದ ಸಂಜೆ 4.00 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 20.12.2022 ರಂದು ಸಂಜೆ 05.00 ಗಂಟೆ.
4. ಟೆಂಡರ್ ಫಾರಂ ಶುಲ್ಕ : ರೂ. 1500/– ಪ್ರತಿ ಫಾರಂಗೆ (ಹಿಂದಿರುಗಿಸಲಾಗುವುದಿಲ್ಲ/ಹೊಂದಾಣಿಕೆ ಮಾಡಲಾಗುವುದಿಲ್ಲ)
5. ಮಾನ್ಯ ಉಚ್ಚ ನ್ಯಾಯಾಲಯ, ಮದ್ರಾಸ ಸಮ್ಮುಖದಲ್ಲಿ ಟೆಂಡರ್‌ಗಳನ್ನು ತೆರೆಯುವ ದಿನಾಂಕ : 23.12.2022
6. ಟೆಂಡರ್ ಫಾರಂ, ಷರತ್ತು ಮತ್ತು ನಿಬಂಧನೆಗಳನ್ನು ಈ ಕೆಳಗೆ ಸಹಿ ಹಾಕಿರುವವರ ಕಚೇರಿಯಲ್ಲಿ ದಿನಾಂಕ 28.11.2022 ರಿಂದ 20.12.2022 ರೊಳಗೆ ಯಾವುದೇ ಕೆಲಸದ ದಿನದಂದು ಬೆಳಗ್ಗೆ **11 ರಿಂದ ಸಂಜೆ 4 ಗಂಟೆಯೊಳಗೆ** ಪಡೆದುಕೊಳ್ಳಬಹುದು ಮತ್ತು 03.12.2022 ಮತ್ತು 04.12.2022 ರಂದು ಸ್ಥಳದಲ್ಲಿಯೇ ಕೂಡ ಪಡೆದುಕೊಳ್ಳಬಹುದು.
7. **"ಅಧಿಕೃತ ಲಿಕ್ವಿಡೇಟರ್, ಉಚ್ಚ ನ್ಯಾಯಾಲಯ, ಮದ್ರಾಸ್"** ಇವರ ಹೆಸರಿಗೆ ಪಡೆದಿರುವ ಡಿಮಾಂಡ್ ಡ್ರಾಫ್ಟ್ ರೂಪದದಲ್ಲಿನ ಭದ್ರತಾ ಠೇವಣಿ ಮೊತ್ತದ ಸಮೇತ ಮೊಹರಾದ ಟೆಂಡರ್‌ಗಳನ್ನು ಅಧಿಕೃತ ಲಿಕ್ವಿಡೇಟರ್‌ವರ ಕಚೇರಿ, ಉಚ್ಚ ನ್ಯಾಯಾಲಯ, ಮದ್ರಾಸ ಮೇಲ್ಕಂಡ ವಿಳಾಸಕ್ಕೆ ನೇರವಾಗಿ ತಲುಪಿಸುವುದು. ಸ್ವತ್ತುಗಳ ವಿವರಗಳಿಗಾಗಿ www.mca.gov.in ವೆಬ್‌ಸೈಟ್‌ಗೆ ಲಾಗಿನ್ ಮಾಡಿರಿ ಅಥವಾ ಕೆಳ ಸಹಿದಾರರ ಕಚೇರಿಗೆ ಭೇಟಿ ಕೊಡಿ.
8. ಆಸಕ್ತಿಯುಳ್ಳ ಖರೀದಿದಾರರು, ತಮ್ಮ ಇಎಂಡಿ ಜೊತೆಗಿನ ಟೆಂಡರ್ ಫಾರಂ ಹಾಕಿ ಮೊಹರು ಮಾಡಿರುವ ಲಕೋಟೆಯ ಮೇಲೆ ಕಡ್ಡಾಯವಾಗಿ ತಮ್ಮ ಹೆಸರು, ವಿಳಾಸ, ಇ–ಮೇಲ್ ಐಡಿ ಮತ್ತು ದೂರವಾಣಿ ಸಂಖ್ಯೆಗಳನ್ನು ನಮೂದಿಸತಕ್ಕದ್ದು.
9. ಮೇಲೆ ತಿಳಿಸಿರುವ ಟೆಂಡರ್ ತೆರೆಯುವ ದಿನಾಂಕದಂದು, ಮೇಲ್ಕಂಡ ವಿಳಾಸದಲ್ಲಿರುವ ಅಧಿಕೃತ ಅಧಿಕಾರಿಯವರ ಕಚೇರಿ, ಉಚ್ಚ ನ್ಯಾಯಾಲಯ, ಮದ್ರಾಸ್ ವಿಳಾಸದಲ್ಲಿ ಬೆಳಗ್ಗೆ 9.30 ಗಂಟೆಗೆ ಬಿಡ್‌ದಾರರು ಹಾಜರಾಗುವುದು. ಮಾನ್ಯ ಮದ್ರಾಸ್ ಉಚ್ಚ ನ್ಯಾಯಾಲಯದ ನಿರ್ದೇಶನಗಳ ಪ್ರಕಾರ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತದೆ.

ದಿನಾಂಕ: 23.11.2022
ಸ್ಥಳ: ಚೆನ್ನೈ

ಸಹಿ/–
(ಶ್ರೀಧರ ಪಮಾರ್ಥಿ)
ಅಧಿಕೃತ ಲಿಕ್ವಿಡೇಟರ್, ಉಚ್ಚ ನ್ಯಾಯಾಲಯ, ಮದ್ರಾಸ್

ಸಂಕ್ಷಿಪ್ತ ಸುದ್ದಿ

19 ರಾಷ್ಟ್ರಗಳೊಂದಿಗೆ ಚೀನಾ ಸಭೆ

ಬೀಜಿಂಗ್: ಹಿಂದೂ ಮಹಾಸಾಗರದ ಪ್ರದೇಶದ 19 ರಾಷ್ಟ್ರಗಳ ಜೊತೆ ಚೀನಾ ಈ ವಾರ ಸಭೆ ನಡೆಸಿದ್ದು, ಭಾರತದ ಅನುಪಸ್ಥಿತಿ ಗಮನಾರ್ಹವಾಗಿತ್ತು.

ಅಭಿವೃದ್ಧಿ ವಿಚಾರವಾಗಿ ನಡೆದ ಸಭೆಗೆ ಭಾರತವನ್ನು ಆಹ್ವಾನಿಸಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಚೀನಾದ ವಿದೇಶಾಂಗ ಸಚಿವಾಲಯದ ಜೊತೆ ಸಂಪರ್ಕವಿರುವ ಚೀನಾ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಕೋಆಪರೇಷನ್ ಏಜೆನ್ಸಿಯು (ಸಿಐಡಿಸಿಎ) ನವೆಂಬರ್ 21 ರಂದು ಯುನ್ನಾನ್ ಪ್ರಾಂತ್ಯದ ಕುನ್ಮಿಂಗ್‌ನಲ್ಲಿ ಈ ಸಭೆ ನಡೆಸಿದ್ದು, ಇದರಲ್ಲಿ 19 ರಾಷ್ಟ್ರಗಳು ಭಾಗವಹಿಸಿದ್ದವು ಎಂದು ಸಂಸ್ಥೆಯು ಹೇಳಿಕೆಯಲ್ಲಿ ತಿಳಿಸಿದೆ.

ಮುಂಬೈ ದಾಳಿಗೆ ಇಸ್ರೇಲ್‌ನಲ್ಲಿ ಖಂಡನೆ

ಜೆರುಸಲೇಂ (ಪಿಟಿಐ): 2008ರಲ್ಲಿ ಮುಂಬೈನಲ್ಲಿ ನಡೆದ ಉಗ್ರರ ದಾಳಿಯನ್ನು ಖಂಡಿಸಿ ಶನಿವಾರ ಇಸ್ರೇಲ್‌ನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಕಗ್ಗೊಲೆಯ ಸೂತ್ರಧಾರಿ ಪಾಕಿಸ್ತಾನ ಮೂಲದ ಉಗ್ರನ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಇಲ್ಲಿನ ಜನರು ಒತ್ತಾಯಿಸಿದರು.

ಶುಕ್ರವಾರ ಸಂಜೆಯಿಂದಲೇ ಇಸ್ರೇಲ್‌ನಲ್ಲಿರುವ ಭಾರತೀಯರು ಬ್ಯಾನರ್‌ಗಳನ್ನು ಹಿಡಿದು, ದೀಪವನ್ನು ಹಚ್ಚಿ ಉಗ್ರರ ದಾಳಿಯನ್ನು ಖಂಡಿಸಿದರು. ದಾಳಿಯ ರೂವಾರಿ ಪಾಕಿಸ್ತಾನ ಪ್ರಾಯೋಜಿತ ಲಷ್ಕರ್–ಎ–ತೊಯಬಾ ಸಂಘಟನೆಯ ಉಗ್ರನಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ಭಾರತೀಯ ಸೇನೆಯ ಹೋರಾಟ ಮತ್ತು ಸೈನಿಕರ ತ್ಯಾಗವನ್ನು ಸ್ಮರಿಸಿದರು.



ಮುಂಬೈನಲ್ಲಿ ನಡೆದಿದ್ದ ದಾಳಿಯನ್ನು ಖಂಡಿಸಿ ಇಸ್ರೇಲ್‌ನಲ್ಲಿ ಭಾರತೀಯರು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

2008ರ ನವೆಂಬರ್ 26ರಂದು ಪಾಕಿಸ್ತಾನ ಮೂಲದ 10 ಉಗ್ರರು ಜಲಮಾರ್ಗದಿಂದ ಮುಂಬೈ ತಲುಪಿ ನಾಗರಿಕ ಮೇಲೆ ದಾಳಿ ನಡೆಸಿದ್ದರು. ಈ ವೇಳೆ 16 ಭದ್ರತಾ ಸಿಬ್ಬಂದಿ, 26 ವಿದೇಶಿಯರು ಸೇರಿ ಒಟ್ಟು 166 ಜನರು ಸಾವಿಗೀಡಾಗಿದ್ದರು, 300 ಮಂದಿ ಗಾಯಗೊಂಡಿದ್ದರು.

ಉಕ್ರೇನ್: ವಿದ್ಯುತ್, ನೀರು ಪಡೆಯಲು ಹರಸಾಹಸ

ಕೀವ್ (ಎಪಿ): ರಷ್ಯಾ ಸೇನೆಯ ವೈಮಾನಿಕ ದಾಳಿಯಿಂದ ಉಕ್ರೇನ್‌ನ ಮೂಲಭೂತ ಸೌಕರ್ಯಗಳು ಭಾರಿ ಪ್ರಮಾಣದಲ್ಲಿ ಹಾನಿಗೊಳಗಾಗಿದ್ದು, ಹದಗೆಟ್ಟ ವಿದ್ಯುತ್ ಮತ್ತು ನೀರು ಸೇವೆಯನ್ನು ಸರಿಪಡಿಸಲು ಇಲ್ಲಿನ ಅಧಿಕಾರಿಗಳು ಹರಸಾಹಸಪಡುತ್ತಿದ್ದಾರೆ.

ಪೂರ್ವದಲ್ಲಿ ಉಕ್ರೇನ್ ಮತ್ತು ರಷ್ಯಾ ಪಡೆಗಳ ಹೋರಾಟ ಮುಂದುವರಿದಿದೆ. ಇತ್ತ ರಷ್ಯಾ ಭೀಕರ ಕ್ಷಿಪಣಿ, ಬಾಂಬ್ ದಾಳಿಯಿಂದ ಕಂಗೆಟ್ಟ ಕೆರ್ಸಾನ್ ನಿವಾಸಿಗಳು ಉತ್ತರ ಮತ್ತು ಪಶ್ಚಿಮದ ನಗರಗಳತ್ತ ಪಲಾಯನ ಮಾಡುತ್ತಿದ್ದಾರೆ.

'ಬುಧವಾರದಿಂದ ಇವತ್ತಿನವರೆಗೂ ಕಗ್ಗತ್ತಲಲ್ಲಿ ಕಾಲ ಕಳೆಯುತ್ತಿರುವ ಜನರಿಗೆ ಮರಳಿ ವಿದ್ಯುತ್ ಸೌಲಭ್ಯ ಕಲ್ಪಿಸಲು ಹರಸಾಹಸಪಡುತ್ತಿದ್ದೇವೆ. ಆದಾಗ್ಯೂ ರಾಜಧಾನಿ ಕೀವ್ ಸೇರಿ ಹಲವು ಪ್ರದೇಶಗಳಿಗೆ ವಿದ್ಯುತ್ ಸೌಲಭ್ಯವನ್ನು ಮರಳಿ ಕಲ್ಪಿಸಲು ಸಾಧ್ಯವಾಗಿಲ್ಲ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ತಿಳಿಸಿದ್ದಾರೆ.

ಚೀನಾ: ಲಾಕ್‌ಡೌನ್ ವಿರುದ್ಧ ಜನಾಕ್ರೋಶ

ಬೀಜಿಂಗ್ (ರಾಯಿಟರ್ಸ್): ಚೀನಾದಲ್ಲಿ ಕೋವಿಡ್ ಪ್ರಕರಣಗಳು ಏರುತ್ತಿದ್ದಂತೆಯೇ, ಲಾಕ್‌ಡೌನ್ ಕ್ರಮ ವಿರುದ್ಧ ಜನರ ಪ್ರತಿಭಟನೆಯೂ ತೀವ್ರಗೊಂಡಿದೆ. ಚೀನಾದ ಷಿನ್‌ಜಿಯಾಂಗ್ ವಲಯದಲ್ಲಿ ಭಾರಿ ಸಂಖ್ಯೆಯಲ್ಲಿ ಸೇರಿದ್ದ ನಾಗರಿಕರು 'ಲಾಕ್‌ಡೌನ್ ಅಂತ್ಯಗೊಳಿಸಿ' ಎಂಬ ಘೋಷಣೆ ಕೂಗುತ್ತಾ ಪ್ರತಿಭಟಿಸಿದರು.

ಗಾಳಿಯಲ್ಲಿ ಮುಷ್ಟಿ ಬೀಸುತ್ತಾ, ರಾಷ್ಟ್ರಗೀತೆಯನ್ನು ಹಾಡುತ್ತಾ ಜನರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ಕುರಿತ ವಿಡಿಯೊಗಳು ಜಾಲತಾಣದಲ್ಲಿ ಸಾಕಷ್ಟು ಹರಿದಾಡುತ್ತಿವೆ. ವಿವಿಧೆಡೆ ವಿಧಿಸಿರುವ ಲಾಕ್‌ಡೌನ ನಿರ್ಬಂಧದಿಂದ ನಮಗೆ ಮುಕ್ತಿ ನೀಡಿ ಎಂದು ಆಗ್ರಹಪಡಿಸಿದ್ದಾರೆ.

ಷಿನ್‌ಪಿಯಾಂಗ್ ವಲಯದಲ್ಲಿ ಸುಮಾರು 40 ಲಕ್ಷ ಜನಸಂಖ್ಯೆಯಷ್ಟು ಉರುಂಕ್ವಿ ಸಮುದಾಯದವರಿದ್ದಾರೆ. 100 ದಿನಗಳಿಂದ ನಿರ್ಬಂಧ ವಿಧಿಸಿದ್ದು, ಜನರಿಗೆ ಮನೆಯಿಂದ ಹೊರಬರದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಅದರೆ, ಕಠಿಣ ನಿರ್ಬಂಧ ಹೇರಲಾಗಿದೆ ಎಂಬುದನ್ನು ಚೀನಾ ಆಡಳಿತ ನಿರಾಕರಿಸಿದೆ.

ಪ್ರಕರಣಗಳ ಹೇರಿಕೆ: ಚೀನಾದಲ್ಲಿ ಶನಿವಾರ ಹೊಸದಾಗಿ 34,909 ಪ್ರಕರಣಗಳು ದಾಖಲಾಗಿವೆ. ದಿನೇ ದಿನೇ ಪ್ರಕರಣಗಳು ಏರುತ್ತಿವೆ. ವಿವಿಧ ನಗರಗಳಲ್ಲಿ ಸೋಂಕು ಪ್ರಕರಣಗಳು ವ್ಯಾಪಿಸುತ್ತಿವೆ. ಮುಂಜಾಗ್ರತೆಯಾಗಿ ಲಾಕ್‌ಡೌನ್ ಸೇರಿದಂತೆ ಕಠಿಣ ನಿರ್ಬಂಧ ಹೇರಲಾಗುತ್ತಿದ್ದು, ತಾತ್ಕಾಲಿಕ ಆಸ್ಪತ್ರೆ ಸ್ಥಾಪನೆಗೂ ಸರ್ಕಾರ ಒತ್ತು ನೀಡಿದೆ.

ವಾಣಿಜ್ಯ ನಗರ ಶಾಂಘೈನಲ್ಲಿ ತಪಾಸಣೆ ಇನ್ನಷ್ಟು ಚುರುಕುಗೊಳಿಸಲಾಗಿದೆ. 48 ಗಂಟೆಯೊಳಗೆ ಪರೀಕ್ಷಾ ವರದಿ ನೀಡಲು ಕ್ರಮವಹಿಸಲಾಗಿದೆ. ಬೀಜಿಂಗ್‌ನ ಪ್ರಮುಖ ಪ್ರವಾಸಿ ತಾಣ ಚಾವೊಯಾಂಗ್ ಅನ್ನು ಮುಚ್ಚಲಾಗಿದೆ.

ಸಂವಿಧಾನದಲ್ಲಿ ಸ್ವಾಯತ್ತತೆ: ತಮಿಳು ಪಕ್ಷಗಳ ಒತ್ತಾಯ

ಕೊಲಂಬೊ (ಪಿಟಿಐ): ಶ್ರೀಲಂಕಾ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರು ಮಾತುಕತೆಗೆ ಆಹ್ವಾನಿಸಿರುವ ಹಿನ್ನೆಲೆಯಲ್ಲಿ ಪಕ್ಷದೊಳಗೆ ಚರ್ಚೆ ನಡೆಸಿದ ಶ್ರೀಲಂಕಾದ ತಮಿಳು ಅಲ್ಪಸಂಖ್ಯಾತ ಪಕ್ಷಗಳು, ಸಂಯುಕ್ತ ವ್ಯವಸ್ಥೆಗೆ ಒತ್ತು ಸೇರಿದಂತೆ ಮೂರು ಅಂಶಗಳ ಸೂತ್ರ ಮುಂದಿಡಲು ಒಪ್ಪಿಕೊಂಡಿವೆ ಎಂದು ತಮಿಳು ರಾಷ್ಟ್ರೀಯ ಮೈತ್ರಿಕೂಟದ (ಟಿಎನ್‌ಎ) ಮೂಲಗಳು ಶನಿವಾರ ತಿಳಿಸಿವೆ.

ಪೂರ್ವ, ಉತ್ತರದಲ್ಲಿ ನೆಲೆಸಿರುವ ದ್ವೀಪ ರಾಷ್ಟ್ರದ ಎಲ್ಲಾ ತಮಿಳು ರಾಜಕೀಯ ಪಕ್ಷಗಳು ಶುಕ್ರವಾರ 89 ವರ್ಷದ ಟಿಎನ್‌ಎ ನಾಯಕ ರಾಜವರೋಥಿಯಾಮ್ ಸಂಪಂತನ್ ಅವರ ನಿವಾಸದಲ್ಲಿ ಸಭೆ ಸೇರಿ ಚರ್ಚಿಸಿದವು.

ದೇಶದ ಅಲ್ಪಸಂಖ್ಯಾತ ಸಮುದಾಯಕ್ಕೆ ರಾಜಕೀಯ ಸ್ವಾಯತ್ತತೆಯ ದೀರ್ಘಕಾಲದ ಬೇಡಿಕೆ ಈಡೇರಿಸಲು ಒತ್ತಾಯಿಸಿದವು.

ಕರ್ನಾಟಕ ಸರಕಾರ
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)
ಇ–ಮೇಲ್: directorgimsgulbarga@gmail.com ದೂ. 08472-260252

ಸಂಖ್ಯೆ:ಜಿಮ್ಸ್/ಕೆಎಲ್‌ಬಿ/ಟೆಂಡರ/ಎಂ.ಆರ್.ಯು/2021–22/call-3 ದಿನಾಂಕ: 25/11/2022

ಅಲ್ಪಾವಧಿ ಟೆಂಡರ ಪ್ರಕಟಣೆ

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಜಿಮ್ಸ್ ಆಸ್ಪತ್ರೆಯ Multidisiplinary Research Units (MRU) ಗೆ ಅವಶ್ಯಕವಿರುವ ಪ್ರಯೋಗಾಲಯ ಉಪಕರಣಗಳು, ಖರೀದಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ದತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು www.eproc.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ: ದಿನಾಂಕ: 25-11-2022 Indent No. ME/2021-22/IND4183/CALL-3, 2) ಪ್ರಶ್ನೆಗಳು ಕೇಳಲು ಕೋನೆಯ ದಿನಾಂಕ : 05-12-2022 ಸಾಯಂಕಾಲ 5:00 ಕ್ಕೆ, 3) ಟೆಂಡರ ಪೂರ್ವಭಾವಿ ಸಭೆ : ದಿನಾಂಕ 06-12-2022 12:30ಕ್ಕೆ, 4) ಅನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು ಇ–Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: ದಿನಾಂಕ: 13–12–2022 ಸಾಯಂಕಾಲ 4:30ಕ್ಕೆ, 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **ದಿನಾಂಕ: 14–12–2022 ಸಾಯಂಕಾಲ 5:00ಕ್ಕೆ,** 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : **ದಿನಾಂಕ: 16–12–2022 5:30ಕ್ಕೆ,** 7) ಟೆಂಡರನ ಮೊತ್ತ: **ರೂ. 100.00 ಲಕ್ಷಗಳು,** 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ರೂ. 2,50,000/–, 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472–250770 Mobile : 9482093568 directorgimsgulbarga@gmail.com

ಸಹಿ/– ನಿರ್ದೇಶಕರು
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/888/ಎಂ.ಸಿ&ಎ/2022–23

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ **"ಷೆಡ್ಯೂಲ್ ಪ್ರಾಪರ್ಟಿ"** ಎನ್ನಲಾಗುವ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು ಕಸಬಾ ಹೋಬಳಿಯ ತೊರ್ನಹಳ್ಳಿ ಅಗ್ರಹಾರ ಗ್ರಾಮದಲ್ಲಿ ಸ್ಥಿತಗೊಂಡಿರುವ ಜಮೀನನ್ನು ಅವುಗಳ ಮಾಲಿಕರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಮಾರಾಟ, ವಿನಿಮಯ, ಬಾಡಿಗೆ, ಭೋಗ್ಯ, ಪರವಾಣಿಗೆ, ಅಸೈನ್‌ಮೆಂಟ್, ಅಡಮಾನ, ಲೀನ್, ಚಾರ್ಜ್, ನಿರ್ವಹಣೆ, ಟ್ರಸ್ಟ್, ಸ್ವಾಧೀನ, ಟೆನನ್ಸಿ, ಈಸ್‌ಮೆಂಟ್, ಫಲಾನುಭವಿ ಹಿತಾಸಕ್ತಿ ಅಥವಾ ಪ್ರಿಯಾಂಪ್ಷನ್ ಅಥವಾ ಮಾದಿರಿಯಲ್ಲಿ ಯಾವುದೇ ಕ್ಲೇಮ್, ಡಿಮಾಂಡ್, ಎಸ್ಟೇಟ್, ಷೇರ್, ಹಕ್ಕು, ಬಾಧ್ಯತೆ ಅಥವಾ ಹಿತಾಸಕ್ತಿ ಹೊಂದಿದ್ದಲ್ಲಿ ಅಥವಾ ಯಾವುದೇ ಒಪ್ಪಂದ ಅಥವಾ ಇತರ ಡಿಸ್ಪೊಸಿಷನ್ ಅಥವಾ ಯಾವುದೇ ದಾವೆ ಅಥವಾ ಅವಾರ್ಡ್ ಯಾವುದೇ ನ್ಯಾಯಾಲಯ ಅಥವಾ ಪ್ರಾಧಿಕಾರ, ಆರ್ಬಿಟ್ರೇಟರ್ ಹೊರಡಿಸಿದ್ದಲ್ಲಿ, ಇನ್ನಾವುದೇ ಲಿಸ್ಪೆಂಎನ್ಸ್, ಪವರ್ ಆಫ್ ಅಟಾರ್ನಿ, ಬಿಕ್ವೆಸ್ಟ್, ಇನ್ಹೆರಿಟನ್ಸ್, ಸಕ್ಸೆಶನ್, ಗಿಫ್ಟ್, ಎಫ್‌ಎಸ್‌ಐ, ಅಭಿವೃದ್ಧಿ ಹಕ್ಕು, ಪಾಲುದಾರಿಕೆ, ಕುಟುಂಬ ವ್ಯವಸ್ಥೆ ಅಥವಾ ಸೆಟ್ಲ್‌ಮೆಂಟ್ ಅಥವಾ ಇನ್ನಿತರ ಋಣಭಾರ ಯಾವುದೇ (**"ಕ್ಲೇಮ್"**) ಹೊಂದಿದ್ದಲ್ಲಿ, ಅಂತಹವರು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 15 (ಹದಿನೈದು) ದಿನಗಳೊಳಗೆ ಈ ಕೆಳಗೆ ಸಹಿ ಹಾಕಿರುವವರಿಗೆ ದಾಖಲಾತಿ ಪುರಾವೆಗಳ ಸಮೇತ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬೇಕೆಂದು ಕೋರಲಾಗಿದೆ, ಇದಕ್ಕೆ ತಪ್ಪಿದಲ್ಲಿ, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಅಂತಹ ಯಾವುದೇ ಕ್ಲೇಮ್‌ಗಳಿರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ, ಮುಂದಿನ ದಿನಗಳಲ್ಲಿ ಎದುರಾಗುವ ಅಂತಹ ಕ್ಲೇಮ್‌ಗಳನ್ನು ಕೈಬಿಡಲಾಗುತ್ತದೆ ಮತ್ತು/ಅಥವಾ ವಿನಾಯಿತಿ ಮಾಡಲಾಗುತ್ತದೆ ಹಾಗೂ ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಪ್ರಾಪರ್ಟಿ ಖರೀದಿಸುವ ಮುಂದಿನ ಪ್ರಕ್ರಿಯೆಗಳಿಗೆ ಮುಂದಾಗುತ್ತಾರೆ.

ಷೆಡ್ಯೂಲ್ ಪ್ರಾಪರ್ಟಿ

ಸರ್ವೆ ನಂಬರ್	ಮಟ್ಟಿಗೆ ಖರಾಬ್ ಸೇರಿದಂತೆ		ಭೂಮಾಲೀಕರ ಹೆಸರುಗಳು	ಗಡಿಗಳು			
	ಎಕರೆ	ಗುಂಟಾ		ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
17/1	4	36	ಶ್ರೀ ಬಿ. ಲೋಕೇಶಪ್ಪ	ಸರ್ವೆ ನಂ. 12/1 ರಲ್ಲಿರುವ ಜಮೀನು	ಸರ್ವೆ ನಂ. 76 ರಲ್ಲಿರುವ ಜಮೀನು	ಸರ್ವೆ ನಂ. 17/2 ರಲ್ಲಿರುವ ಜಮೀನು	ಸರ್ವೆ ನಂ. 18/1 ರಲ್ಲಿರುವ ಜಮೀನು
17/2	2	0	ಶ್ರೀಮತಿ. ಸುಜಾತಾ	ಸರ್ವೆ ನಂ. 12/1 ರಲ್ಲಿರುವ ಜಮೀನು	ಸರ್ವೆ ನಂ. 76 ರಲ್ಲಿರುವ ಜಮೀನು	ಸರ್ವೆ ನಂ. 16 ರಲ್ಲಿರುವ ಜಮೀನು	ಸರ್ವೆ ನಂ. 17/1 ರಲ್ಲಿರುವ ಜಮೀನು
18/1	4	4	ಶ್ರೀ ಬಿ. ಲೋಕೇಶಪ್ಪ	ಸರ್ವೆ ನಂ. 12/1 ರಲ್ಲಿರುವ ಜಮೀನು	ಸರ್ವೆ ನಂ. 76 ಮತ್ತು 19 ರಲ್ಲಿರುವ ಜಮೀನು	ಸರ್ವೆ ನಂ. 17/1 ರಲ್ಲಿರುವ ಜಮೀನು	ಸರ್ವೆ ನಂ. 18/2 ರಲ್ಲಿರುವ ಜಮೀನು
18/2	0	25	ಶ್ರೀ. ಎಂ. ಮುನಿರಾಜು	ಸರ್ವೆ ನಂ. 18/5 ಮತ್ತು 18/1 ರಲ್ಲಿರುವ ಜಮೀನು	ಸರ್ವೆ ನಂ. 19 ರಲ್ಲಿರುವ ಜಮೀನು	ಸರ್ವೆ ನಂ. 18/1 ರಲ್ಲಿರುವ ಜಮೀನು	ಸರ್ವೆ ನಂ. 18/3, 18/4 ಮತ್ತು 18/5 ರಲ್ಲಿರುವ ಜಮೀನು
18/3	1	10	ಶ್ರೀ. ನಾರಾಯಣ ಸ್ವಾಮಿ	ಸರ್ವೆ ನಂ. 18/1 ರಲ್ಲಿರುವ ಜಮೀನು	ಸರ್ವೆ ನಂ. 19 ರಲ್ಲಿರುವ ಜಮೀನು	ಸರ್ವೆ ನಂ. 18/2, 18/4 ಮತ್ತು 18/5 ರಲ್ಲಿರುವ ಜಮೀನು	ತಿಮ್ಮಾಪುರ ಗ್ರಾಮ ಗಡಿ
18/4	0	15	ಶ್ರೀ. ಸಿ. ರಾಜ	ಸರ್ವೆ ನಂ. 18/1 ರಲ್ಲಿರುವ ಜಮೀನು	ಸರ್ವೆ ನಂ. 18/5 ರಲ್ಲಿರುವ ಜಮೀನು	ಸರ್ವೆ ನಂ. 18/2 ರಲ್ಲಿರುವ ಜಮೀನು	ಸರ್ವೆ ನಂ. 18/3 ರಲ್ಲಿರುವ ಜಮೀನು
18/5	0	10	ಶ್ರೀ. ಸಿ. ರಾಜ	ಸರ್ವೆ ನಂ. 18/4 ರಲ್ಲಿರುವ ಜಮೀನು	ಸರ್ವೆ ನಂ. 18/2 ರಲ್ಲಿರುವ ಜಮೀನು	ಸರ್ವೆ ನಂ. 18/2 ರಲ್ಲಿರುವ ಜಮೀನು	ಸರ್ವೆ ನಂ. 18/3 ರಲ್ಲಿರುವ ಜಮೀನು
10/3	0	20	ಶ್ರೀ.ಬಿ. ನಾರಾಯಣಪ್ಪ	ಸರ್ವೆ ನಂ. 10/2 ರಲ್ಲಿರುವ ಜಮೀನು	ಸರ್ವೆ ನಂ. 11/1 ರಲ್ಲಿರುವ ಜಮೀನು	ಸರ್ವೆ ನಂ. 10/1 ರಲ್ಲಿರುವ ಜಮೀನು	ತಿಮ್ಮಾಪುರ ಗ್ರಾಮ ಗಡಿ
11/1	4	18	ಶ್ರೀ.ಬಿ. ನಾರಾಯಣಪ್ಪ	ಸರ್ವೆ ನಂ. 10/3 ರಲ್ಲಿರುವ ಜಮೀನು	ಸರ್ವೆ ನಂ. 11/2 ರಲ್ಲಿರುವ ಜಮೀನು	ಸರ್ವೆ ನಂ. 14 ರಲ್ಲಿರುವ ಜಮೀನು	ತಿಮ್ಮಾಪುರ ಗ್ರಾಮ ಗಡಿ
11/2	3	9	ಶ್ರೀ.ಬಿ. ದ್ಯಾವಪ್ಪ	ಸರ್ವೆ ನಂ. 11/1 ರಲ್ಲಿರುವ ಜಮೀನು	ಸರ್ವೆ ನಂ. 12/2 ರಲ್ಲಿರುವ ಜಮೀನು	ಸರ್ವೆ ನಂ. 14 ರಲ್ಲಿರುವ ಜಮೀನು	ತಿಮ್ಮಾಪುರ ಗ್ರಾಮ ಗಡಿ
12/1	4	37	ಶ್ರೀಮತಿ. ಭರತಮ್ಮ ಅವಳ ಜೊತೆಗೆ ಮಕ್ಕಳು	ಸರ್ವೆ ನಂ. 12/2 ರಲ್ಲಿರುವ ಜಮೀನು	ಸರ್ವೆ ನಂ. 17/2, 17/1, 18/1 ಮತ್ತು 18/2 ರಲ್ಲಿರುವ ಜಮೀನು	ಸರ್ವೆ ನಂ. 14 ರಲ್ಲಿರುವ ಜಮೀನು	ತಿಮ್ಮಾಪುರ ಗ್ರಾಮ ಗಡಿ
12/2	3	21	ಶ್ರೀ.ಬಿ. ದ್ಯಾವಪ್ಪ	ಸರ್ವೆ ನಂ. 11/2 ರಲ್ಲಿರುವ ಜಮೀನು	ಸರ್ವೆ ನಂ. 12/1 ರಲ್ಲಿರುವ ಜಮೀನು	ಸರ್ವೆ ನಂ. 14 ರಲ್ಲಿರುವ ಜಮೀನು	ತಿಮ್ಮಾಪುರ ಗ್ರಾಮ ಗಡಿ
19	4	0	ಶ್ರೀಮತಿ. ನ್ಯಾನಮ್ಮ ಅವಳ ಜೊತೆಗೆ ಮಕ್ಕಳು	ಸರ್ವೆ ನಂ. 18/1, 18/2 ಮತ್ತು 18/3 ರಲ್ಲಿರುವ ಜಮೀನು	ಸರ್ವೆ ನಂ. 20 ಮತ್ತು 76 ರಲ್ಲಿರುವ ಜಮೀನು	ಸರ್ವೆ ನಂ. 76 ರಲ್ಲಿರುವ ಜಮೀನು	ತಿಮ್ಮಾಪುರ ಗ್ರಾಮ ಗಡಿ
ಒಟ್ಟು	34	5					

ದಿನಾಂಕ : 27–11–2022

ಸುಧೀರ್ ಹೆಚ್ ಮದಮ್ಮೈಯ
ಖೇತಾನ್ & ಕೊ.
ಎಂಬೆಸ್ಸಿ ಕ್ವೆಸ್ಟ್, 3ನೇ ಮಹಡಿ, 45/1, ಮ್ಯಾಗ್ರಾಥ್ ರೋಡ್
ಬೆಂಗಳೂರು – 560 025
ಫೋನ್: +91 80 43397000, ಮೊಬೈಲ್ : 98455 25612

ಇಳಿಗಾಲಕ್ಕೆ ಕಾಡುವ ಚಿಂತೆ

ಒಂದನೇ ಪುಟದಿಂದ...

ಗ್ರಾಮ ಪಂಚಾಯಿತಿಯ ಬಿಲ್ ಕಲೆಕ್ಟರ್ ಆಗಿ 1989ರಲ್ಲಿ ಕೆಲಸಕ್ಕೆ ಸೇರಿದ್ದ ಅವರಿಗೆ 20 ವರ್ಷಗಳ ಬಳಿಕ 'ಕಾರ್ಯದರ್ಶಿ' ಹುದ್ದೆಗೆ ಬಡ್ತಿ ದೊರೆಯಿತು. 10 ವರ್ಷ ಸೇವೆ ಸಲ್ಲಿಸಿ ನಿವೃತ್ತರಾದಾಗ ಎನ್‌ಪಿಎಸ್‌ನಲ್ಲಿ ವೃದ್ಧಿಸಿದ್ದ ಅವರ ಒಟ್ಟು ಮೊತ್ತ ₹ 7.39 ಲಕ್ಷ. ಸರ್ಕಾರದ 60:40ರ ಮಾನದಂಡದಡಿ ಶೇ 60ರಷ್ಟು ಹಣವನ್ನು ಅವರು ವಾಪಸ್ ಪಡೆದರು. ಉಳಿದ ಶೇ 40ರಷ್ಟು ಹಣಕ್ಕೆ ಅವರಿಗೆ ಲಭಿಸುತ್ತಿರುವ ಮಾಸಿಕ ಪಿಂಚಣಿ ಒಂದು ಸಾವಿರ ರೂಪಾಯಿ.

'ಹಳೆ ಪಿಂಚಣಿ ವ್ಯವಸ್ಥೆ ಜಾರಿಯಲ್ಲಿದ್ದರೆ ನನಗೆ ಮಾಸಿಕ ₹ 15 ಸಾವಿರವರೆಗೆ ಪಿಂಚಣಿ ಸಿಗುತ್ತಿತ್ತು. ವಾರ್ಷಿಕ ತುಟ್ಟಿಭತ್ಯೆಯೂ ಅದಕ್ಕೆ ಸೇರ್ಪಡೆಯಾಗುತ್ತಿತ್ತು. ಮೂರು ದಶಕಗಳ ಕಾಲ ಸರ್ಕಾರಿ ಕೆಲಸ ಮಾಡಿದ ಬಳಿಕ ಅತ್ಯಲ್ಪ ಮೊತ್ತವು ಕನಿಷ್ಠ ಅಡುಗೆ ಅನಿಲ ಸಿಲಿಂಡರ್ ಖರೀದಿಗೂ ಸಾಕಾಗುವುದಿಲ್ಲ. ಇನ್ನು ಆರೋಗ್ಯ ಚಿಕಿತ್ಸೆಗೆ ಎಲ್ಲಿಂದ ಹಣ ತರಬೇಕು' ಎಂದು ಮುತ್ತು ಪೂಜಾರಿ ನೋವು ತೋಡಿಕೊಳ್ಳುತ್ತಾರೆ.

ಕಾಯ್ದೆ ಮೂಲಕ ಯೋಜನೆ ಜಾರಿ: ಎನ್‌ಪಿಎಸ್ ಜಾರಿಗೊಳಿಸುವ ಉದ್ದೇಶದಿಂದ 'ಪಿಎಫ್‌ಆರ್‌ಡಿಎ' ಕಾಯ್ದೆ ರೂಪಿಸಲಾಯಿತು. ಆದರೆ, ಇದಕ್ಕೂ ಮೊದಲೇ ಕೇಂದ್ರ ಸರ್ಕಾರ 2003ರ ಅಕ್ಟೋಬರ್ 29ರಂದು ಕಾರ್ಯಾದೇಶದ ಮೂಲಕ ಪ್ರಾಧಿಕಾರ ಸ್ಥಾಪಿಸಿತ್ತು. ಎನ್‌ಡಿಎ ಸರ್ಕಾರದ ಈ ಆದೇಶವನ್ನು ಯುಪಿಎ ಸರ್ಕಾರವೂ ಯಾವುದೇ ಬದಲಾವಣೆಗಳಿಲ್ಲದೆಯೇ ಮುಂದುವರಿಸಿತು. 2004ರ ಜನವರಿ 1ರಿಂದ ನೇಮಕವಾಗುವ ಕೇಂದ್ರ ಸರ್ಕಾರಿ ನೌಕರರಿಗೆ ಹೊಸ ನಿವೃತ್ತಿ ಯೋಜನೆ ಜಾರಿಗೊಳಿಸಲಾಯಿತು. ಈಗಾಗಲೇ 27 ರಾಜ್ಯ ಸರ್ಕಾರಗಳು ಎನ್‌ಪಿಎಸ್ ಜಾರಿಗೊಳಿಸಿವೆ.

ಎನ್‌ಪಿಎಸ್ 'ಹೂಡಿಕೆ ಆಧಾರಿತ' ಯೋಜನೆಯಾಗಿದ್ದು, ಸರ್ಕಾರ ಮತ್ತು ನೌಕರರ ನಡುವಣ ಸಂಬಂಧವನ್ನು ಕಡಿಮೆಗೊಳಿಸಿ, 'ಸಹಜೀವನ' ರೀತಿಯ ಪದ್ಧತಿ ರೂಪಿಸಲಾಗಿದೆ. ಇನ್ನೊಂದೆಡೆ ಸರ್ಕಾರದ ಹುದ್ದೆಗಳನ್ನು ಕಡಿಮೆ ಮಾಡುವ ಹುನ್ನಾರವೂ ಈ ಯೋಜನೆಯಲ್ಲಿ ಅಡಗಿದೆ. ಷೇರು ಮಾರುಕಟ್ಟೆಯಲ್ಲಿ ನೌಕರರ ಹಣವನ್ನು ಹೂಡುವುದರಿಂದ ಖಾಸಗಿ ಕಂಪನಿಗಳು ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳಲು ಬಳಸಿಕೊಳ್ಳುತ್ತಿವೆ' ಎಂದು ನೌಕರರು ವಿಶ್ಲೇಷಿಸುತ್ತಾರೆ.

'ಎನ್‌ಪಿಎಸ್ ವ್ಯವಸ್ಥೆಯನ್ನು ಪಿಂಚಣಿ ದೃಷ್ಟಿಕೋನಕ್ಕೆ ಮಾತ್ರ ಸೀಮಿತಗೊಳಿಸಬಾರದು. ಇಡೀ ಸರ್ಕಾರಿ ವಲಯವನ್ನು ಹಂತ ಹಂತವಾಗಿ ದುರ್ಬಲಗೊಳಿಸುವ ಹುನ್ನಾರವೂ ಇದರಲ್ಲಿದೆ. ಉದ್ಯೋಗದ ಅಭದ್ರತೆ ಸೃಷ್ಟಿಸುವ ಪ್ರಯತ್ನ ಇದಾಗಿದೆ. ಆಡಳಿತ ಸುಧಾರಣೆ ಹೆಸರಿನಲ್ಲಿ ಆಡಳಿತಾತ್ಮಕ ವೆಚ್ಚ ಕಡಿಮೆ ಮಾಡಲು ಸರ್ಕಾರಗಳು ಮುಂದಾದಾಗ ನೌಕರರನ್ನೇ ಮೊದಲು ಗುರಿಯಾಗಿರಿಸಿಕೊಳ್ಳಲಾಯಿತು. ಸರ್ಕಾರಿ ನೌಕರರ ವೇತನ, ಪಿಂಚಣಿ ಮತ್ತು ಹುದ್ದೆಗಳನ್ನು ಕಡಿತಗೊಳಿಸುವ ಯೋಜನೆಗಳನ್ನು ರೂಪಿಸಲಾಯಿತು. ಸರ್ಕಾರಿ ನೌಕರಿಗೆ ಇರುವ ಆಕರ್ಷಣೆ ಕಡಿಮೆಗೊಳಿಸಬೇಕು ಎನ್ನುವ ಉದ್ದೇಶವೂ ಇದರಲ್ಲಿ ಅಡಗಿದೆ. ಖಾಸಗಿ ವಲಯವನ್ನು ಬಲಿಷ್ಠಗೊಳಿಸುವುದು ಈ ವ್ಯವಸ್ಥೆಯ ಪ್ರಮುಖ ಅಂಶ' ಎನ್ನುವುದು ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ಅಧ್ಯಕ್ಷ ಶಾಂತಾರಾಮ ಅವರ ಅಭಿಪ್ರಾಯ.

'ಎನ್‌ಪಿಎಸ್ ರದ್ದುಪಡಿಸಿ ಒಪಿಎಸ್ ಜಾರಿಗೊಳಿಸುವುದರಿಂದ ಸರ್ಕಾರಕ್ಕೆ ಆರ್ಥಿಕವಾಗಿ ಹೊರೆಯಾಗುವುದಿಲ್ಲ. ಪ್ರತಿ ತಿಂಗಳು ಸರ್ಕಾರ ಈಗ ₹350ಕೋಟಿಯಿಂದ ₹400 ಕೋಟಿ ಮೊತ್ತವನ್ನು ಎನ್‌ಪಿಎಸ್‌ಗಾಗಿ ತೆಗೆದಿಡುತ್ತಿದೆ. ಜತೆಗೆ, ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಹಣವನ್ನು ಠೇವಣಿಯಾಗಿ ಇರಿಸಿರುವುದರಿಂದ ಸೇವಾ ಶುಲ್ಕ ರೂಪದಲ್ಲಿ ಒಂದು ವರ್ಷಕ್ಕೆ ₹4 ಕೋಟಿಗೂ ಹೆಚ್ಚು ಮೊತ್ತವನ್ನು ನೀಡಲಾಗುತ್ತಿದೆ. ನಮ್ಮ ದುಡ್ಡು ನಿರ್ವಹಿಸಲು ಎನ್‌ಎಸ್‌ಡಿಎಲ್‌ಗೆ ನಾಲ್ಕು ಕೋಟಿ ನೀಡಲಾಗುತ್ತಿದೆ. ಎನ್‌ಪಿಎಸ್ ಟ್ರಸ್ಟ್‌ನಲ್ಲಿ ಈಗಾಗಲೇ ವಂತಿಗೆಯ ಮೊತ್ತವೇ ₹14 ಸಾವಿರ ಕೋಟಿಗೂ ಹೆಚ್ಚು ಇದೆ. ಒಪಿಎಸ್ ಜಾರಿಯಾದರೆ ವಂತಿಗೆ ನೀಡುವುದು ತಪ್ಪುತ್ತದೆ ಮತ್ತು ಎನ್‌ಪಿಎಸ್ ರದ್ದುಗೊಳಿಸಿದಾಗ ಈ ಹಣವೂ ವಾಪಸ್ ಬಡ್ಡಿ ಸಮೇತ ದೊರೆಯುತ್ತದೆ. ಇದನ್ನು ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೂ ಬಳಸಬಹುದು. ಜತೆಗೆ, ಸಾಮಾನ್ಯ ಭವಿಷ್ಯ ನಿಧಿಗೆ (ಜಿಪಿಎಫ್) ಪರಿವರ್ತಿಸಿದರೆ ಎರಡು ವರ್ಷ ಹಣವನ್ನು ವಾಪಸ್ ತೆಗೆದುಕೊಳ್ಳದಿರಲು ನೌಕರರು ಸಿದ್ಧರಿದ್ದಾರೆ' ಎಂದು ಶಾಂತಾರಾಮ್ ಹೇಳುತ್ತಾರೆ.

ಪಿಎಫ್‌ಆರ್‌ಡಿಎ ಕಾಯ್ದೆಗೆ ತಿದ್ದುಪಡಿ ತರಬೇಕು



ರಾಷ್ಟ್ರೀಯ ಹಳೆ ಪಿಂಚಣಿ ಮರುಸ್ಥಾಪನಾ ಸಂಯುಕ್ತರಂಗ ಹಮ್ಮಿಕೊಂಡಿರುವ ಹೋರಾಟಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಕೈಜೋಡಿಸಿದೆ. ಎನ್‌ಪಿಎಸ್ ರದ್ದು ಮಾಡುವ ನಿರ್ಧಾರ ತೆಗೆದುಕೊಂಡರೂ, ವಂತಿಗೆ ಹಣ ಹಿಂಪಡೆಯಲು ಅವಕಾಶ ಇರುವುದಿಲ್ಲ. ಹೀಗಾಗಿ, ಪಿಎಫ್‌ಆರ್‌ಡಿಎ ಕಾಯ್ದೆಗೆ ಕೇಂದ್ರ ಸರ್ಕಾರ ತಕ್ಷಣ ತಿದ್ದುಪಡಿ ತರಬೇಕು. ದೇಶದ ಎಲ್ಲ ರಾಜ್ಯಗಳ ನೌಕರರಿಗೂ 'ಒಂದೇ ರಾಷ್ಟ್ರ– ಒಂದೇ ಪಿಂಚಣಿ' ಯೋಜನೆ ಅಳವಡಿಸಬೇಕು

ಸಿ.ಎಸ್.ಷಡಾಕ್ಷರಿ, ಅಧ್ಯಕ್ಷ, ರಾಜ್ಯ ಸರ್ಕಾರಿ ನೌಕರರ ಸಂಘ.

ಎನ್‌ಪಿಎಸ್‌ನಿಂದ ಸಾಮಾಜಿಕ ಭದ್ರತೆಯೂ ಇಲ್ಲ



ನಿವೃತ್ತಿ ಹೊಂದಿದ ನಂತರ ಪಿಂಚಣಿಯ ಕಾರಣಕ್ಕೆ ಮಗ ಅಥವಾ ಮಗಳು ತಮ್ಮ ತಂದೆ, ತಾಯಿಯನ್ನು ನೋಡಿಕೊಳ್ಳಬಹುದು. ಇಲ್ಲದಿದ್ದರೆ ವೃದ್ಧಾಶ್ರಮಕ್ಕೂ ತಳ್ಳಬಹುದು. ಒಪಿಎಸ್ ನೌಕರದಾರರಿಗಿರುವ ಜಿಪಿಎಫ್ ಮೊತ್ತ ಬಹುದೊಡ್ಡ ಆಸರೆ. ಈ ಆಸೆಯೂ ಎನ್‌ಪಿಎಸ್‌ನವರಿಗಿಲ್ಲ. ನಾವು ಸೇವೆಯಲ್ಲಿಯಲ್ಲಿರುವಾಗಲೇ ಈ ಹಳೆ ಪಿಂಚಣಿ ಭಾಗ್ಯ ಒದಗಿ ಬಂದರೆ ನಾವು ಬದುಕಿರುವಷ್ಟು ಕಾಲವೂ ಹಸನಾದೀತು. ಮುಪ್ಪಿನಲ್ಲಿ ನಮಗಿರುವ ಆಧಾರ ಇದೇ ಅಲ್ಲವೇ? ಎನ್‌ಪಿಎಸ್‌ನಿಂದ ಭದ್ರತೆ ಇಲ್ಲ.

ಡಾ.ನಿಂಗಪ್ಪ ಮುದೇನೂರು, ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ


ಹೊಸ ಪಿಂಚಣಿ ವ್ಯವಸ್ಥೆಯಿಂದ ಕೆಳ ಹಂತದ ನೌಕರರು ಹೆಚ್ಚು ಸಮಸ್ಯೆ ಎದುರಿಸುತ್ತಿದ್ದಾರೆ. ಐಎಎಸ್, ಐಪಿಎಸ್ ಮಟ್ಟದ ಅಧಿಕಾರಿಗಳು ಮೌನವಹಿಸಿದ್ದಾರೆ ಎನ್ನುವುದು ಶಾಲಾ ಶಿಕ್ಷಕರು ಸೇರಿದಂತೆ ಹಲವು ವರ್ಗಗಳ ನೌಕರರ ಆರೋಪ.

ರಾಜ್ಯದ ಸುಮಾರು 5.20 ಲಕ್ಷ ಸರ್ಕಾರಿ ನೌಕರರಲ್ಲಿ ಶೇ 50ಕ್ಕಿಂತ ಹೆಚ್ಚು ಶಿಕ್ಷಕರಿದ್ದಾರೆ. ವೃಂದ ಎ, ಮತ್ತು ಬಿ ನೌಕರರಿಗೆ ಹೆಚ್ಚಿನ ವೇತನ ಸೌಲಭ್ಯಗಳು ದೊರೆಯುವ ಕಾರಣ ಅವರಿಗೆ ಪಿಂಚಣಿ ಒಂದು ಸಮಸ್ಯೆಯೇ ಅಲ್ಲ ಎನ್ನುವುದು ಶಿಕ್ಷಕರ ಸಂಘದ ಪದಾಧಿಕಾರಿಗಳ ವಾದ.

ಕಾಯ್ದೆ ಅವಕಾಶ ನೀಡುವುದಿಲ್ಲ: ರಾಜ್ಯ ಸರ್ಕಾರಗಳು ಹೊಸ ಪಿಂಚಣಿ ವ್ಯವಸ್ಥೆ ರದ್ದು ಮಾಡುವ ನಿರ್ಧಾರ ಕೈಗೊಂಡರೂ, ಕೇಂದ್ರ ಸರ್ಕಾರದ ಪಿಎಫ್‌ಆರ್‌ಡಿಎ ಕಾಯ್ದೆ ಅದಕ್ಕೆ ಅವಕಾಶ ನೀಡುವುದಿಲ್ಲ. ಇದರಿಂದಾಗಿ, ನೌಕರರಿಂದ ಸಂಗ್ರಹಿಸಿದ್ದ ಎನ್‌ಪಿಎಸ್ ವಂತಿಗೆ ಮರಳಿ ಪಡೆಯಲು ಸಾಧ್ಯವಾಗುವುದಿಲ್ಲ. ಪಿಎಫ್‌ಆರ್‌ಡಿಎ ಕಾಯ್ದೆಯೇ ಇದಕ್ಕೆ ಅಡ್ಡಿಯಾಗಲಿದೆ. ಕೇಂದ್ರ ಸರ್ಕಾರ ಪಿಎಫ್‌ಆರ್‌ಡಿಎ ಕಾಯ್ದೆಗೆ ತಿದ್ದುಪಡಿ ತರಬೇಕು ಎನ್ನುವುದು ದೇಶದಾದ್ಯಂತ ಹೋರಾಟ ನಡೆಸುತ್ತಿರುವ ರಾಷ್ಟ್ರೀಯ ಹಳೇ ಪಿಂಚಣಿ ಮರುಸ್ಥಾಪನಾ ಸಂಯುಕ್ತರಂಗದ ಒತ್ತಾಯ.

'ಎನ್‌ಪಿಎಸ್ ರದ್ದುಪಡಿಸಿರುವ ರಾಜ್ಯಗಳ ನೌಕರರು ನೀಡಿದ್ದ ವಂತಿಗೆಯನ್ನು ಹಿಂದಿರುಗಿಸಲು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ನಿರಾಕರಿಸಿದೆ. ಮರಳಿಸುವ ಅಧಿಕಾರ ತನಗಿಲ್ಲ ಎಂದು ಪ್ರತಿಕ್ರಿಯಿಸಿದೆ. ಈಗಾಗಲೇ ನೌಕರರಿಂದ ಸಂಗ್ರಹಿಸಿದ ಹಣವನ್ನು ಕೇಂದ್ರ ಸರ್ಕಾರ ಷೇರು ಮಾರುಕಟ್ಟೆ ಮೇಲೆ ವಿನಿಯೋಗಿಸಿದೆ. ಇದರಿಂದ ಕಾಯ್ದೆ ರದ್ದಾಗದ ಹೊರತು ರಾಜ್ಯಗಳು ತೆಗೆದುಕೊಳ್ಳುವ ನಿರ್ಧಾರಗಳಿಗೆ ಕಾನೂನು ಸಮ್ಮತಿ ದೊರೆಯದು. ನೀಡಿರುವ ಹಣಕ್ಕೆ ಖಾತ್ರಿಯೂ ಸಿಗದು, ಹಳೇ ಪದ್ಧತಿಯೂ ಜಾರಿಯಾಗದು' ಎನ್ನುತ್ತಾರೆ ತೆಲಂಗಾಣ ರಾಜ್ಯ ನೌಕರರ ಸಂಘದ ಅಧ್ಯಕ್ಷ ಸಂಪತ್‌ಕುಮಾರ್ ಸ್ವಾಮಿ.

ಪೂರಕ ಮಾಹಿತಿ: ಚಂದ್ರಹಾಸ ಹಿರೇಮಳಲಿ, ಕೆ.ಎಚ್. ಓಬಳೇಶ್, ವಿಜಯ ಜೋಷಿ



ಎನ್‌ಪಿಎಸ್ ಲೆಕ್ಕಾಚಾರ ಹೇಗೆ?

ಎನ್‌ಪಿಎಸ್ ಜಾರಿಗೆ ಬರುವುದಕ್ಕಿಂತಲೂ ಮೊದಲು ಇದ್ದ ಪಿಂಚಣಿ ವ್ಯವಸ್ಥೆಯಲ್ಲಿ ಸರ್ಕಾರಿ ನೌಕರರಿಗೆ ನಿಶ್ಚಿತ ಮೊತ್ತವು ಪಿಂಚಣಿಯಾಗಿ ಸಿಗುತ್ತಿತ್ತು. ಆಗ, ತೆರಿಗೆದಾರರ ಹಣವನ್ನು ಬಳಸಿ ಈ ಪಿಂಚಣಿ ನೀಡಲಾಗುತ್ತಿತ್ತು. ಆದರೆ, ಎನ್‌ಪಿಎಸ್ ವ್ಯವಸ್ಥೆಯ ಅಡಿಯಲ್ಲಿ ನಿವೃತ್ತಿಯ ನಂತರ ಎಷ್ಟು ಮೊತ್ತ ಪಿಂಚಣಿಯಾಗಿ ಸಿಗುತ್ತದೆ ಎಂಬುದನ್ನು ಒಂದೇ ಸಾಲಿನಲ್ಲಿ ಉತ್ತರಿಸುವುದು ಕಷ್ಟ.

ನೌಕರನು ಪ್ರತಿ ತಿಂಗಳು ಎನ್‌ಪಿಎಸ್ ಖಾತೆಯಲ್ಲಿ ಎಷ್ಟು ಹಣ ಹೂಡಿಕೆ ಮಾಡುತ್ತಾನೆ, ಅದಕ್ಕೆ ಪ್ರತಿಯಾಗಿ ಉದ್ಯೋಗದಾತ ಸಂಸ್ಥೆ, ಇಲಾಖೆ ಅಥವಾ ಕಂಪನಿ ಎಷ್ಟು ಹಣವನ್ನು ಜಮಾ ಮಾಡುತ್ತದೆ ಹಾಗೂ ಆ ರೀತಿ ಜಮಾ ಆದ ಮೊತ್ತಕ್ಕೆ ಎಷ್ಟು ಲಾಭ ಸಿಗುತ್ತದೆ ಎಂಬುದನ್ನು ಆಧರಿಸಿ ಪಿಂಚಣಿ ಮೊತ್ತವನ್ನು ಲೆಕ್ಕ ಹಾಕಬೇಕಾಗುತ್ತದೆ.

ಉದಾಹರಣೆಗೆ, ರವಿ (ಕಾಲ್ಪನಿಕ ವ್ಯಕ್ತಿ) ಎಂಬ ವ್ಯಕ್ತಿಗೆ ಈಗ 30 ವರ್ಷ ವಯಸ್ಸು ಎಂದು ಭಾವಿಸಿ. ರವಿ ಈಗಿಂದಲೇ ಪ್ರತಿ ತಿಂಗಳು ₹ 3,000ವನ್ನು ಎನ್‌ಪಿಎಸ್ ಅಡಿಯಲ್ಲಿ ಹೂಡಿಕೆ ಮಾಡಲು ಆರಂಭಿಸುತ್ತಾರೆ. ಇದಕ್ಕೆ ಪ್ರತಿಯಾಗಿ ಅವರ ಉದ್ಯೋಗದಾತರಿಂದಲೂ ಅಷ್ಟೇ ಮೊತ್ತ ಎನ್‌ಪಿಎಸ್‌ಗೆ ಜಮಾ ಆಗುತ್ತದೆ ಎಂದು ಭಾವಿಸಿ. ಅಂದರೆ, ಎನ್‌ಪಿಎಸ್ ಖಾತೆಗೆ ಜಮಾ ಆಗುವ ತಿಂಗಳ ಮೊತ್ತ ₹ 6,000. ಇಷ್ಟನ್ನು ರವಿ ಅವರು ತಮ್ಮ 60 ವರ್ಷ ವಯಸ್ಸಿನವರೆಗೆ ಮುಂದುವರಿಸುತ್ತಾರೆ ಎಂದು ಭಾವಿಸಿ. ಆಗ ಅವರು 60 ವರ್ಷ ವಯಸ್ಸಾಗುವ ಹೊತ್ತಿಗೆ ₹ 21.60 ಲಕ್ಷವನ್ನು ಹೂಡಿಕೆ ಮಾಡಿರುತ್ತಾರೆ. ಈ ಮೊತ್ತಕ್ಕೆ ವಾರ್ಷಿಕ ಶೇ 8ರಷ್ಟು ಲಾಭ ಸಿಗುತ್ತದೆ ಎಂದು ಅಂದಾಜಿಸಬಹುದು.

ಎನ್‌ಪಿಎಸ್‌ನಲ್ಲಿ ಹೂಡಿಕೆ ಮಾಡುವ ಹಣವನ್ನು ಷೇರುಪೇಟೆಯಲ್ಲಿಯೂ, ಸರ್ಕಾರದ ಬಾಂಡ್‌ಗಳಲ್ಲಿಯೂ ತೊಡಗಿಸಲಾಗುತ್ತದೆ. ಷೇರುಪೇಟೆಯಲ್ಲಿ ಹೆಚ್ಚಿನ ಮೊತ್ತ ತೊಡಗಿಸಿದರೆ ವಾರ್ಷಿಕವಾಗಿ ಶೇಕಡ 10ರಿಂದ ಶೇ 12ರವರೆಗೆ ಲಾಭ ಪಡೆಯುವ ಸಾಧ್ಯತೆಯೂ ಇರುತ್ತದೆ. ಆದರೆ, ಮಾರುಕಟ್ಟೆಯಲ್ಲಿ ಸಿಗುವ ಲಾಭದಲ್ಲಿ ಏರಿಳಿತ ಇರುವ ಕಾರಣ 30 ವರ್ಷಗಳ ಅವಧಿಯಲ್ಲಿ ಶೇ 8ರಷ್ಟು ವಾರ್ಷಿಕ ಸರಾಸರಿ ಲಾಭ ಸಿಗುತ್ತದೆ ಎಂದು ಪರಿಗಣಿಸುವುದು ಎಂಬ ಮಾತನ್ನು ಹಣಕಾಸು ತಜ್ಞರು ಹೇಳುತ್ತಾರೆ.

ಎನ್‌ಪಿಎಸ್‌ನಲ್ಲಿ ರವಿ ತೊಡಗಿಸಿದ ಒಟ್ಟು ₹ 21.60 ಲಕ್ಷಕ್ಕೆ ಪ್ರತಿಯಾಗಿ 30 ವರ್ಷಗಳಲ್ಲಿ ₹ 67.45 ಲಕ್ಷ ಲಾಭ (ಅಂದರೆ ಬಡ್ಡಿ) ಸಿಕ್ಕಿರುತ್ತದೆ. ಅಂದರೆ, ನಿವೃತ್ತಿಯ ಸಂದರ್ಭದಲ್ಲಿ ರವಿಗೆ ಇಡುಗಂಟಿನ ರೂಪದಲ್ಲಿ ₹ 89.05 ಲಕ್ಷ ಸಿಗುತ್ತದೆ. ಈ ಮೊತ್ತದಲ್ಲಿ ಕನಿಷ್ಠ ಶೇಕಡ 40ರಷ್ಟನ್ನು ಮಾಸಿಕ ಪಿಂಚಣಿ ಕೊಡುವ ಆ್ಯನ್ಯುಟಿ ಯೋಜನೆಗಳಲ್ಲಿ ತೊಡಗಿಸಬೇಕು. ರವಿ ಅವರು ತಮಗೆ ಎನ್‌ಪಿಎಸ್ ಮೂಲಕ ದೊರೆತ ಅಷ್ಟೂ ಮೊತ್ತವನ್ನು (₹ 89.05 ಲಕ್ಷವನ್ನು) ಆ್ಯನ್ಯುಟಿ ಯೋಜನೆಯಲ್ಲಿ ತೊಡಗಿಸಿದರೆ, ಆ ಯೋಜನೆಯ ಅಡಿಯಲ್ಲಿ ವಾರ್ಷಿಕ ಶೇ 6ರಷ್ಟು ಬಡ್ಡಿ ಸಿಗುತ್ತದೆ ಎಂದಾದರೆ, ಅವರಿಗೆ ಪ್ರತಿ ತಿಂಗಳು ಸಿಗುವ ಪಿಂಚಣಿ ಮೊತ್ತ ₹ 44,529.

ಎನ್‌ಪಿಎಸ್ ಅಡಿಯಲ್ಲಿ ಸಿಗುವ ಪಿಂಚಣಿ ಮೊತ್ತಕ್ಕೂ, ನೌಕರ ನಿವೃತ್ತಿಯ ಸಂದರ್ಭದಲ್ಲಿ ಪಡೆಯುತ್ತಿದ್ದ ವೇತನಕ್ಕೂ ನೇರ ಸಂಬಂಧ ಇಲ್ಲ. ಆದರೆ, ನೌಕರ ಎನ್‌ಪಿಎಸ್‌ನಲ್ಲಿ ಎಷ್ಟು ಹಣವನ್ನು ಹೂಡಿಕೆ ಮಾಡಿದ್ದಾನೆ, ಅದಕ್ಕೆ ಎಷ್ಟು ಲಾಭ ಸಿಕ್ಕಿದೆ ಎಂಬುದನ್ನು ಆಧರಿಸಿ ಪಿಂಚಣಿ ಮೊತ್ತ ತೀರ್ಮಾನವಾಗುತ್ತದೆ ಎಂದು ತಜ್ಞರು ವಿಶ್ಲೇಷಿಸುತ್ತಾರೆ.

ಮಹಾರಾಷ್ಟ್ರದ ಗರ್ವಭಂಗಕ್ಕೆ ಆನ್‌ಲೈನ್ ಅಭಿಯಾನ

ಕರ್ನಾಟಕ ಹೊಸ ನಕಾಶೆ ಹರಿಬಿಟ್ಟ 'ಮಹಾ' ಕನ್ನಡಿಗರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೊಲ್ಹಾಪುರ, ಸಾಂಗಲಿ, ಸೊಲ್ಲಾಪುರ, ಜತ್ತ, ಉಸ್ಮನಾಬಾದ್, ಲಾತೂರ್ ಪ್ರದೇಶಗಳನ್ನು ಒಳಗೊಂಡಂತೆ ಕರ್ನಾಟಕದ ಹೊಸ ನಕಾಶೆ ಸಿದ್ಧಪಡಿಸಿದ ಅಲ್ಲಿನ ಕನ್ನಡಿಗರು, ಶನಿವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ಅಭಿಯಾನ ಆರಂಭಿಸಿದ್ದಾರೆ.

ಮರಾಠಿಗರ 'ಝೂಲಾಚ್ ಪಾಹಿಜೆ (ಆಗಲೇ ಬೇಕು)' ಘೋಷಣೆಗೆ ಪ್ರತ್ಯುತ್ತರವಾಗಿ ಕನ್ನಡಿಗರೂ ಈ ಅಭಿಯಾನ ಆರಂಭಿಸಿ, ತಿರುಗೇಟು ನೀಡಿದ್ದಾರೆ. ಹೊಸ ನಕಾಶೆ ಹರಿಬಿಟ್ಟು 'ನಮ್ಮನ್ನು ಕರ್ನಾಟಕಕ್ಕೆ ಸೇರಿಸಿ' ಎಂದು ಗಟ್ಟಿ ಕೂಗು ಹಾಕಿದ್ದಾರೆ.

ಬೆಳಗಾವಿ, ಬೀದರ್, ಭಾಲ್ಕಿ, ನಿಪ್ಪಾಣಿ ಮಹಾರಾಷ್ಟ್ರಕ್ಕೆ ಸೇರಲೇಬೇಕು ಎಂದು ಆರು ದಶಕಗಳಿಂದ ಎಂಇಎಸ್, ಶಿವಸೇನೆ ಕಾರ್ಯಕರ್ತರು ಹೋರಾಟ ನಡೆಸಿದ್ದಾರೆ. ಇದಕ್ಕೆ ಸೆಡ್ಡು ಹೊಡೆದ ಅಲ್ಲಿನ ಕನ್ನಡಿಗರು ಕೂಡ, ಮಹಾರಾಷ್ಟ್ರದ ಐದು ಪ್ರಮುಖ ಜಿಲ್ಲೆಗಳಲ್ಲಿ ಕನ್ನಡಿಗರಿದ್ದು ಅವುಗಳನ್ನು ಕರ್ನಾಟಕಕ್ಕೆ ಸೇರಿಸಬೇಕು ಎಂಬ ಅಭಿಯಾನ ಆರಂಭಿಸಿದ್ದಾರೆ.

ಶನಿವಾರ ಇಡೀ ದಿನ ಈ ನಕಾಶೆ ವಾಟ್ಸ್‌ಆ್ಯಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂಗಳಲ್ಲಿ ಹರಿದಾಡಿತು. ಕನ್ನಡಿಗರೇ ಹೆಚ್ಚಾಗಿರುವ ಜತ್ತ ತಾಲ್ಲೂಕು ಕರ್ನಾಟಕದಲ್ಲಿ ಸೇರ್ಪಡೆ ಮಾಡುವಂತೆ ಅಲ್ಲಿನ ಕನ್ನಡಿಗರು ಒತ್ತಾಯಿಸಿದ್ದಾರೆ.



ಮಹಾರಾಷ್ಟ್ರ ಐದು ಜಿಲ್ಲೆಗಳನ್ನು ಸೇರಿಸಿ ಅಲ್ಲಿನ ಕನ್ನಡಿಗರು ಸಿದ್ಧಪಡಿಸಿದ ಕರ್ನಾಟಕದ ಹೊಸ ನಕಾಶೆ

ಶಿಂದೆಗೆ ತರಾಟೆ

ಮುಂಬೈ: 'ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿರುವ ಕಾರಣ ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗಡಿ ವಿವಾದವನ್ನು ಕೆದಕಿದ್ದಾರೆ' ಎಂದು ಶಿವಸೇನೆ ಅಧ್ಯಕ್ಷ ಉದ್ಧವ್ ಠಾಕ್ರೆ ಆರೋಪಿಸಿದ್ದಾರೆ.

ಗಡಿ ವಿವಾದ ಹಾಗೂ ಛತ್ರಪತಿ ಶಿವಾಜಿ ಮಹಾರಾಜ್ ಅವರಿಗೆ ಅವಮಾನಿಸಿದ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರ ಹೇಳಿಕೆ ಕುರಿತು ಶಿಂದೆ ಮೌನವಹಿಸಿದ್ದಾರೆ ಎಂದು ಟೀಕಿಸಿದ್ದಾರೆ.

ಪುಂಡಾಟಿಕೆ ನಿಯಂತ್ರಣಕ್ಕೆ ಆಗ್ರಹ

ಒಂದನೇ ಪುಟದಿಂದ

'ಪ್ರಜಾವಾಣಿ' ಜತೆ ಮಾತನಾಡಿದ ಗೃಹ ಸಚಿವ ಆರಗ ಜ್ಞಾನೇಂದ್ರ, 'ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರು ಮಹಾರಾಷ್ಟ್ರ ಸರ್ಕಾರದ ಮುಖ್ಯ ಕಾರ್ಯದರ್ಶಿ ಜತೆ ದೂರವಾಣಿ ಮೂಲಕ ಚರ್ಚಿಸಿದ್ದಾರೆ. ಮಹಾರಾಷ್ಟ್ರದಲ್ಲಿರುವ ಕನ್ನಡಿಗರು ಮತ್ತು ರಾಜ್ಯದಿಂದ ಅಲ್ಲಿಗೆ ಸಂಚರಿಸುವ ವಾಹನಗಳಿಗೆ ತೊಂದರೆ ಆಗದಂತೆ ರಕ್ಷಣೆ ಒದಗಿಸಬೇಕು ಎಂದು ಒತ್ತಾಯಿಸಿದ್ದಾರೆ' ಎಂದರು.

ಬಸ್ ಮೇಲೆ ಕಲ್ಲು ತೂರಾಟ ನಡೆಸಿರುವ ದುಷ್ಕರ್ಮಿಗಳ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆಯನ್ನು ಮಹಾರಾಷ್ಟ್ರ ಸರ್ಕಾರ ನೀಡಿದೆ. ಕರ್ನಾಟಕದಲ್ಲಿರುವ ಮರಾಠಿ ಭಾಷಿಕರು ಮತ್ತು ಮಹಾರಾಷ್ಟ್ರದಿಂದ ಬರುವ ವಾಹನಗಳಿಗೆ ತೊಂದರೆ ಆಗದಂತೆ ಎಚ್ಚರಿಕೆ ವಹಿಸುವ ಭರವಸೆಯನ್ನು ರಾಜ್ಯ ಸರ್ಕಾರವು ನೀಡಿದೆ ಎಂದು ತಿಳಿಸಿದರು.

ಪೊಲೀಸ್ ಅಧಿಕಾರಿಗಳ ಸಭೆ: ಹಿರಿಯ ಅಧಿಕಾರಿಗಳ ಸಭೆಯ ಬಳಿಕ ಎರಡೂ ರಾಜ್ಯಗಳ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆಯೂ ಗಡಿ ಭಾಗದಲ್ಲೇ ನಡೆದಿದೆ. ಕೊಲ್ಹಾಪುರದಲ್ಲಿ ನಡೆದ ಸಭೆಯಲ್ಲಿ ಅಲ್ಲಿನ ಐಜಿಪಿ, ಪೊಲೀಸ್ ಕಮಿಷನರ್ ಮತ್ತು ರಾಜ್ಯದ ಉತ್ತರ ವಲಯದ (ಬೆಳಗಾವಿ) ಐಜಿಪಿ ಹಾಗೂ ಬೆಳಗಾವಿ ನಗರ ಪೊಲೀಸ್ ಕಮಿಷನರ್ ಪಾಲ್ಗೊಂಡಿದ್ದರು ಎಂದು ಗೃಹ ಸಚಿವರು ಮಾಹಿತಿ ನೀಡಿದರು.

ಎರಡೂ ಕಡೆಯಿಂದಲೂ ಗಡಿ ಭಾಗದಲ್ಲಿ ಕಟ್ಟೆಚ್ಚರ ವಹಿಸುವ ತೀರ್ಮಾನವನ್ನು ಅಧಿಕಾರಿಗಳ ಸಭೆಯಲ್ಲಿ ಕೈಗೊಳ್ಳಲಾಗಿದೆ. ಪುಂಡಾಟಿಕೆ ನಡೆಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ ಎಂದರು.



ಪುಣೆಯಿಂದ ಅಥಣಿಗೆ ಶುಕ್ರವಾರ ರಾತ್ರಿ ಬರುತ್ತಿದ್ದ ವಾಯವ್ಯ ಕರ್ನಾಟಕ ಬಸ್ಸಿಗೆ ಮಹಾರಾಷ್ಟ್ರದ ಗಡಿಯಲ್ಲಿ ಕಿಡಿಗೇಡಿಗಳು ಕಲ್ಲು ತೂರಿ ಗಾಜು ಒಡೆದಿದ್ದಾರೆ

ರಾಜ್ಯದ ಯಾರೊಬ್ಬರೂ ಭಾವುಕರಾಗಿ ಪ್ರತಿಕ್ರಿಯಿಸಬಾರದು. ಯಾರೇ ಕಾನೂನು ಉಲ್ಲಂಘಿಸಿದರೂ ಸರ್ಕಾರ ಕಠಿಣ ಕ್ರಮ ಕೈಗೊಳ್ಳಲಿದೆ.

ಆರಗ ಜ್ಞಾನೇಂದ್ರ, ಗೃಹ ಸಚಿವ

ಜನರು ಶಾಂತಿ, ನೆಮ್ಮದಿ, ಅಭಿವೃದ್ಧಿ ಬಯಸುತ್ತಿದ್ದಾರೆ. ಹೀಗಿದ್ದಾಗ, ಗಡಿ ವಿಚಾರವಾಗಿ ನಾಯಕರು ಪ್ರಚೋದನಕಾರಿ ಹೇಳಿಕೆ ನೀಡುವುದು ಸರಿಯಲ್ಲ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಒಂದು ಭಾಷೆ, ಒಂದು ದೇಶ ಎನ್ನುವ ಬಿಜೆಪಿಯವರಿಗೆ ಬೆಳಗಾವಿ ಎಲ್ಲಿದ್ದರೇನು? ಗಡಿ ವಿಷಯದಲ್ಲಿ ಬಿಜೆಪಿ ಒಡೆದಾಳುವ ನೀತಿ ಅನುಸರಿಸುತ್ತಿದೆ.

ಎಚ್‌.ಡಿ.ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

50 ವರ್ಷದ ಹಿಂದೆ ಗಡಿ ಸಮೀಕ್ಷೆ ಆಗಿದೆ. ಮರಾಠಿಗರು ಹೆಚ್ಚಿದ್ದ ಕಡೆ ಕನ್ನಡಿಗರ ಸಂಖ್ಯೆ ಹೆಚ್ಚಿದೆ. ಆಗಾಗ್ಗೆ ಗಲಾಟೆ ನಡೆಯುತ್ತದೆ. ಇದಕ್ಕೆ ಮಹತ್ವ ನೀಡುವ ಅವಶ್ಯವಿಲ್ಲ.

ಸತೀಶ ಜಾರಕಿಹೊಳಿ
ಕೆಪಿಸಿಸಿ ಕಾರ್ಯಾಧ್ಯಕ್ಷ

ಕರ್ನಾಟಕದ ಬಸ್‌ಗೆ ಕಲ್ಲೆಸೆತ

ಕಾಗವಾಡ (ಬೆಳಗಾವಿ ಜಿಲ್ಲೆ): ಪುಣೆಯಿಂದ ಅಥಣಿಗೆ ಶುಕ್ರವಾರ ರಾತ್ರಿ ಬರುತ್ತಿದ್ದ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸಿಗೆ ಮಹಾರಾಷ್ಟ್ರದ ಗಡಿಯಲ್ಲಿ ಕೆಲ ಕಿಡಿಗೇಡಿಗಳು ಕಲ್ಲು ತೂರಿದ್ದಾರೆ. ಇದರಿಂದ ಬಸ್ಸಿನ ಮುಂಭಾಗದ ಗಾಜು ಹಾಗೂ ಎರಡು ಕಿಟಕಿ ಒಡೆದಿವೆ.

ಬಸ್ ಸಂಚರಿಸುವ ವೇಳೆಯೇ ಕತ್ತಲಲ್ಲಿ ರಸ್ತೆಗೆ ಅಡ್ಡಬಂದ ಕಿಡಿಗೇಡಿಗಳು ಕಲ್ಲು ತೂರಿ ಪರಾರಿಯಾದರು. ಬಸ್ಸಿನ ಚಾಲಕ ಕುಳಿತಿದ್ದ ಭಾಗದಲ್ಲಿ ಗಾಜು ಒಡೆಯಿತು. ಆದರೂ ಚಾಲಕ ವಾಹನ ನಿಲ್ಲಿಸದೇ ಸುರಕ್ಷಿತವಾಗಿ ದಾಟಿಸಿದರು. ಮೀರಜ್ ಮಾರ್ಗವಾಗಿ ಸಂಚರಿಸುವ ಕರ್ನಾಟಕದ ಎಲ್ಲ ಬಸ್ ಸಂಚಾರವನ್ನು ಶನಿವಾರದಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಆದರೆ, ಬೆಳಗಾವಿ ಮಾರ್ಗದಲ್ಲಿ ಶುಕ್ರವಾರ ನಿಲ್ಲಿಸಿದ್ದ ಬಸ್ ಸಂಚಾರ ಪುನಃ ಆರಂಭಿಸಲಾಗಿದೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 27-11-1997

● ವಿಜ್ಞಾನಿ ಅಬ್ದುಲ್ ಕಲಾಂಗೆ 'ಭಾರತ ರತ್ನ' ಪ್ರಶಸ್ತಿ

ನವದೆಹಲಿ, ನವೆಂಬರ್ 26 (ಪಿಟಿಐ, ಯುಎನ್‌ಐ)– ರಕ್ಷಣಾ ಸಚಿವರ ಸಲಹೆಗಾರರಾಗಿರುವ ವಿಜ್ಞಾನಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಗೆ ದೇಶದ ಅತ್ಯುನ್ನತ ಗೌರವವಾದ 'ಭಾರತ ರತ್ನ' ಪ್ರಶಸ್ತಿ ನೀಡಲಾಗಿದೆ.

ಈ ಬಗ್ಗೆ ರಾಷ್ಟ್ರಪತಿ ಭವನ ಸಂಜೆ ಪ್ರಕಟಣೆಯೊಂದನ್ನು ನೀಡಿದೆ.

ರಾಷ್ಟ್ರಪತಿ ಕೆ. ಆರ್. ನಾರಾಯಣನ್ ಅವರು ಅಬ್ದುಲ್ ಕಲಾಂ ಅವರಿಗೆ ಪ್ರಶಸ್ತಿ ನೀಡಿದ ಬಗ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ.

ದಿವಂಗತ ಡಾ. ಹೋಮಿ ಜಹಾಂಗೀರ್ ಬಾಬಾ ಅವರ ನಂತರ ಈ ಪ್ರತಿಷ್ಠಿತ ಪ್ರಶಸ್ತಿ ಪಡೆಯುತ್ತಿರುವ ಎರಡನೇ ವಿಜ್ಞಾನಿ ಇವರು.

50 ವರ್ಷಗಳ ಹಿಂದೆ

ಸೋಮವಾರ, 27-11-1972

● ಡಾ. ಶಂಕರದಯಾಳ ಶರ್ಮ ಮತ್ತೆ ಕಾಂಗ್ರೆಸ್ ಅಧ್ಯಕ್ಷ

ನವದೆಹಲಿ, ನವೆಂಬರ್ 26– ಡಾ. ಶಂಕರದಯಾಳ ಶರ್ಮ ಅವರು ಮತ್ತೆ ಎರಡು ವರ್ಷಗಳ ಅವಧಿಗೆ ಕಾಂಗ್ರೆಸ್ ಅಧ್ಯಕ್ಷರಾಗಿ ಇಂದು ಅವಿರೋಧವಾಗಿ ಪುನರಾಯ್ಕೆಗೊಂಡರು.

ಡಾ. ಶರ್ಮ ಅವರ ಹೆಸರೊಂದೇ ಸೂಚಿಸಲ್ಪಟ್ಟಿತ್ತು. ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಚುನಾವಣಾಧಿಕಾರಿ ಹೆನ್ರಿ ಆಸ್ಟಿನ್ ಅವರು ಡಾ. ಶರ್ಮ ಅವರು ಚುನಾಯಿತರಾದರೆಂದು ಘೋಷಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ನವೆಂಬರ್ 27, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ಚತುರ್ಥಿ ಗಂ. 16-26 ನಕ್ಷತ್ರ: ಪೂರ್ವಾಷಾಢ ಗಂ. 12-38 ಯೋಗ: ಗಂಡ ಗಂ. 21-33, ಕರಣ: ವಿಷ್ಟಿ ಗಂ. 16-26, ವೃಶ್ಚಿಕ ಮಾಸದ 10 ನೇ ದಿನ.
ರಾಹುಕಾಲ : ಸಾಯಂಕಾಲ 04-30 -06-00
ಸೂರ್ಯೋದಯ : 06-39 ಸೂರ್ಯಾಸ್ತ : 05-57 ಮುಸ್ಲಿಂ ದಿನಾಂಕ : 02
ಜುಮಾದುಲ್ಲಾವಲ್ ದಿನ ವಿಶೇಷ : ಮಹಾ ಚತುರ್ಥಿ, ಅಡ್ವೆಂಟ್ ಮೊದಲ ಭಾನುವಾರ (ಕ್ರಿಶ್ಚಿಯನ್) ಅದೃಷ್ಟ ಸಂಖ್ಯೆ : 8, 10

ಮೇಷ: ಕೌಟುಂಬಿಕ ವಿಷಯಗಳನ್ನು ತಂದೆಯೊಡನೆ ಚರ್ಚಿಸಿ ನಂತರದಲ್ಲಿ ತೀರ್ಮಾನಕ್ಕೆ ಬರುವುದು ಒಳ್ಳೆಯದು. ಅಭಿಪ್ರಾಯ ವಿನಿಮಯಗಳಿಂದ ಮನಸ್ಸಿಗೆ ನೆಮ್ಮದಿ ಮೂಡುವುದು. ಮಾನಸಿಕ ಸ್ಥೈರ್ಯ ಹೆಚ್ಚಲಿದೆ.

ವೃಷಭ: ಬಹುಕಾಲದಿಂದ ಅನುಭವಿಸುತ್ತಿರುವ ರೋಗಬಾಧೆಯು ಚೇತರಿಕೆಯ ಮೆಟ್ಟಿಲನ್ನು ನೋಡಲಿದೆ. ದಲ್ಲಾಳಿಗಳಿಗೆ ಮತ್ತು ವೃತ್ತಿ ವ್ಯಾಪಾರಗಳಲ್ಲಿ ಮುನ್ನುಗ್ಗಿ ಕೆಲಸ ಮಾಡುವವರ ಕನಸುಗಳು ನನಸಾಗಲಿವೆ.

ಮಿಥುನ: ಮನುಷ್ಯ ಪ್ರಯತ್ನದ ಜೊತೆಯಲ್ಲಿ ದೇವಬಲ ದೊರಕಿಸಿಕೊಂಡರೆ ಕನಸು ನನಸಾಗುವುದು. ಅತೀ ಖರ್ಚು ಮಾಡುವ ಮನಸ್ಥಿತಿಯವರಾದ ನಿಮಗೆ ಹಣದ ಮೌಲ್ಯ ಅರಿವಾಗುವುದು. ವಿದ್ಯುತ್ ಉಪಕರಣ ಬಳಕೆಯಲ್ಲಿ ಜಾಗ್ರತೆ.

ಕರ್ಕಾಟಕ: ಇಂದು ನಿಮ್ಮ ವಾಕ್ಚಾತುರ್ಯವನ್ನು ಪ್ರದರ್ಶಿಸಲು ಸುವರ್ಣಾವಕಾಶ ಲಭಿಸುವುದು. ಧೈರ್ಯದಿಂದ ನಿಮ್ಮ ವಾದವನ್ನು ಮಂಡಿಸುವಲ್ಲಿ ಯಶಸ್ವಿಯಾಗುವಿರಿ. ಅನಗತ್ಯ ಚಿಂತೆಗಳನ್ನು ಮೈಮೇಲೆ ಎಳೆದುಕೊಳ್ಳಬೇಡಿ.

ಸಿಂಹ: ಸಾಮಾಜಿಕ ಚಟುವಟಿಕೆಗಳಲ್ಲಿ ನಿಮ್ಮ ಕೊಡುಗೆ ಎಲ್ಲರ ಪ್ರಶಂಸೆಗೆ ಪಾತ್ರವಾಗುವುದು. ಭಾವನಾತ್ಮಕ ಸಂಬಂಧಗಳಿಂದ ದೂರ ಉಳಿಯುವ ಸ್ಥಿತಿ. ಕಾಫಿ ಬೆಳೆಗಾರರಿಗೆ ಉತ್ತಮ ಆದಾಯ.

ಕನ್ಯಾ: ನಿಮ್ಮ ಮಗನ ಅನಿರೀಕ್ಷಿತ ಬದಲಾವಣೆ ನಿಮಗೆ ಅಚ್ಚರಿ ತರುತ್ತದೆ. ಬಂಧುಗಳ ಸಹಕಾರ ಮನೋಭಾವ ನೆಮ್ಮದಿ ತರುತ್ತದೆ. ಭಯ-ಭೀತಿಯಿಂದ ಹೊರಬರುವಂತಾಗುವುದು. ಚಿತ್ರ ನಿರ್ಮಾಪಕರಿಗೆ ಹೊಸ ಹುರುಪು.

ತುಲಾ: ಭವಿಷ್ಯದ ಭದ್ರತೆ ಕುರಿತಾದ ನಿಮ್ಮ ಕಾಳಜಿ ಕುಟುಂಬದ ಸದಸ್ಯರಿಗೆ ಸಂತೃಪ್ತಿ ತಂದು ಕೊಡಲಿದೆ. ನಿಮ್ಮ ಮನೋಭಿಲಾಷೆಯಂತೆ ನಿಶ್ಚಯಿಸಿದ ಕಾರ್ಯ ಸಾಗುವುದು. ಜೀವನದಲ್ಲಿ ಹೊಸ ಅಧ್ಯಾಯ ಸೃಷ್ಟಿಯಾಗುತ್ತದೆ.

ವೃಶ್ಚಿಕ: ಕುಟುಂಬದ ಸದಸ್ಯರಿಂದ ಒಂದು ಶುಭ ಸುದ್ದಿಯನ್ನು ಕೇಳುವಿರಿ. ಈ ಹಿಂದಿನ ದಿನಗಳಲ್ಲಿ ವಿಪರೀತ ಕೆಲಸಗಳಿಂದ ದೇಹಾಲಸ್ಯ ತೋರಿ ಈ ದಿನ ವಿಶ್ರಾಂತಿಯ ಬದುಕನ್ನು ಬಯಸುವಿರಿ. ಕಾಫಿ ಬೆಳೆಗಾರರಿಗೆ ಲಾಭ ಸಿಗುವುದು.

ಧನು: ವಿದ್ಯಾಭ್ಯಾಸದಲ್ಲಿ ಉದಾಸೀನ ತೋರುತ್ತಿದ್ದ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಹೆಚ್ಚಿನ ಆಸಕ್ತಿ ಉಂಟಾಗಲಿದೆ. ಕುಲದೇವತಾ ದರ್ಶನ ಹಾಗೂ ದೇವರ ಸೇವೆಗಳಿಂದ ಮತ್ತಷ್ಟು ಶುಭ ಫಲವನ್ನು ಪಡೆಯಬಹುದು.

ಮಕರ: ತಂದೆ-ತಾಯಿಯ ಆಶೀರ್ವಾದದೊಂದಿಗೆ ಈ ದಿನ ಪ್ರಾರಂಭಿಸಿ. ಕುಟುಂಬದಲ್ಲಿ ಮಾನಸಿಕ ಸಮಾಧಾನ ದೊರೆತು ಅನುಕೂಲ ವಾತಾವರಣದ ಅನುಭವ ದೊರಕಲಿದೆ. ಸಂಘ-ಸಂಸ್ಥೆಯಲ್ಲಿ ಸ್ಥಾನಮಾನ ಲಭ್ಯವಾಗುವುದು.

ಕುಂಭ: ನಿಮಗೆ ಎದುರಾಗಿ ಬರುತ್ತಿರುವ ಅವಕಾಶವನ್ನು ವ್ಯರ್ಥವಾಗದಂತೆ ಪಡೆದುಕೊಳ್ಳಲು ಪ್ರಯತ್ನಪಡುವುದು ಅಗತ್ಯ. ರಿಯಲ್ ಎಸ್ಟೇಟ್ ಕಸುಬುದಾರರು ಹೆಚ್ಚಿನ ಬಂಡವಾಳ ತೊಡಗಿಸಲು ಈ ದಿನ ಸಮಂಜಸವಲ್ಲ.


ಮೀನ: ಈ ದಿನ ಹೊಸ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ವಿಫಲರಾಗುವಿರಿ. ಪಾಲುದಾರಿಕೆ ಅನಿವಾರ್ಯವಾಗಿ ಸಂಕಷ್ಟದ ಪರಿಸ್ಥಿತಿಯಲ್ಲಿ ಕುಟುಂಬ ಇರಲಿದೆ. ದೇವಿಯ ಆರಾಧನೆಯಿಂದ ನೆಮ್ಮದಿ.

ಪದಬಂಧ 5151

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಹುತಿಯಾಗುವ ಪ್ರಾಣಿ (4)
3.ಪದಾರ್ಥಗಳನ್ನು ಮಾರುವ ಸ್ಥಳ (3)
4.ಬೆನ್ನೆಲುಬು ಇರುವ ಪ್ರಾಣಿ (4)
6.ಏಳು ದಿನಗಳ ಅವಧಿ (2)
7.ಯಾವ ಕಳಂಕವೂ ಇಲ್ಲದ್ದು (4)
8.ಕಾಡಿನಲ್ಲಿರುವ ಅಡ್ಡೆ! (3)
9.ಪರವಾಗಿ ದಾರ ಹಿಡಿದು ಪೇಚಾಡು! (4)
12.ಒಡಂಬಡಿಕೆಯಿಲ್ಲಿ ಉಲ್ಟಾ ಆಗಿಬಿಟ್ಟಿದೆ (2)
13.ಮರ ಕೊಯ್ಯಲು ಬಳಸುವ ಹಲ್ಲುಗಳುಳ್ಳ ಆಯುಧ (4)
15.ಹರಾಜು ನಡೆಯುವ ಜಾಗದಲ್ಲಿದೆಯಲ್ಲಾ ಈ ಹಡಗು! (3)
16.ಕನ್ನಡಿಗ ಮಾಡಿಕೊಂಡಿರುವ ಎಕ್ಸ್‌ಚೇಂಜ್! (4)

ಮೇಲಿಂದ ಕೆಳಕ್ಕೆ
1.ಬರದಲ್ಲಿಯೂ ತೋರುತ್ತಿರುವ ಡೌಲು! (4)
2.ಶುನಕದ ಬಳಿ ಹಾರಿದ ಗಿಣಿ (2)
3.ಪಾದದ ಹೆಬ್ಬೆರಳು (3)
5.ಕಲೆಸಿದ ಗೋಧಿ ಹಿಟ್ಟು (3)
7.ಹನ್ನೆರಡು ಅಂಗುಲದ ಅಳತೆ (2)
8.ಕಾದಾಡುತ್ತಲೇ ಪ್ರವೇಶಿಸಿದ ಅರಣ್ಯ (2)
9.ಹೂವಿನ ಹುಡಿಯಿದು (3)
10.ರಾಜ ನಡುವಿದಾಗಲೇ ಈ ಸೋಲು! (4)
11.ಕೋಟೆಯ ಮೇಲಿನ ಕೊತ್ತಳ (3)
14.ಸವಿಸ್ತಾರದಲ್ಲಿರುವ ರುಚಿ! (2)



5150ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಣಕ 3.ಸಂಧಾನ
5.ತಲೆತಿರುಕ 6.ಲೇಖ
8.ಸಂತ 9.ನಾರು
10.ಷರಾ 14.ಧರ್ಮಬಾಹಿರ
15.ಳರುಮ 16.ಕಲ್ಯಾಣ

ಮೇಲಿಂದ ಕೆಳಕ್ಕೆ:
1.ಕರೆಯೋಲೆ 2.ಕಠಹಂ
3.ಸಂಕಟ 4.ನವಜಾತ
7.ಅತ್ತರು 8.ಸಂತೋಷ
9.ನಾರಿಕೇಳ 11.ರಾಮಾಯಣ
12.ಅಧಮ 13.ಚರಕ

ಸುಡೊಕು 5537

	8			7			4	
		4	6		8			9
7				1		8		
					4	6	7	
6		1	7		2			4
								1
				6		5		
	3	6	2		5			7
8		5		4			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5536 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚಿಲುಮೆ ಸಂಸ್ಥೆ ಸಿಬ್ಬಂದಿಗೆ ಮತದಾರರ ಸಮೀಕ್ಷೆಗೆ ಗುರುತಿನ ಚೀಟಿ ನೀಡಿದ್ದ ಆರೋಪ

ಬಿಬಿಎಂಪಿ ನಾಲ್ವರು ಅಧಿಕಾರಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ವೈಯಕ್ತಿಕ ಮಾಹಿತಿ ಕಳವು ಹಾಗೂ ದುರ್ಬಳಕೆ ಪ್ರಕರಣದಲ್ಲಿ ಬಿಬಿಎಂಪಿಯ ನಾಲ್ವರು ಅಧಿಕಾರಿಗಳನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಶನಿವಾರ ಸಂಜೆ ಬಂಧಿಸಿದ್ದಾರೆ.

'ಶಿವಾಜಿನಗರದ ಕಂದಾಯ ಅಧಿಕಾರಿ ಸುಹೇಲ್ ಅಹಮದ್, ಮಹದೇವಪುರದ ಕಂದಾಯ ಅಧಿಕಾರಿ ಕೆ.ಚಂದ್ರಶೇಖರ್, ಚಿಕ್ಕಪೇಟೆಯ ಉಪ ಕಂದಾಯ ಅಧಿಕಾರಿ ವಿ.ಬಿ. ಭೀಮಾಶಂಕರ್ ಮತ್ತು ರಾಜರಾಜೇಶ್ವರಿ ನಗರದ ಕಂದಾಯ ಅಧಿಕಾರಿ ಮಹೇಶ್ ಅವರನ್ನು ಬಂಧಿಸಲಾಗಿದೆ. ಇವರು ಆರೋಪಿಗಳಿಗೆ ಗುರುತಿನ ಚೀಟಿ ಮಾಡಿಕೊಟ್ಟಿದ್ದಕ್ಕೆ ಪುರಾವೆಗಳು ಸಿಕ್ಕಿವೆ' ಎಂದು ಮೂಲಗಳು ಹೇಳಿವೆ.

'ಈ ನಾಲ್ವರು ಮತದಾರರ ನೋಂದಣಾಧಿಕಾರಿಗಳಾಗಿ ಕೆಲಸ ಮಾಡಿದ್ದರು. ತಮ್ಮ ವ್ಯಾಪ್ತಿಯ ಮತದಾರರ ಪಟ್ಟಿ ಪರಿಷ್ಕರಣೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಹಾಗೂ ಆಧಾರ್ ಸಂಖ್ಯೆ ಜೋಡಣೆ ಕೆಲಸಕ್ಕಾಗಿ ಚಿಲುಮೆ ಸಂಸ್ಥೆಯ ಸಿಬ್ಬಂದಿಗೆ ಬಿಎಲ್‌ಒ ಗುರುತಿನ ಚೀಟಿಗಳನ್ನು ಮಾಡಿಕೊಟ್ಟಿದ್ದರು' ಎಂದು ಮೂಲಗಳು ವಿವರಿಸಿವೆ.

'ಬಂಧಿತ ಆರೋಪಿಗಳ ಹೇಳಿಕೆ ಆಧರಿಸಿ ನಾಲ್ವರಿಗೆ ನೋಟಿಸ್ ನೀಡಿ ಇತ್ತೀಚೆಗೆ ವಿಚಾರಣೆ ನಡೆಸಲಾಗಿತ್ತು. ನಾಲ್ವರ ಹೇಳಿಕೆ ಪರಿಶೀಲಿಸಿದಾಗ, ಪ್ರಕರಣದಲ್ಲಿ ಅವರೂ ಭಾಗಿಯಾಗಿರುವ ಮಾಹಿತಿ ಲಭ್ಯವಾಗಿತ್ತು. ಹೀಗಾಗಿ, ನಾಲ್ವರನ್ನೂ ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಹಿರಿಯ ಅಧಿಕಾರಿಗಳೂ ಭಾಗಿ: ಪ್ರಕರಣದಲ್ಲಿ ಬಿಬಿಎಂಪಿ ಹಿರಿಯ ಅಧಿಕಾರಿಗಳು ಭಾಗಿಯಾಗಿರುವ ಅನುಮಾನ ವ್ಯಕ್ತವಾಗಿದ್ದು, ಇದಕ್ಕೆ ಸಂಬಂಧಪಟ್ಟ ಪುರಾವೆಗಳಿಗಾಗಿ ಪೊಲೀಸರು ಹುಡುಕಾಟ ಆರಂಭಿಸಿದ್ದಾರೆ.

ಪೊಲೀಸರು ಚಿಲುಮೆ ಸಂಸ್ಥೆಯ ಸಂಸ್ಥಾಪಕ ರವಿಕುಮಾರ್ ಹಾಗೂ ಇತರರನ್ನು ಬಂಧಿಸಿ ವಿಚಾರಣೆ ಮುಂದುವರಿಸಿದ್ದಾರೆ. ಜೊತೆಗೆ, ಬಿಬಿಎಂಪಿ ಕಿರಿಯ ಅಧಿಕಾರಿಗಳನ್ನು ವಿಚಾರಣೆ ನಡೆಸಿ ಹೇಳಿಕೆ ಪಡೆಯುತ್ತಿದ್ದಾರೆ.

'ಆರೋಪಿಗಳ ಮೊಬೈಲ್ ಕರೆ ವಿವರ ಸಂಗ್ರಹಿಸಲಾಗಿದೆ. ಬಿಬಿಎಂಪಿಯ ಹಲವು ಅಧಿಕಾರಿಗಳ ಜೊತೆ ಮಾತುಕತೆ ನಡೆಸಿರುವುದು ಗೊತ್ತಾಗುತ್ತಿದೆ. ಜಪ್ತಿ ಮಾಡಿರುವ ಮೊಬೈಲ್‌ನಲ್ಲೂ ಕೆಲ ಮಾಹಿತಿಗಳು ಲಭ್ಯವಾಗಿವೆ. ಹಿರಿಯ ಅಧಿಕಾರಿಗಳು ಭಾಗಿಯಾಗಿರುವ ಶಂಕೆ ಇದ್ದು, ಸಾಕ್ಷ್ಯ ಸಿಕ್ಕ ಬಳಿಕವೇ ಮುಂದಿನ ಕ್ರಮ' ಎಂದು ಹೇಳಿವೆ.

ಏನಾದರೂ ಆದರೆ ನೋಡಿಕೊಳ್ಳುವೆ: 'ಕಿರಿಯ ಅಧಿಕಾರಿಯೊಬ್ಬರಿಗೆ ಕರೆ ಮಾಡಿದ್ದ ಹಿರಿಯ ಅಧಿಕಾರಿ, 'ಚಿಲುಮೆ ಸಂಸ್ಥೆಯವರಿಗೆ ಗುರುತಿನ ಚೀಟಿ ಕೊಟ್ಟು, ಸಮೀಕ್ಷೆಗೆ ಅನುಕೂಲ ಮಾಡು. ಏನಾದರೂ ಆದರೆ ನೋಡಿಕೊಳ್ಳುವೆ' ಎಂದು ಹೇಳಿದ್ದರು. ಈ ಸಂಗತಿ ಕಿರಿಯ ಅಧಿಕಾರಿಗಳ ವಿಚಾರಣೆಯಿಂದ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

'ವೈಯಕ್ತಿಕ ದ್ವೇಷದಿಂದಲೂ ಹೇಳಿಕೆ ನೀಡುವ ಸಾಧ್ಯತೆ ಇರುತ್ತದೆ. ಹೀಗಾಗಿ, ಎಲ್ಲ ಹೇಳಿಕೆಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ತಿಳಿಸಿವೆ.

ಗುರುತಿನ ಚೀಟಿ ಕೊಡಿಸಿದ್ದ ಮಧ್ಯವರ್ತಿ ಬಂಧನ

ಬಿಬಿಎಂಪಿ ಅಧಿಕಾರಿಗಳ ಸಹಿ, ಮೊಹರು ಇದ್ದ ಬಿಎಲ್‌ಒ ಗುರುತಿನ ಚೀಟಿಗಳನ್ನು ಚಿಲುಮೆ ಸಂಸ್ಥೆಗೆ ಕೊಡಿಸುತ್ತಿದ್ದ ಆರೋಪದಡಿ ಶಿವಕುಮಾರ್ ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಶಿವಕುಮಾರ್, ಬಿಬಿಎಂಪಿ ಅಧಿಕಾರಿಗಳು ಹಾಗೂ ಚಿಲುಮೆ ಸಂಸ್ಥೆ ನಡುವೆ ಮಧ್ಯವರ್ತಿಯಾಗಿದ್ದ. ರವಿಕುಮಾರ್, ಲೋಕೇಶ್ ಜೊತೆಗೆ ಒಡನಾಟ ಹೊಂದಿದ್ದ. ಚಿಲುಮೆ ಸಂಸ್ಥೆಯ ಕೃತ್ಯಕ್ಕೂ ಸಹಕರಿಸುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಂಧಿತರ ಹೇಳಿಕೆ ಆಧರಿಸಿ ಪುರಾವೆ ಕಲೆಹಾಕಲಾಗಿತ್ತು. ಶಿವಕುಮಾರ್‌ನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುವುದು' ಎಂದು ಮೂಲಗಳು ತಿಳಿಸಿವೆ.

28 ಕ್ಷೇತ್ರಗಳಲ್ಲಿಯೂ ಕ್ರಮ ಕೈಗೊಳ್ಳಬೇಕು– ಕಾಂಗ್ರೆಸ್

ಬೆಂಗಳೂರು: 'ಬಿಜೆಪಿಯವರು ಸೋಲಿನ ಭಯದಿಂದ ಖಾಸಗಿ ಸಂಸ್ಥೆಯ ಮೂಲಕ ಮತದಾರರ ಮಾಹಿತಿ ಕಳವು ಮಾಡಿದ್ದಾರೆ. ಇದರ ಹಿಂದೆ ದೊಡ್ಡ ಸಂಚಿದೆ. ಬೆಂಗಳೂರಿನ 28 ಕ್ಷೇತ್ರಗಳಲ್ಲೂ ಕ್ರಮ ಜರುಗಿಸಲು ಕೇಂದ್ರ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸುತ್ತೇನೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅವರು, 'ಮುಖ್ಯಮಂತ್ರಿ ಮತ್ತು ಜಿಲ್ಲಾ ಮುಖ್ಯ ಚುನಾವಣಾ ಅಧಿಕಾರಿ ಗಮನಕ್ಕೆ ಬಾರದೆ ಈಗ ಅಮಾನತುಗೊಂಡಿರುವ ಇಬ್ಬರು ಅಧಿಕಾರಿಗಳು ಮಾಹಿತಿ ಕಳವು ಮಾಡಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಅಕ್ರಮ ನಡೆದಿರುವ ಕಾರಣಕ್ಕೆ ಈಗ ಚುನಾವಣಾ ಆಯೋಗ ಕ್ರಮ ಕೈಗೊಂಡಿದೆ.ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಾನು ಸಿ.ಎಂ ಆಗಿದ್ದ ಅವಧಿ ಸೇರಿದಂತೆ ಎಲ್ಲ ಪ್ರಕರಣಗಳನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಲಿ' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, 'ಸಚಿವರು, ಶಾಸಕರು ಭಾಗಿಯಾಗದೆ ಅಕ್ರಮ ನಡೆಯಲು ಸಾಧ್ಯವಿಲ್ಲ. ಎಲ್ಲ 28 ಕ್ಷೇತ್ರಗಳಲ್ಲಿಯೂ ಮತದಾರರ ಪಟ್ಟಿ ಮರುಪರಿಷ್ಕರಣೆ ಆಗಬೇಕು' ಎಂದು ಆಗ್ರಹಿಸಿದರು.

'ಸೋಲುವ ಭೀತಿಯಲ್ಲಿ ಬಿಜೆಪಿ ಸರ್ಕಾರ ಮತದಾನ ಹಕ್ಕು ಕಸಿಯುವ ಪ್ರಯತ್ನ ಮಾಡುವುದಾದರೆ ಇಂಥ ಭ್ರಷ್ಟ, ದುಷ್ಟ ಸರ್ಕಾರವನ್ನು ಜನ ಕ್ಷಮಿಸಬಾರದು' ಎಂದು ಅಭಿಪ್ರಾಯಪಟ್ಟರು.

ಆಯೋಗದ ಕ್ರಮಕ್ಕೆ ಸ್ವಾಗತ: ಸಿಎಂ

ಬೆಂಗಳೂರು: 'ಮತದಾರರ ಮಾಹಿತಿ ಕಳವು ಪ್ರಕರಣ ಸಂಬಂಧ ಕೇಂದ್ರ ಚುನಾವಣಾ ಆಯೋಗ ಕೈಗೊಂಡಿರುವ ಕ್ರಮಗಳನ್ನು ಸರ್ಕಾರ ಸ್ವಾಗತಿಸುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, '3 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತ್ತೆ ಪಟ್ಟಿ ಪರಿಶೀಲನೆಗೆ ಆಯೋಗ ಆದೇಶಿಸಿದೆ. ಪರಿಷ್ಕರಣೆ ಅವಧಿಯನ್ನೂ ವಿಸ್ತರಿಸಿದೆ. ಇವು ಸ್ವಾಗತಾರ್ಹ' ಎಂದರು.

ರಾಜ್ಯ ಸರ್ಕಾರ ಮುಕ್ತ ತನಿಖೆಗೆ ಅವಕಾಶ ಕಲ್ಪಿಸಿದೆ. ಹಲವರ ಬಂಧನವಾಗಿದ್ದು, ವಿಚಾರಣೆ ನಡೆಯುತ್ತಿದೆ. ಯಾವುದೇ ಅಧಿಕಾರಿ, ವ್ಯಕ್ತಿ ತಪ್ಪುಮಾಡಿದ್ದರೂ ಪತ್ತೆಹಚ್ಚಿ, ಶಿಕ್ಷೆಗೆ ಗುರಿಪಡಿಸಲು ತನಿಖೆಗೆ ಆದೇಶಿಸಲಾಗಿತ್ತು ಎಂದರು. ಮತದಾರರ ಪಟ್ಟಿಯಿಂದ ಕೈಬಿಟ್ಟಿರುವ ಹೆಸರುಗಳ ಜತೆಯಲ್ಲಿ ಒಂದಕ್ಕಿಂತ ಹೆಚ್ಚು ಕಡೆ ಒಬ್ಬನೇ ವ್ಯಕ್ತಿಯ ಹೆಸರು ಇರುವ ಬಗ್ಗೆಯೂ ಪರಿಶೀಲನೆ ನಡೆಯಲಿದೆ ಎಂದರು.

'ಐಎಎಸ್' ಶ್ರೀನಿವಾಸ್, ಎಸ್. ರಂಗಪ್ಪ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಎಎಸ್ ಅಧಿಕಾರಿಗಳಾದ ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ಮತ್ತು ಬಿಬಿಎಂಪಿ ವಿಶೇಷ ಆಯುಕ್ತ ಎಸ್. ರಂಗಪ್ಪ ಅವರನ್ನು ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಅಮಾನತುಗೊಳಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶನಿವಾರ ಆದೇಶ ಹೊರಡಿಸಿದೆ.

ಚಿಲುಮೆ ಸಂಸ್ಥೆಯು ಮತದಾರರ ಪಟ್ಟಿ ಪರಿಷ್ಕರಣೆ ಹೆಸರಿನಲ್ಲಿ ಮತದಾರರ ಮಾಹಿತಿ ಕಳವು ಮಾಡಿರುವ ಆರೋಪಕ್ಕೆ ಸಂಬಂಧಿಸಿ ಕೇಂದ್ರ ಚುನಾವಣಾ ಆಯೋಗ ಶುಕ್ರವಾರ ಹಲವು ಕ್ರಮಗಳನ್ನು ಕೈಗೊಂಡಿತ್ತು.

ಮಹದೇವಪುರ ವಿಧಾನಸಭಾ ಕ್ಷೇತ್ರದ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಯಾಗಿದ್ದ ಕೆ.ಶ್ರೀನಿವಾಸ್ ಹಾಗೂ ಶಿವಾಜಿನಗರ ಮತ್ತು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಗಳ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಯಾಗಿದ್ದ ಎಸ್. ರಂಗಪ್ಪ ಅವರನ್ನು ಸೇವೆಯಿಂದ ಅಮಾನತು ಮಾಡಿ, ಇಲಾಖಾ ವಿಚಾರಣೆ ನಡೆಸುವಂತೆ ಆಯೋಗವು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿತ್ತು.

ಇಬ್ಬರೂ ಅಧಿಕಾರಿಗಳನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತುಗೊಳಿಸಿದೆ. ಅಮಾನತಿನ ಅವಧಿಯಲ್ಲಿ ಲಿಖಿತ ಅನುಮತಿ ಇಲ್ಲದೆ ಕೇಂದ್ರಸ್ಥಾನ ತೊರೆಯದಂತೆ ಇಬ್ಬರಿಗೂ ನಿರ್ಬಂಧ ವಿಧಿಸಲಾಗಿದೆ.

ಶಿವಾಜಿನಗರ, ಚಿಕ್ಕಪೇಟೆ ಮತ್ತು ಮಹದೇವಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಖಾಸಗಿ ವ್ಯಕ್ತಿಗಳಿಗೆ ಮತಗಟ್ಟೆ ಹಂತದ ಅಧಿಕಾರಿಗಳು (ಬಿಎಲ್‌ಒ/ಬಿಎಲ್‌ಸಿ) ಎಂದು ಗುರುತಿನ ಚೀಟಿ ವಿತರಿಸಿರುವುದು ಪೊಲೀಸ್ ತನಿಖೆಯಲ್ಲಿ ಪತ್ತೆಯಾಗಿದೆ.

ಈ ಕ್ಷೇತ್ರಗಳಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ನಡೆದಿರುವ ಎಲ್ಲ ಪ್ರಕ್ರಿಯೆಗಳನ್ನು ಸಮಗ್ರವಾಗಿ ಪರಿಶೀಲನೆ ನಡೆಸುವಂತೆ ಆಯೋಗ ಶುಕ್ರವಾರ ಆದೇಶ ಹೊರಡಿಸಿತ್ತು. ಲೋಪ ತಡೆಯುವಲ್ಲಿ ವಿಫಲರಾದ ಆರೋಪದ ಮೇಲೆ ಇಬ್ಬರೂ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳನ್ನು ಅಮಾನತು ಮಾಡುವಂತೆ ಸೂಚಿಸಿತ್ತು.

ಸ್ಯಾಟಲೈಟ್ ಫೋನ್ ಕಾಡಿನಲ್ಲಿ ಶೋಧ

ಉಜಿರೆ (ದಕ್ಷಿಣ ಕನ್ನಡ): ಬೆಳ್ತಂಗಡಿ ತಾಲ್ಲೂಕಿನ ಬೆಂದ್ರಾಳ ಪ್ರದೇಶದಲ್ಲಿ ಇದೇ 18ರಂದು ಸಂಜೆ 5 ಗಂಟೆಗೆ ನಿಷೇಧಿತ ಸ್ಯಾಟಲೈಟ್ ಫೋನ್ ಬಳಸಿ ಸಂವಹನ ನಡೆದಿದೆ ಎನ್ನಲಾಗಿದ್ದು, ಇದರ ಕುರಿತು ಹೆಚ್ಚಿನ ಕುರುಹುಗಳ ಪತ್ತೆಗಾಗಿ ಆಂತರಿಕ ಭದ್ರತಾ ಇಲಾಖೆ ಮತ್ತು ಸ್ಥಳೀಯ ಪೊಲೀಸ್ ಸಿಬ್ಬಂದಿ ಕಾಡಿನಲ್ಲಿ ಶೋಧ ನಡೆಸಿದ್ದಾರೆ.

ಸಂವಹನಕ್ಕೆ ಸ್ಯಾಟಲೈಟ್ ಫೋನ್ ಬಳಸಿದ ಸ್ಥಳವು ಬೆಂದ್ರಾಳದ ಕಾಡಿನಲ್ಲಿದೆ ಎಂದು ಆಂತರಿಕ ಭದ್ರತಾ ವಿಭಾಗದ ಅಧಿಕಾರಿಗಳಿಗೆ ಮಾಹಿತಿ ಸಿಕ್ಕಿದೆ. ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಆಂತರಿಕ ಭದ್ರತಾ ಇಲಾಖೆಯ ಎಸ್.ಐ ಚಿದಾನಂದ್ ನೇತೃತ್ವದ ತಂಡವು ಬೆಂದ್ರಾಳ ಪ್ರದೇಶಕ್ಕೆ ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು.

ಇಬ್ಬರು ಮಹಿಳಾ ವೈದ್ಯರ ಅಮಾನತು

ಹೆರಿಗೆಗೆ ₹6 ಸಾವಿರ ಲಂಚಕ್ಕೆ ಬೇಡಿಕೆ: ಭೇದ ಮಾಡಲಾಗದು ಎಂದಿದ್ದ ವೈದ್ಯರು!

ಪ್ರಜಾವಾಣಿ ವಾರ್ತೆ


ಡಾ. ಶಶಿಕಲಾ


ಡಾ. ಐಶ್ವರ್ಯ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬಿಡದಿ/ರಾಮನಗರ: ಬಿಡದಿಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹೆರಿಗೆ ಮಾಡಿಸಿದ ವೈದ್ಯರು ₹6 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟ ವಿಡಿಯೊ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪ್ರಕರಣದ ಸಂಬಂಧ ಇಬ್ಬರು ವೈದ್ಯರನ್ನು ಆರೋಗ್ಯ ಇಲಾಖೆ ಅಮಾನತು ಮಾಡಿದೆ.

ಬಿಡದಿಯ ಸಮುದಾಯ ಆರೋಗ್ಯ ಕೇಂದ್ರದ ಪ್ರಸೂತಿ ತಜ್ಞರಾದ ಡಾ. ಶಶಿಕಲಾ ಮತ್ತು ಡಾ. ಐಶ್ವರ್ಯ ಅಮಾನತುಗೊಂಡವರು.

ಬಿಡದಿಯ ಮಂಜುನಾಥ್ ಅವರ ಪತ್ನಿ ರೂಪಾ ಅವರಿಗೆ ಬಿಡದಿ ಆರೋಗ್ಯ ಕೇಂದ್ರದಲ್ಲಿ ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆ ಮಾಡಿಸಲಾಗಿತ್ತು. ಬಾಣಂತಿ ಬಿಡುಗಡೆ ವೇಳೆಗೆ ವೈದ್ಯರು ₹6 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಭೇದ ಮಾಡಲು ಆಗದು: 'ನನ್ನ ಬಳಿ ₹2 ಸಾವಿರ ಮಾತ್ರ ಇದೆ' ಎಂದು ಮಂಜುನಾಥ್ ಹೇಳುತ್ತಾರೆ. ಆದರೆ ವೈದ್ಯರು, 'ಮೂರು ಜನರಿಗೂ ತಲಾ ₹2 ಸಾವಿರ ಕೊಡಬೇಕು. ನೀವು ಬರೀ ₹2 ಸಾವಿರ ಕೊಟ್ಟರೆ ನಾವು ಎಲ್ಲರಿಗೂ ₹500 ಹಂಚಲು ಆಗಲ್ಲ. ನೀವೊಬ್ಬರು ಹೀಗೆ ಮಾಡಿದರೆ ವಾರ್ಡಿನಲ್ಲಿರುವ ಎಲ್ಲರೂ ಹಾಗೇ ಮಾಡುತ್ತಾರೆ. ನಾವು ಹಾಗೆಲ್ಲ ಭೇದ ಮಾಡಲು ಆಗದು' ಎಂದು ವೈದ್ಯರು ಹೇಳುತ್ತಾರೆ. ಈ ಎಲ್ಲವನ್ನೂ ಮಂಜುನಾಥ್ ಮೊಬೈಲ್ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ.

ಅಧಿಕಾರಿಗಳಿಂದ ತನಿಖೆ: ಲಂಚಕ್ಕೆ ಬೇಡಿಕೆಯಿಟ್ಟ ವಿಡಿಯೊ ಹರಿದಾಡಿದ ಬೆನ್ನಲ್ಲೇ ಜಿಲ್ಲಾ ಕುಟುಂಬ ಕಲ್ಯಾಣ ಮತ್ತು ಆರೋಗ್ಯಾಧಿಕಾರಿ ಡಾ.ಕಾಂತರಾಜು ಹಾಗೂ ತನಿಖಾಧಿಕಾರಿ ಡಾ. ಮಂಜುನಾಥ್ ನೇತೃತ್ವದ ತಂಡ ಬಿಡದಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿತು.

'ವೈದ್ಯರು ಹಣಕ್ಕೆ ಬೇಡಿಕೆ ಇಟ್ಟಿರುವುದು ವಿಡಿಯೊದಲ್ಲಿ ಬಹಿರಂಗ ಆಗಿದೆ. ವಿಡಿಯೊದಲ್ಲಿ ಮಾತನಾಡಿರುವ ಇಬ್ಬರೂ ವೈದ್ಯರನ್ನು ಈಗಾಗಲೇ ಸೇವೆಯಿಂದ ಅಮಾನತು ಮಾಡಲಾಗಿದೆ. ಉಳಿದಂತೆ ಇನ್ನೂ ಯಾರ್‍ಯಾರಿಗೆ ಹಣ ಸಂದಾಯ ಆಗುತ್ತಿತ್ತು ಎಂಬ ಕುರಿತು ಇಲಾಖೆ ಮಟ್ಟದಲ್ಲಿ ತನಿಖೆ ನಡೆಯಲಿದೆ' ಎಂದು ಡಾ. ಕಾಂತರಾಜು 'ಪ್ರಜಾವಾಣಿ'ಗೆ ತಿಳಿಸಿದರು.

ಹೃದಯಾಘಾತ ಅಲ್ಲಗಳೆದಿದ್ದ ಕಂಪನಿ: ಬಿ.ಪಿ ಸಬೂಬು

₹ 30 ಲಕ್ಷ ಜೀವವಿಮೆ ಪಾವತಿಗೆ ಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯನ್ನು ಅಡವು ಇರಿಸಿ ಪಡೆದಿದ್ದ ₹ 30 ಲಕ್ಷ ಸಾಲಕ್ಕೆ ಅಷ್ಟೇ ಮೊತ್ತದ ಜೀವ ವಿಮಾ ಪಾಲಿಸಿ ಪಡೆದು ಪ್ರೀಮಿಯಂ ಕಟ್ಟಿದ್ದ ಗ್ರಾಹಕರೊಬ್ಬರ ಸಾವಿನ ನಂತರ ಜೀವ ವಿಮಾ ಹಣ ಪಾವತಿಸಲು ನಿರಾಕರಿಸಿದ್ದ ಎಚ್‌ಡಿಎಫ್‌ಸಿ ವಿಮಾ ಕಂಪನಿಗೆ ಜಿಲ್ಲಾ ಗ್ರಾಹಕರ ನ್ಯಾಯಾಲಯ ಬಿಸಿ ಮುಟ್ಟಿಸಿದೆ.

ಈ ಕುರಿತಂತೆ ಮೃತ ಮಹಿಳೆಯ ಪತಿ ಸಲ್ಲಿಸಿದ ದೂರಿನ ವಿಚಾರಣೆ ನಡೆಸಿದ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಬೆಂಗಳೂರು ನಗರ ಜಿಲ್ಲಾ ಹೆಚ್ಚುವರಿ ನ್ಯಾಯಾಲಯದ ಅಧ್ಯಕ್ಷ ಕೆ.ಶಿವರಾಮ್ ಹಾಗೂ ಸದಸ್ಯೆ ರೇಖಾ ಸಾಯಣ್ಣವರ ಅವರಿದ್ದ ವಿಭಾಗೀಯ ಪೀಠವು, 'ವಾರ್ಷಿಕ 9ರಷ್ಟು ಬಡ್ಡಿ ದರದೊಂದಿಗೆ ₹ 30 ಲಕ್ಷ ಮೊತ್ತವನ್ನು ದೂರುದಾರರಿಗೆ ನೀಡಬೇಕು' ಎಂದು ಕಂಪನಿಗೆ ಆದೇಶಿಸಿದೆ.

ಪ್ರಕರಣವೇನು?: ನಗರದ ವಿದ್ಯಾರಣ್ಯ ಪುರಂ ನರಸೀಪುರ ಲೇ ಔಟ್ ನಿವಾಸಿಯಾಗಿದ್ದ ಸುಜಾತಾ ತಮ್ಮ ಮಾಲೀಕತ್ವ ಹೊಂದಿದ್ದ ಸ್ಥಿರಾಸ್ತಿಯನ್ನು ಅಡವು ಇರಿಸಿ ಎಚ್‌ಡಿಬಿ ಗೃಹಸಾಲದ ಫೈನಾನ್ಸ್ ಕಂಪನಿಯಿಂದ ₹ 30 ಲಕ್ಷ ಮುಂಗಡ ಸಾಲ ಪಡೆದಿದ್ದರು ಮತ್ತು ಈ ಸಾಲದ ಗ್ಯಾರಂಟಿಗೆ ಎಚ್‌ಡಿಎಫ್‌ಸಿಯಿಂದ ಪಾಲಿಸಿ ಮಾಡಿಸಿ, ₹ 30 ಸಾವಿರ ಪ್ರೀಮಿಯಂ ಭರ್ತಿ ಮಾಡಿದ್ದರು. ಇದಾದ ಕೆಲ ತಿಂಗಳಲ್ಲೇ ಅಂದರೆ, 2020ರ ಜುಲೈ 7ರಂದು ಮೃತಪಟ್ಟಿದ್ದರು.

ಇವರ ನಿಧನಾನಂತರ ಪಾಲಿಸಿಯ ನಾಮಿನಿ ಹೊಂದಿದ್ದ ಬಿ.ಆರ್. ಗೋಪಾಲ, 'ಪಾಲಿಸಿ ಮೊತ್ತ ₹ 30 ಲಕ್ಷವನ್ನು ವಾರ್ಷಿಕ 24ರ ಬಡ್ಡಿ ದರದಲ್ಲಿ ನೀಡಬೇಕು' ಎಂದು ಕೋರಿ ಕಂಪನಿಗೆ ಕ್ಲೇಮು ಅರ್ಜಿ ಸಲ್ಲಿಸಿದ್ದರು. ಆದರೆ, ಕಂಪನಿ ಅರ್ಜಿಯನ್ನು ತಿರಸ್ಕರಿಸಿತ್ತು.

'ಸುಜಾತಾ ಅವರು ಪಾಲಿಸಿ ಪಡೆಯುವ ಮುನ್ನವೇ ಮಧುಮೇಹ (ಡಯಾಬಿಟೀಸ್), ಅಧಿಕ ರಕ್ತದೊತ್ತಡ (ಬಿಪಿ) ಮತ್ತು ನಿದ್ರೆಯಲ್ಲಿ ಉಸಿರಾಟದ ತೊಂದರೆ ಅನುಭವಿಸುತ್ತಿದ್ದರು ಹಾಗೂ ಈ ಕಾಯಿಲೆಗಳ ಕಾರಣಗಳಿಂದಾಗಿಯೇ ಮೃತಪಟ್ಟಿದ್ದಾರೆ. ಅವರು ಹೃದಯಾಘಾತದಿಂದ ಮೃತಪಟ್ಟಿಲ್ಲ. ಹೀಗಾಗಿ, ಕಂಪನಿಯ ಸೇವೆಯಲ್ಲಿ ಯಾವುದೇ ಲೋಪವಾಗಿಲ್ಲ' ಎಂದು ಸ್ಪಷ್ಟನೆ ನೀಡಿದ್ದರು.

ಇದನ್ನು ಪ್ರಶ್ನಿಸಿ ಬಿ.ಆರ್.ಗೋಪಾಲ, 'ಗ್ರಾಹಕರ ರಕ್ಷಣಾ ಕಾಯ್ದೆ–2019ರ ಕಲಂ 35ರ ಅಡಿಯಲ್ಲಿ ಪಾಲಿಸಿಯ ಮೊತ್ತವನ್ನು ಪಾವತಿಸುವಂತೆ ಕಂಪನಿಗೆ ಆದೇಶಿಸಬೇಕು' ಎಂದು ಕೋರಿ ಬೆಂಗಳೂರು ನಗರ ಜಿಲ್ಲೆಯ ಹೆಚ್ಚುವರಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದರು.

ವಿಚಾರಣೆ ನಡೆಸಿದ ಪೀಠವು, ವಿಮಾ ಕಂಪನಿ ತನ್ನ ಸೇವೆಯಲ್ಲಿ ಲೋಪ ಎಸಗಿದೆಯೇ, ದೂರುದಾರರು ತಾವು ಕೋರಿರುವ ಪರಿಹಾರಕ್ಕೆ ಅರ್ಹರೇ ಎಂಬುದನ್ನು ಪರಿಶೀಲಿಸಿತು. ವೈದ್ಯಕೀಯ ಅಧಿಕಾರಿಗಳು ನೀಡಿರುವ ದಾಖಲೆಗಳ ಪ್ರಕಾರ ಸುಜಾತಾ ಅವರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂಬುದನ್ನು ದೃಢಪಡಿಸಿಕೊಂಡಿತು.

ದೂರುದಾರರ ಪರ ವಕೀಲ ಎಂ.ಎನ್.ರಘು ಅವರ ವಾದವನ್ನು ಮನ್ನಿಸಿ, 'ಹೃದಯಾಘಾತದಿಂದ ಹೊರತಾದ ಕಾಯಿಲೆಗೆ ತುತ್ತಾಗಿ ಮೃತಪಟ್ಟಿದ್ದಾರೆ' ಎಂಬ ಕಂಪನಿಯ ವಾದವನ್ನು ತಳ್ಳಿಹಾಕಿ ಪರಿಹಾರ ನೀಡುವಂತೆ ಆದೇಶಿಸಿದೆ.


ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಡಾ.ಬಿ.ಆರ್ ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿದರು. ಆರ್‌ಪಿಐ ಮುಖಂಡ ವೆಂಕಟಸ್ವಾಮಿ, ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಇದ್ದರು –ಪ್ರಜಾವಾಣಿ ಚಿತ್ರ

'ಗ್ರಾ.ಪಂ.ಗಳಿಗೆ ಸಂವಿಧಾನದ ಪ್ರತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನದ ಕುರಿತು ಗ್ರಾಮೀಣ ಪ್ರದೇಶಗಳಲ್ಲೂ ಅರಿವು ಮೂಡಿಸಲು ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳ ಗ್ರಂಥಾಲಯಗಳಿಗೆ ಸಂವಿಧಾನದ ಪ್ರತಿಯನ್ನು ಪೂರೈಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ತಿಳಿಸಿದರು.

ವಿಧಾನಸೌಧದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಸಂವಿಧಾನ ದಿನ ನಿಮಿತ್ತ ಮಾಲಾರ್ಪಣೆ ಮಾಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಗ್ರಾಮೀಣ ಜನರಿಗೆ ಸಂವಿಧಾನ ಓದಿಗೆ ಅವಕಾಶ ಕಲ್ಪಿಸಲಾಗುವುದು. ಸಂವಿಧಾನದ ಸ್ಫೂರ್ತಿ ಗ್ರಾಮಮಟ್ಟದಲ್ಲೂ ಪಸರಿಸುವುದು ನಮ್ಮ ಉದ್ದೇಶ' ಎಂದರು.

ಸಂವಿಧಾನದ ಪ್ರತಿಗಳ ಜತೆಯಲ್ಲೇ ಸ್ಥಳೀಯ ಸಂಸ್ಥೆಗಳ ರಚನೆಯ ಮೂಲಕ ಆಡಳಿತ ವಿಕೇಂದ್ರೀಕರಣಕ್ಕೆ ಅವಕಾಶ ಕಲ್ಪಿಸಿದ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳಿಗೆ ಸಂಬಂಧಿಸಿದ ಅಡಕಗಳು ಹಾಗೂ ಪಂಚಾಯತ್ ರಾಜ್ ಕಾಯ್ದೆ ಪ್ರತಿಗಳನ್ನೂ ಗ್ರಾಮೀಣ ಗ್ರಂಥಾಲಯಗಳಿಗೆ ಒದಗಿಸಲಾಗುವುದು ಎಂದು ಹೇಳಿದರು.

ಅಂಬೇಡ್ಕರ್ ನೇತೃತ್ವದ ಸಂವಿಧಾನ ರಚನಾ ಸಮಿತಿಯು ಹಲವು ರಾಷ್ಟ್ರಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ ದೇಶಕ್ಕೆ ಅತ್ಯುತ್ತಮ ಮತ್ತು ಬಲಿಷ್ಠವಾದ ಸಂವಿಧಾನವನ್ನು ನೀಡಿದೆ. ಅದರ ಬಲದಿಂದಲೇ ದೇಶವು 75 ವರ್ಷ ಕಾಲ ಉತ್ತಮವಾಗಿ ನಡೆದುಕೊಂಡು ಬಂದಿದೆ ಎಂದು ಹೇಳಿದರು.

ನಂತರ ವಿಧಾನಸೌಧದ ಸಮ್ಮೇಳನ ಸಭಾಂಗಣ ದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂವಿಧಾನದ ಪ್ರಕಾರವೇ ನಡೆದು ಕೊಳ್ಳುವುದಾಗಿ ಪ್ರಮಾಣ ಸ್ವೀಕರಿಸಲಾಯಿತು. ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್ ಉಪಸ್ಥಿತರಿದ್ದರು.

ತಹಶೀಲ್ದಾರ್, ಗುಮಾಸ್ತ ಹಿಂಡಲಗಾ ಜೈಲಿಗೆ

ಪ್ರಜಾವಾಣಿ ವಾರ್ತೆ


ಸೋಮಲಿಂಗಪ್ಪ ಹಲಗಿ


ಜಿ.ಪ್ರಸನ್ನ

ಬೆಳಗಾವಿ: ಲಂಚ ತೆಗೆದುಕೊಳ್ಳುತ್ತಿದ್ದ ವೇಳೆ ಸಿಕ್ಕಿಬಿದ್ದ ಚನ್ನಮ್ಮನ ಕಿತ್ತೂರಿನ ತಹಶೀಲ್ದಾರ್ ಸೋಮಲಿಂಗಪ್ಪ ಹಲಗಿ ಹಾಗೂ ಗುಮಾಸ್ತ ಜಿ.ಪ್ರಸನ್ನ ಅವರನ್ನು ಮೂರು ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಶನಿವಾರ ಹಿಂಡಲಗಾ ಜೈಲಿಗೆ ಹಾಕಲಾಯಿತು.

ಖೋದಾನಪುರ ರೈತ ರಾಜೇಂದ್ರ ಇನಾಮದಾರ ಅವರ ಜಮೀನು ಖಾತಾ ಮಾಡಲು ಆರೋಪಿಗಳು ₹5 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಮುಂಗಡವಾಗಿ ಶುಕ್ರವಾರ ರಾತ್ರಿ ₹2 ಲಕ್ಷ ಲಂಚ ತೆಗೆದುಕೊಳ್ಳುವ ವೇಳೆ ಲೋಕಾಯುಕ್ತ ಪೊಲೀಸರು ಬಲೆ ಬೀಸಿ, ಸೆರೆ ಹಿಡಿದರು.

ಆರೋಪಿಗಳನ್ನು ಶನಿವಾರ ಬೆಳಿಗ್ಗೆ ಜಿಲ್ಲಾಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆಗೆ ಒಳಪಡಿಸಿದ ಬಳಿಕ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು. ನ್ಯಾಯಾಧೀಶರು ಇಬ್ಬರನ್ನೂ ಸೋಮವಾರದವರೆಗೆ (ನ.28) ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ರಾತ್ರಿಯಿಡೀ ಶೋಧ: ತಹಶೀಲ್ದಾರ್ ವಾಸವಿದ್ದ ಸರ್ಕಾರಿ ಬಂಗಲೆ, ಕಚೇರಿ ಹಾಗೂ ಬಾಡಿಗೆ ಮನೆಯಲ್ಲಿ ಲೋಕಾಯುಕ್ತ ಪೊಲೀಸರು ಶುಕ್ರವಾರ ತಡರಾತ್ರಿಯೂ ಶೋಧ ನಡೆಸಿದರು. ಹಲವು ದಾಖಲೆಗಳು ಹಾಗೂ ₹10 ಲಕ್ಷಕ್ಕೂ ಅಧಿಕ ನಗದು ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.


ಬಾಪುಸಾಹೇಬ್ ಇನಾಮದಾರ

ದೂರುದಾರನ ತಂದೆ ಸಾವು: ತಹಶೀಲ್ದಾರ್ ಹಾಗೂ ಗುಮಾಸ್ತ ವಿರುದ್ಧ ಲೋಕಾಯುಕ್ತರಿಗೆ ದೂರು ಸಲ್ಲಿಸಿದ ಖೋದಾನಪುರ ರೈತ ರಾಜೇಂದ್ರ ಇನಾಮದಾರ ಅವರ ತಂದೆ ಬಾಪುಸಾಹೇಬ್ ಅವರು ಶುಕ್ರವಾರ ತಡರಾತ್ರಿ ಹೃದಯಾಘಾತದಿಂದ ನಿಧನರಾದರು.

ತಮ್ಮ ತಂದೆ ಹೆಸರಿನಲ್ಲಿರುವ 10 ಎಕರೆ ಜಮೀನನ್ನು ತಮಗೆ ಖಾತಾ ಮಾಡಿ ಕೊಡಲು ರಾಜೇಂದ್ರ ಅವರು ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ತಹಶೀಲ್ದಾರ್ ಬಂಧನವಾದ ಸುದ್ದಿ ಊರಿನಲ್ಲಿ ಕಾಳ್ಗಿಚ್ಚಿನಂತೆ ಹರಡಿತು.

ತಮ್ಮ ಜಮೀನಿನ ವಿಚಾರ ಇಷ್ಟು ದೊಡ್ಡ ಪ್ರಕರಣವಾಯಿತು ಎಂದು ಆಘಾತಗೊಂಡ ಬಾಪುಸಾಹೇಬ್ ಅವರಿಗೆ ಶುಕ್ರವಾರ ತಡರಾತ್ರಿ 1.30ರ ಸುಮಾರಿಗೆ ಹೃದಯಾಘಾತ ಸಂಭವಿಸಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಕಿರು ಜಲಪಾತದ ಬಳಿ ಸೆಲ್ಫಿ ತೆಗೆದುಕೊಳ್ಳುವಾಗ ಅವಘಡ

ನಾಲ್ವರು ವಿದ್ಯಾರ್ಥಿನಿಯರು ನೀರು ಪಾಲು

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಗಡಿಗೆ ಹೊಂದಿಕೊಂಡ, ಮಹಾರಾಷ್ಟ್ರದ ಕಿತವಾಡ ಕಿರು ಜಲಪಾತದಲ್ಲಿ ಶನಿವಾರ ಪ್ರವಾಸಕ್ಕೆ ಹೋಗಿದ್ದ ನಾಲ್ವರು ವಿದ್ಯಾರ್ಥಿನಿಯರು ಆಯತಪ್ಪಿ ನೀರಿಗೆ ಬಿದ್ದು ಮೃತಪಟ್ಟಿದ್ದಾರೆ. ಇನ್ನೊಬ್ಬರು ಬದುಕುಳಿದಿದ್ದು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಇಲ್ಲಿನ ಅನಗೋಳದ ನಿವಾಸಿ ಕುದ್‌ಶಿಯಾ ಹಸನ್ ಪಟೇಲ್ (20), ಅನಗೋಳದ ಝುಟ್‌ಪಟ್ ಕಾಲೊನಿಯ ರುಕ್ಸಾರ್ ಯೂಸುಫ್ ಭಿಸ್ತಿ (20) ಹಾಗೂ ತಸ್ಮಿಯಾ ಆಷ್ಫಾಕ್ ಭಿಸ್ತಿ (20), ಉಜ್ವಲ ನಗರದ 5ನೇ ಕ್ರಾಸ್‌ನ ನಿವಾಸಿ ಆಸಿಯಾ ಎಂ. ಮುಜಾವರ್ (17) ಮೃತಪಟ್ಟವರು. ಖಂಜರಗಲ್ಲಿಯ ಆಜರಾ ಭಟ್ಟಿವಾಲೆ (17) ಅವರನ್ನು ನೀರಿನಿಂದ ಹೊರಗೆಳೆದು ರಕ್ಷಿಸಲಾಗಿದ್ದು, ಬೆಳಗಾವಿಯ ಕೆಎಲ್‌ಇ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಗರದ ಕಾಮತ್ ಗಲ್ಲಿಯ ಅರೇಬಿಕ್ ಟೂಷನ್ ಕ್ಲಾಸ್‌ನಲ್ಲಿ ಧಾರ್ಮಿಕ ಅಧ್ಯಯನ ಮಾಡುತ್ತಿದ್ದ 40 ವಿದ್ಯಾರ್ಥಿನಿಯರು ಬಸ್ಸಿನಲ್ಲಿ ಪ್ರವಾಸಕ್ಕೆ ತೆರಳಿದ್ದರು.

ಕಿತವಾಡ ಬಳಿಯ ಸಣ್ಣ ಜಲಪಾತದ ಸುತ್ತ ನಿಂತ ನೀರಿನಲ್ಲಿ ಎಲ್ಲರೂ ನೀರಾಟ ಮಾಡುತ್ತಿದ್ದರು. ಈ ವೇಳೆ ಸೆಲ್ಫಿ ಕ್ಲಿಕ್ಕಿಸಲು ಹೋಗಿ ಆಯತಪ್ಪಿ ಐವರು ವಿದ್ಯಾರ್ಥಿನಿಯರು ನೀರಿಗೆ ಬಿದ್ದರು. ಇದನ್ನು ಕಂಡು ಉಳಿದವರೆಲ್ಲ ಭಯದಿಂದ ಕೂಗಾಡಿದರು. ಆದರೆ, ಯಾರಿಗೂ ಈಜು ಬಾರದ ಕಾರಣ ರಕ್ಷಣೆ ಸಾಧ್ಯವಾಗಲಿಲ್ಲ ಎಂದು ಜೊತೆಯಲ್ಲಿದ್ದವರು ಮಾಹಿತಿ ನೀಡಿದರು.

ಸಚಿವಾಲಯ ಹುದ್ದೆಗಳ ಭರ್ತಿಗೆ ಡಿ.5ರಿಂದ ಪರೀಕ್ಷೆ

ಬೆಂಗಳೂರು: ವಿಧಾನಸಭೆ ಸಚಿವಾಲಯದಲ್ಲಿ ಕಂಪ್ಯೂಟರ್ ಆಪರೇಟರ್, ಕಿರಿಯ ಸಹಾಯಕ, ಸ್ವಾಗತಗಾರರು, ದಲಾಯತ್ ಹುದ್ದೆಗಳಿಗೆ ಡಿ.5ರಿಂದ 7ರವರೆಗೆ ಪರೀಕ್ಷೆಗಳು ನಡೆಯಲಿವೆ.

ಡಿ.5ರಂದು ಮಧ್ಯಾಹ್ನ 3.30ರಿಂದ 4.30ರವರೆಗೆ ದಲಾಯತ್ ಹುದ್ದೆಗೆ ಪರೀಕ್ಷೆ ನಡೆಯಲಿದೆ. ಕಂಪ್ಯೂಟರ್ ಆಪರೇಟರ್ ಹುದ್ದೆಗಳಿಗೆ (100 ಅಂಕ) 6ರಂದು ಮಧ್ಯಾಹ್ನ 3ರಿಂದ 5ರವರೆಗೆ, ಕಿರಿಯ ಸಹಾಯಕ ಹಾಗೂ ಸ್ವಾಗತಗಾರರ ಹುದ್ದೆಗಳಿಗೆ (100 ಅಂಕ) 7ರಂದು ಮಧ್ಯಾಹ್ನ 3ರಿಂದ 5ರವರೆಗೆ ಪರೀಕ್ಷೆಗಳು ನಡೆಯಲಿವೆ.

ಡಿ.1ರ ಮಧ್ಯಾಹ್ನದ ನಂತರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಅಭ್ಯರ್ಥಿಗಳು ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಕೆಇಎ ಹೇಳಿದೆ.

ಛಾಯಾಗ್ರಹಣ ಕಾರ್ಯಾಗಾರ

ಬೆಂಗಳೂರು: ಶಿವಮೊಗ್ಗ ಜಿಲ್ಲೆಯ 'ಸಾಗರ ಫೋಟೋಗ್ರಫಿಕ್ ಸೊಸೈಟಿ' ನೀನಾಸಮ್ ಸಂಸ್ಥೆಯ ಸಹಯೋಗದಲ್ಲಿ, ಹೆಗ್ಗೋಡಿನಲ್ಲಿ ಡಿ. 22ರಿಂದ 25ರ ವರೆಗೆ ರಾಜ್ಯಮಟ್ಟದ ಛಾಯಾಗ್ರಹಣ ಕಾರ್ಯಾಗಾರವನ್ನು ಆಯೋಜಿಸಿದೆ. ಆಸಕ್ತರು ವಿವರಗಳಿಗೆ ಸಂಪರ್ಕಿಸಬೇಕಾದ ವಾಟ್ಸ್‌ಆ್ಯಪ್ ನಂಬರ್ ಇಂತಿವೆ : 9448627878 (ಪಂಡಿತ್) ಅಥವಾ 9845931306 (ರಾಜಾರಾಮ್)

ಕಲಾ ಸಂಘಟಕರಿಗೆ ಕನಿಷ್ಠ ಆರ್ಥಿಕ ನೆರವು ಕೈ ತಪ್ಪುವ ಆತಂಕ ● ಸಂಸ್ಕೃತಿ ಇಲಾಖೆ ನಡೆಗೆ ಆಕ್ಷೇಪ

ಧನಸಹಾಯಕ್ಕೆ ಕಾರ್ಯಕ್ರಮದ ನಿರ್ಬಂಧ

● ವರುಣ ಹೆಗಡೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ ಧನಸಹಾಯವನ್ನೇ ನೆಚ್ಚಿಕೊಂಡಿದ್ದ ನಾಡಿನ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ಈ ಬಾರಿ ಕನಿಷ್ಠ ಆರ್ಥಿಕ ನೆರವು ಸಹ ಕೈ ತಪ್ಪುವ ಆತಂಕ ಎದುರಾಗಿದೆ.

ಡಿಸೆಂಬರ್ ಅಂತ್ಯದೊಳಗೆ ಕನಿಷ್ಠ 3 ಕಾರ್ಯಕ್ರಮಗಳನ್ನು ನಡೆಸಿ, ದಾಖಲೆಗಳನ್ನು ಸೇವಾಸಿಂಧು ಪೋರ್ಟಲ್‌ನಲ್ಲಿ ಸಲ್ಲಿಸಬೇಕೆಂಬ ಇಲಾಖೆಯ ಸೂಚನೆಗೆ ಆಕ್ಷೇಪ ವ್ಯಕ್ತವಾಗಿದೆ.

ಧನಸಹಾಯಕ್ಕೆ ಸಂಬಂಧಿಸಿ ಪಾರದರ್ಶಕತೆಯ ಹೆಸರಿನಲ್ಲಿ ಇಲಾಖೆ ಹೊರಡಿಸಿದ್ದ ಮಾರ್ಗಸೂಚಿ ಸಂಘ–ಸಂಸ್ಥೆಗಳಿಗೆ ತಲೆನೋವಾಗಿದೆ. ಪ್ರತಿ ವರ್ಷ ಧನಸಹಾಯದ ಪಟ್ಟಿ ಬಿಡುಗಡೆಯಾದ ಬಳಿಕ ಆರ್ಥಿಕ ನೆರವಿನ ಅಸಮಾನತೆ ಬಗ್ಗೆ ಆಕ್ಷೇಪಗಳು ವ್ಯಕ್ತವಾಗುತ್ತಿದ್ದವು. ಈ ಬಾರಿ ಧನಸಹಾಯಕ್ಕೆ ವಿಧಿಸಿರುವ ನಿರ್ಬಂಧಗಳೇ ಸಾಂಸ್ಕೃತಿಕ ವಲಯದ ಅಸಮಾಧಾನಕ್ಕೆ ಕಾರಣವಾಗಿದೆ.

ಧನಸಹಾಯಕ್ಕಾಗಿ ಪ್ರಸ್ತಾವನೆ ಸಲ್ಲಿಸಿದ ಸಂಘ–ಸಂಸ್ಥೆಗಳಿಗೆ ಡಿಸೆಂಬರ್ ಅಂತ್ಯದ ಒಳಗೆ ಮೂರು ಕಾರ್ಯಕ್ರಮಗಳನ್ನು ಆಯೋಜಿಸಿ, ದಾಖಲೆಗಳನ್ನು ಸೇವಾಸಿಂಧು ಪೋರ್ಟಲ್‌ನಲ್ಲಿ ನಮೂದಿಸಬೇಕು ಎಂದು ಸೂಚಿಸಲಾಗುತ್ತಿದೆ. ಇದನ್ನು ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಧನಸಹಾಯ ಶಿಫಾರಸು ಸಮಿತಿ ಪರಿಶೀಲಿಸಿ, ಶಿಫಾರಸು ಮಾಡಬೇಕಾಗುತ್ತದೆ. ಸ್ವಂತ ಹಣದಲ್ಲಿ ಕಾರ್ಯಕ್ರಮ ನಡೆಸಿ, ದಾಖಲೆ ಸಲ್ಲಿಸಿದವರಿಗೂ ಧನಸಹಾಯ ಸಿಗುವ ಖಾತ್ರಿ ಇಲ್ಲವಾಗಿದೆ.

ಧನಸಹಾಯಕ್ಕಾಗಿ ಸರ್ಕಾರವು ಪ್ರತಿವರ್ಷ ₹ 15 ಕೋಟಿಯಿಂದ ₹ 20 ಕೋಟಿ ಖರ್ಚು ಮಾಡುತ್ತಿದೆ. ರಾಜ್ಯದಲ್ಲಿ 7 ಸಾವಿರಕ್ಕೂ ಅಧಿಕ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿದ್ದರೂ, ಅರ್ಜಿ ಅಲ್ಲಿಸುವ 4 ಸಾವಿರಕ್ಕೂ ಅಧಿಕ ಸಂಘ–ಸಂಸ್ಥೆಗಳಲ್ಲಿ 900ರಿಂದ 1,000 ಸಂಘ–ಸಂಸ್ಥೆಗಳಿಗೆ ಧನಸಹಾಯ ಒದಗಿಸಲಾಗುತ್ತಿದೆ.

ಹತ್ತಾರು ನಿರ್ಬಂಧ: ಈ ಹಿಂದೆ ಸಂಘ–ಸಂಸ್ಥೆಗಳ ಹಿಂದಿನ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿ, ಧನಸಹಾಯಕ್ಕೆ ಆಯ್ಕೆ ಮಾಡಲಾಗುತ್ತಿತ್ತು. ಉತ್ತಮವಾಗಿ ಕಾರ್ಯಕ್ರಮ ಮಾಡಿದ ಕೆಲವರಿಗೆ ₹ 10 ಲಕ್ಷದವರೆಗೂ ಅನುದಾನ ಬರುತ್ತಿತ್ತು. ಈಗ ಆಯ್ಕೆಯಾದ ಸಂಘ–ಸಂಸ್ಥೆಯೊಂದಕ್ಕೆ ಅನುದಾನದ ಗರಿಷ್ಠ ಮಿತಿಯನ್ನೂ ₹ 2 ಲಕ್ಷಕ್ಕೆ ಸೀಮಿತಗೊಳಿಸಲಾಗಿದೆ. ಇಷ್ಟು ಹಣ ಪಡೆಯಲು ಹತ್ತಾರು ನಿರ್ಬಂಧಗಳನ್ನು ವಿಧಿಸಲಾಗಿದೆ.

'ನಮ್ಮ ಬಳಿ ಕಾರ್ಯಕ್ರಮ ನಡೆಸಲು ಹಣವಿದ್ದಲ್ಲಿ ಧನಸಹಾಯಕ್ಕೆ ಅರ್ಜಿ ಸಲ್ಲಿಸುತ್ತಿರಲಿಲ್ಲ. ಪಾರದರ್ಶಕತೆ ಹೆಸರಿನ ನಿರ್ಬಂಧಗಳಿಂದ ಜಾನಪದ ಸೇರಿ ವಿವಿಧ ಕಲಾವಿದರು ನೆರವು ಕೈತಪ್ಪುವ ಆತಂಕ ಎದುರಾಗಿದೆ. ಅಲ್ಪಾವಧಿಯಲ್ಲಿ ಮೂರು ಕಾರ್ಯಕ್ರಮಗಳನ್ನು ನಡೆಸಿ, ದಾಖಲಾತಿ ಸಲ್ಲಿಸುವ ವೇಳೆಗೆ ಅವಧಿಯೇ ಮುಗಿದಿರುತ್ತದೆ. ಹೀಗಾಗಿ, ಈ ಮೊದಲಿದ್ದ ವ್ಯವಸ್ಥೆಯನ್ನೇ ಜಾರಿ ಮಾಡಬೇಕು' ಎಂದು ಕಲಾವಿದ ಡಾ. ಜಯಸಿಂಹ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಪ್ರಕಾಶ್ ನಿಟ್ಟಾಲಿ ದೂರವಾಣಿ ಸಂಪರ್ಕಕ್ಕೆ ಲಭ್ಯವಾಗಲಿಲ್ಲ.

ಎರಡು ಬಾರಿ ಅರ್ಜಿ ಸಲ್ಲಿಕೆ

ಧನಸಹಾಯ ಬಯಸುವ ಸಂಘ–ಸಂಸ್ಥೆಗಳು ಕ್ರಿಯಾಯೋಜನೆ ಹಾಗೂ ಸಂಬಂಧಿಸಿದ ದಾಖಲಾತಿ ಸಹಿತ ಸೇವಾಸಿಂಧು ಪೋರ್ಟಲ್‌ನಲ್ಲಿ ಈಗಾಗಲೇ ಅರ್ಜಿ ಸಲ್ಲಿಸಿವೆ.

ಮತ್ತೆ ಮೂರು ಕಾರ್ಯಕ್ರಮಗಳನ್ನು ನಡೆಸಿ, ಅದರ ದಾಖಲೆಗಳನ್ನು ಪೋರ್ಟಲ್ ಮೂಲಕ ಸಲ್ಲಿಸಬೇಕಿದೆ. ಇದೇ ಮೊದಲ ಬಾರಿಗೆ ಎರಡು ಬಾರಿ ಅರ್ಜಿಸಲ್ಲಿಸಲು ಸೂಚಿಸಲಾಗಿದೆ. ಇದರಿಂದ ಗ್ರಾಮೀಣ ಕಲಾವಿದರು ಗೊಂದಲಕ್ಕೆ ಒಳಗಾಗಿದ್ದು, ಕನ್ನಡ ಭವನಕ್ಕೆ ಅಲೆದಾಟ ನಡೆಸಲಾರಂಭಿಸಿದ್ದಾರೆ.


ಇಲಾಖೆ ನಡೆದುಕೊಳ್ಳುತ್ತಿರುವ ರೀತಿ ಸರಿಯಿಲ್ಲ. ಕೆಲವರಿಗೆ ದಾಖಲಾತಿ ಕೇಳದೆ ಲಕ್ಷಾಂತರ ರೂಪಾಯಿ ನೀಡಲಾಗಿದೆ. ನಮಗೆ ಮಾತ್ರ ಇಲ್ಲದ ನಿರ್ಬಂಧ ವಿಧಿಸಲಾಗುತ್ತಿದೆ.

ವೈ.ಕೆ.ಮುದ್ದುಕೃಷ್ಣ, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ


ಕಾರ್ಯಕ್ರಮಗಳ ಆಯೋಜನೆ ಕುರಿತು ಮೊದಲೇ ರೂಪುರೇಷೆ ಮಾಡಿಕೊಂಡಿರುತ್ತೇವೆ. ಅವಸರದಲ್ಲಿ ಕಾರ್ಯಕ್ರಮ ಮಾಡಲು ಸಾಧ್ಯವಿಲ್ಲ. ಇಲಾಖೆಯ ನಿರ್ಬಂಧ ಸರಿಯಿಲ್ಲ.

ಬೈರಮಂಗಲ ರಾಮೇಗೌಡ
ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ

ಕರ್ನಾಟಕ ಸರಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಇಲಾಖೆ

ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ

ಸುಬ್ರಹ್ಮಣ್ಯ, ಕಡಬ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ 574238
ದೂರವಾಣಿ: 08257- 281224, 236200, 281200, 281265, 295300
E-mail: eokukkesubrahmanya@gmail.com

ಚಂಪಾಷಷ್ಠಿ ಮಹೋತ್ಸವ – 2022

ಉತ್ಸವಗಳ ವಿವರಗಳು:
ತಾ. 27.11.2022 ಆದಿತ್ಯವಾರ : ರಾತ್ರಿ **ಹೂವಿನ ತೇರಿನ ಉತ್ಸವ**
ತಾ. 28.11.2022 ಸೋಮವಾರ : ರಾತ್ರಿ **ಪಂಚಮಿ ರಥೋತ್ಸವ, ತೈಲಾಭ್ಯಂಜನ**
ತಾ. 29.11.2022 ಮಂಗಳವಾರ : ಬೆಳಗ್ಗೆ **ಚಂಪಾಷಷ್ಠಿ ಮಹಾರಥೋತ್ಸವ**
ತಾ. 30.11.2022 ಬುಧವಾರ : **ಅವಭೃತೋತ್ಸವ, ನೌಕಾವಿಹಾರ**
ಭಕ್ತಾದಿಗಳು ಶ್ರೀ ದೇವರ ಉತ್ಸವದಲ್ಲಿ ಪಾಲ್ಗೊಂಡು, ಶ್ರೀ ಸುಬ್ರಹ್ಮಣ್ಯ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

ವಿ.ಸೂ: 1) ತಾ. 27.11.2022 (ಚೌತಿ) ಮತ್ತು ತಾ. 28.11.2022 (ಪಂಚಮಿ) ದಿನಗಳಲ್ಲಿ ಭಕ್ತಾದಿಗಳ ಪ್ರಾರ್ಥನೆ ಸೇವೆ ರಾತ್ರಿ ಹೊತ್ತಿನಲ್ಲಿ ಇರುವುದಿಲ್ಲ. ತಾ. 29.11.2022 (ಚಂಪಾಷಷ್ಠಿ) ದಿನದಂದು ಮಧ್ಯಾಹ್ನ ಪ್ರಾರ್ಥನೆ ಸೇವೆ ಇರುವುದಿಲ್ಲ. 2) ತಾ. 29.11.2022 ರ ಚಂಪಾಷಷ್ಠಿ ದಿನ ಆಶ್ಲೇಷ ಬಲಿ ಮತ್ತು ನಾಗಪ್ರತಿಷ್ಠೆ ಸೇವೆಗಳು ನೆರವೇರಲ್ಪಡುವುದಿಲ್ಲ. 3) ತಾ.23.11.2022 (ಲಕ್ಷದೀಪೋತ್ಸವ), ತಾ.27.11.2022 (ಚೌತಿ), ತಾ.28.11.2022 (ಪಂಚಮಿ), ತಾ. 29.11.2022 (ಚಂಪಾಷಷ್ಠಿ) ಮತ್ತು ತಾ.05.12.2022 ರಂದು ಪಂಚಾಮೃತ ಮಹಾಭಿಷೇಕ ಸೇವೆ ನೆರವೇರುವುದಿಲ್ಲ 4) ವಾರ್ಷಿಕ ಚಂಪಾಷಷ್ಠಿ ಜಾತ್ರಾ ಪ್ರಯುಕ್ತ ದಿನಾಂಕ 21.11.2022 ರಿಂದ ತಾ. 05.12.2022 ರ ವರೆಗೆ ಸಾಯಂಕಾಲದ ಆಶ್ಲೇಷ ಬಲಿ ಸೇವೆ ನೆರವೇರುವುದಿಲ್ಲ.

ಕಿರುಷಷ್ಠಿ ಮಹೋತ್ಸವವು ತಾ. 28.12.2022 ರಂದು ಜರಗುವುದು.

ಶ್ರೀಮತಿ ರೋಹಿಣಿ ಸಿಂಧೂರಿ ದಾಸರಿ ಭಾ.ಆ.ಸೇ
ಆಯುಕ್ತರು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ, ಬೆಂಗಳೂರು
ಶ್ರೀ ರವಿಕುಮಾರ್ ಎಂ.ಆರ್. ಭಾ.ಆ.ಸೇ
ಜಿಲ್ಲಾಧಿಕಾರಿಗಳು,
ಮಂಗಳೂರು, ದ.ಕ.ಜಿಲ್ಲೆ.
ಡಾ|| ನಿಂಗಯ್ಯ, ಎಂ.ಎ.;ಜಿಡಿಸಿ
ಕಾರ್ಯನಿರ್ವಹಣಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಸುಬ್ರಹ್ಮಣ್ಯ
ಶ್ರೀಮತಿ ಪುಷ್ಪಲತ
ಸಹಾಯಕ ಕಾರ್ಯನಿರ್ವಹಣಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಸುಬ್ರಹ್ಮಣ್ಯ
ಮತ್ತು ಸಿಬ್ಬಂದಿ ವರ್ಗ

ಮೋಹನ ರಾಮ ಎಸ್. ಸುಳ್ಳಿ
ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಸುಬ್ರಹ್ಮಣ್ಯ
ಹಾಗೂ ವ್ಯವಸ್ಥಾಪನಾ ಸಮಿತಿಯ ಸದಸ್ಯರು
ಸೀತಾರಾಮ ಎಡಪಡಿತ್ತಾಯ, ಲೋಕೇಶ್,
ಶ್ರೀಮತಿ ವನಜಾ ವಿ. ಭಟ್,
ಶ್ರೀಮತಿ ಶೋಭಾ ಎಸ್.ಜಿ,
ಮನೋಹರ ರೈ,
ಪಿ.ಜಿ.ಎಸ್.ಎನ್. ಪ್ರಸಾದ್,
ದರ್ಬೆ ಪ್ರಸನ್ನ, ಶ್ರೀವತ್ಸ ವಿ.
ಸರ್ವ ಸದಸ್ಯರು, ಮಾಸ್ಟರ್‌ಪ್ಲಾನ್ ಮೇಲ್ವಿಚಾರಣಾ ಸಮಿತಿ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹555

ಖಾದ್ಯ ತೈಲ ಮುಂಬೈ (10 ಕೆಜಿಗೆ)



ಶೇಂಗಾ (ರಿಫೈನ್ಡ್)	₹1510 (1515)
ಸೋಯಾ (ರಿಫೈನ್ಡ್)	₹1332 (1330)
ಸೂರ್ಯಕಾಂತಿ (ರಿಫೈನ್ಡ್)	₹1440 (1440)
ಪಾಮೋಲಿನ್	₹970 (975)

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್–4	₹142.50
ಆರ್‌ಎಸ್‌ಎಸ್–5	₹134.50
ಗುಡ್ ಲಾಟ್	₹127.50

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹13200
ಎಸಿ	₹6720
ಆರ್‌ಪಿ	₹8500
ಆರ್‌ಸಿ	₹4530

ಸಂಕ್ಷಿಪ್ತ ಸುದ್ದಿ

ನವೋದ್ಯಮಗಳಿಗೆ ಸಚಿವೆ ನಿರ್ಮಲಾ ಸಲಹೆ

ಬೆಂಗಳೂರು (ಪಿಟಿಐ): ಹವಾಮಾನ ಬದಲಾವಣೆ, ಸಿರಿಧಾನ್ಯ ಉತ್ಪಾದನೆ ಮತ್ತು ರೈತರ ಸ್ಥಿತಿ ಸುಧಾರಿಸುವಂತಹ ಹೆಚ್ಚು ಆಕರ್ಷಕವಲ್ಲದ ಕ್ಷೇತ್ರಗಳ ಕಡೆಗೂ ಗಮನ ಹರಿಸುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನವೋದ್ಯಮಗಳಿಗೆ ಸಲಹೆ ನೀಡಿದರು.

ನವೋದ್ಯಮಗಳಿಗೆ ಉತ್ತೇಜನ ನೀಡುವ ರಾಷ್ಟ್ರ ಮಟ್ಟದ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಹವಾಮಾನದಲ್ಲಿ ಆಗುತ್ತಿರುವ ಬದಲಾವಣೆಗಳಿಂದಾಗಿ ದೇಶದ ಕೃಷಿ ಕ್ಷೇತ್ರದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿದೆ. ಹೀಗಾಗಿ ಹವಾಮಾನ ಬದಲಾವಣೆ ತಡೆಯಲು ಪರಿಹಾರ ಹುಡುಕುವ ನಿಟ್ಟಿನಲ್ಲಿ ನವೋದ್ಯಮಗಳು ಕೆಲಸ ಮಾಡುವ ಅಗತ್ಯ ಇದೆ ಎಂದರು.

ರಕ್ಷಣಾ ಉಪಕರಣಗಳು, ನವೀಕರಿಸಬಲ್ಲ ಇಂಧನ, ಸ್ಯಾಟಲೈಟ್, ಬಾಹ್ಯಾಕಾಶ ತಂತ್ರಜ್ಞಾನ ಇವೆಲ್ಲವೂ ಮುಖ್ಯ. ಆದರೆ, ಈ ಎಲ್ಲಾ ಕ್ಷೇತ್ರಗಳನ್ನೂ ಈಗಾಗಲೇ ನೀವು ತೊಡಗಿಸಿಕೊಂಡಿದ್ದೀರಿ. ಹೀಗಾಗಿ ಹೆಚ್ಚು ಆಕರ್ಷಕ ಅಲ್ಲದ ಕ್ಷೇತ್ರಗಳಲ್ಲಿಯೂ ಕೆಲಸ ಮಾಡುವಂತೆ ಕೇಳುತ್ತಿದ್ದೇನೆ ಎಂದು ಹೇಳಿದರು.

ನಿರ್ಮಲಾ ಜತೆಗಿನ ವರ್ಚುವಲ್ ಸಭೆ: ಬಹಿಷ್ಕಾರ ನಿರ್ಧಾರ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರೊಂದಿಗಿನ ನವೆಂಬರ್ 28ರ ಬಜೆಟ್ ಪೂರ್ವ ವರ್ಚುವಲ್ ಸಭೆಯನ್ನು ಬಹಿಷ್ಕರಿಸಲು 10 ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯು ನಿರ್ಧರಿಸಿದೆ.

ಸಚಿವೆ ನಿರ್ಮಲಾ ಅವರನ್ನು ಮುಖಾಮುಖಿಯಾಗಿ ಭೇಟಿ ಮಾಡಿ ಮಾತನಾಡಲು ಸಮಯ ನೀಡುವಂತೆ ಅದು ಬೇಡಿಕೆ ಇಟ್ಟಿದೆ.

ನವೆಂಬರ್ 25ರಂದು ಸಚಿವಾಲಯವು ಕಳುಹಿಸಿರುವ ಇ–ಮೇಲ್ ಪ್ರಕಾರ, ಪ್ರತಿ ಸಂಘಟನೆಗೆ ತಲಾ ಮೂರು ನಿಮಿಷಗಳ ಕಾಲಾವಕಾಶ ನೀಡಲಾಗುವುದು ಎಂದು ತಿಳಿಸಲಾಗಿದೆ. ಇದಕ್ಕೆ ವೇದಿಕೆಯು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಬಹಿಷ್ಕಾರದ ನಿರ್ಧಾರಕ್ಕೆ ಬಂದಿರುವುದಾಗಿ ತಿಳಿಸಿದೆ.

ಇನ್ನೊಮ್ಮೆ ಅರ್ಜಿ ಸಲ್ಲಿಸಿ: ಪೇಟಿಎಂಗೆ ಆರ್‌ಬಿಐ ಸೂಚನೆ

ಮುಂಬೈ (ರಾಯಿಟರ್ಸ್): ಪೇಟಿಎಂ ಪೇಮೆಂಟ್ಸ್ ಸರ್ವಿಸಸ್ ಲಿಮಿಟೆಡ್‌ಗೆ ಪೇಮೆಂಟ್ ಅಗ್ರಿಗೇಟರ್ ಲೈಸೆನ್ಸ್ ನೀಡಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿರಾಕರಿಸಿದೆ. ಕಂಪನಿಯು ಪತ್ರವೊಂದಕ್ಕೆ 120 ದಿನಗಳ ಒಳಗಾಗಿ ಮತ್ತೆ ಅರ್ಜಿ ಸಲ್ಲಿಸುವಂತೆ ಮಾತೃಸಂಸ್ಥೆ ಒನ್ 97 ಕಮ್ಯುನಿಕೇಷನ್ಸ್‌ಗೆ ಸೂಚನೆ ನೀಡಿದೆ.

ಕಂಪನಿಯಲ್ಲಿ ವಿದೇಶಿ ನೇರ ಹೂಡಿಕೆಗೆ ಅಗತ್ಯವಾದ ಅನುಮತಿಗಳನ್ನು ಪಡೆದುಕೊಂಡ ಬಳಿಕ ಅರ್ಜಿ ಸಲ್ಲಿಸುವಂತೆ ಆರ್‌ಬಿಐ ಸೂಚನೆ ನೀಡಿರುವುದಾಗಿ ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ವಿವಿಧ ಆನ್‌ಲೈನ್ ಪಾವತಿ ಆಯ್ಕೆಗಳನ್ನು ಒಂದೇ ಕಡೆ ಸಿಗುವ ವೇದಿಕೆಯೇ ಪೇಮೆಂಟ್ ಅಗ್ರಿಗೇಟರ್.

ಸಾಲಕ್ಕೆ ಅರ್ಜಿ ಸಲ್ಲಿಸಲು ದಾಖಲೆಗಳ ಕೊರತೆ: ಗೇಮ್

ಕೋವಿಡ್: ಶೇ 40 ಕಿರು ಉದ್ದಿಮೆಗಳಿಗೆ ಸಿಗದ ಸಾಲ

ಬೆಂಗಳೂರು (ಪಿಟಿಐ): ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ಸಾಕಷ್ಟು ಅಡಮಾನ ಇಲ್ಲ ಅಥವಾ ಕ್ರೆಡಿಟ್ ಸ್ಕೋರ್ ಉತ್ತಮವಾಗಿಲ್ಲ ಎನ್ನುವ ಕಾರಣಕ್ಕಾಗಿ ಶೇ 40ರಷ್ಟು ಕಿರು ಉದ್ದಿಮೆಗಳಿಗೆ ಸಾಲವನ್ನು ನಿರಾಕರಿಸಲಾಗಿತ್ತು.

ಗ್ಲೋಬಲ್ ಅಲಯನ್ಸ್ ಫಾರ್ ಮಾಸ್ ಎಂಟರ್‌ಪ್ರಿನ್ಯೂರ್‌ಶಿಪ್ (ಜಿಎಎಂಇ–ಗೇಮ್) ಈಚೆಗೆ ಬಿಡುಗಡೆ ಮಾಡಿರುವ 'ಚೇತರಿಸುವ ಹಾದಿ: ಭಾರತದಲ್ಲಿ ಕಿರು ಉದ್ದಿಮೆಗಳ ಮೇಲೆ ಕೋವಿಡ್–19 ಪರಿಣಾಮದ ಪರಿಶೀಲನೆ' ಎನ್ನುವ ವರದಿಯಲ್ಲಿ ಈ ಮಾಹಿತಿ ಇದೆ.

ಸಾಲಕ್ಕಾಗಿ ಅರ್ಜಿ ಸಲ್ಲಿಸಲು ಶೇ 21ರಷ್ಟು ಕಿರು ಉದ್ದಿಮೆಗಳ ಬಳಿ ಅಗತ್ಯವಾದ ದಾಖಲೆಪತ್ರಗಳೇ ಇರಲಿಲ್ಲ ಎಂದು ತಿಳಿಸಿದೆ.

ಲಾಕ್‌ಡೌನ್ ಅವಧಿಯಲ್ಲಿ ಮತ್ತು ಆ ಬಳಿಕ ಎಂಎಸ್‌ಎಂಇಗಳು ಎದುರಿಸಿದ ಹಣಕಾಸಿನ ಪರಿಣಾಮಗಳು, ವಹಿವಾಟು ನಡೆಸುವ ವಿಶ್ವಾಸ ಮತ್ತು ಒಟ್ಟಾರೆ ನಿರ್ವಹಣೆಯ ಸಮಸ್ಯೆಗಳ ಬಗ್ಗೆ ಅಭಿಪ್ರಾಯ ಸಂಗ್ರಹಿಸಿ ವರದಿ ಸಿದ್ಧಪಡಿಸಲಾಗಿದೆ ಎಂದು 'ಗೇಮ್' ಹೇಳಿದೆ.



2020 ಮತ್ತು 2021ರಲ್ಲಿ ಎರಡು ಸುತ್ತಿನಲ್ಲಿ ಅಧ್ಯಯನ ನಡೆಸಲಾಗಿದೆ. 1955 ಕಿರು ಉದ್ದಿಮೆಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಕೋವಿಡ್‌ನ ಪರಿಣಾಮಗಳನ್ನು ಕಡಿಮೆ ಮಾಡಲು ಸೂಕ್ತವಾದ ಕಾರ್ಯತಂತ್ರ ಅಥವಾ ಕಾರ್ಯವಿಧಾನವನ್ನೇ ಹೊಂದಿರಲಿಲ್ಲ ಎಂದು ಶೇ 50ರಷ್ಟು ಉದ್ದಿಮೆಗಳು ಹೇಳಿವೆ ಎಂದು 'ಗೇಮ್' ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಮುಖ್ಯಾಂಶಗಳು

- ಬ್ಯಾಂಕ್, ಸರ್ಕಾರದ ಯೋಜನೆಗಳ ಮಾಹಿತಿ ಕೊರತೆ
- ಕೋವಿಡ್ ಪರಿಣಾಮ ತಡೆಯುವ ಕಾರ್ಯತಂತ್ರವೇ ಇಲ್ಲ

ಬ್ಯಾಂಕ್ ಮತ್ತು ಸರ್ಕಾರಿ ಯೋಜನೆಗಳ ಬಗ್ಗೆ ಬ್ಯಾಂಕ್ ವ್ಯವಸ್ಥಾಪಕರು, ಕ್ಷೇತ್ರ ಅಧಿಕಾರಿಗಳು ಮತ್ತು ಬ್ಯಾಂಕಿಂಗ್ ಪ್ರತಿನಿಧಿಗಳು ಉದ್ದಿಮೆಗಳಲ್ಲಿ ತಿಳುವಳಿಕೆ ಮೂಡಿಸುವ ತುರ್ತು ಅಗತ್ಯ ಇದೆ ಎಂದು ಗೇಮ್ ಸ್ಥಾಪಕ ರವಿ ವೆಂಕಟೇಶನ್ ಅಭಿಪ್ರಾಯಪಟ್ಟಿದ್ದಾರೆ.

'ಆತ್ಮನಿರ್ಭರ ಭಾರತ' ಕಾರ್ಯಕ್ರಮದಡಿ ಜಾರಿಗೊಳಿಸಿರುವ ಯೋಜನೆಗಳ ಬಗ್ಗೆ ಶೇ 31ರಷ್ಟು ಉದ್ದಿಮೆಗಳಿಗೆ ಮಾತ್ರವೇ ಮಾಹಿತಿ ಇದೆ ಎನ್ನುವುದು ಸಮೀಕ್ಷೆಯಿಂದ ತಿಳಿದುಬಂದಿದೆ ಎಂದು ಹೇಳಿದ್ದಾರೆ.

ಜಿಆರ್‌ಟಿಯಿಂದ 'ಸ್ವರ್ಣ ಅವತಾರ' ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಆರ್‌ಟಿ ಜುವೆಲರ್ಸ್ ಕಂಪನಿಯು 'ಸ್ವರ್ಣ ಅವತಾರ' ಎನ್ನುವ ಹೊಸ ಕೊಡುಗೆಯನ್ನು ಘೋಷಿಸಿದೆ. ಇದರಿಂದ, ಗ್ರಾಹಕರು ತಮ್ಮ ಹಳೆಯ ಚಿನ್ನವನ್ನು ವಿನಿಮಯ ಮಾಡುವಾಗ ಪ್ರತಿ ಗ್ರಾಂಗೆ ₹50 ಹೆಚ್ಚಿಗೆ ಹಣ ಪಡೆಯಬಹುದಾಗಿದೆ. ಈ ಕೊಡುಗೆಯು ಸೀಮಿತ ಅವಧಿಗೆ ಮಾತ್ರವೇ ಇರಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

'ನಮ್ಮ ಗ್ರಾಹಕರ ಸಂತೋಷವನ್ನು ಹೆಚ್ಚಿಸಲು ಹಲವು ಹೊಸ ಕೊಡುಗೆಗಳನ್ನು ಪರಿಚಯಿಸುತ್ತಿದ್ದೇವೆ. ಈ ಕೊಡುಗೆಯಲ್ಲಿ ಗ್ರಾಹಕರು ತಮ್ಮ ಹಳೆಯ ಚಿನ್ನವನ್ನು ವಿನಿಮಯ ಮಾಡಿಕೊಂಡು, ತಮಗೆ ಇಷ್ಟವಾದ ವಿನ್ಯಾಸದ ಆಭರಣಗಳನ್ನು ತಮ್ಮದಾಗಿಸಿಕೊಳ್ಳಲಿದ್ದಾರೆ ಎನ್ನುವ ನಂಬಿಕೆ ಇದೆ' ಎಂದು ಜಿಆರ್‌ಟಿ ಜುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಆನಂದ ಪದ್ಮನಾಭನ್ ಹೇಳಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮುಂಬೈ ಧಾರಣೆ

ಶೇಂಗಾ

26–11–2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1525)
ಒಂದು ವಾರದ ಡೆಲಿವರಿ	1515 (1520)
ಸೋಯಾ ಕಚ್ಚಾ	1310 (1320)
ಪಾಮ್ ವಾರದ ಡೆಲಿವರಿ	973 (973)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ–ಬೆಳ್ಳಿ (ಜಿಎಸ್‌ಟಿ ಸೇರಿ)

ಅಪರಂಜಿ ಚಿನ್ನ 10ಗ್ರಾಂ	52,600 (52,350)
ಬೆಳ್ಳಿ ಕೆ.ಜಿ	62,000 (61,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚಿನ್ನ, ಬೆಳ್ಳಿ ಧಾರಣೆ



ಬೆಂಗಳೂರು

ಸ್ಟಾಂಡರ್ಡ್ ಚಿನ್ನ 10ಗ್ರಾಂ	₹54,370
ಆಭರಣ ಚಿನ್ನ 1ಗ್ರಾಂ	₹5,002
ಬೆಳ್ಳಿ ಕೆ.ಜಿಗೆ	₹63.700


ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್

ಹಿಂಗಾರು ಬಿತ್ತನೆ ಪ್ರದೇಶ ಹೆಚ್ಚಳ

ನವದೆಹಲಿ (ಪಿಟಿಐ): ಅನುಕೂಲಕರ ವಾತಾವರಣ ಮತ್ತು ಬಿತ್ತನೆ ಪ್ರದೇಶದಲ್ಲಿ ಏರಿಕೆ ಆಗಿರುವುದರಿಂದ ಪ್ರಸಕ್ತ ಹಿಂಗಾರು ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಉತ್ತಮವಾಗಿರುವ ನಿರೀಕ್ಷೆ ಮಾಡಲಾಗಿದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಶನಿವಾರ ಹೇಳಿದ್ದಾರೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿಯ ಹಿಂಗಾರು ಅವಧಿಯಲ್ಲಿ ಈವರೆಗೆ 24.13 ಲಕ್ಷ ಹೆಕ್ಟೇರ್‌ನಷ್ಟು ಹೆಚ್ಚು ಪ್ರದೇಶದಲ್ಲಿ ಬಿತ್ತನೆ ಆಗಿದೆ ಎಂದು ತಿಳಿಸಿದರು.

ನವೆಂಬರ್ 25ರವರೆಗಿನ ಮಾಹಿತಿಯ ಪ್ರಕಾರ, 358.59 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹಿಂಗಾರು ಅವಧಿಯ ಆಹಾರಧಾನ್ಯಗಳ ಬಿತ್ತನೆ ಕಾರ್ಯ ನಡೆದಿದೆ. ಕಳೆದ ವರ್ಷ 334.46 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ನಡೆದಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ 24.13 ಲಕ್ಷ ಹೆಕ್ಟೇರ್ ಹೆಚ್ಚುವರಿ ಪ್ರದೇಶದಲ್ಲಿ ಬಿತ್ತನೆ ಆಗಿದೆ.



ಹಿಂಗಾರು ಹಂಗಾಮಿನ ಬೆಳೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲು ತೋಮರ್ ಅವರು ಶನಿವಾರ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿದರು.

ಗೋಧಿ ಬಿತ್ತನೆ ಪ್ರದೇಶವು 138.35 ಲಕ್ಷ ಹೆಕ್ಟೇರ್‌ಗಳಿಂದ 152.88 ಲಕ್ಷ ಹೆಕ್ಟೇರ್‌ಗೆ ಏರಿಕೆ ಆಗಿದೆ. ಕಳೆದ ನಾಲ್ಕು ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಗರಿಷ್ಠ ಪ್ರದೇಶದಲ್ಲಿ ಬಿತ್ತನೆ ಆಗಿದೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ. ಮಧ್ಯಪ್ರದೇಶ, ರಾಜಸ್ಥಾನ, ಪಂಜಾಬ್, ಬಿಹಾರ, ಗುಜರಾತ್, ಜಮ್ಮು–ಕಾಶ್ಮೀರ ಮತ್ತು ಉತ್ತರ ಪ್ರದೇಶದಲ್ಲಿ ಹೆಚ್ಚಿನ ಪ್ರದೇಶದಲ್ಲಿ ಗೋಧಿ ಬಿತ್ತನೆ ಆಗಿದೆ.

ಹಿಂಗಾರು ಬಿತ್ತನೆ ವಿವರ (ಲಕ್ಷ ಹೆಕ್ಟೇರ್‌ಗಳಲ್ಲಿ)

	ಕಳೆದ ವರ್ಷ	ಈ ವರ್ಷ
ಗೋಧಿ	138.35	152.88
ಎಣ್ಣೆಕಾಳು	66.71	75.77
ಬೇಳೆಕಾಳು	94.37	94.26
ಒರಟಿ ಧಾನ್ಯ	26.70	26.54
ಭತ್ತ	8.33	9.14

* ನವೆಂಬರ್ 25ರ ವರೆಗಿನ ಮಾಹಿತಿ

ಡಿ.17ರಂದು ಜಿಎಸ್‌ಟಿ ಮಂಡಳಿ ವರ್ಚುವಲ್ ಸಭೆ

ನವದೆಹಲಿ (ಪಿಟಿಐ): ಜಿಎಸ್‌ಟಿ ಮಂಡಳಿಯ 48ನೇ ಸಭೆಯು ಡಿಸೆಂಬರ್ 17ರಂದು ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆಯಲಿದೆ ಎಂದು ಮಂಡಳಿಯು ಟ್ವೀಟ್ ಮಾಡಿದೆ.

ಕ್ಯಾಸಿನೊ, ಆನ್‌ಲೈನ್ ಆಟಗಳು ಹಾಗೂ ಕುದುರೆ ರೇಸ್‌ಗೆ ಎಷ್ಟು ಪ್ರಮಾಣದ ಜಿಎಸ್‌ಟಿ ವಿಧಿಸಬೇಕು ಹಾಗೂ ಜಿಎಸ್‌ಟಿ ಮೇಲ್ಮನವಿ ನ್ಯಾಯಮಂಡಳಿ ರಚನೆ ಮಾಡುವ ಕುರಿತು ರಾಜ್ಯ ಹಣಕಾಸು ಸಚಿವರ ಸಮಿತಿ ಸಲ್ಲಿಸಿರುವ ವರದಿಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ.

ಭಾರತೀಯ ದಂಡ ಸಂಹಿತೆಯಲ್ಲಿ (ಐಪಿಸಿ) ಅಡಕವಾಗಿರುವ ಶಿಕ್ಷಾರ್ಹ ಅಪರಾಧಗಳ ಉಲ್ಲೇಖವನ್ನು ಜಿಎಸ್‌ಟಿ ಕಾಯ್ದೆಯಿಂದ ತೆಗೆಯುವ ಕುರಿತು ಚರ್ಚೆ ನಡೆಯುವ ಸಾಧ್ಯತೆ ಇದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

ಪ್ರಯೋಜ್ಞರಿಗೂ ಉಪಯುಕ್ತ

CONNECT | **TRAVEL CORNER** | ಕ್ಲಾಸಿಫೈಡ್ಸ್

ರಿಯಲ್ ಎಸ್ಟೇಟ್ ಬೈಯಿಂಗ್

Agricultural Land Converted

General

REQUIRED AGRICULTURAL LAND (ABOUT 100 ACRES) Preferably in GREEN BELT 10-15 kms from Channapatna Town. Contact Secretary: THE IDEAL HOMES CO-OPERATIVE BUILDING SOCIETY LIMITED Rajarajeshwari Nagar, Mysore Road, B'lore - 98. Ph: 080 - 28600892 Mob: 9901500872

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸರಿಪಡಿಸಲಾಗುವುದು. ಸಂಪರ್ಕಿಸಿ: 9880916988

ಉದ್ಯೋಗಾವಕಾಶ

Drivers

ಪ್ರಮುಖ ಟ್ರಾವೆಲ್ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಂತೆ) ಬೆಂಗಳೂರಿನಿಂದ ದೂರದ ಮತ್ತು ಹಗಲು ಪ್ರವಾಸ ಆಟೋಮ್ಯಾಟಿಕ್ ಕಾರ್: ಒಳ್ಳೆಯ ಮತ್ತು ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ವಸತಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನಿಕಟವಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ಕ್ರೈತ ಬೆಂಗಳೂರಿನಲ್ಲಿ ಭಾರಿ ವಾಹನಗಳ ಡ್ರೈವರ್‌ಗಳು ಬೇಕಾಗಿದ್ದಾರೆ, ಗಾಯತ್ರಿ ಅಸೋಸಿಯೇಟ್ಸ್, ಗಟ್ಟಿಗಾಡು ಎದುರುಗಡೆ. ಸಂಪರ್ಕಿಸಿ: 9448488536

General

ಬೆಂಗಳೂರಿನ ಚಾಣಕ್ಯ ವಾಡಿ ಮನೆಯಲ್ಲಿ ಅಡುಗೆ (ವೆಜ್ & ನಾನ್‌ವೆಜ್) ಕೆಲಸ ಹಾಗೂ ಮನೆಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ವಯಸ್ಸು: 30-40 ವರ್ಷ. ಸಂಬಳ: 10,000. ಉಚಿತ ಊಟ+ವಸತಿ ಕೊಡಲಾಗುವುದು. ಸಂಪರ್ಕಿಸಿ: 9902817655

LUXURY RETAIL Showroom Requires Showroom Assistant, Knowledge of Computers, Well Spoken & Basic POS Software. Resume: niveditajegadeesh@gmail.com, 7406009993

Wanted

ಅಡ್ವೋಕೇಟ್ ಬೇಕಾಗಿದ್ದಾರೆ: ಕೋರ್ಟ್‌ಗೆ ಸಂಬಂಧಪಟ್ಟ ಕಾರ್ಯನಿರ್ವಹಿಸಿಕೊಂಡು ಹೋಗಲು ತಾಲ್ಲೂಕು, ಜಿಲ್ಲಾ ಮತ್ತು ಹೈಕೋರ್ಟ್‌ನಲ್ಲಿ ತಿಳುವಳಿಕೆಯುಳ್ಳ ವಕೀಲರು ನಮ್ಮಸಂಸ್ಥೆಗೆ ಬೇಕಾಗಿದ್ದಾರೆ. ಸಂಪರ್ಕಿಸಿ: 9731063110.

ಆಯುರ್ವೇದಿಕ್ ಉತ್ಪನ್ನಗಳ ನೇರ ಮಾರಾಟ 50 ಮಹಿಳಾ ಪ್ರತಿನಿಧಿಗಳು ಬೇಕಾಗಿದ್ದಾರೆ ಸಂಬಳ 30 ರಿಂದ 50 ಸಂಪರ್ಕಿಸಿ: 8892501007/ 9606701007

WISDOM'S CHOICE ORGANICS: Required Freshers BA/ BSc/ B.Com Salary: Rs. 12000/- per month Contact: 9980298940

ವೈವಾಹಿಕ

Brides Wanted

Hindu

ಮದುವೆಯಾಗಲು ಕನ್ಯೆ ಬೇಕಾಗಿದೆ. ವೃತ್ತಿ: ವ್ಯವಸಾಯ, ವಿದ್ಯೆ: SSLC, ಜಾತಿ ಮತ ಕೇಳಲ್ಲ. ಅಪ್ಪ ಅಮ್ಮ ಇಬ್ಬರು ಇಲ್ಲ. 7411809894

Grooms Wanted

Brahmin

ಬ್ರಾಹ್ಮಣ ವಧು, ವಯಸ್ಸು 27, SSLC ಕಲಿತಿರುವ/ ವಯಸ್ಸು 29, PUC/ ವಯಸ್ಸು 33, SSLC ವಧುವಿಗೆ ವರ ಬೇಕಾಗಿದೆ. 9035730677

Telugu

ALLIANCE INVITED from qualified, employed, unmarried Bangalore settled boy for telugu yadava bangalore girl 42 yrs/5'4' MCA nw, nw' whatsapp 9380397152, vijaykumarn2000@rediffmail.com.

ಪ್ರವಾಸ

Travel

★16.02.2023 ಶಿವರಾತ್ರಿ★ ವಿಶೇಷ 9ದಿನ ಕಾಶಿಯಲ್ಲಿ ತಂಗುವುದು, 07.02.2023 16ದಿನ 95ದಿವ್ಯದೇಶ ಪ್ರವಾಸ. ಆರ್.ಗಾಂಧಿ ಟೂರ್ಸ್ (ರಿ) 9945445809, 9902433500

03.12.2022, 2 ದಿನಗಳು ತಲಕಾವೇರಿ, ಭಾಗಮಂಡಲ, ಅಬ್ಬಿಫಾಲ್ಸ್, ದುಬಾರೆ ಇತ್ಯಾದಿ. 10.12.2022, 2 ದಿನಗಳು ಮೈಲಾರಲಿಂಗ, ವಿರೂಪಾಪುರಗಡ್ಡೆ, ಲಕ್ಕುಂಡಿ, ಗದಗಿನಲ್ಲಿ ಸ್ಥಳಗಳು ಇತ್ಯಾದಿ. 9481433157

ಪಿಲ್ಗ್ರಿಮೇಜ್ Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್, 11/12/22 ಪ್ರಾರಂಭ ಜ್ಯೋತಿರ್ಲಿಂಗ, ಕೊಂಕಣ್ F 16/12/22 ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ. 14/12/22 ಕಾಶಿ ಯಾತ್ರೆ, 9591017782, 9964527782

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916544057.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿಸಲಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ. ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

BOOK YOUR CLASSIFIEDS ADVERTISEMENT

PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135
CD Per Sqcm	Single Col		Double Col	Multi Col
	480		450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact: Ph: 080- 45557160 | 163 | 164 | 9731810277 | 9901641752 | 9845114560 | 9886213331

dhclassifieds@deccanherald.co.in www.dhclassifieds.com

*conditions apply

International Agricultural Technology Exhibition & Conference

ಅಂತರಾಷ್ಟ್ರೀಯ ಕೃಷಿ ತಂತ್ರಜ್ಞಾನ ಪ್ರದರ್ಶನ ಮತ್ತು ಸಮ್ಮೇಳನ

Tel Aviv, Israel : 02-04 May 2023 — W VACATIONER

We are excited to invite you to participate in this innovative and amazing experience taking place in Israel, leading agriculture technology for 75 years.

"Agritech Israel 2023" — Such a small country- such great inventions! One Visit, multiple experiences!


- Discovering new products & new technologies
- Learning about breakthrough research
- Agri-innovation demos and announcements
- Farms & Kibbutz visits

Israel Tour Details: Duration: 6 Days Dep: 30-Apr-2023 Ret: 05-May-2023

TOUR HIGHLIGHTS
- 21st International Agricultural Exhibition
- Kibbutz Ginnosar
- Kibbutz Moshav Lachish
- Banana & Mango Plantation
- Naan Dan Jain Irrigation
- Jerusalem
- Tel Aviv City Tour
- Jafa

TOUR COST: Rs. 1,97,000/- Per person on twin sharing basis

Contact Details: Dr.Prasanna D, Way2Agribusiness India Pvt. Ltd. # 636, APMC yard, Yeshwanthpura, Bengaluru- 560022 Mob: 94490 04956 / 82770 78435 / 7708580009 Email: dr.prasannad@way2agribusiness.com



ಶ್ರೀ ರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ — 31 ವರ್ಷದ ಸುದೀರ್ಘ ಅನುಭವವುಳ್ಳ ವಂಶಪಾರಂಪರಿಕ ಜ್ಯೋತಿಷ್ಯರು — ಗುರೂಜಿ ಮಹೇಶ್‌ಭಟ್ — Google, TV, FB, Insta, Youtube ... ದೂರದ ಊರಿನವರಿಗೆ ಫೋನಿನ ಮೂಲಕ ಪರಿಹಾರ. 9686999517

ಶ್ರೀ ಮಲ್ಲಿಕಾರ್ಜುನ ಟ್ರಾವೆಲ್ಸ್ shree mallikarjuna travels — explore the world with comfort

ಫಿಕ್ಸೆಡ್ ಗ್ರೂಪ್ ಟೂರ್/FIXED DEPARTURE TOURS



ಶಿರಡಿ ಪ್ರವಾಸ SHIRDI TOUR 7 NIGHT'S / 8 DAY'S DATE –DEC 16TH 2022	ಗುಜರಾತ್ ಪ್ರವಾಸ GUJRAT TOUR 8 NIGHT'S /9 DAY'S DATE- 14TH DEC 2022	ಗುಜರಾತ್/ಮಧ್ಯಪ್ರದೇಶ GUJARAT &MP TOUR 11 NIGHT'S /12 DAY'S DATE- 27TH JAN 2023
ಕಾಶಿ ಯಾತ್ರೆ KASHI YATRA 5 NIGHT'S / 6 DAY'S DATE-16th JAN 2023	ಶಿಮ್ಲಾ, ಮನಾಲಿ ಪ್ರವಾಸ SHIMLA MANALI TOUR 6 NIGHT'S / 7 DAY'S DATE-13th DEC 2022	ರಾಜಸ್ಥಾನ ಪ್ರವಾಸ RAJASTHAN TOUR 11 NIGHT'S / 12 DAY'S DATE-4th JAN 2023


Cost Includes: Air Tickets*, 2X2 A/C Bus Transportation, Food, Twin Sharing Room's, Entry Fees* *T&C apply

Office Address: 19/1 1st Main Road, Vijaynagar, Bangalore: 560040

Mob: 9902008056, 9880847001, 9342848791

ಶ್ರೀ ಮಲ್ಲಿಕಾರ್ಜುನ ಟ್ರಾವೆಲ್ಸ್ shree mallikarjuna travels — explore the world with comfort

ಫಿಕ್ಸೆಡ್ ಗ್ರೂಪ್ ಟೂರ್/FIXED DEPARTURE TOURS



ಗೋಲ್ಡನ್ ಟ್ರೈಯಾಂಗಲ್ GOLDEN TRIANGLE 5 NIGHT'S /6 DAY'S DATE- 13th DEC 2022	ಉತ್ತರಭಾರತ ಪ್ರವಾಸ NORTH INDIA TOUR 10 NIGHT'S /11DAY'S DATE- 20TH DEC 2022	ಉಜ್ಜಯಿನಿ ಪ್ರವಾಸ UJJAINI TOUR 3 NIGHT'S /4 DAY'S DATE- 15TH DEC 2022
ಮಂತ್ರಾಲಯ ಶ್ರೀಶೈಲಂ ANDHRA TOUR 4 NIGHT'S /5 DAY'S DATE-15 DEC 2022	ಕೇರಳ ಪ್ರವಾಸ KERALA TOUR 6 NIGHT'S / 7 DAY'S DATE- 18 DEC 2022	ಗೋವಾ ಪ್ರವಾಸ GOA TOUR 3 NIGHT'S / 4 DAY'S DATE- 29TH DEC 2022

Cost Includes: Air Tickets*, 2X2 A/C Bus Transportation, Food, Twin Sharing Room's, Entry Fees* *T&C apply

Office Address: 19/1 1st Main Road, Vijaynagar, Bangalore: 560040

Mob: 9902008056, 9880847001, 9342848791

ಏಕರೂಪ ನಾಗರಿಕ ಸಂಹಿತೆ ಜಾರಿ, 20 ಲಕ್ಷ ಉದ್ಯೋಗ ಅವಕಾಶ ಸೃಷ್ಟಿ: ಬಿಜೆಪಿ ಪ್ರಣಾಳಿಕೆ

‘ಮದರಸ ಸಮೀಕ್ಷೆ, ವಕ್ಫ್ ಆಸ್ತಿ ಪರಿಶೀಲನೆ’

ಗಾಂಧಿನಗರ (ಪಿಟಿಐ): ಗುಜರಾತ್‌ನ ಆಡಳಿತಾರೂಢ ಬಿಜೆಪಿ ವಿಧಾನಸಭಾ ಚುನಾವಣೆಯ ಪ್ರಣಾಳಿಕೆಯನ್ನು ಶನಿವಾರ ಬಿಡುಗಡೆ ಮಾಡಿದೆ. ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ, ಭಯೋತ್ಪಾದನೆ ಬೆದರಿಕೆಯನ್ನು ನಿರ್ಮೂಲನೆ ಮಾಡುವುದಕ್ಕಾಗಿ ‘ಮೂಲಭೂತವಾದದತ್ತ ಜನರನ್ನು ಆಕರ್ಷಿಸುವುದನ್ನು ತಡೆಯುವ ಕೇಂದ್ರ’ ಸ್ಥಾಪನೆಯ ಭರವಸೆಯನ್ನು ನೀಡಲಾಗಿದೆ. ಮದರಸಗಳ ಪಠ್ಯಕ್ರಮಗಳ ಸಮೀಕ್ಷೆ ಮತ್ತು ವಕ್ಫ್ ಮಂಡಳಿಯ ಆಸ್ತಿಯ ಪರಿಶೀಲನೆಯ ವಾಗ್ದಾನವೂ ಪ್ರಣಾಳಿಕೆಯಲ್ಲಿ ಒಳಗೊಂಡಿದೆ.

20 ಲಕ್ಷ ಉದ್ಯೋಗ ಅವಕಾಶಗಳ ಸೃಷ್ಟಿ, ರಾಜ್ಯದ ಅರ್ಥವ್ಯವಸ್ಥೆಯನ್ನು ಮುಂದಿನ ಐದು ವರ್ಷದಲ್ಲಿ ಒಂದು ಲಕ್ಷ ಕೋಟಿ ಡಾಲರ್‌ಗೆ (ಸುಮಾರು ₹80 ಲಕ್ಷ ಕೋಟಿ) ಏರಿಸುವುದು, ಮಹಿಳೆಯರಿಗಾಗಿಯೇ ಒಂದು ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ ಭರವಸೆಯನ್ನೂ ಪ್ರಣಾಳಿಕೆಯು ಹೊಂದಿದೆ.

ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಬಿಜೆಪಿ ರಾಜ್ಯ ಘಟಕದ ಕೇಂದ್ರ ಕಚೇರಿಯಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿದರು. ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮತ್ತು ರಾಜ್ಯ ಘಟಕದ ಅಧ್ಯಕ್ಷ ಸಿ.ಆರ್. ಪಾಟೀಲ್ ಅವರು ಹಾಜರಿದ್ದರು.

ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯ (ಆಯುಷ್ಮಾನ್ ಭಾರತ) ವಿಮಾ ಮೊತ್ತವನ್ನು ಈಗಿನ ₹5 ಲಕ್ಷದಿಂದ ₹10 ಲಕ್ಷಕ್ಕೆ ಏರಿಸಲಾಗುವುದು. ಹೆಣ್ಣು ಮಕ್ಕಳಿಗೆ ಪೂರ್ವ ಪ್ರಾಥಮಿಕದಿಂದ ಸ್ನಾತಕೋತ್ತರದವರೆಗೆ ಉಚಿತ ಶಿಕ್ಷಣ ನೀಡುವ ಭರವಸೆಯನ್ನೂ ಕೊಡಲಾಗಿದೆ.

‘ರಾಜ್ಯ ಸರ್ಕಾರ ನೇಮಿಸಿರುವ ಸಮಿತಿಯ ಶಿಫಾರಸು ಅನುಸಾರ ಏಕರೂಪ ನಾಗರಿಕ ಸಂಹಿತೆ ಜಾರಿಯನ್ನು ಪೂರ್ಣಗೊಳಿಸುತ್ತೇವೆ’ ಎಂದು ನಡ್ಡಾ ಹೇಳಿದ್ದಾರೆ. ಏಕರೂಪ ನಾಗರಿಕ ಸಂಹಿತೆ ಜಾರಿಗಾಗಿ ಸಮಿತಿಯೊಂದನ್ನು ರಚಿಸುವುದಾಗಿ ಗುಜರಾತ್ ಸರ್ಕಾರವು ಇತ್ತೀಚೆಗೆ ಹೇಳಿತ್ತು. ಬಿಜೆಪಿ ಆಳ್ವಿಕೆ ಇರುವ ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದಲ್ಲಿಯೂ ಏಕರೂಪ ನಾಗರಿಕ ಸಂಹಿತೆ ಜಾರಿಯ ಭರವಸೆ ಕೊಡಲಾಗಿದೆ.

ಬಲವಂತದ ಮತಾಂತರ ಮಾಡಿದವರಿಗೆ ಗುಜರಾತ್ ಧಾರ್ಮಿಕ ಸ್ವಾತಂತ್ರ್ಯ (ತಿದ್ದುಪಡಿ) ಕಾಯ್ದೆ ಅಡಿಯಲ್ಲಿ ಕಠಿಣ ಶಿಕ್ಷೆ ದೊರೆಯುವಂತೆ ನೋಡಿಕೊಳ್ಳಲಾಗುವುದು ಎಂಬ ಭರವಸೆಯೂ ಇದೆ. ಮುಖ್ಯಮಂತ್ರಿ ಶರಣಾರ್ಥಿ ಯೋಜನೆ ಎಂಬ ಹೊಸ ಯೋಜನೆಯ ಭರವಸೆ ಕೊಡಲಾಗಿದೆ. ಪೌರತ್ವ ತಿದ್ದುಪಡಿ ಕಾಯ್ದೆಯಡಿ ಪೌರತ್ವ ಪಡೆದುಕೊಂಡವರಿಗೆ ನೆರವು ನೀಡುವುದು ಈ ಯೋಜನೆಯ ಉದ್ದೇಶವಾಗಿದೆ. ಇಂತಹ ನಿರಾಶ್ರಿತರಿಗೆ ಐದು ವರ್ಷ ಕಾಲ ವರ್ಷಕ್ಕೆ ₹10 ಸಾವಿರ ನೆರವು ನೀಡಲಾಗುವುದು ಎಂಬ ಭರವಸೆ ಕೊಡಲಾಗಿದೆ.


ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ರಾಜ್ಯ ಘಟಕದ ಅಧ್ಯಕ್ಷ ಸಿ.ಆರ್. ಪಾಟೀಲ್ ಅವರು ಪಕ್ಷದ ಪ್ರಣಾಳಿಕೆಯನ್ನು ಶನಿವಾರ ಬಿಡುಗಡೆ ಮಾಡಿದರು ಪಿಟಿಐ ಚಿತ್ರ

‘ಅತಿ ದೊಡ್ಡ ಶ್ರೀಕೃಷ್ಣ ಮೂರ್ತಿ’

ಜಗತ್ತಿನಲ್ಲಿಯೇ ಅತಿ ಎತ್ತರದ ಶ್ರೀಕೃಷ್ಣ ಮೂರ್ತಿಯನ್ನು ಸ್ಥಾಪಿಸುವ ಭರವಸೆಯನ್ನು ಬಿಜೆಪಿ ನೀಡಿದೆ. ದೇವಭೂಮಿ ದ್ವಾರಕಾ ಕಾರಿಡಾರ್ ಅಭಿವೃದ್ಧಿಪಡಿಸಲಾಗುವುದು. ಇದು ಪಶ್ಚಿಮ ಭಾರತದ ಅತ್ಯಂತ ದೊಡ್ಡ ಆಧ್ಯಾತ್ಮಿಕ ಕೇಂದ್ರ ಎನಿಸಿಕೊಳ್ಳಲಿದೆ ಎಂದು ಬಿಜೆಪಿ ಹೇಳಿದೆ. ದೇವಾಲಯಗಳ ನವೀಕರಣಕ್ಕೆ ₹1,000 ಕೋಟಿ ಮೀಸಲು ಇರಿಸುವ ಭರವಸೆಯನ್ನೂ ಬಿಜೆಪಿ ಕೊಟ್ಟಿದೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

ಭರವಸೆಗಳೇನು?

- ಗುಜರಾತ್ ಸಾರ್ವಜನಿಕ ಮತ್ತು ಖಾಸಗಿ ಆಸ್ತಿಗೆ ಹಾನಿಯಾದರೆ ದಂಡ ವಸೂಲಿ ಕಾಯ್ದೆಯನ್ನು ಜಾರಿಗೆ ತರಲಾಗುವುದು. ಸಮಾಜ ವಿರೋಧಿ ಶಕ್ತಿಗಳು ಸಾರ್ವಜನಿಕ ಮತ್ತು ಖಾಸಗಿ ಆಸ್ತಿಗೆ ಹಾನಿ ಮಾಡಿದರೆ, ಆ ನಷ್ಟವನ್ನು ಅವರಿಂದಲೇ ಪಡೆಯುವುದು ಈ ಕಾಯ್ದೆಯ ಉದ್ದೇಶ
- ದಕ್ಷಿಣ ಗುಜರಾತ್ ಮತ್ತು ಸೌರಾಷ್ಟ್ರದಲ್ಲಿ ಎರಡು ಸಮುದ್ರ ಆಹಾರ ಪಾರ್ಕ್
- ಆರೋಗ್ಯ ಕೇಂದ್ರಗಳಲ್ಲಿ ಉಚಿತ ಪರೀಕ್ಷೆ ಸೇವೆ, ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಲ್ಯಾಬೊರೇಟರಿ
- ಏಮ್ಸ್ ಮಾದರಿಯ ಎರಡು ಸಂಸ್ಥೆಗಳು
- 20 ಸಾವಿರ ಸರ್ಕಾರಿ ಶಾಲೆಗಳನ್ನು ‘ಉತ್ಕೃಷ್ಟತಾ ಶಾಲೆ’ಗಳಾಗಿ ಪರಿವರ್ತಿಸಲಾಗುವುದು
- ಐಐಟಿ ಮಾದರಿಯಲ್ಲಿ ನಾಲ್ಕು ಗುಜರಾತ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸ್ಥಾಪನೆ
- ಮೂರು ಹೊತ್ತು ಊಟ ಒದಗಿಸುವ ಅನ್ನಪೂರ್ಣಾ ಕ್ಯಾಂಟೀನ್ ಸ್ಥಾಪನೆ. ಇಲ್ಲಿ ತಲಾ ₹5ಕ್ಕೆ ಮೂರು ಹೊತ್ತೂ ಊಟ ಲಭ್ಯವಿರಲಿದೆ

‘ಪಾಠ ಕಲಿಸಿದ್ದೇವೆ’ ಹೇಳಿಕೆಗೆ ಒವೈಸಿ ತಿರುಗೇಟು



ಅಹಮದಾಬಾದ್ (ಪಿಟಿಐ): ಗಲಭೆಕೋರರಿಗೆ ಬಿಜೆಪಿ ತಕ್ಕ ಪಾಠ ಕಲಿಸಿದೆ ಎಂಬ ಕೇಂದ್ರ ಗೃಹಸಚಿವ ಅಮಿತ್ ಶಾ ಹೇಳಿಕೆಗೆ ತಿರುಗೇಟು ನೀಡಿರುವ ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ, ಅಧಿಕಾರ ಶಾಶ್ವತವಲ್ಲ ಎಂದಿದ್ದಾರೆ. ಅಮಿತ್ ಶಾ ಅವರಿಗೆ ಅಧಿಕಾರದ ಅಮಲೇರಿದೆ ಎಂದೂ ದೂರಿದ್ದಾರೆ.

ಗುಜರಾತ್ ವಿಧಾನಸಭೆ ಚುನಾವಣಾ ಪ್ರಚಾರದ ವೇಳೆ ಶುಕ್ರವಾರ ಮಾತನಾಡಿದ್ದ ಶಾ, ‘ಹಿಂಸೆಯಲ್ಲಿ ತೊಡಗಿದ್ದ ಸಮಾಜ ವಿರೋಧಿ ಶಕ್ತಿಗಳಿಗೆ 2002ರಲ್ಲಿ ನಾವು ತಕ್ಕ ಉತ್ತರ ನೀಡಿದ್ದರಿಂದ, ಆ ಬಳಿಕ ಗುಜರಾತ್‌ನಲ್ಲಿ ಹಿಂಸಾಚಾರದ ಪ್ರಕರಣಗಳು ನಿಂತುಹೋದವು. ಗುಜರಾತ್‌ನಲ್ಲಿ ಶಾಶ್ವತವಾಗಿ ಶಾಂತಿ ನೆಲೆಸಿತು’ ಎಂದು ಹೇಳಿದ್ದರು.

ಮುಸ್ಲಿಂ ಸಮುದಾಯದ ಪ್ರಾಬಲ್ಯವಿರುವ ಅಹಮದಾಬಾದ್‌ನ ಜುಹಾನ್‌ಪುರದಲ್ಲಿ ಸಭೆ ಉದ್ದೇಶಿಸಿ ಮಾತನಾಡಿದ ಒವೈಸಿ, ‘ಬಿಲ್ಕಿಸ್ ಬಾನು ಪ್ರಕರಣದಲ್ಲಿ ಅತ್ಯಾಚಾರ ಹಾಗೂ ಕೊಲೆ ಆರೋಪದಲ್ಲಿ ಜೈಲಿನಲ್ಲಿದ್ದ ಅಪರಾಧಿಗಳ ಬಿಡುಗಡೆಯ ಪಾಠವನ್ನೂ ಶಾ ಮಾಡಿದ್ದಾರೆ’ ಎಂದು ಟೀಕಿಸಿದ್ದಾರೆ.

‘2002ರಲ್ಲಿ ನೀವು ಕಲಿಸಿದ ಪಾಠದ ಜೊತೆಗೆ, ಬಿಲ್ಕಿಸ್ ಬಾನು ಪ್ರಕರಣದ ಅತ್ಯಾಚಾರಿಗಳ ಬಿಡುಗಡೆಯ ಪಾಠ; ಬಿಲ್ಕಿಸ್ ಬಾನು ಎದುರಿಗೆ ಆಕೆಯ ಮೂರು ವರ್ಷದ ಮಗುವಿನ ಹತ್ಯೆ ಮಾಡಿದ ಹಂತಕರ ಬಿಡುಗಡೆಯ ಪಾಠ; ಕಾಂಗ್ರೆಸ್ ಸಂಸದ ಎಹ್ಸಾನ್ ಜಾಫ್ರಿ ಹತ್ಯೆಯ ಪಾಠ; ಗುಲ್ಬರ್ಗ್ ಸೊಸೈಟಿ ಮತ್ತು ಬೆಸ್ಟ್ ಬೇಕರಿ ಪ್ರಕರಣಗಳಲ್ಲೂ ಪಾಠ ಕಲಿಸಿದ್ದೀರಿ’ ಎಂದು ಒವೈಸಿ ಹೇಳಿದ್ದಾರೆ. ಜಾಫ್ರಿ ಸೇರಿದಂತೆ ಮುಸ್ಲಿಮರ ಹತ್ಯೆಗೆ ಕಾರಣವಾದ ಗೋಧ್ರೋತ್ತರ ಘಟನೆಗಳನ್ನು ಒವೈಸಿ ಅವರು ಪ್ರಸ್ತಾಪಿಸಿದ್ದಾರೆ.

ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳನ್ನು ಗುಜರಾತ್ ಸರ್ಕಾರ ಇದೇ ಆಗಸ್ಟ್‌ನಲ್ಲಿ ಬಿಡುಗಡೆ ಮಾಡಿತ್ತು.

ನುಡಿ-ಕಿಡಿ



ಗುಜರಾತ್‌ನಲ್ಲಿ ದಾಖಲೆ ಗೆಲುವು ಪಡೆಯಲಿರುವ ಎಎಪಿ, ರಾಷ್ಟ್ರೀಯ ಪಕ್ಷದ ಮಾನ್ಯತೆ ಪಡೆದುಕೊಳ್ಳಲಿದೆ. 2012ರ ನವೆಂಬರ್ 26ರಂದು ಸ್ಥಾಪನೆಗೊಂಡ ಪಕ್ಷವು ಹಲವು ದಾಖಲೆ ಸೃಷ್ಟಿಸಿದೆ. ಈಗ ಈ ದೇಶದ ಜನರ ಏಕೈಕ ಆಶಾಕಿರಣವಾಗಿದೆ

ಅರವಿಂದ ಕೇಜ್ರಿವಾಲ್, ಎಎಪಿ ಸಂಚಾಲಕ




ಹಿಮಾಚಲ ಪ್ರದೇಶದಲ್ಲಿ ಎಎಪಿ ಎಲ್ಲ 67 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. ಈ ಎಲ್ಲ ಕ್ಷೇತ್ರಗಳಲ್ಲಿಯೂ ಎಎಪಿ ಅಭ್ಯರ್ಥಿಗಳು ಠೇವಣಿ ಕಳೆದುಕೊಳ್ಳಲಿದ್ದಾರೆ ಎಂದು ನಾನು ಬರೆದು ಕೊಡುವೆ. ಗುಜರಾತ್‌ನಲ್ಲಿಯೂ ಆ ಪಕ್ಷಕ್ಕೆ ಅದೇ ಗತಿ ಎದುರಾಗಲಿದೆ

ಜೆ.ಪಿ. ನಡ್ಡಾ, ಬಿಜೆಪಿ ಅಧ್ಯಕ್ಷ

ಭೂ ಪರಿವೀಕ್ಷಣಾ ಉಪಗ್ರಹ ‘ಓಷನ್‌ಸ್ಯಾಟ್–3’ ಉಡ್ಡಯನ

ಕಕ್ಷೆ ಸೇರಿದವು 9 ಉಪಗ್ರಹ


44.4 ಮೀಟರ್ ರಾಕೆಟ್ ಎತ್ತರ

1,117 ಕೆ.ಜಿ ಓಷನ್‌ಸ್ಯಾಟ್–3 ಉಪಗ್ರಹದ ತೂಕ

11.56 ಶನಿವಾರ ಬೆಳಿಗ್ಗೆ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆ



ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಒಂಬತ್ತು ಉಪಗ್ರಹಗಳ ಗುಚ್ಛವನ್ನು ಶನಿವಾರ ನಭಕ್ಕೆ ಕಳುಹಿಸಿದೆ. ಭೂ ಪರಿವೀಕ್ಷಣಾ ಉಪಗ್ರಹವಾದ ‘ಓಷನ್‌ಸ್ಯಾಟ್-3’ ಜೊತೆಗೆ ಎಂಟು ಚಿಕ್ಕ ಉಪಗ್ರಹಗಳನ್ನು ರಾಕೆಟ್ ಹೊತ್ತೊಯ್ಯಿತು. ಬೆಂಗಳೂರಿನ ‘ಪಿಕ್ಸೆಲ್’ ಎಂಬ ಖಾಸಗಿ ಸಂಸ್ಥೆ ನಿರ್ಮಿಸಿರುವ ‘ಆನಂದ್’ ಉಪಗ್ರಹವೂ ಇದರಲ್ಲಿದೆ. ಇದು ಇಸ್ರೊ ಕೈಗೊಂಡ ದೀರ್ಘ ಅವಧಿಯ (2 ಗಂಟೆ) ಉಡ್ಡಯನ ಯೋಜನೆ. ಸಂಸ್ಥೆಯ ಅತ್ಯಂತ ಯಶಸ್ವಿ ಪಿಎಸ್‌ಎಲ್‌ವಿ ರಾಕೆಟ್‌ನ 56ನೇ ಬಾಹ್ಯಾಕಾಶ ಪಯಣವಿದು. ಈ ಮೂಲಕ ವರ್ಷದ ಐದನೇ ದೊಡ್ಡ ಹಾಗೂ ಕೊನೆಯ ಕಾರ್ಯಾಚರಣೆಯನ್ನು ಇಸ್ರೊ ಪೂರ್ಣಗೊಳಿಸಿದೆ

ಭಿನ್ನ ಕಕ್ಷೆಗಳಿಗೆ ಸೇರ್ಪಡೆ ಪ್ರಕ್ರಿಯೆ

- ಭೂ ಪರಿವೀಕ್ಷಣಾ ಉಪಗ್ರಹವಾದ (ಇಒಎಸ್-06) ‘ಓಷನ್‌ಸ್ಯಾಟ್-3’ ಅನ್ನು ಉಡ್ಡಯನವಾದ **17** ನಿಮಿಷಗಳಲ್ಲಿ, **742** ಕಿಲೋಮೀಟರ್ ಎತ್ತರದ ಕಕ್ಷೆಗೆ ಸೇರಿಸಲಾಯಿತು
- ನಂತರ ರಾಕೆಟ್ ಅನ್ನು ಕೆಳಗಿಳಿಸಿ, ಉಳಿದ ಎಂಟು ಚಿಕ್ಕ ಉಪಗ್ರಹಗಳನ್ನು **528** ಕಿಲೋಮೀಟರ್ ಎತ್ತರದ ಕಕ್ಷೆಗೆ ಸೇರಿಸಲಾಯಿತು
- ಈ ಎಲ್ಲ ಪ್ರಕ್ರಿಯೆ ಮುಗಿಯಲು ವಿಜ್ಞಾನಿಗಳಿಗೆ **2** ಗಂಟೆಯಷ್ಟು ಸಮಯ ಹಿಡಿಯಿತು



ಓಷನ್‌ಸ್ಯಾಟ್–3

ಓಷನ್‌ಸ್ಯಾಟ್–3 ಉಪಗ್ರಹದಲ್ಲಿ ಸುಧಾರಿತ ಉಪಕರಣಗಳನ್ನು ಬಳಸಲಾಗಿದೆ. ಸಾಗರ ಹವಾಮಾನದ ಮೇಲೆ ನಿಗಾ ಇರಿಸುವುದು ಇದರ ಪ್ರಮುಖ ಕೆಲಸಗಳಲ್ಲಿ ಒಂದು. ಜೊತೆಗೆ ಏರೋಸಾಲ್ (ಅನಿಲಗಳಲ್ಲಿರುವ ದ್ರವಕಣಗಳು) ಮಾರುತಗಳನ್ನೂ ಗಮನಿಸಿ, ದತ್ತಾಂಶಗಳನ್ನು ರವಾನಿಸುತ್ತದೆ. ಸರಣಿಯ 2ನೇ ಉಪಗ್ರಹದ ಕೆಲಸವನ್ನು 3ನೇ ಉಪಗ್ರಹ ಮುಂದುವರಿಸಲಿದೆ

- ಓಷನ್‌ಸ್ಯಾಟ್ ಸರಣಿಯ ಭೂ ಪರಿವೀಕ್ಷಣಾ ಉಪಗ್ರಹಗಳಲ್ಲಿ ಇದು ಮೂರನೆಯದ್ದು
- ಈ ಸರಣಿಯ ಮೊದಲ ಉಪಗ್ರಹವನ್ನು **1999**ರಲ್ಲಿ ಉಡಾವಣೆ ಮಾಡಲಾಗಿತ್ತು, ಅದು ಈಗ ನಿವೃತ್ತವಾಗಿದೆ
- ಸರಣಿಯ ಎರಡನೇ ಉಪಗ್ರಹವು **2009**ರಲ್ಲಿ ಕಕ್ಷೆ ಸೇರಿತ್ತು. ಇದು ಕಾರ್ಯಾಚರಣೆಯಲ್ಲಿದೆ

ಉಡ್ಡಯನ ಮಾಡಲಾದ ಉಪಗ್ರಹಗಳು

ಓಷನ್‌ಸ್ಯಾಟ್–3

ಇಸ್ರೊ ನಿರ್ಮಿಸಿರುವ ಈ ಉಪಗ್ರಹವು ಓಷನ್ ಕಲರ್ ಮಾನಿಟರ್, ಸೀ ಸರ್ಫೇಸ್ ಟೆಂಪರೇಚರ್ ಮಾನಿಟರ್, ಕು ಬ್ಯಾಂಡ್ ಸ್ಕ್ಯಾಟರೋಮೀಟರ್, ಎಆರ್‌ಜಿಒಎಸ್ ಉಪಕರಣಗಳನ್ನು ಒಳಗೊಂಡಿದೆ

ಐಎನ್‌ಎಸ್–2ಬಿ

- ಇದು ಭೂತಾನ್‌ಗಾಗಿ ಇಸ್ರೊ ತಯಾರಿಸಿರುವ ನ್ಯಾನೊ ಸ್ಯಾಟಲೈಟ್–2 (ಐಎನ್‌ಎಸ್–2ಬಿ). ಇದರಲ್ಲಿ ಎರಡು ಉಪಕರಣಗಳಿವೆ. ನ್ಯಾನೊ ಎಂಎಕ್ಸ್ ಮತ್ತು ಎಪಿಆರ್‌ಎಸ್ ಡಿಜಿಪೀಟರ್
- ಇಸ್ರೊದ ಯುಆರ್ ರಾವ್ ಸ್ಯಾಟಲೈಟ್ ಸೆಂಟರ್ ಮತ್ತು ಭೂತಾನ್‌ನ ಇನ್ಫರ್ಮೇಷನ್ ಟೆಕ್ನಾಲಜಿ ಇಲಾಖೆ ಜಂಟಿಯಾಗಿ ಅಭಿವೃದ್ಧಿಪಡಿಸಿವೆ

ಆನಂದ್

ಬೆಂಗಳೂರಿನ ಬಾಹ್ಯಾಕಾಶ ನವೋದ್ಯಮ ‘ಪಿಕ್ಸೆಲ್’ ಅಭಿವೃದ್ಧಿಪಡಿಸಿರುವ ಈ ಖಾಸಗಿ ಉಪಗ್ರಹವು ಕೃಷಿ, ಹವಾಮಾನ ಬದಲಾವಣೆ ಮತ್ತು ನಗರ ಯೋಜನೆಗೆ ಸಂಬಂಧಿಸಿದ ದತ್ತಾಂಶ ಹಾಗೂ ಉತ್ಕೃಷ್ಟ ದರ್ಜೆಯ ಚಿತ್ರಗಳನ್ನು ಒದಗಿಸಲಿದೆ. ಭೂಮಿಯ ಮೇಲೆ ನಿರಂತರವಾಗಿ ನಿಗಾ ಇಡುತ್ತದೆ

ಥೈಬೋಲ್ಟ್ (ಎರಡು ಉಪಗ್ರಹ)

ಧ್ರುವ್ ಸ್ಪೇಸ್ ಬಾಹ್ಯಾಕಾಶ ನವೋದ್ಯಮವು ಎರಡು ಸಂಹವನ ಉಪಗ್ರಹಗಳನ್ನು ಅಭಿವೃದ್ಧಿಪಡಿಸಿದೆ

ಆಸ್ಟ್ರೋಕ್ಯಾಸ್ಟ್ (4 ಉಪಗ್ರಹ)

ಇಂಟರ್ನೆಟ್ ಆಫ್ ಥಿಂಗ್ಸ್‌ಗೆ (ಐಒಟಿ) ಸಂಬಂಧಿಸಿದ 4 ಉಪಗ್ರಹಗಳನ್ನು ಅಮೆರಿಕದ ಸ್ಪೇಸ್‌ಫ್ಲೈಟ್ ಅಭಿವೃದ್ಧಿ ಪಡಿಸಿದೆ

ಆಧಾರ: ಪಿಟಿಐ, ಇಸ್ರೊ

ತಿಹಾರ್ ಜೈಲು ಅಧೀಕ್ಷಕರ ಜತೆ ಸಚಿವ ಜೈನ್ ಚರ್ಚೆ

ಜಾಲತಾಣಗಳಲ್ಲಿ ವಿಡಿಯೊ ಸೋರಿಕೆ

ನವದೆಹಲಿ (ಪಿಟಿಐ): ದೆಹಲಿ ಸಚಿವ ಸತ್ಯೇಂದ್ರ ಜೈನ್ ಅವರು ತಿಹಾರ್ ಜೈಲಿನೊಳಗೆ ಅಧೀಕ್ಷಕರೊಂದಿಗೆ ಚರ್ಚೆ ನಡೆಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಶನಿವಾರ ಹರಿದಾಡುತ್ತಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಎಎಪಿ ನಾಯಕ ಜೈನ್ ಅವರು ಜೈಲಿನ ತಮ್ಮ ಕೋಣೆಯೊಳಗೆ ಕಾರಾಗೃಹದ ಅಧೀಕ್ಷಕರ ಜೊತೆ ಚರ್ಚಿಸುತ್ತಿರುವ ಸಿಸಿಟಿವಿ ಕ್ಯಾಮೆರಾ ದೃಶ್ಯವನ್ನು ಬಿಜೆಪಿಯ ಕೆಲವು ನಾಯಕರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

‘ಪ್ರಾಮಾಣಿಕ ಸಚಿವ ಜೈನ್ ಅವರ ಹೊಸ ವಿಡಿಯೊ ನೋಡಿ. ರಾತ್ರಿ 8 ಗಂಟೆಗೆ ಜೈಲು ಸಚಿವರ ಕೋರ್ಟ್‌ನಲ್ಲಿ ಜೈಲಿನ ಅಧೀಕ್ಷಕರು ಹಾಜರಾಗಿದ್ದಾರೆ’ ಎಂದು ದೆಹಲಿ ಬಿಜೆಪಿ ಐಟಿ ಸೆಲ್‌ನ ಮುಖ್ಯಸ್ಥ ಹರೀಶ್ ಖುರಾನ ಅವರು ಸಿಸಿಟಿವಿ ವಿಡಿಯೊದೊಂದಿಗೆ ಟ್ವೀಟ್ ಮಾಡಿದ್ದಾರೆ.

ಜೈನ್ ಅವರು ಪಾದಗಳಿಗೆ ಮಸಾಜ್ ಮಾಡಿಸಿಕೊಳ್ಳುತ್ತಿರುವ ಸಿಸಿಟಿವಿ ವಿಡಿಯೊ ಸೋರಿಕೆಯಾದ ಬೆನ್ನಲ್ಲೇ, ಜೈಲಿನ ಅಧೀಕ್ಷಕ ಅಜಿತ್ ಕುಮಾರ್ ಅವರನ್ನು ಅಮಾನತು ಮಾಡಲಾಗಿತ್ತು.

ಜೈನ್ ಅವರು ಜೈಲಿನೊಳಗೆ ವಿಶೇಷ ಸವಲತ್ತು ಪಡೆದುಕೊಳ್ಳುತ್ತಿದ್ದಾರೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ನ್ಯಾಯಾಲಯಕ್ಕೆ ತಿಳಿಸಿತ್ತು. ಈ ವೇಳೆ ಸಾಕ್ಷಿಯ ರೂಪದಲ್ಲಿ ಸಿಸಿಟಿವಿ ವಿಡಿಯೊಗಳನ್ನು ಒದಗಿಸಿತ್ತು. ಸಿಸಿಟಿವಿ ದೃಶ್ಯಗಳು ಸೋರಿಕೆಯಾಗಿರುವುದರ ಹಿಂದೆ ತಮ್ಮ ಕೈವಾಡ ಇಲ್ಲ ಎಂದು ದೆಹಲಿ ಕೋರ್ಟ್‌ಗೆ ಇ.ಡಿ ತಿಳಿಸಿದೆ.

ಈಗಾಗಲೇ ಜೈಲಿನೊಳಗೆ ಮಸಾಜ್ ಮಾಡಿಸಿಕೊಳ್ಳುತ್ತಿರುವುದು ಮತ್ತು ವಿಶೇಷ ಸವಲತ್ತು ಪಡೆಯುತ್ತಿರುವುದರ ಸಿಸಿಟಿವಿ ಕ್ಯಾಮೆರಾದ ವಿಡಿಯೊ ಸೋರಿಕೆಯಾಗಿವೆ. ಈ ಹಿನ್ನೆಲೆಯಲ್ಲಿ ವಿಡಿಯೊಗಳು ಮಾಧ್ಯಮಗಳಿಗೆ ಸೋರಿಕೆ ಆಗುತ್ತಿರುವುದನ್ನು ತಡೆಯುವಂತೆ ಜೈನ್ ದೆಹಲಿ ಕೋರ್ಟ್‌ಗೆ ಮನವಿ ಸಲ್ಲಿಸಿದ್ದಾರೆ.

ಜೈಲಿನಲ್ಲಿ ಜೈನ್‌ಗೆ ವಿಶೇಷ ಆತಿಥ್ಯ ನೀಡಲಾಗಿತ್ತು: ದೆಹಲಿ ನ್ಯಾಯಾಲಯ

ನವದೆಹಲಿ (ಪಿಟಿಐ): ತಿಹಾರ್ ಜೈಲಿನಲ್ಲಿರುವ ಸಚಿವ ಸತ್ಯೇಂದರ್ ಜೈನ್ ಅವರಿಗೆ ನಿಯಮಗಳನ್ನು ಉಲ್ಲಂಘಿಸಿ ‘ವಿಶೇಷ ಆತಿಥ್ಯ’ ನೀಡುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ದೆಹಲಿ ನ್ಯಾಯಾಲಯ ಶನಿವಾರ ಹೇಳಿದೆ.

ಧಾರ್ಮಿಕ ನಂಬಿಕೆಗಳಿಗೆ ಅನುಗುಣವಾಗಿ ವಿಶೇಷ ಆಹಾರ ಪದಾರ್ಥ ಒದಗಿಸುವಂತೆ ತಿಹಾರ್ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಕೋರಿ ಜೈನ್ ಸಲ್ಲಿಸಿದ್ದ ಅರ್ಜಿ ವಜಾಗೊಳಿಸುವಾಗ ವಿಶೇಷ ನ್ಯಾಯಾಧೀಶ ವಿಕಾಸ್ ಧುಲ್ ಈ ಅಭಿಪ್ರಾಯ ವ್ಯಕ್ತಪಡಿಸಿದರು. ಸದ್ಯ, ಜೈನ್ ಅವರಿಗೆ ನೀಡಲಾಗುತ್ತಿದ್ದ ಸವಲತ್ತುಗಳನ್ನು ಹಿಂತೆಗೆದುಕೊಳ್ಳಲಾಗಿದೆ.

‘ಕಾರಾಗೃಹ ಡಿ.ಜಿ ಅಥವಾ ಯಾವುದೇ ಪ್ರಾಧಿಕಾರದ ಆದೇಶವಿಲ್ಲದೆ, ಜೈಲಿನ ಸಿಬ್ಬಂದಿ ಜೈನ್ ಅವರಿಗೆ ಹಣ್ಣುಗಳು ಮತ್ತು ತರಕಾರಿಗಳನ್ನು ಒದಗಿಸಲಾಗಿತ್ತು. ಇದು ನಿಯಮಗಳ ಉಲ್ಲಂಘನೆಯಾಗಿದೆ’ ಎಂದು ಹೇಳಿದರು.

‘ಎಲ್ಲಾ ರಾಜ್ಯಗಳು ಕೈದಿಗಳನ್ನು ಸಮಾನವಾಗಿ ಪರಿಗಣಿಸಬೇಕು. ಕೈದಿಗಳ ನಡುವೆ ಜಾತಿ, ಧರ್ಮ, ಲಿಂಗ, ಧರ್ಮ, ಸ್ಥಾನಮಾನಗಳ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡುವಂತಿಲ್ಲ’ ಎಂದು ಹೇಳಿದರು.

ದೆಹಲಿ ಅಬಕಾರಿ ನೀತಿ ಹಗರಣ: ದೋಷಾರೋಪ ಪಟ್ಟಿ ಸಲ್ಲಿಸಿದ ಇ.ಡಿ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿಯಲ್ಲಿನ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮದ್ಯದ ಉದ್ಯಮಿ ಸಮೀರ್ ಮಹೇಂದ್ರು ಅವರನ್ನು ಆರೋಪಿಯನ್ನಾಗಿಸಿ ಜಾರಿ ನಿರ್ದೇಶನಾಲಯ ಶನಿವಾರ ದೋಷಾರೋಪ ಪಟ್ಟಿ ಸಲ್ಲಿಸಿದೆ.

‘ಇಂಡೊಸ್ಪಿರಿಟ್ಸ್’ನ ಮಾಲೀಕ ಮಹೇಂದ್ರು ಅವರಲ್ಲದೆ ಇತರ ಇಬ್ಬರು ವ್ಯಕ್ತಿಗಳ ಹೆಸರನ್ನೂ ಪಟ್ಟಿಯಲ್ಲಿ ಸೇರಿಸಲಾಗಿದೆ. ದೋಷಾರೋಪ ಪಟ್ಟಿಯು ಸುಮಾರು 3,000 ಪುಟಗಳನ್ನು ಒಳಗೊಂಡಿದ್ದು, ಅದು ಆರೋಪಿಗಳ ಹೇಳಿಕೆಗಳು ಮತ್ತು ಅನುಬಂಧಗಳನ್ನು ಒಳಗೊಂಡಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಕಲಂಗಳನ್ನು ಇದರಲ್ಲಿ ಒತ್ತಿ ಹೇಳಲಾಗಿದೆ. ಈ ಪ್ರಕರಣದಲ್ಲಿ ಇದುವರೆಗೆ 169 ಕಡೆಗಳಲ್ಲಿ ಶೋಧ ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟಾರೆ ಐವರು ಆರೋಪಿಗಳನ್ನು ಇ.ಡಿ ಬಂಧಿಸಿದೆ. ಮಹೇಂದ್ರು ಅವರನ್ನು ಸೆಪ್ಟೆಂಬರ್ 27ರಂದು ಜಾರಿ ನಿರ್ದೇಶನಾಲಯ ಬಂಧಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಕೂಡ ತನಿಖೆ ನಡೆಸುತ್ತಿದ್ದು, ಅದು ಕಳೆದ ವಾರ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಹಿರಿಯ ನಟ ವಿಕ್ರಮ್ ಗೋಖಲೆ ಇನ್ನಿಲ್ಲ

ಪ್ರಜಾವಾಣಿ ವಾರ್ತೆ



ಮುಂಬೈ: ಹಿಂದಿ, ಮರಾಠಿ ಭಾಷೆಗಳ ಹಲವಾರು ಚಿತ್ರಗಳು, ಧಾರಾವಾಹಿಗಳು ಮತ್ತು ನಾಟಕಗಳಲ್ಲಿ ಅಭಿನಯಿಸಿದ್ದ ಹಿರಿಯ ನಟ ವಿಕ್ರಮ್ ಗೋಖಲೆ(77) ಅವರು ಶನಿವಾರ ಪುಣೆಯಲ್ಲಿ ನಿಧನರಾದರು.

ಅನಾರೋಗ್ಯಕ್ಕೀಡಾಗಿದ್ದ ಗೋಖಲೆ ಅವರನ್ನು ಪುಣೆಯ ದೀನನಾಥ ಮಂಗೇಶ್ಕರ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.ಚಿಕಿತ್ಸೆಗೆ ಸ್ಪಂದಿಸದೇ ಕೊನೆಯುಸಿರೆಳೆದರು. ಪತ್ನಿ, ಇಬ್ಬರು ಹೆಣ್ಣು ಮಕ್ಕಳನ್ನು ಅವರು ಅಗಲಿದ್ದಾರೆ

ಗೋಖಲೆ ಕಲಾವಿದರ ಕುಟುಂಬದಿಂದ ಬಂದವರು. ಅವರ ಮುತ್ತಜ್ಜಿ ದುರ್ಗಾಬಾಯಿ ಕಾಮತ್ ಭಾರತೀಯ ಚಿತ್ರರಂಗದ ಮೊದಲ ನಟಿ, ಅಜ್ಜಿ ಕಮಲಾಬಾಯಿ ಕಾಮತ್ ಮೊದಲ ಬಾಲ ಕಲಾವಿದರು.

ಗೋಖಲೆ ಅವರು ‘ಅಗ್ನಿಪಥ್’, ‘ಹಮ್ ದಿಲ್ ದೆ ಚುಕೆ ಸನಮ್’, ‘ಮಿಷನ್ ಮಂಗಲ್’ ಮುಂತಾದ ಪ್ರಮುಖ ಚಿತ್ರಗಳಲ್ಲಿ ನಟಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಜೈಲಿನಿಂದ ತೇಲ್ತುಂಬ್ಡೆ ಬಿಡುಗಡೆ



ಮುಂಬೈ (ಪಿಟಿಐ): ಎಲ್ಗಾರ್ ಪರಿಷತ್–ಮಾವೊ ಸಂಪರ್ಕ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದ ಚಿಂತಕ, ಸಾಮಾಜಿಕ ಕಾರ್ಯಕರ್ತ ಆನಂದ್ ತೇಲ್ತುಂಬ್ಡೆ ಅವರು ನವಿ ಮುಂಬೈನ ತಲೋಜಾ ಕೇಂದ್ರ ಕಾರಾಗೃಹದಿಂದ ಶನಿವಾರ ಮಧ್ಯಾಹ್ನ 1.15ಕ್ಕೆ ಬಿಡುಗಡೆಯಾದರು.

ಎಲ್ಗಾರ್ ಪರಿಷತ್ ಪ್ರಕರಣದಲ್ಲಿ ತೇಲ್ತುಂಬ್ಡೆ ಎರಡೂವರೆ ವರ್ಷಗಳ ಕಾಲ ಜೈಲಿನಲ್ಲಿದ್ದರು. 2020ರ ಏಪ್ರಿಲ್ 14ರಂದು ತೇಲ್ತುಂಬ್ಡೆ ಅವರನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯು ಬಂಧಿಸಿತ್ತು. ಇದೇ ವರ್ಷ ನ. 18ರಂದು ಬಾಂಬೆ ಹೈಕೋರ್ಟ್ ಅವರಿಗೆ ಜಾಮೀನು ಮಂಜೂರು ಮಾಡಿತ್ತು.

ಜಾಮೀನು ನೀಡಿದ್ದನ್ನು ಪ್ರಶ್ನಿಸಿ ಎನ್‌ಐಎ ಸಲ್ಲಿಸಿದ್ದ ಅರ್ಜಿಯನ್ನು ಶುಕ್ರವಾರ ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು.ಅದರಂತೆ ಜಾಮೀನು ಪ್ರಕ್ರಿಯೆ ಮುಗಿದ ಬಳಿಕ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಡುಗಡೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ತೇಲ್ತುಂಬ್ಡೆ ಅವರು ‘ನಾನು ಸಂತೋಷವಾಗಿದ್ದೇನೆ. ಸುಳ್ಳು ಪ್ರಕರಣದಲ್ಲಿ ನನ್ನ ವಿರುದ್ಧ ಆರೋಪ ಹೊರಿಸಿ, ಜೈಲಿನಲ್ಲಿರಿಸಿದ್ದು ದುಃಖದ ಸಂಗತಿ’ ಎಂದು ಹೇಳಿದ್ದಾರೆ.

ಎಲ್ಗಾರ್ ಪರಿಷತ್ ಪ್ರಕರಣದಲ್ಲಿ ಬಂಧಿತರಾಗಿದ್ದ 16 ಜನರಲ್ಲಿ ತೇಲ್ತುಂಬ್ಡೆ ಅವರು ಜಾಮೀನು ಪಡೆದವರಲ್ಲಿ ಮೂರನೆಯವರು. ಈ ಹಿಂದೆ ಕವಿ ವರವರ ರಾವ್ ಮತ್ತು ವಕೀಲರಾದ ಸುಧಾ ಭಾರದ್ವಾಜ್ ಜಾಮೀನು ಪಡೆದಿದ್ದರು.

ಆಫ್ತಾಬ್ 13 ದಿನಗಳ ಕಾಲ ನ್ಯಾಯಾಂಗ ವಶಕ್ಕೆ

ನವದೆಹಲಿ: ಕಾಲ್ ಸೆಂಟರ್ ಉದ್ಯೋಗಿ ಶ್ರದ್ಧಾ ವಾಲಕರ್ ಹತ್ಯೆಯ ಆರೋಪಿ ಆಫ್ತಾಬ್ ಅಮೀನ್ ಪೂನಾವಾಲಾನನ್ನು ದೆಹಲಿ ಹೈಕೋರ್ಟ್ ಶನಿವಾರ 13 ದಿನಗಳ ಕಾಲ ನ್ಯಾಯಾಂಗ ವಶಕ್ಕೆ ನೀಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸುಳ್ಳುಪತ್ತೆ ಪರೀಕ್ಷೆಗೆ ಸಂಬಂಧಿಸಿದಂತೆ ಆರೋಪಿಯನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಲು ಪೊಲೀಸರು ಕಾನೂನು ಪ್ರಕ್ರಿಯೆಯನ್ನು ಆರಂಭಿಸಿದ್ದಾರೆ ಎಂದು ವಿಶೇಷ ಪೊಲೀಸ್ ಆಯುಕ್ತ (ಕಾನೂನು ಮತ್ತು ಪರಿಪಾಲನೆ ವಲಯ-2) ಸಾಗರ್ ಪ್ರೀತ್ ಹೂಡಾ ತಿಳಿಸಿದ್ದಾರೆ.

ಇಲ್ಲಿನ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಆರೋಪಿಗೆ ಶುಕ್ರವಾರ ಮೂರು ತಾಸುಗಳ ಕಾಲ ಸುಳ್ಳುಪತ್ತೆ ಪರೀಕ್ಷೆ ನಡೆಸಲಾಯಿತು. ಆಫ್ತಾಬ್‌ನ ಪೊಲೀಸ್ ಕಸ್ಟಡಿ ಅವಧಿಯು ಶನಿವಾರ ಮುಕ್ತಾಯವಾಗಿದೆ.

ಪಿಐಎಲ್ ಅರ್ಜಿ ವಜಾ, ದಂಡ: ಶ್ರದ್ಧಾ ಹತ್ಯೆ ಪ್ರಕರಣದ ತನಿಖೆಯನ್ನು ದೆಹಲಿ ಪೊಲೀಸರಿಂದ ಸಿಬಿಐಗೆ ವರ್ಗಾಯಿಸಬೇಕೆಂದು ಕೋರಿ ಸಲ್ಲಿಸಿದ್ದ ಪಿಐಎಲ್ ಅನ್ನು ವಜಾಗೊಳಿಸಿದ ದೆಹಲಿ ಹೈಕೋರ್ಟ್, ಅರ್ಜಿದಾರರಾದ ವಕೀಲೆ ಜೋಶಿನಿ ತುಲೆ ಅವರಿಗೆ ₹ 10 ಸಾವಿರ ದಂಡ ವಿಧಿಸಿದೆ. ದಂಡದ ಹಣವನ್ನು 4 ವಾರಗಳಲ್ಲಿ ಸಶಸ್ತ್ರ ಪಡೆಗಳ ಯುದ್ಧದಲ್ಲಿ ಸಾವನ್ನಪ್ಪಿದವರ ಕಲ್ಯಾಣ ನಿಧಿಗೆ ನೀಡುವಂತೆ ಸೂಚಿಸಿದೆ.

ಬಿಎಸ್‌ಎಫ್‌ನಿಂದ ಇಬ್ಬರು ಶಂಕಿತರ ಪತ್ತೆ

ಚಂಡೀಗಢ (ಪಿಟಿಐ): ಪಂಜಾಬ್‌ನ ಪಠಾಣ್‌ಕೋಟ್ ಬಳಿಯ ಭಾರತ–ಪಾಕಿಸ್ತಾನ ಅಂತರರಾಷ್ಟ್ರೀಯ ಗಡಿ ಬಳಿ ಶಂಕಿತರ ಸಂಶಯಾಸ್ಪದ ಚಲನವಲನ ಕಂಡುಬಂದ ಕಾರಣ ಗಡಿ ಭದ್ರತಾ ಸಿಬ್ಬಂದಿ(ಬಿಎಸ್‌ಎಫ್) ಗುಂಡು ಹಾರಿಸಿರುವ ಘಟನೆ ನಡೆದಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದರು.

ಪಾಕಿಸ್ತಾನದ ಕಡೆಯಿಂದ ಬಂದ ಇಬ್ಬರು ಶಂಕಿತರ ಚಲನವಲನಗಳು ಶುಕ್ರವಾರ ಸಂಜೆ ಕಂಡುಬಂದಿತು. ಪಹಾರಿಪುರದ ಸೇನಾ ನೆಲೆಯಲ್ಲಿದ್ದ ಬಿಎಸ್‌ಎಫ್ ಸಿಬ್ಬಂದಿ ಶಂಕಿತರ ಕಡೆ ಏಳು ಬಾರಿ ಗುಂಡು ಹಾರಿಸಿದರು. ಆದರೆ ಅವರು ತಪ್ಪಿಸಿಕೊಂಡು ಪಾಕಿಸ್ತಾನದ ಕಡೆ ಓಡಿದರು. ಬಿಎಸ್‌ಎಫ್‌ನ ಥರ್ಮಲ್ ಕ್ಯಾಮರಾದಲ್ಲಿ ಶಂಕಿತರು ಸೆರೆಯಾಗಿದ್ದಾರೆ.

ಮೊಬೈಲ್ ಇದ್ದ ಬಲೂನ್ ವಶ: ಪಾಕಿಸ್ತಾನ ಕಡೆಯಿಂದ ಭಾರತದ ಗಡಿಯೊಳಗೆ ಪ್ರವೇಶಿಸುತ್ತಿದ್ದ ಕಾರ್ಟೂನ್ ಪಾತ್ರದ ರೂಪದಲ್ಲಿದ್ದ ಬಲೂನನ್ನು ಗಡಿ ಭದ್ರತಾ ಪಡೆಗಳು ಇಲ್ಲಿಯ ಗುರುಹರ್‌ಸಹಾಯ್ ಸೇನಾ ನೆಲೆ ಬಳಿ ವಶಕ್ಕೆ ತೆಗೆದುಕೊಂಡಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತ–ನ್ಯೂಜಿಲೆಂಡ್ ಎರಡನೇ ಏಕದಿನ ಪಂದ್ಯ ಇಂದು

ಒತ್ತಡದಲ್ಲಿ ಶಿಖರ್ ಬಳಗ

ಹ್ಯಾಮಿಲ್ಟನ್ (ಪಿಟಿಐ): ಕಿವೀಸ್ ನೆಲದಲ್ಲಿ ಏಕದಿನ ಸರಣಿ ಜಯದ ಕನಸು ಜೀವಂತವಾಗಿ ಉಳಿಯಬೇಕಾದರೆ ಭಾರತ ತಂಡವು ಭಾನುವಾರ ನಡೆಯುವ ಪಂದ್ಯದಲ್ಲಿ ಜಯಿಸಲೇಬೇಕಾದ ಒತ್ತಡದಲ್ಲಿದೆ.

ಶುಕ್ರವಾರ ನಡೆದಿದ್ದ ಮೊದಲ ಪಂದ್ಯದಲ್ಲಿ ಟಾಮ್ ಲಥಾಮ್ ಮತ್ತು ಕೇನ್ ವಿಲಿಯಮ್ಸನ್ ಅವರ ದ್ವಿಶತಕದ ಜೊತೆಯಾಟದಿಂದಾಗಿ ಆತಿಥೇಯ ನ್ಯೂಜಿಲೆಂಡ್ ಜಯಭೇರಿ ಬಾರಿಸಿತ್ತು. ಶಿಖರ್ ಧವನ್ ನಾಯಕತ್ವದ ಭಾರತ ತಂಡವು ಕೊಟ್ಟಿದ್ದ ದೊಡ್ಡ ಮೊತ್ತದ ಗುರಿಯನ್ನು ಸುಲಭವಾಗಿ ತಲುಪಿತ್ತು. ಅದರಿಂದಾಗಿ ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತ್ತು.

ಬೌಲಿಂಗ್ ವಿಭಾಗದಲ್ಲಿ ಅನುಭವದ ಕೊರತೆಯಿಂದಾಗಿ ದೊಡ್ಡ ಮೊತ್ತವನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಉಮ್ರಾನ್ ಮಲಿಕ್ ಮತ್ತು ಅರ್ಷದೀಪ್ ಸಿಂಗ್ ಅವರಿನ್ನೂ ಪಳಗಬೇಕು. ಉಮ್ರಾನ್ ಎರಡು ವಿಕೆಟ್‌ಗಳನ್ನು ಪಡೆದಿದ್ದರು. ಆದರೆ ಅರ್ಷದೀಪ್ ದುಬಾರಿಯಾಗಿದ್ದರು. ಶಾರ್ದೂಲ್ ಠಾಕೂರ್, ಸ್ಪಿನ್ನರ್‌ಗಳಾದ ವಾಷಿಂಗ್ಟನ್ ಸುಂದರ್ ಹಾಗೂ ಯಜುವೇಂದ್ರ ಚಾಹಲ್ ಟಿ20 ಮಾದರಿಯ ಲಯದಿಂದ ಹೊರಬಂದು ಏಕದಿನ ಮಾದರಿಗೆ ತಕ್ಕ ಬೌಲಿಂಗ್ ಮಾಡಿದರೆ ಗೆಲುವು ಒಲಿಯಬಹುದು.


ಶಿಖರ್ ಧವನ್

ಆದರೆ ಎರಡನೇ ಪಂದ್ಯವನ್ನೂ ಗೆದ್ದು ಸರಣಿಯನ್ನು ಕೈವಶ ಮಾಡಿಕೊಳ್ಳುವ ಛಲದಲ್ಲಿ ಕೇನ್ ವಿಲಿಯಮ್ಸನ್ ಬಳಗ ಇದೆ. ಟಿ20 ಸರಣಿಯಲ್ಲಿ ಸೋತಿರುವ ಮುಯ್ಯಿ ತೀರಿಸಿಕೊಳ್ಳುವ ಅವಕಾಶವೂ ತಂಡಕ್ಕೆ ಇದೆ. ಅಗ್ರಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರೂ, ಮಧ್ಯಮ ಕ್ರಮಾಂಕದಲ್ಲಿ ಉತ್ತಮ ಆಟಗಾರರು ಇರುವುದರಿಂದ ಬ್ಯಾಟಿಂಗ್ ಬಲಿಷ್ಠವಾಗಿದೆ. ಉತ್ತಮ ಫಾರ್ಮ್‌ನಲ್ಲಿರುವ ಟಿಮ್ ಸೌಥಿ ಹಾಗೂ ಲಾಕಿ ಫರ್ಗ್ಯುಸನ್ ಅವರು ಭಾರತದ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ವಿಶ್ವಾಸದಲ್ಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 7

ನೇರಪ್ರಸಾರ: ಅಮೆ ಜಾನ್ ಪ್ರೈಮ್

ವಿಶ್ವ ಯೂತ್ ಬಾಕ್ಸಿಂಗ್: ವಿಶ್ವನಾಥ್, ದೇವಿಕಾ, ವಂಶಜ್‌ಗೆ ಚಿನ್ನ

ನವದೆಹಲಿ: ಶ್ರೇಷ್ಠ ಸಾಮರ್ಥ್ಯ ತೋರಿದ ಭಾರತದ ವಿಶ್ವನಾಥ್ ಸುರೇಶ್, ವಂಶಜ್ ಮತ್ತು ದೇವಿಕಾ ಘೋರ್ಪಡೆ ಅವರು ವಿಶ್ವ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಗಳಿಗೆ ಮುತ್ತಿಟ್ಟಿದ್ದಾರೆ.

ಸ್ಪೇನ್‌ನ ಲಾ ನೂಸಿಯಾದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಪುರುಷರ 48 ಕೆಜಿ ವಿಭಾಗದ ಫೈನಲ್‌ನಲ್ಲಿ ವಿಶ್ವನಾಥ್ ಅವರು ಫಿಲಿಪ್ಪೀನ್ಸ್‌ನ ರೋನೆಲ್ ಸುಯೊಮ್ ಅವರನ್ನು ಏಕಪಕ್ಷೀಯವಾಗಿ ಸೋಲಿಸಿದರು.

63.5 ಕೆಜಿ ವಿಭಾಗದಲ್ಲಿ ಕಣಕ್ಕಿಳಿದಿದ್ದ ವಂಶಜ್ ಫೈನಲ್‌ನಲ್ಲಿ ಜಾರ್ಜಿಯಾದ ದೆಮುರ್ ಕಜೈಯಾ ಅವರನ್ನು ಪರಾಭವಗೊಳಿಸಿದರು.

ಮಹಿಳೆಯರ 52 ಕೆಜಿ ವಿಭಾಗದ ಫೈನಲ್ ಬೌಟ್‌ನಲ್ಲಿ ದೇವಿಕಾ ಅವರು ಇಂಗ್ಲೆಂಡ್‌ನ ಲಾರೆನ್ ಮ್ಯಾಕಿ ಸವಾಲು ಮೀರಿದರು.

ಆಶಿಶ್ (54 ಕೆಜಿ) ಮತ್ತು ಭಾವನಾ ಶರ್ಮಾ (ಮಹಿಳೆಯರ 48 ಕೆಜಿ) ಬೆಳ್ಳಿ ಪದಕ ಗೆದ್ದುಕೊಂಡರು. ಪ್ರಶಸ್ತಿ ಸುತ್ತಿನಲ್ಲಿ ಆಶಿಶ್ 1–4ರಿಂದ ಜಪಾನ್‌ನ ಯುತಾ ಸಕಾಯಿ ಎದುರು ಪರಾಭವಗೊಂಡರು. ಭಾವನಾ ಶರ್ಮಾ ಫೈನಲ್‌ನಲ್ಲಿ 0–5ರಿಂದ ಉಜ್ಬೆಕಿಸ್ತಾನದ ಗುಲ್ಸೆವರ್ ಗ್ಯಾನಿಯೆವಾ ಎದುರು ಸೋತರು.

ಹಾಕಿ: ಆಕಾಶದೀಪ್ ಹ್ಯಾಟ್ರಿಕ್ ವ್ಯರ್ಥ: ಆಸ್ಟ್ರೇಲಿಯಾಕ್ಕೆ ಜಯ

ಅಡಿಲೇಡ್ (ಪಿಟಿಐ): ಆಕಾಶ್‌ದೀಪ್ ಸಿಂಗ್ ಗಳಿಸಿದ ಹ್ಯಾಟ್ರಿಕ್ ಗೋಲುಗಳು ವ್ಯರ್ಥವಾದವು. ಭಾರತ ಹಾಕಿ ತಂಡವು ಇಲ್ಲಿ ನಡೆದ ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ 4–5ರಿಂದ ಸೋಲನುಭವಿಸಿತು.

ಶನಿವಾರ ನಡೆದ ಐದು ಪಂದ್ಯಗಳ ಸರಣಿಯ ಮೊದಲ ಹಣಾಹಣಿಯಲ್ಲಿ ಆಕಾಶ್‌ದೀಪ್ 10, 27 ಮತ್ತು 59ನೇ ನಿಮಿಷಗಳಲ್ಲಿ ಕೈಚಳಕ ತೋರಿದರು. 31ನೇ ನಿಮಿಷದಲ್ಲಿ ಹರ್ಮನ್‌ಪ್ರೀತ್ ಸಿಂಗ್ ಅವರು ಪೆನಾಲ್ಟಿ ಕಾರ್ನರ್‌ಅನ್ನು ಗೋಲಿನಲ್ಲಿ ಪರಿವರ್ತಿಸಿದರು.

ಆಸ್ಟ್ರೇಲಿಯಾ ತಂಡಕ್ಕಾಗಿ ಲಚ್ಲಾನ್ ಶಾರ್ಪ್ (5ನೇ ನಿ.), ನೇಥನ್ ಎಫ್ರಮ್ಸ್ (21ನೇ ನಿ.), ಟಾಮ್ ಕ್ರೇಗ್ (41ನೇ ನಿ.) ಮತ್ತು ಬ್ಲೇಕ್ ಗೋವರ್ಸ್ (57 ಮತ್ತು 60ನೇ ನಿ.) ಗೋಲು ದಾಖಲಿಸಿದರು.

ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗೋಲಾಗಿಸುವಲ್ಲಿ ಎಡವಿದ್ದು ಭಾರತ ತಂಡದ ಸೋಲಿಗೆ ಕಾರಣವಾಯಿತು. ಉಭಯ ತಂಡಗಳ ನಡುವಣ ಎರಡನೇ ಪಂದ್ಯವು ಭಾನುವಾರ ನಡೆಯಲಿದೆ.

ನೈಸ್ ಡಿಎಚ್ ಕಪ್: ಅಗ್ರಸ್ಥಾನಕ್ಕೆ ವಿಸೆನ್

ಬೆಂಗಳೂರು: ಉತ್ತಮ ಆಟವಾಡಿದ ಎಪ್ಸಿಲಾನ್ ಮತ್ತು ವಿಸೆನ್ ತಂಡಗಳು ಕಾರ್ಪೊರೇಟ್ ‘ಫೈವ್ ಎ ಸೈಡ್ ಫುಟ್‌ಬಾಲ್ ಟೂರ್ನಿ’ಯಲ್ಲಿ ಕ್ರಮವಾಗಿ ಎ ಮತ್ತು ಬಿ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿದವು.

ಶನಿವಾರ ದಿನದ ಮೊದಲ ಪಂದ್ಯದಲ್ಲಿ ಟೈಟನ್ 3–1ರಿಂದ ತವಂತ್ ತಂಡವನ್ನು ಸೋಲಿಸಿತು. ವಿಜೇತ ತಂಡದ ಪರ ಶಿವಶಂಕರನ್ ಹ್ಯಾಟ್ರಿಕ್ ಗಳಿಸಿದರು. 2ನೇ ಪಂದ್ಯದಲ್ಲಿ ಬಾಷ್ 4–4ರಿಂದ ವಿಸೆನ್ ತಂಡದೊಂದಿಗೆ ಡ್ರಾ ಸಾಧಿಸಿತು. ಇನ್ನುಳಿದ ಪಂದ್ಯಗಳಲ್ಲಿ ಎಪ್ಸಿಲಾನ್ 9–0ರಿಂದ ಪುರವಂಕರ ಎದುರು, ಇಕ್ವಿಯಾ 8–0ರಿಂದ ಕ್ಲೆಮೊವ್ ವಿರುದ್ಧ, ತವಂತ್ 3–1ರಿಂದ ಸ್ವಿಸ್ ರೇ ಎದುರು, ವಿಸೆನ್ 4–1ರಿಂದ ಅಡೋಬಿ ಎದುರು ಗೆದ್ದವು.

ಕ್ರಿಕೆಟ್: ಎಂಟರ ಘಟ್ಟದಲ್ಲಿ ಕರ್ನಾಟಕಕ್ಕೆ ಪಂಜಾಬ್ ಸವಾಲು

ವಿದ್ವತ್, ವೆಂಕಟೇಶ್ ಮಿಂಚು

ಅಹಮದಾಬಾದ್: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಎಂಟರ ಘಟ್ಟಕ್ಕೆ ಪ್ರವೇಶಿಸಿತು.

ಶನಿವಾರ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕ ಜಾರ್ಖಂಡ್ ಎದುರು 5 ವಿಕೆಟ್‌ಗಳಿಂದ ಜಯಿಸಿತು. ಟಾಸ್ ಗೆದ್ದ ಕರ್ನಾಟಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ಮಯಂಕ್ ಭರವಸೆಯನ್ನು ಉಳಿಸಿಕೊಂಡ ಬೌಲರ್‌ಗಳು ಜಾರ್ಖಂಡ್ ತಂಡವನ್ನು 47.1 ಓವರ್‌ಗಳಲ್ಲಿ 187 ರನ್‌ಗಳಿಗೆ ಆಲೌಟ್ ಮಾಡಿದರು.

ಮಧ್ಯಮವೇಗಿಗಳಾದ ವಿದ್ವತ್ ಕಾವೇರಪ್ಪ, ರೋನಿತ್ ಮೋರೆ ಹಾಗೂ ಎಂ. ವೆಂಕಟೇಶ್ ತಲಾ ಮೂರು ವಿಕೆಟ್ ಗಳಿಸಿದರು. ಇದರಿಂದಾಗಿ ಜಾರ್ಖಂಡ್ ತಂಡದ ಮೇಲಿನ ಕ್ರಮಾಂಕದ ಬ್ಯಾಟರ್‌ಗಳು ವಿಫಲರಾದರು. ಕೇವಲ 40 ರನ್‌ಗಳಿಗೆ ಐದು ವಿಕೆಟ್‌ಗಳು ಪತನವಾದವು. ಈ ಹಂತದಲ್ಲಿ ಜೊತೆಗೂಡಿದ ಕುಶಾಗ್ರ (74; 80ಎ, 4X8, 6X2) ಹಾಗೂ ಅನುಕೂಲ್ ರಾಯ್ (57; 97ಎ, 4X4) ಐದನೇ ವಿಕೆಟ್ ಜೊತೆಯಾಟದಲ್ಲಿ 115 ರನ್ ಸೇರಿಸಿದರು. ಗುರಿ ಬೆನ್ನಟ್ಟಿದ ಕರ್ನಾಟಕ ತಂಡದ ಆರಂಭ ಚೆನ್ನಾಗಿರಲಿಲ್ಲ. ನಾಯಕ ಮಯಂಕ್ ಕೇವಲ 12 ರನ್ ಗಳಿಸಿ ಔಟಾದರು. ಇನ್ನೊಂದು ಬದಿಯಲ್ಲಿದ್ದ ಸಮರ್ಥ್ (53; 60ಎ, 4X7) ಅರ್ಧಶತಕ ಗಳಿಸಿದರು. ಅವರೊಂದಿಗೆ ಚೆಂದದ ಜೊತೆಯಾಟವಾಡಿದ ನಿಕಿನ್ ಜೋಸ್ (ಔಟಾಗದೆ 63; 93ಎ, 4X5) ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಕರ್ನಾಟಕ 40.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 188 ರನ್ ಗಳಿಸಿತು. ಇದೇ 28ರಂದು ನಡೆಯಲಿರುವ ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕ ಪಂಜಾಬ್ ತಂಡವನ್ನು ಎದುರಿಸಲಿದೆ.


ವಿದ್ವತ್ ಕಾವೇರಪ್ಪ

ಸಂಕ್ಷಿಪ್ತ ಸ್ಕೋರು: ಜಾರ್ಖಂಡ್: 47.1 ಓವರ್‌ಗಳಲ್ಲಿ 187 (ಶಹಬಾಜ್ ನದೀಂ 22, ಕುಮಾರ್ ಕುಶಾಗ್ರ 74, ಅನುಕೂಲ್ ರಾಯ್ 57, ವಿದ್ವತ್ ಕಾವೇರಪ್ಪ 20ಕ್ಕೆ3, ರೋನಿತ್ ಮೋರೆ 31ಕ್ಕೆ3, ಎಂ. ವೆಂಕಟೇಶ್ 51ಕ್ಕೆ3, ಮನೋಜ್ ಬಾಂಡಗೆ 26ಕ್ಕೆ1) ಕರ್ನಾಟಕ: 40.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 188 (ಆರ್. ಸಮರ್ಥ್ 53, ನಿಕಿನ್ ಜೋಸ್ 63, ಮನೀಷ್ ಪಾಂಡೆ 18, ಮನೋಜ್ ಬಾಂಡಗೆ ಔಟಾಗದೆ 18, ರಾಹುಲ್ ಶುಕ್ಲಾ 44ಕ್ಕೆ2) ಫಲಿತಾಂಶ: ಕರ್ನಾಟಕ ತಂಡಕ್ಕೆ 5 ವಿಕೆಟ್‌ಗಳ ಜಯ.

‘ಮಾ.31ರೊಳಗೆ ರಾಷ್ಟ್ರೀಯ ಟೇಕ್ವಾಂಡೊ ಆಯೋಜನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರ ಮಾ. 31ರೊಳಗೆ ರಾಷ್ಟ್ರೀಯ ಟೇಕ್ವಾಂಡೊ ಚಾಂಪಿಯನ್‌ಷಿಪ್ ನಡೆಸಲು ರಾಷ್ಟ್ರೀಯ ಫೆಡರೇಷನ್‌ನ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಭಾರತ ಟೇಕ್ವಾಂಡೊ ಫೆಡರೇಷನ್ ಅಧ್ಯಕ್ಷ ಇಶಾರಿ ಕೆ. ಗಣೇಶ್ ಅವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಸೆಂಚುರಿ ಕ್ಲಬ್‌ನಲ್ಲಿ ಶನಿವಾರ ಕಾರ್ಯಕಾರಿ ಮಂಡಳಿ ಸಭೆ ನಡೆಯಿತು.

ರಾಷ್ಟ್ರೀಯ ಸಬ್ ಜೂನಿಯರ್, ಕೆಡೆಟ್ ಚಾಂಪಿಯನ್‌ಷಿಪ್, ರಾಷ್ಟ್ರೀಯ ಸೀನಿಯರ್ ಚಾಂಪಿಯನ್‌ಷಿಪ್ ನಡೆಸುವ ಜವಾಬ್ದಾರಿಯನ್ನು ಒಡಿಶಾ, ತೆಲಂಗಾಣ, ಆಂಧ್ರಪ್ರದೇಶ ಹಾಗೂ ಪುದುಚೇರಿ ಸಂಸ್ಥೆಗಳಿಗೆ ಈ ಸಂದರ್ಭದಲ್ಲಿ ನೀಡಲಾಯಿತು.

ಹರಿಯಾಣ ಸಂಸ್ಥೆಯು ಮುಂದಿನ ಫೆಡರೇಷನ್ ಕಪ್ ಆಯೋಜಿಸುವ ಕುರಿತು ತೀರ್ಮಾನ ತೆಗೆದುಕೊಳ್ಳಲಾಗಿದೆ.

ಪ್ರಧಾನ ಕಾರ್ಯದರ್ಶಿ ಮಂಗೇಶ್ಕರ್, ಮುಖ್ಯ ಆಡಳಿತಾಧಿಕಾರಿ ಟಿ.ಪ್ರವೀಣ್ ಕುಮಾರ್, ರಾಷ್ಟ್ರೀಯ ತಂಡದ ಕೋಚ್ ಹಾಗೂ ಆಯ್ಕೆ ಸಮಿತಿ ಮುಖ್ಯಸ್ಥ ಬಿ.ಎಮ್. ಕೃಷ್ಣಮೂರ್ತಿ ಅವರು ಸಭೆಯಲ್ಲಿ ಇದ್ದರು.

ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 27 ನವೆಂಬರ್ 2022



13 ತೆಯ್ಯಂಗಳ ಅಂಗಳದಲ್ಲಿ



10

ಕಣ್ಗಾವಲಿನ ಬಂಡವಾಳವಾದ

ಸತ್ಯಪ್ರಕಾಶ್ ಎಂ.ಆರ್.

ರಾಜ್ಯ ರಾಜಕಾರಣದಲ್ಲಿ ಸಂಚಲನ ಸೃಷ್ಟಿಸಿರುವ ಮತದಾರರ ದತ್ತಾಂಶ ಕಳುವು ಮತ್ತು ಮಾರಾಟದ 'ಚಿಲುಮೆ' ಪ್ರಕರಣವು ಆನ್‌ಲೈನ್‌ನಲ್ಲಿ ಲಭ್ಯವಿರುವ ಬಳಕೆದಾರರ ಖಾಸಗಿ ಮಾಹಿತಿಯ ಸುರಕ್ಷತೆಯ ಬಗ್ಗೆ ಹಲವು ಅಹಿತಕರ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಆ್ಯಪ್ ಆಧಾರಿತ ಸೇವೆ ನೀಡುವ ತಂತ್ರಜ್ಞಾನ ಕಂಪನಿಗಳು, ತಮ್ಮಲ್ಲಿ ಶೇಖರವಾಗುವ ಬಳಕೆದಾರರ ಖಾಸಗಿ ಮಾಹಿತಿಯನ್ನು, ಅವರ ಸಮ್ಮತಿಯೊಂದಿಗೆ ಹೊರದೇಶಗಳಿಗೆ ವರ್ಗಾಯಿಸಲು ಅವಕಾಶ ಕಲ್ಪಿಸುವ ಪ್ರಸ್ತಾವವೊಂದು ಕೇಂದ್ರ ಸರ್ಕಾರ ರೂಪಿಸಿರುವ ಡಿಜಿಟಲ್ ದತ್ತಾಂಶ ಸಂರಕ್ಷಣಾ ಮಸೂದೆಯಲ್ಲಿದೆ. ಹೀಗಾಗಿ ಮಾಹಿತಿ ಸುರಕ್ಷತೆ ಕುರಿತ ಆತಂಕ ಇನ್ನೂ ಹೆಚ್ಚಾಗುವಂತೆ ಮಾಡಿದೆ.

> ನಮ್ಮ ಖಾಸಗಿ ಮಾಹಿತಿ ಎಗ್ಗಿಲ್ಲದೆ ಸೋರಿಕೆಯಾಗುತ್ತಿದ್ದು ಅದರಿಂದ ಹೊಸ ಬಗೆಯ ಕಣ್ಗಾವಲಿನ ಬಂಡವಾಳವಾದವನ್ನು ಹುಟ್ಟುಹಾಕಿದ ಆತಂಕ ಈಗ ಎಲ್ಲೆಡೆ ಮನೆಮಾಡಿದೆ. 'ಚಿಲುಮೆ' ಪ್ರಕರಣ ಆ ಆತಂಕಕ್ಕೆ ಮತ್ತಷ್ಟು ಪುಷ್ಟಿ ಒದಗಿಸಿದೆ. ಈ ಕಣ್ಗಾವಲು ನಮ್ಮನ್ನು ಎಲ್ಲಿಗೆ ಹೋಗಿ ಮುಟ್ಟಿಸೀತು? ಮಾಹಿತಿ ಸೋರಿಕೆಯಿಂದ ಏನೆಲ್ಲ ಎಡವಟ್ಟುಗಳು ಆದಾವು? ಮತ್ತೆ ಖಾಸಗಿತನದ ಸುರಕ್ಷತೆಗೆ ಇರುವ ಹಾದಿಯಾದರೂ ಯಾವುದು?



ಫೇಸ್‌ಬುಕ್, ವಾಟ್ಸ್‌ಆ್ಯಪ್, ಟ್ವಿಟರ್, ಇನ್‌ಸ್ಟಾಗ್ರಾಂನಂತಹ ಜನಪ್ರಿಯ ಸಾಮಾಜಿಕ ಮಾಧ್ಯಮಗಳು ಈಗಾಗಲೇ ಬಳಕೆದಾರರ ಖಾಸಗಿ ಮಾಹಿತಿಯನ್ನು ಲಾಭದ ಉದ್ದೇಶದಿಂದ ವಿವಿಧ ಕಂಪನಿಗಳಿಗೆ ಮಾರಾಟ ಮಾಡಿರುವ ಸಾಧ್ಯತೆ ಇದ್ದು, ಇದು ಉತ್ಪನ್ನಗಳ ಟಾರ್ಗೆಟೆಡ್ ಮಾರ್ಕೆಟಿಂಗ್‌ಗೆ ಬಳಕೆಯಾಗುತ್ತಲಿದೆ. ಬಳಕೆದಾರರ ಸಮ್ಮತಿಯಿಂದ ಅವರ ಖಾಸಗಿ ಮಾಹಿತಿಯನ್ನು ವಿದೇಶಗಳಿಗೆ ವರ್ಗಾಯಿಸಲು ಡಿಜಿಟಲ್ ಕಂಪನಿಗಳಿಗೆ ಅವಕಾಶ ನೀಡಲು ಸರ್ಕಾರವೇ ಮುಂದಾಗಿದ್ದರಿಂದ ಗೂಗಲ್, ಮೆಟಾ, ಟ್ವಿಟರ್‌ನಂತಹ ಬೃಹತ್ ಟೆಕ್ ಕಂಪನಿಗಳು ಸದ್ಯದ ಮಟ್ಟಿಗೆ ಕಾನೂನಿನ ಭಯದಿಂದ ಮುಕ್ತವಾಗಿವೆ.

ಸಾಂಸ್ಕೃತಿಕ ರಾಜಕಾರಣದ ಪೊಳ್ಳು ವಿಚಾರಗಳಿಗೆ ಪ್ರಬಲವಾದ ನಂಬಿಕೆಯ ಪ್ಯಾಕೇಜಿಂಗ್ ಮಾಡಿ ನಯವಾಗಿ ಪ್ರಸ್ತುತಪಡಿಸುವ ಕ್ರಿಯಾಶೀಲ ಪೋಸ್ಟ್‌ಗಳು, ಮೀಮ್‌ಗಳ ಯೋಜಿತ ಪ್ರಚಾರದ ಮೂಲಕ ಸಾಂಸ್ಕೃತಿಕ ಮತ್ತು ಧಾರ್ಮಿಕ ವಿಚಾರಗಳನ್ನೊಳಗೊಂಡ ಆಧುನಿಕ ಮಿತ್‌ಗಳನ್ನು ಫೇಸ್‌ಬುಕ್, ಟ್ವಿಟರ್, ವಾಟ್ಸ್‌ಆ್ಯಪ್‌ಗಳಂತಹ ಸಾಮಾಜಿಕ ಮಾಧ್ಯಮಗಳ ವೇದಿಕೆಗಳಲ್ಲಿ ಸೃಷ್ಟಿಸಲಾಗುತ್ತಿದೆ.

ಇತಿಹಾಸದ ಸತ್ಯಗಳನ್ನು ಅನುಕೂಲಸಿಂಧು ರಾಜಕಾರಣದ ಚೌಕಟ್ಟಿಗೆ ಅನುಗುಣವಾಗಿ ತಿರುಚಿ ವೈಭವೀಕರಿಸುವುದು ಮತ್ತು ಏಕರೂಪದ ಮೂಸೆಯಲ್ಲಿ ವಿವಿಧ ಸಾಂಸ್ಕೃತಿಕ, ಸಾಮುದಾಯಿಕ ಆಚರಣೆಗಳನ್ನು ಅದ್ದಿ ತೆಗೆಯುವುದರ ಮೂಲಕ ಹಳೆಯ ಮಿತ್‌ಗಳನ್ನು ಪ್ರಶ್ನಾತೀತ ಐತಿಹಾಸಿಕ ಸತ್ಯಗಳೆಂದು ಬಿಂಬಿಸಲಾಗುತ್ತಿದೆ. ಅಷ್ಟೇ ಅಲ್ಲ, ಇವುಗಳನ್ನು ಖಾಸಗಿ ಮಾಹಿತಿಯನ್ನಾಧರಿಸಿದ ಅನಾಲಿಟಿಕ್ಸ್ ಮೂಲಕ ಬಳಕೆದಾರರಿಗೆ ನೇರವಾಗಿ ತಲುಪಿಸಲಾಗುತ್ತಿದೆ. ಈ ಪೋಸ್ಟ್‌ಗಳು, ವಾಟ್ಸ್‌ಆ್ಯಪ್ ಸಂದೇಶಗಳು, ಮೀಮ್‌ಗಳು, ಟ್ರೋಲ್‌ಗಳು ಸಮಾನತೆ ಮತ್ತು ಸಹಬಾಳ್ವೆಯ ಬೇರುಗಳನ್ನು ಅಲುಗಾಡಿಸುತ್ತಿವೆ. ಬಳಕೆದಾರರ ಸಾಮಾಜಿಕ ಜಾಲತಾಣಗಳ ಖಾಸಗಿ ಪುಟಗಳಲ್ಲಿ ಹಠಾತ್ತನೇ ಕಾಣಿಸಿಕೊಳ್ಳುವ ಇಂಥ ಯೋಜಿತ ಪ್ರಚಾರವನ್ನು ಮತ್ತು ಹಸಿಸುಳ್ಳುಗಳ ಮಿತ್‌ಗಳನ್ನು ಸಮರ್ಪಕವಾಗಿ ತಡೆಗಟ್ಟಲು ಈ ಬೃಹತ್ ಡಿಜಿಟಲ್ ಕಂಪನಿಗಳು ಕೈಗೊಂಡಿರುವ ಕ್ರಮಗಳಾದರೂ ಏನು?

ಫೇಸ್‌ಬುಕ್ ಅಥವಾ ಮೆಟಾ ಸಂಸ್ಥೆಯ ನಿರ್ವಹಣಾ ಮಾದರಿಯನ್ನು ವಿಶ್ಲೇಷಿಸುತ್ತಾ ನೊಬೆಲ್ ಪುರಸ್ಕೃತ ಪತ್ರಕರ್ತೆ ಮಾರಿಯಾ ರೆಸ್ಸಾ ಹೇಳುತ್ತಾರೆ, 'ಫೇಸ್‌ಬುಕ್ ಈಗ ಜಗತ್ತಿನ ಅತಿದೊಡ್ಡ ಸುದ್ದಿ ಜಾಲತಾಣವಾಗಿದೆ. ಆದರೆ ಇಲ್ಲಿ ದ್ವೇಷಭರಿತ ಹಸಿಸುಳ್ಳುಗಳು ಹರಡುವಷ್ಟು ವೇಗವಾಗಿ ಸತ್ಯಗಳು ಹರಡುವುದಿಲ್ಲ.' ಜಾಗತಿಕ ಮಾಹಿತಿಯ ವ್ಯವಸ್ಥಿತ ಜಾಲವನ್ನು ನಿಯಂತ್ರಣದಲ್ಲಿ ಇಟ್ಟುಕೊಂಡಿರುವ ಅಮೆರಿಕ ಮೂಲದ ಈ ಪ್ರಬಲ ಕಾರ್ಪೊರೇಟ್‌ಗಳು ಸುಳ್ಳುಸುದ್ದಿ, ದ್ವೇಷಭರಿತ ಸಂದೇಶಗಳು ಹರಡದಂತೆ ತಡೆಗಟ್ಟುವಲ್ಲಿ ಸೋತಿವೆಯೋ ಅಥವಾ ಹಂಚಿಕೊಳ್ಳಲು ಎಗ್ಗಿಲ್ಲದೆ ಅವಕಾಶ ನೀಡುತ್ತಿವೆಯೋ ಎಂಬ ಅನುಮಾನ ಮೂಡದಿರದು.

ಫೇಸ್‌ಬುಕ್, ವಾಟ್ಸ್‌ಆ್ಯಪ್ ಮತ್ತು ಟ್ವಿಟರ್‌ಗಳಂಥ ಸಾಮಾಜಿಕ ಮಾಧ್ಯಮಗಳು ಬಳಕೆದಾರರ ಖಾಸಗಿ ದತ್ತಾಂಶವನ್ನು ದುರುಪಯೋಗಪಡಿಸಿಕೊಳ್ಳುವ ಅಧಿಕಾರದ ಮತ್ತು ಲಾಭದಾಯಕ ಮಾರುಕಟ್ಟೆ ತಂತ್ರಗಾರಿಕೆಯ ವೇದಿಕೆಗಳಾಗಿ ಪರಿಣಮಿಸಿವೆ. ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಮತ್ತು ಚಿಂತಕಿ ಶೊಶಾನ ಜುಬೋಫ್ 'ದಿ ಏಜ್ ಆಫ್ ಸರ್ವೇಲೆನ್ಸ್ ಕ್ಯಾಪಿಟಲಿಸಂ' ಕೃತಿಯಲ್ಲಿ ಇದನ್ನು ಕಣ್ಗಾವಲಿನ ಬಂಡವಾಳವಾದ ಎಂದು ಗುರುತಿಸಿದ್ದಾರೆ.

ಇದು ನಮ್ಮ ಬದುಕಿನ ಮಧುರ ಕ್ಷಣಗಳನ್ನು ನಮ್ಮ ಸಹಮತದೊಂದಿಗೇ ಕಾರ್ಪೊರೇಟ್‌ಗಳಿಗೆ ಅಡಮಾನಕ್ಕಿಡುವ ಕಣ್ಗಾವಲಿನ ಬಂಡವಾಳವಾದ. ನಮ್ಮ ವೈಯುಕ್ತಿಕ ಅನುಭವಗಳನ್ನು ಹೆಕ್ಕಿ ತೆಗೆದು ಕೃತಕ ಬುದ್ಧಿಮತ್ತೆಯ (ಎ.ಐ.) ಹಿಡಿತದಲ್ಲಿರುವ ಡೇಟಾಬೇಸ್ ಸಿದ್ಧಪಡಿಸಿ ಜಾಗತಿಕ ಮಾರುಕಟ್ಟೆಯಲ್ಲಿ ಹರಾಜಿಗಿಡುವ ಕಣ್ಗಾವಲಿನ ಬಂಡವಾಳವಾದ. ನಮ್ಮ ಯೋಚನಾ ಲಹರಿ, ಮನೋಧರ್ಮ, ತರ್ಕ, ಟೀಕೆ ಟಿಪ್ಪಣಿಗಳೆಲ್ಲವನ್ನೂ ವ್ಯವಸ್ಥಿತವಾಗಿ ಬದಲಾಯಿಸುವ ಮನವೊಲಿಕೆಯ ಬಂಡವಾಳವಾದ. ಸ್ವಲ್ಪ ಯೋಚಿಸುವಷ್ಟು ವ್ಯವಧಾನವೂ ಇಲ್ಲದಂತೆ ಮಾಡಿರುವ ಲಾಭದಾಯಕ ಮೈಕ್ರೋಟಾರ್ಗೆಟಿಂಗ್ ಎಂಬ ಈ ದಂಧೆ, ನಮ್ಮೆಲ್ಲರನ್ನೂ 'ಪ್ಯಾವ್ಲಾವ್‌ನ ನಾಯಿ'ಗಳನ್ನಾಗಿ ಮಾಡುವುದನ್ನೇ ಮೂಲ ಉದ್ದೇಶವನ್ನಾಗಿ ಹೊಂದಿದೆ' ಎನ್ನುತ್ತಾರೆ ಮಾರಿಯಾ ರೆಸ್ಸಾ.

ಲಾಭದಾಯಕ ಮಾರ್ಕೆಟಿಂಗ್‌ಗಾಗಿ ಖಾಸಗಿತನವನ್ನು ಉತ್ಪನ್ನವನ್ನಾಗಿಸುವ ಈ ನಯವಂಚಕ ಆರ್ಥಿಕತೆಯಲ್ಲಿ ಗೂಗಲ್, ಅಮೆಜಾನ್, ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಂ, ಸ್ನ್ಯಾಪ್‌ಚಾಟ್‌ನಂತಹ ಜನಪ್ರಿಯ ಸಾಮಾಜಿಕ ಜಾಲತಾಣಗಳು, ಇ-ಕಾಮರ್ಸ್ ಕಂಪನಿಗಳು ಮತ್ತು ಆ್ಯಂಡ್ರಾಯ್ಡ್, ಐಒಎಸ್ ವೇದಿಕೆಗಳಲ್ಲಿ ಮುಕ್ತವಾಗಿ ಲಭ್ಯವಿರುವ ಲೆಕ್ಕವಿಲ್ಲದಷ್ಟು ಆ್ಯಪ್‌ಗಳಿಗೆ ಬಳಕೆದಾರರ ಖಾಸಗಿತನವೇ ಬಂಡವಾಳ. ಖಾಸಗಿ ಮಾಹಿತಿಯನ್ನು ಬಳಸಿ ಗ್ರಾಹಕರ ಆಸಕ್ತಿಗೆ ತಕ್ಕಂತೆ ಉತ್ಪನ್ನಗಳನ್ನು ಮಾರ್ಕೆಟಿಂಗ್ ಮಾಡುವ ರಹದಾರಿಯನ್ನು ಅನಾಲಿಟಿಕ್ಸ್ ಮೂಲಕ ತೋರಿಸಿಕೊಟ್ಟ ಗೂಗಲ್ ಆ್ಯಡ್‌ವರ್ಡ್ಸ್ ಇತರ ಎಲ್ಲ ಟೆಕ್ ಕಂಪನಿಗಳಿಗೆ ಮಾದರಿಯಾಯಿತು. ಸರ್ಚ್ ಎಂಜಿನ್ ಆಪ್ಟಿಮೈಸೇಷನ್ (ಎಸ್‌ಇಒ), ಮೈಕ್ರೋಟಾರ್ಗೆಟಿಂಗ್, ಎ.ಐ. ಆಧಾರಿತ ಆಲ್ಗಾರಿದಂನ ಅನಾಲಿಟಿಕ್ಸ್, ಈ ಕಣ್ಗಾವಲಿನ ಬಂಡವಾಳವಾದದ ಪ್ರಮುಖ ಲಕ್ಷಣಗಳು.

ಜನಪ್ರಿಯ ಸಾಮಾಜಿಕ ಜಾಲತಾಣಗಳಲ್ಲಿ ನಾವೇ ನಮ್ಮ ಖಾಸಗಿ ಮಾಹಿತಿ ಹಂಚಿಕೊಂಡು ಶರಣಾಗತರಾಗಿಬಿಟ್ಟಿದ್ದೇವೆ. ನೂರಾರು ದೊಡ್ಡಣ್ಣಗಳ ಕಣ್ಗಾವಲಿನಲ್ಲಿರಲು ನಾವೇ ಸಮ್ಮತಿ ನೀಡಿದ್ದೇವೆ. ಇದರಲ್ಲಿ ದೇಶಿ, ವಿದೇಶಿ ಎಂಬ ತಾರತಮ್ಯವಿಲ್ಲ. ಗೌಪ್ಯತೆ, ಖಾಸಗಿತನವೆಲ್ಲವನ್ನೂ ಶಾಸನಬದ್ಧವಾಗಿ ಒಪ್ಪಿಕೊಂಡೇ ಹಂಚಿಕೊಂಡಿದ್ದೇವೆ. ಆದರೆ, ಅಮೆರಿಕ ಮೂಲದ ಬಹುತೇಕ ಸಾಮಾಜಿಕ ಜಾಲತಾಣಗಳು ಮತ್ತು ಆ್ಯಪ್‌ಗಳು ಈ ನೆಲದ ಕಾನೂನಿನ ವ್ಯಾಪ್ತಿಗೆ ಒಳಪಡುವುದೇ ಇಲ್ಲ! ಈಗ ಮಂಡಿಸಲಾಗಿರುವ ಡಿಜಿಟಲ್ ದತ್ತಾಂಶ ಸಂರಕ್ಷಣಾ ಮಸೂದೆ ಕೂಡ, ಈ ಕಂಪನಿಗಳು ನಿರಾಳವಾಗುವಂತೆ ಮಾಡಿದೆ.

ಕರ್ನಾಟಕದ ಯಾವುದೋ ಪಟ್ಟಣದಲ್ಲಿಯೋ, ಹಳ್ಳಿಯಲ್ಲಿಯೋ ವಾಸವಿರುವ ವ್ಯಕ್ತಿಯೊಬ್ಬನ ಖಾಸಗಿ ಮಾಹಿತಿ ಅಮೆಜಾನ್, ಕೇಂಬ್ರಿಡ್ಜ್ ಅನಾಲಿಟಿಕಾದಂತಹ ಕಂಪನಿಗಳಿಗೆ ಮಾರಾಟವಾಗಿರುವಸಾಧ್ಯತೆಯಿರುತ್ತದೆ.2018ರಲ್ಲಿಕ್ರಿಸ್ಟೋಫರ್ ವೈಲಿ ಎಂಬ ಸೊಲ್ಲಿಗ (Whistleblower) ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಫೇಸ್‌ಬುಕ್, 2010ರಲ್ಲಿಯೇ ಲಕ್ಷಾಂತರ ಮಂದಿ ಅಮೆರಿಕನ್ನರ ಖಾಸಗಿ ಮಾಹಿತಿಯನ್ನು ಕೇಂಬ್ರಿಡ್ಜ್ ಅನಾಲಿಟಿಕಾ ಕಂಪನಿಗೆ ಮಾರಾಟ ಮಾಡಿದ್ದನ್ನು ಬಹಿರಂಗಪಡಿಸಿದ್ದ.

12ನೇ ಪುಟಕ್ಕೆ...



ನಿಘಂಟಿನ ಮೇಲೆ ಅಲ್ಮೂತ್ ಮಯರ್, ಈವ್ಸ್ ಕುತೂಹಲದ ಕಣ್ಣು

ಕಿಟೆಲ್ ನೆನಪಿನ ನಾವೆ

ರಶ್ಮಿ ಎಸ್.

ಕನ್ನಡದಲ್ಲಿ ಕಿಟೆಲ್ ಹೇಗೆ ಬರೀತಾರೆ?

ಎಂಟು ಬರೀರಿ, ಅಡ್ಡಗೀಟು ಹಾಕಿ, ಒಂದು ಮೂರನ್ನು ತಿರುಗಿಸಿ, ಇನ್ನೊಂದನ್ನು ಜೋಡಿಸಿ, ಮೇಲೆ ಕೊಂಬು ಕೊಡಿ, ಸಣ್ಣದೊಂದು ಅರ್ಧ ವೃತ್ತ, ಅದಕ್ಕೊಂದು ತಲೆತಿರುಗಿದ ಕೊಂಬು.. ಹೇಳುತ್ತ ಹೋದಂತೆ ಬರೆದೇ ಬಿಟ್ಟರು. ಅವರು ಜರ್ಮನಿಯ ಈವ್ಸ್ ಪ್ಯಾಟ್ರಿಕ್ ಮಯರ್. ರೆವರೆಂಡ್ ಫರ್ಡಿನೆಂಡ್ ಕಿಟೆಲ್ ಅವರ ಗಿರಿಮೊಮ್ಮಗ (ಮರಿಮೊಮ್ಮಗಳ ಮಗ).

ಅಮ್ಮ ಅಲ್ಮೂತ್ ಮಯರ್ ಜೊತೆಗೆ ಪ್ರಜಾವಾಣಿ ಕಚೇರಿಗೆ ಭೇಟಿ ನೀಡಿದ ಈವ್ಸ್ ಬೆರಗು ಕಂಗಳಿಂದ ತಮ್ಮ ಹಿರಿಯಜ್ಜನ ಕುರಿತು ವಿಚಾರಿಸುತ್ತಿದ್ದರು. ಇಲ್ಲಿ ಜನ ಹೇಗೆ ನೆನಪಿಸಿಕೊಳ್ಳುತ್ತಾರೆ? ಅವರ ಜೀವಿತಾವಧಿಯಲ್ಲಿ ಮಾಧ್ಯಮಗಳಲ್ಲಿ ಅವರು ಸುದ್ದಿಯಾಗಿದ್ದರೆ? ಅದ್ಹೇಗೆ ಅಷ್ಟು ದೊಡ್ಡ ಕೆಲಸ ಮಾಡಿದರು ಅವರು? - ಹೀಗೆ ಪ್ರಶ್ನೆಗಳ ಸುರಿಮಳೆ.

ಮರು ಪ್ರಶ್ನಿಸುವ ಸರದಿ ಪ್ರಜಾವಾಣಿ ತಂಡದ್ದೂ ಆಗಿತ್ತು. ನಿಮಗೆ ನಿಮ್ಮಜ್ಜನ ಬಗ್ಗೆ ಏನು ಗೊತ್ತಿದೆ ಎಂದಾಗ ಅಲ್ಮೂತ್ ಅವರ ಕಂಗಳು ಮಿನುಗಿದವು. ನಿಮಗೆ ಅವರ ಪ್ರೇಮಕಥೆ ಗೊತ್ತೆ ಎಂದು ಕೇಳಿದರು. ಮಗನತ್ತ ಹೊರಳಿ ಈವ್ಸ್, ನೀನದನ್ನು ಹಂಚಿಕೊಳ್ಳಲು ಇಷ್ಟಪಡ್ತೀಯಾ ಅಂತ ಕೇಳಿದರು. ಈವ್ಸ್ ಯಾಕಾಗಬಾರದು ಅಂದವರೇ ಹಿರಿಯಜ್ಜನ ಬಾಳ ಚರಿತ್ರೆಯ ಕಣಿವೆಗೆ ಇಳಿದರು.

ಹಿರಿಯಜ್ಜ, ಭಾರತಕ್ಕೆ, ಕರ್ನಾಟಕಕ್ಕೆ ಬಂದಾಗ ಅವರಿಗೆ 21ರ ಹರೆಯ. ಭಾಷೆ, ಸಂಸ್ಕೃತಿ, ಹವಾಮಾನ, ಎಲ್ಲವೂ ಭಿನ್ನ. ಎಲ್ಲವೂ ಹೊಸತು. ಆದರೆ ಈ ನಾಡಿನೊಂದಿಗೆ, ಕನ್ನಡದೊಂದಿಗೆ ಅವರಿಗೆ ಪ್ರೀತಿ ಹುಟ್ಟಿತ್ತು. ಇಲ್ಲಿಯ ಮಹಿಳೆಗೇ ಮದುವೆಯಾಗುವೆಯಾ ಎಂದೂ ಕೇಳಲೂ ಬಯಸಿದ್ದರು. ಇದನ್ನೆಲ್ಲ ಅವರು ಪತ್ರಗಳಲ್ಲಿ ಬರೆಯುತ್ತಿದ್ದರು, ನನ್ನ ಹಿರಿಯಜ್ಜಿಗೆ. ಎಷ್ಟು ಚಂದದ, ನವಿರಾದ ಪ್ರೀತಿಯ ಪತ್ರಗಳು ಅವು. ಒಂದು ಪತ್ರದಲ್ಲಿ ಅವರು ಕಾಫಿ ರುಚಿಯ ಕುರಿತೂ ಉಲ್ಲೇಖಿಸಿದ್ದರು. ನಮ್ಮ ನಾಡು ಚಹಾಪ್ರಿಯರ ನಾಡು. ಇಲ್ಲಿಯ ಕಾಫಿ ಅವರ ಗಮನ ಸೆಳೆದಿತ್ತು. ಮನವನ್ನೂ ಸೆಳೆದಿತ್ತು. ಒಂದು ವರ್ಷದವರೆಗೂ ಹಿರಿಯಜ್ಜ - ಅಜ್ಜಿ ಪತ್ರಗಳ ಮುಖಾಂತರ ಸಂಪರ್ಕದಲ್ಲಿದ್ದರು.

ಒಂದು ವರ್ಷದ ನಂತರ ನನ್ನ ಹಿರಿಯಜ್ಜಿ, ಜರ್ಮನಿಯಿಂದ ಆರು ತಿಂಗಳು ಸಮುದ್ರಯಾನದ ಮೂಲಕ ಭಾರತಕ್ಕೆ ಪ್ರಯಾಣ ಕೈಗೊಂಡು ಅಜ್ಜನನ್ನು ಭೇಟಿಯಾದರು. ಇದೆಂಥ ಸಾಹಸಮಯ ಯಾತ್ರೆ ಅಲ್ವಾ? ನನಗೆ ಈಗಲೂ ಆ ಪ್ರೀತಿಯ ಕುರಿತು ಯೋಚಿಸಿದರೆ ಖುಷಿ ಮತ್ತು ಸೋಜಿಗ ಎರಡೂ ಒಟ್ಟೊಟ್ಟಿಗೆ ಉಂಟಾಗುತ್ತವೆ. ಆಮೇಲೆ ಅವರು ಮದುವೆಯಾದರು. ನಾಲ್ಕು ವರ್ಷ ಒಟ್ಟಿಗಿದ್ದರು. ಆದರೆ, ಅಜ್ಜಿಯ ಅಕಾಲಿಕ ಮರಣದಿಂದಾಗಿ ಹಿರಿಯಜ್ಜ ಒಂಟಿಯಾದರು. ಆಗ ನನ್ನ ಹಿರಿಯಜ್ಜಿಯ ತಂಗಿಯೇ ಅವರನ್ನು ಮದುವೆಯಾದರು. ಅವರು ತಮ್ಮಕ್ಕನ ಪ್ರೇಮಪ್ರಸಂಗಕ್ಕೆ ಸಾಕ್ಷಿಯಾಗಿದ್ದರಲ್ಲ.. ಆ ಪತ್ರಗಳನ್ನು ಓದಿಯೇ ಅವರು ಮರುಳಾಗಿರಬಹುದು!

ನಿಮಗೆ ಗೊತ್ತಾ? ಈ ಅಕ್ಕ ತಂಗಿಯರಿಬ್ಬರೂ ಯಾತ್ರೆಯ ಸಮಯದಲ್ಲಿ ಡೈರಿ ಬರೆದಿದ್ದಾರೆ. ಜರ್ಮನಿ ಭಾಷೆಯಲ್ಲಿ ಅವು ದಾಖಲಾಗಿವೆ. ನಾವೂ ಅನುವಾದಕರನ್ನು ಹುಡುಕುತ್ತಿದ್ದೇವೆ. ಇಂಗ್ಲಿಷ್‌ಗೆ ಭಾಷಾಂತರವಾದ ನಂತರ, ನೀವೂ ಅವುಗಳನ್ನು ಕನ್ನಡಕ್ಕೆ ಭಾಷಾಂತರಿಸಬಹುದೇನೊ ಎನ್ನುತ್ತಲೇ ಕಿರುನಕ್ಕರು ಈವ್ಸ್.

'ನಮ್ಮ ಮನೆಯಲ್ಲಿ ಮೊದಲ ಮಗ ಪಾದ್ರಿ, ಎರಡನೆಯ ಮಗ ವೈದ್ಯ ಆಗುವ ಸಂಪ್ರದಾಯವಿತ್ತು. ಹಂಗಾಗಿ ಪಾದ್ರಿ ಆದರು. ಅವರ ಸಹೋದರ ವೈದ್ಯರಾದರು' ಎನ್ನುತ್ತಾ ತಮ್ಮ ಕುಟುಂಬದ ಕುರಿತಾದ ವಿಶೇಷಗಳನ್ನು ಅತ್ಯಾಪ್ತವಾಗಿ ಬಿಚ್ಚಿಟ್ಟರು. ನೀವು, ನಿಮ್ಮ ಗಿರಿತಾತನನ್ನು ಹೇಗೆ ಗುರುತಿಸಲು ಇಷ್ಟಪಡುವಿರಿ ಎಂಬ ಪ್ರಶ್ನೆ ಎದುರಾದಾಗ, 'ಹಟವಾದಿ' ಅವರಿಗೆ ಕೈ ಹಿಡಿದದ್ದನ್ನು ಸಾಧಿಸುವ ಹುಚ್ಚು ಹಟವಿತ್ತು. ಇಲ್ಲಾಂದ್ರೆ 72 ಸಾವಿರ ಪದಗಳನ್ನು ಸಂಗ್ರಹಿಸಿ, ವಿಂಗಡಿಸಿ, ಅರ್ಥ ಬರೆದು, ಉಚ್ಚಾರ ಅರಿತು, ಭಾಷೆ ತಿಳಿದು ಇಷ್ಟೆಲ್ಲ ಸಾಹಸ ಮಾಡಲು ಸಾಧ್ಯವೇ, ಒಂದು ಜೀವಿತಾವಧಿಯಲ್ಲಿ' ಎಂದು ಮರುಪ್ರಶ್ನೆ ಹಾಕಿದರು.

ನಾವೆಲ್ಲ ಸಾಮಾನ್ಯವಾಗಿ ಸಾವಿರ ಪದಗಳನ್ನು ಬಳಸುತ್ತೇವೆ. ಈ ಮನುಷ್ಯ ನಿತ್ಯ 18-20 ಗಂಟೆ ದುಡಿದಿರಬಹುದು. ಹೀಗೆ ದುಡಿಯುತ್ತಲೇ ಕನ್ನಡದ ಕುರಿತು ಮೋಹ ಹುಟ್ಟಿರಬೇಕು. ನಾಲ್ಕೈದು ದಶಕಗಳವರೆಗೂ ಇದೇ ನೆಲದಲ್ಲಿಯೇ ಬದುಕಿದರು ಅವರು. ಕನ್ನಡಿಗರ ಮುಖದಲ್ಲಿ ಕಿಟೆಲ್ ಹೆಸರು ತೆಗೆದುಕೊಂಡ ತಕ್ಷಣ ಕಾಣುವ ಹೆಮ್ಮೆ, ಪ್ರೀತಿಯನ್ನು ನೋಡಿದಾಗ ಖುಷಿಯೆನಿಸುತ್ತದೆ. ನೀವು ನನ್ನ ಹೆಸರನ್ನು ಕನ್ನಡದಲ್ಲಿ ಬರೆದುಕೊಡುವಿರಾ? ನನ್ನ ವಿಸಿಟಿಂಗ್ ಕಾರ್ಡ್‌ಗಳಲ್ಲಿ ಅದನ್ನು ಬಳಸುವೆ ಎನ್ನುತ್ತ, ಕಿಟೆಲ್ ಪದವನ್ನು ಹೇಗೆ ಬರೆಯಬೇಕು ತಿಳಿದು ಬರೆದರು. ಕನ್ನಡದ ಪದಗಳನ್ನು ಸ್ಪರ್ಶಿಸಿದರು. ಮುತ್ತಜ್ಜನ ಮುದಿನೆರಿಗೆ ಇರುವ ಮುಂಗೈಗೆ ಮುತ್ತಿಟ್ಟಂತೆ ಆ ಕಾಗದದ ಚೂರನ್ನು ಜೋಪಾನವಾಗಿ ಮಡಿಚಿಟ್ಟುಕೊಂಡು ಹೊರಟರು.

ಅವರ ನೆನಪಿನ ಬುತ್ತಿಯಲ್ಲಿ ನಮಗೂ ಒಂದಷ್ಟು ಕಥೆ ಕಟ್ಟಿಕೊಟ್ಟು ಹೊರಟರು.

ಲಿಂಗದ ಹಂಗು ತೊರೆದು...

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರ್ತಿ ಸುಮತಿ ಅವರು ರೂಮಿ ಹರೀಶ್ ಆಗಿಯೇ ಈಗ ಹೆಚ್ಚು ಪರಿಚಿತರು. ಲಿಂಗತ್ವ ಅಲ್ಪಸಂಖ್ಯಾತರ ಪರ ಹೋರಾಟದ ಜತೆಗೆ ತಮ್ಮೊಳಗಿನ ತಳಮಳಗಳಿಗೆ ಸಂಗೀತ ಮತ್ತು ಚಿತ್ರಕಲೆಯ ಮೂಲಕ ಉತ್ತರ ಕಂಡುಕೊಳ್ಳಲು ಯತ್ನಿಸುತ್ತಿದ್ದಾರೆ. ಅವಳಿಂದ ಅವನಾಗುವ ಘಟ್ಟದಲ್ಲಿ ಸಮಾಜ ಮತ್ತು ಲಿಂಗ ವ್ಯವಸ್ಥೆಯೊಳಗಿನ ಅಪಸವ್ಯಗಳ ಕುರಿತು ಮುಕ್ತವಾಗಿ ಇಲ್ಲಿ ಮಾತನಾಡಿದ್ದಾರೆ.

ಮಂಜುಶ್ರೀ ಎಂ. ಕಡಕೋಳ


'ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ' ಅಂತ ವಚನಕಾರ ಜೇಡರ ದಾಸಿಮಯ್ಯ ಒಂದೇ ಸಾಲಿನಲ್ಲಿ ಹೇಳಿಬಿಟ್ಟ. ಆದರೆ, ಗಂಡಿನಿಂದ ಹೆಣ್ಣಾದವರು, ಹೆಣ್ಣಿನಿಂದ ಗಂಡಾದವರ ಪಾಡು ಒಂದೇ ಸಾಲಿನಲ್ಲಿ ಹೇಳುವಂಥದಲ್ಲ. ಲೋಕನಿಂದನೆಯ ಜತೆಗೆ ತಮ್ಮ ಮೈ-ಮನಗಳಲ್ಲಿನ ತಾಕಲಾಟಗಳಿಗೆ ಉತ್ತರ ಕಂಡುಕೊಳ್ಳುವುದು ಅಷ್ಟು ಸುಲಭವಲ್ಲ. ಅಂಥದೊಂದ್ದು ಹಾದಿಯಲ್ಲಿ ತಮ್ಮದೇ ಅಸ್ಮಿತೆ ಕಂಡುಕೊಳ್ಳಲು ಯತ್ನಿಸುತ್ತಿರುವರಲ್ಲಿ ಒಬ್ಬರು ರೂಮಿ ಹರೀಶ್.

ಸುಮತಿ ಅರ್ಥಾತ್ ರೂಮಿ ಹರೀಶ್ ಹೆಣ್ಣಾಗಿ ಜನಿಸಿದವರು. ಬಾಲ್ಯದಲ್ಲೇ ಸಂಗೀತದ ಕುಂಟಾಬಿಲ್ಲೆ ಆಡುತ್ತಾ ಬೆಳೆದವರು. ಇಷ್ಟವಿದೆಯೋ ಇಲ್ಲವೋ ಒಟ್ಟನಲ್ಲಿ ಕಲಿಯಬೇಕು. ರಾಗಗಳ ಮೇಲೆ ಪ್ರಭುತ್ವ ಸಾಧಿಸಿ ಮತ್ತೆ ಮರೆತುಬಿಡಬೇಕು ಅನ್ನೋದು ಅವರ ಪಾಲಿಗೆ ಅಲಿಖಿತ ನಿಯಮವಾಗಿತ್ತು. ಸ್ವರ-ರಾಗ ಅಲಾಪಗಳ ಏರಿಳಿತಗಳ ಜೊತೆಗೆ ಸಾಂಪ್ರದಾಯಿಕ ಕುಟುಂಬದಲ್ಲಿನ ಕರ್ಮಠತೆಯನ್ನೂ ಎಳೆವೆಯಲ್ಲಿ ಸೂಕ್ಷ್ಮವಾಗಿ ಗ್ರಹಿಸುತ್ತಿದ್ದ ಅವರ ಬೆಂಬಲಕ್ಕೆ ನಿಂತದ್ದು ಅಮ್ಮ, ಶಿಲ್ಪಿ ಕನಕಮೂರ್ತಿ. ಹೆಣ್ಣುಮಕ್ಕಳ ಬಗೆಗಿದ್ದ ಸಿದ್ಧಮಾದರಿಯ ಚೌಕಟ್ಟುಗಳನ್ನು ಮುರಿದು ಕಟ್ಟುವಲ್ಲಿ ನಿಸ್ಸೀಮರಾಗಿದ್ದ ಅಮ್ಮನಿಂದ ಮಗಳು ಕೂಡಾ ಕಲಿತದ್ದು ಮುರಿದು ಕಟ್ಟುವಿಕೆಯ ಕಾಯಕವನ್ನೇ. ಸಮಾನತೆಯ ಹಾದಿಯಲ್ಲಿ ಹೆಣ್ಣು-ಗಂಡು ಜತೆಯಾಗಿ ಹೆಜ್ಜೆ ಹಾಕಬೇಕು ಎಂಬುದನ್ನು ಗಾಢವಾಗಿ ನಂಬಿದ್ದ ಸುಮತಿ, ಬೆಳೆಯುತ್ತಲೇ ತಮ್ಮೊಳಗಿನ 'ಅವನನ್ನು' ಕಂಡುಕೊಳ್ಳತೊಡಗಿದ್ದರು. ಒಂದೆಡೆ ಅವನಾಗುವ ಬಯಕೆಯ ಚಿಗುರು, ಮತ್ತೊಂದೆಡೆ ತನ್ನ ಸಾಂಗತ್ಯದಂತಿರುವ ಸಂಗೀತದಿಂದ ವಿಮುಖವಾಗುವ ಭಯ. ಅದಕ್ಕಾಗಿಯೇ ಹತ್ತಾರು ವರುಷಗಳ ಕಾಯುವಿಕೆಯ ಬಳಿಕ 'ರೂಮಿ ಹರೀಶ್'ನಾಗಿ ಪರಿವರ್ತನೆ (ರೂಮಿ ಅವರಿಷ್ಟದ ಕವಿ ಹಾಗಾಗಿ, ಹೆಸರಿನೊಂದಿಗೆ ಸೇರಿಸಿಕೊಂಡಿದ್ದಾರೆ).

'ನಾನು ಹೆಣ್ಣು ಅನ್ನೋದು ಚೆನ್ನಾಗಿ ಗೊತ್ತು. ಆದರೆ, ಅದೇ ಸಮಯಕ್ಕೆ ಹೆಣ್ಣಲ್ಲ ಅನ್ನೋದು ತುಂಬಾ ಸ್ಪಷ್ಟವಾಗಿ ಗೊತ್ತು. ಹಾಗಾದರೆ ಗಂಡಸಾ ಅನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಬಹಳ ಗೊಂದಲಕ್ಕೆ ಬಿದ್ದಿರುವೆ. ಈ ಲೋಕ ಪ್ರತಿಪಾದಿಸುವ 'ಗಂಡಸುತನ' ನನಗೆ ಬೇಕಾಗಿಲ್ಲ. ಸಾಮಾಜಿಕವಾಗಿ ಕಟ್ಟಿಕೊಂಡು ಬಂದಿರುವ ಗಂಡಸುತನಕ್ಕೂ ನಾನು ಹುಡುಕಿಕೊಳ್ಳಬೇಕಾದ ನನ್ನ ಥರದ ಗಂಡಸುತನಕ್ಕೂ ಬಹಳ ವ್ಯತ್ಯಾಸ ಇರಬೇಕೆಂದು ಮೊದಲಿನಿಂದಲೂ ಬಯಸಿದ್ದೆ. ಗಂಡಸೆಂದರೆ ಮನೆಗೆಲಸ ಮಾಡದೇ ಬೆಳಿಗ್ಗೆಯೇ ಪೇಪರ್ ಓದುತ್ತಾ ಕೂತು, ಅಡುಗೆ ಮನೆಯಲ್ಲಿ ಹೆಂಡತಿ ಬೇಯುತ್ತಿದ್ದರೂ ತಿಂಡಿ, ಕಾಫಿಗೆ ಆರ್ಡರ್ ಮಾಡುವ ಗಂಡಾಗಲೀ, 'ಬೀಯಿಂಗ್ ಗುಡ್ ಮ್ಯಾನ್'' ಅನ್ನಿಸಿಕೊಳ್ಳುವಲ್ಲೂ ಒಂದು ರೀತಿಯ ಪುರುಷ ಅಹಂ ತೋರಿಸುವ ಗಂಡಾಗಲೀ ನಾನಾಗಬೇಕು ಅನ್ನುವುದನ್ನು ಪ್ರಜ್ಞಾಪೂರ್ವಕವಾಗಿ ತಪ್ಪಿಸಿಕೊಂಡಿದ್ದೇನೆ' ಅನ್ನುವುದು ಅವರ ಮಾತು.

11ನೇ ಪುಟಕ್ಕೆ...





ರೂಮಿ ಹರೀಶ್ ಅವರು ರಚಿಸಿದ ಲಿಂಗತ್ವ ಸಂವೇದನೆಯ ಕಲಾಕೃತಿ

ಕಣ್ಣು ಧರಿಸಿ ಕಾಣಿರೋ...

ರಂಗಭೂಮಿ

ದಯಾನಂದ

ಪುರಾಣವನ್ನು ವರ್ತಮಾನದ ನೆಲೆಯಲ್ಲಿ ಕಲೆಗೆ ಒಗ್ಗಿಸುವ ಕೆಲಸ ಕನ್ನಡ ರಂಗಭೂಮಿಗೆ ಹೊಸದೇನಲ್ಲ. ಆದರೆ, ತಳಸಮುದಾಯಗಳ ಕುಲ ಪುರಾಣಗಳನ್ನು ನಾಟಕವಾಗಿ ಕಟ್ಟಿ, ಕುಣಿದ ಉದಾಹರಣೆಗಳು ಕನ್ನಡ ಶಿಷ್ಟ ರಂಗಪರಂಪರೆಯಲ್ಲಿ ವಿರಳ. ಕೆ.ಬಿ. ಸಿದ್ದಯ್ಯ ಅವರ ಬದುಕನ್ನೂ, ಕಾವ್ಯಗಳನ್ನೂ, ಬರಹಗಳನ್ನೂ, ಅವುಗಳ ಜೀವಾಳವನ್ನೂ ಆಧಾರವಾಗಿಟ್ಟುಕೊಂಡು, ದಲಿತರ ಕುಲ ಪುರಾಣವನ್ನು ಹೊಸದಾಗಿ ಕಾಣಿಸಿದ 'ದಕ್ಲ ಕಥಾ ದೇವಿ ಕಾವ್ಯ' (ರಚನೆ, ನಿರ್ದೇಶನ- ಲಕ್ಷ್ಮಣ ಕೆ.ಪಿ.) ಎಂಬ ವಿಶಿಷ್ಟ ನಾಟಕ ಪ್ರಯೋಗ ಇತ್ತೀಚೆಗೆ ಬೆಂಗಳೂರಿನ ರಂಗಶಂಕರದಲ್ಲಿ ನಡೆಯಿತು.

'ನನಗೆ ಅಸ್ಪೃಶ್ಯತೆಯ ಅನುಭವ ಸ್ವಮರುಕ ಅಥವಾ ಸ್ವರತಿಯಂತಹ ಮನೋರೋಗವಲ್ಲ, ಕೀಳರಿಮೆಯಲ್ಲ. ಆರಾಧನೆ ಅಥವಾ ಅಹಂ ಅಲ್ಲ, ಅಸ್ಪೃಶ್ಯತೆಯ ಅನುಭವ ಒಂದು ಅರಿವು. ನಿಜ ಮನುಷ್ಯನನ್ನು ಕಾಣುವ ಬೆಳಕು' ಎಂಬ ನಾಟಕದ ಆರಂಭದ ಸಂಭಾಷಣೆಯ ಸಾಲುಗಳು ಸಿದ್ದಯ್ಯ ಅವರೇ ಬರೆದುಕೊಂಡಿರುವ ಮಾತುಗಳು. ಸಿದ್ದಯ್ಯ ಅವರ ಬಾಲ್ಯದ ಕಥನದೊಂದಿಗೆ ಆರಂಭವಾಗುವ ನಾಟಕ, ದಕ್ಲದೇವಿ, ದಕ್ಲ, ದಕ್ಲನ ಎಡ-ಬಲ ಮಕ್ಕಳ ಕತೆಗಳ ಮೂಲಕ ಕುಲ ಪುರಾಣವನ್ನು ಒಳಗೊಂಡು, ಸೇಂದಿಸರೋವರವನ್ನು ಇಡಿಯಾಗಿ ಕುಡಿಯುವ ದಕ್ಲ ಮತ್ತು ಎಡ-ಬಲ ಮಕ್ಕಳ ಹಸಿವಿನ ಹಂಬಲದಂತೆ ಇಡೀ ನಾಟಕವು ಮನುಷ್ಯನನ್ನು ಮನುಷ್ಯನನ್ನಾಗಿ ಕಾಣುವ, ಕಾಣಿಸುವ ಬೆಳಕಿಗಾಗಿ ಹಂಬಲಿಸಿದ ಜೀವ ಕಾರುಣ್ಯದ ಮಹಾ ಹಸಿವಾಗಿ ಕಾಣುತ್ತದೆ. ಹೀಗಾಗಿಯೇ ನಾಟಕದ ಪ್ರತಿಯೊಂದು ಘಟ್ಟವೂ ಮನುಷ್ಯನೊಳಗಿನ ಮನುಷ್ಯತ್ವವನ್ನು ಚುಚ್ಚಿ ಎಬ್ಬಿಸುವ ಮೊನಚುತನವನ್ನು ಪಡೆದುಕೊಂಡಿದೆ. ನಿಜಮನುಷ್ಯನನ್ನು ಕಾಣುವ, ಕಾಣಿಸುವ ಈ ಬೆಳಕು ತಾಯಿಗುಣವಾಗಿ ಇಡೀ ನಾಟಕವನ್ನು ಆವರಿಸಿಕೊಂಡಿದೆ. ಗಂಡುಸೊಕ್ಕಿನ ದಕ್ಲ ಹೆಣ್ಣಾಗಿ ಬದಲಾದ ಮೇಲೆ ಹೇಳುವ, 'ಒಂದ್ ಸಲ ಹೆಣ್ಣಾದ ಮೇಲೆ ಇನ್ನಾವ ರೂಪ ಐತೆ ತಾಯಿ' ಎನ್ನುವ ಮಾತುಗಳು ನಾಟಕಕ್ಕೆ ತಾಯಿಬೇರಿನಂತಿವೆ.

'ದೋಯಪ್ಪದೋ... ದೋಯವ್ವದೋ' ಎಂಬ ದಕ್ಕಲರ ಇರುವಿನ ಕೂಗುಗಳೂ ನಾಟಕದಲ್ಲಿ ಮನುಷ್ಯನ ಅಂತರಾಳದ ಕೂಗುಗಳು ಹಾಗೂ ಆ ಕೂಗುಗಳ ಮೂಲಕ ಜೀವ ಕಾರುಣ್ಯ ಕರುಣಿಸುವ ಅಂಶಗಳಾಗಿ ಬೆರೆತಿವೆ. ಅರೆ, ತಮಟೆಗಳ ಕಂಪನ ಆರಂಭದಿಂದ ಕೊನೆಯವರೆಗೂ ಈ ಪ್ರಯೋಗದಲ್ಲಿ ಆವರಿಸಿಕೊಂಡು ನಾಟಕಕ್ಕೆ ವಿಶಿಷ್ಟ ಅನುಭೂತಿ ನೀಡಿದೆ. ಅರೆ, ತಮಟೆ ವಾದ್ಯಗಳನ್ನು ನುಡಿಸುವ ಕಲಾವಿದರೇ ಪಾತ್ರಧಾರಿಗಳಾಗಿ ಇದ್ದಿದ್ದು ಮತ್ತು ವಾದನ, ಅಭಿನಯ ಎರಡನ್ನೂ ಹದವಾಗಿ ನುಡಿಸಿಕೊಂಡು, ನಡೆಸಿಕೊಂಡು ಹೋಗಿದ್ದು ನಾಟಕದ ಹೆಚ್ಚುಗಾರಿಕೆ.


ನಾಟಕದೊಳಗೇ ನಾಟಕ ನಡೆಯುತ್ತಾ, ದಕ್ಕಲ ಮಕ್ಕಳೇ ಪಾತ್ರಗಳಾಗುತ್ತಾ ನಾಟಕ ಕಲೆಯ ಪ್ರಧಾನ ಅಂಶ ಎನಿಸಿರುವ 'ಮನರಂಜನೆ'ಯ ಜತೆಜತೆಗೇ ಮನುಷ್ಯ ಘನತೆ ಹಾಗೂ ಮಾನವೀಯತೆಯ ಬಗ್ಗೆ ಅರಿವು ಕರುಣಿಸುವ ಕಾರಣಕ್ಕೆ ಈ ನಾಟಕ ಭಿನ್ನವೂ, ಸಕಾಲಿಕವೂ ಆಗಿದೆ. ನಾಟಕದಲ್ಲಿ ಅಸ್ಪೃಶ್ಯತೆ, ಲಿಂಗ ಅಸಮಾನತೆ, ಬಡತನ, ಪ್ರಸ್ತುತ ರಾಜಕೀಯ ಸನ್ನಿವೇಶಗಳನ್ನು ಹಾಡು, ಆಚರಣೆ, ಒಡಪು, ಗಾದೆ, ಕುಲ ಪುರಾಣಗಳ ಮೂಲಕ ಒಂದರೊಳಗೊಂದು ಹೆಣೆಯಲಾಗಿದೆ. ಈ ಪ್ರಯೋಗದ ಹಲವು ಕಡೆ ಪ್ರೇಕ್ಷಕರೂ ಪಾತ್ರಗಳಾಗಿ, ಪಾತ್ರಗಳು ಪ್ರೇಕ್ಷಕರ ಭಾವಪ್ರತಿಕ್ರಿಯೆಗೆ ಕಾಯುವ ಪ್ರೇಕ್ಷಕರಾಗಿ, ಆಚರಣೆಗಳು ಪ್ರೇಕ್ಷಕರ ನಡುವೆಯೇ ನಡೆಯುತ್ತಾ, ಪ್ರೇಕ್ಷಕರ ಗ್ಯಾಲರಿಗೆ ಆಗಾಗ ಬೆಳಕು ಚೆಲ್ಲುವ ಮೂಲಕ ಪ್ರೇಕ್ಷಕರನ್ನು 'ಎಚ್ಚರ'ವಾಗಿಡುವ ಎಪಿಕ್ ರಂಗಭೂಮಿಯ ಅಂಶಗಳನ್ನೂ ಈ ನಾಟಕದಲ್ಲಿ ಅಚ್ಚುಕಟ್ಟಾಗಿ ಬಳಸಿಕೊಳ್ಳಲಾಗಿದೆ.

ಪಾತ್ರಧಾರಿಗಳೂ, ಸಂಗೀತಗಾರರೂ ಆಗಿದ್ದ ನುರಿತ ಕಲಾವಿದರಾದ ಬಿಂದು ರಕ್ಷಿದಿ, ರಮಿಕ ಚೈತ್ರ, ಸಂತೋಷ್ ದಿಂಡಗೂರು, ನರಸಿಂಹರಾಜು ಬಿ.ಕೆ., ಭರತ್ ಡಿಂಗ್ರಿ ಅವರ ಅಭಿನಯ ಮತ್ತು ಸಂಗೀತ ಹದವಾಗಿತ್ತು. ಬೆಳಕು (ಮಂಜು ನಾರಾಯಣ್), ವಸ್ತ್ರ ವಿನ್ಯಾಸ (ಶ್ವೇತಾರಾಣಿ ಎಚ್.ಕೆ.) ನೇಪಥ್ಯ (ಚಂದ್ರಶೇಖರ ಕೆ.) ನಾಟಕದ ಪರಿಣಾಮ ಹೆಚ್ಚಿಸಿದವು.

ಅಸ್ಪೃಶ್ಯರಲ್ಲೇ ಅಸ್ಪೃಶ್ಯರಾಗಿ, ಇಂದಿಗೂ ಸಮಾಜದ ಕಟ್ಟಕಡೆಯಲ್ಲಿರುವ ದಕ್ಕಲರ ಬದುಕು, ದಕ್ಕಲರ ಕುಲ ಪುರಾಣವನ್ನು ವರ್ತಮಾನದ ಅಸಮಾನತೆಯ ಪಿಡುಗಿಗೆ ಮದ್ದಾಗಿ ಬಳಸಿಕೊಳ್ಳಲು ಈ ನಾಟಕ ಪ್ರಯತ್ನಿಸಿದೆ. ಸಿದ್ದಯ್ಯ ಅವರಿಗೆ ಅಕ್ಷರ ಕಾಣಿಸಿದ ಬೆಳಕನ್ನು ಲಕ್ಷ್ಮಣ ಕೆ.ಪಿ. ಅವರ ತಂಡ ಸಮಾಜಕ್ಕೆ ಹರಡುವ ಸಾರ್ಥಕ ಕಾರ್ಯವಾಗಿ ಈ ಪ್ರಯೋಗ ಕಾಣುತ್ತದೆ. ಆ ನಿಟ್ಟಿನಲ್ಲಿ ಈ ಪ್ರಯೋಗ ಸಿದ್ದಯ್ಯ ಅವರಿಗೆ, ಅವರ ಕಾವ್ಯ ಕಾಣ್ಕೆಗೆ, ದರ್ಶನಕ್ಕೆ ಸಲ್ಲಿಸಿದ ನಿಜನಮನ.

ಇಡೀ ನಾಟಕದಲ್ಲಿ ಮುಖ್ಯವಾಗಿ ಕಾಡುವ ಅಂಶ ಜೀವಕಾರುಣ್ಯದ ಬೆಳಕಿನ ಹಂಬಲ. ಸಮಾಜದಲ್ಲಿ ಈ ಜೀವ ಕಾರುಣ್ಯದ ಬೆಳಕಿನ ಕೊರತೆಯ ಕಾರಣಕ್ಕಾಗಿಯೇ ಇಂದಿಗೂ ಮನುಷ್ಯ ಘನತೆಯನ್ನು ತುಳಿಯುವಂಥ ಹೇಯ ಘಟನೆಗಳು ನಡೆಯುತ್ತಲೇ ಇವೆ. ಮನುಷ್ಯನೊಳಗಿನ ಜೀವ ಕಾರುಣ್ಯದ ಬೆಳಕು ಕಾಣಲು ದಕ್ಲನಿಗೆ ದಕ್ಕಿದ ಕಣ್ಣು, ಕೇಬಿ ಅವರಿಗೆ ದಕ್ಕಿದ ಕಣ್ಣುಗಳ ಅಗತ್ಯ ಈಗ ಈ ಸಮಾಜಕ್ಕಿದೆ.

ಈ ನಾಟಕವನ್ನು ಕಾಣಲೂ ಅಂಥ ಕಣ್ಣು ಬೇಕು. ಅಂಥ ಕಣ್ಣಿಲ್ಲದವರು ಕಣ್ಣು ಧರಿಸಿ ಕಾಣಿರೋ...



ದಕ್ಲ ಕಥಾ ದೇವಿ ಕಾವ್ಯ ನಾಟಕದ ದೃಶ್ಯ
ಚಿತ್ರ: ಐವನ್ ಡಿ'ಸಿಲ್ವ

ಲಿಂಗದ ಹಂಗು ತೊರೆದು...

10ನೇ ಪುಟದಿಂದ...


'ನಾನು ಚಿಕ್ಕವಯಸ್ಸಿನಿಂದ ನೋಡಿದ್ದು ಮೂವರು ಗಂಡಸರನ್ನು. ತಂದೆ, ನನ್ನ ಮೇಷ್ಟ್ರು ಮತ್ತು ನನ್ನ ತಾಯಿಯ ಮೇಷ್ಟ್ರು. ಅವರಾರೂ ಕೆಟ್ಟ ಗಂಡಸುತನ ತೋರಿಸಿಕೊಳ್ಳಲಿಲ್ಲ. ತಾಯಿಯ ಕಡೆಯ ಸಂಬಂಧಿಕರಲ್ಲಿ ಕೆಲ ಗಂಡಸರು ಮಾತ್ರ ಮಾತಿನಿಂದ ಹಿಡಿದು ನಡವಳಿಕೆಯಲ್ಲೂ ಗಂಡಸಿನ ದರ್ಪ ತೋರುತ್ತಿದ್ದರು. ಒಂದು, ತಾವು ಗಂಡಸರು ಅನ್ನೋ ಅಹಂ. ಮತ್ತೊಂದು, ಬ್ರಾಹ್ಮಣರು ಅನ್ನೋ ಮೇಲಸ್ತಿಕೆ. ಅಷ್ಟಲ್ಲದೆ ತಾವು ಓದಿಕೊಂಡಿದ್ದೇವೆ, ದೊಡ್ಡ ಸ್ಥಾನದಲ್ಲಿದ್ದೇವೆ, ಹಾಗಾಗಿ ಯಾರಿಗೆ ಏನು ಬೇಕಾದರೂ ಸಲಹೆ ಕೊಡಬಹುದು ಅನ್ನುವ ದರ್ಪ ಅವರಲ್ಲಿತ್ತು. ಇದನ್ನೆಲ್ಲ ನೋಡಿದ್ದ ನಾನೂ ಅವರಂತಾಗಬಾರದೆಂಬ ಜಾಗೃತಿ ನನ್ನಲ್ಲಿ ಸದಾ ಇತ್ತು' ಅನ್ನುತ್ತಾರೆ ಅವರು. ಅವರ ಭಾವಯಾನದಲ್ಲಿ ಇನ್ನು ನೀವುಂಟು, ಅವರುಂಟು. ಓವರ್ ಟು ರೂಮಿ ಹರೀಶ್...

* * *

ನಿಮಗೇನ್ರಿ ಇದೆ ಕಳೆದುಕೊಳ್ಳಲು...

ಲಿಂಗ ಬದಲಾವಣೆಯ ಸರ್ಜರಿ ಮಾಡಿಸಿಕೊಳ್ತೀನಿ ಅಂದಾಗ ಸ್ನೇಹಿತನೊಬ್ಬ, 'ಅವರಾದರೆ ಗಂಡಸುತನ ಕಳೆದುಕೊಳ್ತಾರೆ. ನಿಮಗೇನ್ರಿ ಇದೆ ಕಳೆದುಕೊಳ್ಳಲು' ಅಂತ ಮುಖಕ್ಕೆ ಹೊಡೆದಂತೆ ಕೇಳಿದ್ದ. 'ಏನಿಲ್ಲ ಅಂತ ದಯವಿಟ್ಟು ಹೇಳಿ ನೋಡೋಣ' ಅಂತ ತಿರುಗೇಟು ಕೊಟ್ಟೆ. ಕೆಲವರು ಹೇಳ್ತಾರೆ ಅಷ್ಟೊಂದು ನೋವು ಪಟ್ಟುಕೊಂಡು ನೀವು ಸರ್ಜರಿ ಮಾಡಿಕೊಳ್ಳಬೇಕಾ ಅಂತ. ಮತ್ತೊಬ್ಬ ಪ್ರಗತಿಪರ ಮಹಿಳೆ ಜತೆಗೆ ಆಕೆ ವೈದ್ಯೆ ಬೇರೆ, ನಿಮಗೆ ಹೇಗೂ ಮೆನೊಪಾಸ್ ಹತ್ತಿರವಿದೆ. ಈಗ ಗರ್ಭಕೋಶ ಇದ್ದರೆಷ್ಟು ಬಿಟ್ಟರೆಷ್ಟು? ಹೇಗೂ ಮುಟ್ಟಾಗಲ್ಲವಲ್ಲ. ಹಾಗೇ ಹೊಂದಾಣಿಕೆ ಮಾಡಿಕೊಂಡಿದ್ರೆ ಆಗ್ತಾ ಇತ್ತು ಎಂದಿದ್ದರು. ಅರೆ ಎಷ್ಟು ಸುಲಭವಲ್ಲ ಹೊಂದಾಣಿಕೆ ಅನ್ನೋದು. ಪುರುಷ ಪ್ರಧಾನ ಸಮಾಜದಲ್ಲಿ ಅದನ್ನೇ ತಾನೇ ಹೇಳಿಕೊಳ್ಳೋದು. ನನಗೆ ಇಂಥ ಸಮಸ್ಯೆ ಆಗ್ತಾ ಇದೆ ಅಂದ್ರೆ ಸ್ವಲ್ಪ ಅಡ್ಜಸ್ಟ್ ಮಾಡಿಕೊಳ್ಳಮ್ಮಾ ಅಂತಾರೆ. ಎಲ್ಲಿಯ ತನಕ ಅಡ್ಜಸ್ಟ್‌ಮೆಂಟ್? ನಮ್ಮ ಜೀವ ಹೋಗುವ ತನಕವಾ?

ನಮ್ಮ ಜನರಿಗೆ ಲಿಂಗತ್ವ ಅಲ್ಪಸಂಖ್ಯಾತರು ಅಂದರೆ ಸಾಕು, ಒಂದು ರೀತಿಯ ಅಧಿಕಾರ ತನ್ನಿಂತಾನೇ ಬಂದುಬಿಡುತ್ತೆ. 'ತಪ್ಪು ತಿಳಿದುಕೊಳ್ಳಬೇಡಿ' ಅಂತ ಮುನ್ನುಡಿ ಬರೆಯುತ್ತಲೇ ನೀವು ಹೇಗೆ ಲೈಂಗಿಕವಾಗಿ ತೃಪ್ತಿ ಹೊಂದುತ್ತೀರಾ ಅಂತ ಪ್ರಶ್ನೆ ಕೇಳ್ತಾರೆ. ಎಷ್ಟೊಂದು ಅಸೂಕ್ಷ್ಮರಾಗಿ ಪ್ರಶ್ನೆಗಳನ್ನು ಕೇಳ್ತಾರೆ ಅಂದರೆ ಎಲ್ಲವೂ ಅಲ್ಲಿ ಟೇಕನ್ ಫಾರ್ ಗ್ರಾಂಟೆಡ್ ಆಗಿರುತ್ತದೆ. ಬಹುತೇಕರು ತಮ್ಮ ಲೈಂಗಿಕ ಕುತೂಹಲಗಳನ್ನು ತಣಿಸಿಕೊಳ್ಳಲೆಂದೇ ಟ್ರಾನ್ಸ್ ಜೆಂಡರ್‌ಗಳ ಜತೆಗೆ ಸಂವಾದ ನಡೆಸುತ್ತಾರೆ. ಈ ನಡುವೆ ಒಬ್ಬರು ನನ್ನನ್ನು ಪ್ರಶ್ನಿಸಿದ್ದರು ನಿಮ್ಮಂಥವರಿಂದ ಸಮಾಜಕ್ಕೇನು ಕೊಡುಗೆ ಅಂತ. ಆಗ ನಾನು ನಿಮ್ಮಂಥ ಬುದ್ಧಿಹೀನರಿಂದ ಏನು ಕೊಡುಗೆ ಅಂತ ನೇರವಾಗಿಯೇ ಮರುಪ್ರಶ್ನಿಸಿದ್ದೆ.



ನನ್ನ ಹಾಡು ನನ್ನದು...

'ಶಾಸ್ತ್ರೀಯ ಸಂಗೀತಗಾರ್ತಿಯಾಗಿ ನೆಲೆ ಕಂಡುಕೊಂಡಿದ್ದರೂ ನನಗೆ ಪ್ರಥಮ ಬಾರಿಗೆ ಹಾಡಲು ಅವಕಾಶ ನಿರಾಕರಿಸಿದ್ದು ನಾನು ಮದುವೆ ಮಾಡಿಕೊಂಡಿಲ್ಲ ಅಂತ. ಅದರಲ್ಲೂ ನಾನು ಗಂಡಾಗಿ ಗುರುತಿಸಿಕೊಳ್ಳತೊಡಗಿದ ಮೇಲೆ, ಲಿಂಗತ್ವ ಅಲ್ಪಸಂಖ್ಯಾತರ ಜತೆಗೆ ಕೆಲಸ ಮಾಡ್ತೀನಿ ಅಂತ ತಿಳಿದ ಮೇಲೆ ಮುಖ್ಯವಾಹಿನಿಯ ಸಂಗೀತ ಕಾರ್ಯಕ್ರಮಗಳಿಂದ ಹೊರಗಿಡಲಾಯಿತು. ನಾನು ಖಿನ್ನತೆಗೆ ಜಾರಿದೆ. ಹಾಡಲು ಸಿದ್ಧವಿಲ್ಲವೆಂದೇ ಪುಕಾರು ಹಬ್ಬಿಸಲಾಯಿತು. ನಾನು ಹಾಡುವ ಸಂಗೀತ ಕಾರ್ಯಕ್ರಮಗಳಲ್ಲಿ ಪುರುಷ ಮೇಲುಗೈ ಪ್ರತಿಪಾದಿಸುವ ಹಾಡುಗಳಿದ್ದರೆ ಅಂಥವನ್ನು ನಾನು ಖಂಡಿತಾ ಹಾಡೋದಿಲ್ಲ.



ರೇಖೆ ರೇಖೆಯಲ್ಲೂ ಹಲವು ಅರ್ಥ...ರೂಮಿ ಹರೀಶ್ ಅವರ ನಿತ್ಯ ಸಂಜೆಯ ಸಂಗಾತಿಗಳಿವು...

ಸೀರೆ ಉಟ್ಟಿದ್ದರೆ ಚೆನ್ನಾಗಿರ್ತಿತ್ತು...

ಗಂಗೂಬಾಯಿ ಹಾನಗಲ್ ಅವರ ನೆನಪಿನ ಕಾರ್ಯಕ್ರಮವೊಂದರಲ್ಲಿ ಹಾಡಿದ್ದೆ. ನನ್ನ ಹಾಡು ಕೇಳಿ ಖುಷಿಯಾಗಿದ್ದ ದೊಡ್ಡ ಸಂಗೀತಪ್ರಿಯರೊಬ್ಬರು ಹತ್ತಿರ ಬಂದು 'ತುಂಬಾನೇ ಚೆನ್ನಾಗಿ ಹಾಡಿದ್ದೀಯಾ. ಆದರೆ, ಸೀರೆ ಉಟ್ಟಿದ್ದರೆ ಚೆನ್ನಾಗಿರ್ತಿತ್ತು ಅಂದ್ರು. ಅವರ ಪ್ರಕಾರ ಹಾಡಿಗೂ ಇಮೇಜ್ ಬೇಕು. ಕಣ್ಣಿಗೂ ಇಮೇಜ್ ಬೇಕು. ಅದು ಮಿಸ್ ಮ್ಯಾಚ್ ಆಗಬಾರದು. ವುಮನ್ ಆರ್ಟ್, ಟ್ರಾನ್ಸ್ ಜೆಂಡರ್ ಆರ್ಟ್ ಅಂತ ಹೇಳುವಾಗ ಸಂಗೀತ ಕ್ಷೇತ್ರದಲ್ಲಿ ಸೌಂದರ್ಯ ಇಲ್ಲವೇ ದೈವಭಕ್ತಿಯ ಬಗ್ಗೆ ಮಾತಾಡ್ತಾರೆ. ದೈವಭಕ್ತಿ ಅನ್ನೋದು ಒಂದು ಅರ್ಹತೆಯೇ? ನಾವೆಷ್ಟು ಪರಿಶ್ರಮ ಪಟ್ಟಿರುತ್ತೇವೆ ಅನ್ನೋದು ಮುಖ್ಯವಾಗಿರಬೇಕೇ ಹೊರತು ನಮಗಿರುವ ಭಕ್ತಿ ಅಲ್ಲ. ಹೆಣ್ಣೊಬ್ಬಳು ಎಷ್ಟೇ ಚೆನ್ನಾಗಿ ಹಾಡಿದ್ರೂ ಅಲ್ಲಿ ಭಕ್ತಿಯದ್ದೇ ಮೇಲುಗೈ. ಗಂಡಾಗಿ ಹುಟ್ಟಿ ಟ್ರಾನ್ಸ್ ಜೆಂಡರ್ ಆದರೆ ಅದನ್ನು ನೋಡುವ ಪರಿಭಾಷೆಯೇ ಬೇರೆ. ನಮ್ಮ ಕೌಶಲ, ಶ್ರಮ, ನಡೆದು ಬಂದ ಹಾದಿಯನ್ನು ನೋಡದೇ ಬರೀ ಭಕ್ತಿಗೆ ಮಾರ್ಕ್ಸ್ ಕೊಟ್ಟರೆ ಹೇಗೆ? ಅದೇ ಗಂಡಸು ಸಾಧನೆ ಮಾಡಿದರೆ ಅದು ಸೃಜನಶೀಲತೆ ಅಂತ ಕೊಂಡಾಡುತ್ತಾರೆ.

ಹೆಣ್ಣು-ಗಂಡನ್ನು ಮೀರಿದ ಭಾವ...

ಸರ್ಜರಿ ಆದ್ಮೇಲೆ ನನ್ನ ಧ್ವನಿಯಲ್ಲಿ ಬದಲಾವಣೆ ಆಗುತ್ತಿದೆ. ನಿತ್ಯವೂ ಸಂಗೀತಾಭ್ಯಾಸ ಮಾಡ್ತೀನಿ. ಒಮ್ಮೊಮ್ಮೆ ಧ್ವನಿ ಒಡೆದುಬಿಡುತ್ತದೆ. ಒಮ್ಮೊಮ್ಮೆ ಆಗಲ್ಲ. ಈಗ ನನ್ನ ಧ್ವನಿ ಗಂಡಸಿನದಾ, ಹೆಂಗಸಿನದಾ ಅಂತ ಪ್ರಶ್ನಿಸಿಕೊಂಡರೆ ನಾನು ಅವರೆಡನ್ನೂ ಮೀರಿದ್ದೇನೆ ಅನಿಸುತ್ತೆ. ನಾನು ಉಡುವ ಬಟ್ಟೆ ಗಂಡಸಿನದು. ಇಷ್ಟವಿಲ್ಲದ ಅಂಗಗಳನ್ನು ಬೇರ್ಪಡಿಸಿಕೊಂಡಿದ್ದೇನೆ. ಹಾಗಂತ ಹೆಣ್ತನ ಪೂರ್ತಿಯಾಗಿ ಹೋಗಿದೆಯೇ ಅಂದರೆ ಇಲ್ಲ ಅನ್ತೀನಿ. ಇದು ಹೆಣ್ತನ, ಇದು ಗಂಡಸುತನ ಅಂತ ನಿರ್ದಿಷ್ಟವಾಗಿ ಮಾರ್ಕ್ ಮಾಡಿ ಹೇಳಲಾಗದು. ಈ ತುಮುಲಗಳನ್ನು ನಾನು ಚಿತ್ರಕಲೆಯ ಮೂಲಕ ಅಭಿವ್ಯಕ್ತಿಪಡಿಸಲು ಯತ್ನಿಸುತ್ತಿದ್ದೇನೆ.

ಸೆಕ್ಷ್ಯುವಲ್ ಆಗಿ ಇರೋದು ಅಂದರೆ ಹಲವರೊಂದಿಗೆ ಸೆಕ್ಸ್ ಮಾಡೋದು ಎಂದರ್ಥವಲ್ಲ. ಉದಾಹರಣೆಗೆ ನಾವು ಒಂದು ವಚನವನ್ನೋ, ಹಾಡನ್ನೂ ಕಾಮಿಸಬಹುದು. ಕಂಡಿರದ ವ್ಯಕ್ತಿಯನ್ನೂ ಕಾಮಿಸಬಹುದು. ನನ್ನ ಪ್ರಕಾರ, ಇನ್ನೊಬ್ಬರ ಮೇಲೆ ಅವಲಂಬಿತವಾಗದೇ ಇರೋದು ಹೆಣ್ತನ. ಸೆಕ್ಷ್ಯುವಲ್ ಅನ್ನು ಅನುಭವಿಸಲು ಹೆಣ್ಣು ಯಾರನ್ನೂ ಅವಲಂಬಿಸಬೇಕಿಲ್ಲ. ಒಂದು ಸಣ್ಣ ಅಡುಗೆ ಮಾಡಿದಾಗ ಅದು ಪರ್ಫೆಕ್ಟ್ ಆಗಿಬಂದರೆ ಅದು ಯಾವ ರೀತಿಯ ಸಂತೋಷ ಅಂತ ಹೇಳಲಾಗದು. ಅದು ಸೆಕ್ಷ್ಯುವಲ್ ಆಗಿರಬಹುದು, ರೊಮ್ಯಾಂಟಿಕ್ ಆಗಿರಬಹುದು. ನಮ್ಮ ಅಸೋಸಿಯೇಷನ್ ಆಫ್ ಸೆಕ್ಸ್ ಕೂಡಾ ಮತ್ತೊಬ್ಬ ಮನುಷ್ಯನೊಂದಿಗೇ ಇರಬೇಕಿಲ್ಲ. ಅದೇ ಪರಿಭಾಷೆಯಲ್ಲಿ ಗಂಡಸುತನವನ್ನು ನನ್ನ ಪೇಟಿಂಗ್‌ನಲ್ಲಿ ಕಾಣಿಸಲು ಯತ್ನಿಸಿದ್ದೇನೆ. ನನಗೆ ಮೀನು ತುಂಬಾ ಗಂಡಸು ಅನಿಸುತ್ತದೆ. ಅದಕ್ಕೊಂದು ಘನತೆ ಇದೆ. ಹೇಗೆಂದರೆ ಹಳೆಯ ಹಿಂದಿ ಸಿನಿಮಾಗಳಲ್ಲಿನ ನಟ ಅಶೋಕ್‌ಕುಮಾರ್ ಥರ.

ಸಿದ್ಧಮಾದರಿಯನ್ನು ಮೀರಲಾಗದೇ?

ಒಂದೋ ನೀವು ಗಂಡಾಗಿರಬೇಕು ಇಲ್ಲವೇ ಹೆಣ್ಣಾಗಿರಬೇಕು. ಇವರೆರಡನ್ನೂ ಹೊರತುಪಡಿಸಿ ಬೇರೆ ಥರದ ದೇಹ, ಮನಸು ಅಥವಾ ಹೊಸತನಕ್ಕೆ ನಮ್ಮ ಸಮಾಜದಲ್ಲಿ ಜಾಗವಿಲ್ಲ.



ಲಿಂಗ ಬದಲಾವಣೆ ಮಾಡಿಕೊಂಡವರು ಕೂಡ ಪಿತೃಪ್ರಧಾನ ವ್ಯವಸ್ಥೆಗೆ ಚಂದಾದಾರರಾಗಿದ್ದರೆ ಮಾತ್ರ ಬೆಲೆ! ಹೊಸತನವನ್ನು ಕಂಡುಕೊಳ್ತೀವಿ ಅನ್ನೋರಿಗೆ ಇಲ್ಲಿ ಜಾಗವಿಲ್ಲ. ಇಲ್ಲೂ ಮತ್ತೆ ಹೆಟ್ರೊ ಸೆಕ್ಷ್ಯುವಲ್ ಲೈಫ್ (ಪರಸ್ಪರ ವಿರುದ್ಧ ಲಿಂಗಿಗಳ ಆಕರ್ಷಣೆ) ಅನ್ನೇ ನೋಡ್ತೀವಿ. ಕೆಲವರು ಅವರದ್ದೇ ಜಗತ್ತು ಕಂಡುಕೊಂಡವರಿದ್ದಾರೆ. ಲಿಂಗತ್ವ ಅಲ್ಪಸಂಖ್ಯಾತರಲ್ಲಿ ಬಹುತೇಕರು ಗಂಡಿನಿಂದ ಹೆಣ್ಣಾಗಿರುವವರೇ. ಆದರೆ, ಹೆಣ್ಣಾಗಿ ಗಂಡಾದವರ ಬಗ್ಗೆ ಮಾನ್ಯತೆ ಇಲ್ಲ. ಟ್ರಾನ್ಸ್‌ಜೆಂಡರ್ ಅಂದರೆ ನಿಮಗೊಂದು ತೀವ್ರ ನೋವಿನ ಕಥೆ ಇರಲೇಬೇಕೆಂದು ಭಾವಿಸಲಾಗುತ್ತದೆ. ಅದನ್ನು ಹೊರತುಪಡಿಸಿದ ಬೇರೆ ರೀತಿಯ ಹೋರಾಟಗಳನ್ನು ಗುರುತಿಸುತ್ತಿಲ್ಲ.

ಧ್ವನಿ ಬದಲಾವಣೆಯ ವಿವಿಧ ಹಂತಗಳಿಗೆ ತೆರೆದುಕೊಳ್ಳುತ್ತಿರುವ ರೂಮಿ ಹರೀಶ್ ಸ್ವಗತದ ರೂಪದಲ್ಲಿ ಹೇಳುತ್ತಲೇ ಇದ್ದರು. ಧ್ವನಿ ಏರಿಳಿತಗಳ ಒತ್ತಡ ನಿವಾರಣೆಗಾಗಿ ಅವರೀಗ ಚಿತ್ರಕಲೆಯ ಮೊರೆ ಹೊಕ್ಕಿದ್ದಾರೆ. 'ಚಿತ್ರಕಲೆಯೀಗ ನನ್ನ ನಿತ್ಯಸಂಜೆಯ ಸಂಗಾತಿ' ಎನ್ನುತ್ತಲೇ ಅವರು ತಮ್ಮ ತಟ್ಟೆಯೊಳಗಿನ ಮೀನಿನ ತುಂಡನ್ನು ಬಾಯಿಗಿಟ್ಟುಕೊಂಡು ಮಾತು ಮುಗಿಸಿದಾಗ ರಾಗರತಿಯ ರಂಗು ಸಂಜೆಗೇರುತ್ತಿತ್ತು...





ಮುನ್ನೋಟ 27-11-2022 ರಿಂದ 03-12-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಮಕ್ಕಳಿಗೆ ವಿದ್ಯಾಭ್ಯಾಸದ ಬಗ್ಗೆ ತಿಳಿ ಹೇಳುವುದರ ಜೊತೆಗೆ ಪ್ರೋತ್ಸಾಹವೂ ಸಿಗುತ್ತದೆ. ವಾಹನ ಚಾಲನೆ ಮಾಡುವಾಗ ಜಾಗರೂಕರಾಗಿರುವುದು ಉತ್ತಮ. ಕೃಷಿ ಕಾರ್ಯಗಳ ವೆಚ್ಚಕ್ಕಾಗಿ ಹಣಕಾಸು ಸಂಸ್ಥೆಗಳ ಮೊರೆ ಹೋಗುವಿರಿ. ಬಹಳ ದಿನಗಳಿಂದ ನನೆಗುದಿಗೆ ಬಿದ್ದಿದ್ದ ವಿಷಯವೊಂದನ್ನು ಬಹಳ ದೃಢ ನಿರ್ಧಾರ ಮಾಡಿ ಕೈಗೆತ್ತಿಕೊಳ್ಳುವಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಹಿತಶತ್ರುಗಳಿಂದ ಉದ್ಯೋಗ ಕ್ಷೇತ್ರದಲ್ಲಿ ತೊಂದರೆ ಬರುವ ಸಾಧ್ಯತೆ ಇದೆ. ವ್ಯವಹಾರಕ್ಕೆ ತಾಯಿಯಿಂದ ಮಾರ್ಗದರ್ಶನದ ಜೊತೆಗೆ ಸ್ವಲ್ಪ ಧನಸಹಾಯವೂ ದೊರೆಯುವುದು. ಸಂಬಂಧಿಕರೊಡನೆ ಸುಧೀರ್ಘ ಸಮಾಲೋಚನೆಯಿಂದ ಬಾಂಧವ್ಯದಲ್ಲಿ ವೃದ್ಧಿ ಕಾಣಬಹುದು. ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಉತ್ತಮ ಹೆಸರು ಬರುತ್ತದೆ. ಸ್ತ್ರೀಯರಿಗೆ ಉತ್ತಮ ಅಭಿವೃದ್ಧಿ ಇರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಮಹಿಳೆಯರು ಸಾಮಾಜಿಕ ಕ್ಷೇತ್ರಗಳಲ್ಲಿ ದುಡಿಯುವ ಸಾಮರ್ಥ್ಯವನ್ನು ಹೊಂದುತ್ತಾರೆ. ಹಣದ ಹರಿವು ನಿಮ್ಮ ಅಗತ್ಯದಷ್ಟು ಇರುತ್ತದೆ. ಹಣಕಾಸಿನ ವ್ಯವಹಾರಗಳಲ್ಲಿ ಸ್ವಲ್ಪ ಎಚ್ಚರಿಕೆ ಇರಲಿ. ನೆರೆಹೊರೆಯವರೊಂದಿಗೆ ಇದ್ದ ಮುನಿಸು ದೂರವಾಗುತ್ತದೆ. ವೈಯಕ್ತಿಕ ವಿಚಾರಗಳತ್ತ ಹೆಚ್ಚಿನ ಗಮನವನ್ನು ಕೊಡಿರಿ. ವಿದ್ಯಾರ್ಥಿಗಳು ಅಧ್ಯಯನದಲ್ಲಿ ಹೆಚ್ಚಿನ ಶ್ರದ್ಧೆ ವಹಿಸಬೇಕು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಉನ್ನತ ಹುದ್ದೆಯಲ್ಲಿರುವವರಿಗೆ ಜನರಿಂದ ಅಭಿಮಾನದ ಮಾತುಗಳು ಕೇಳಿಬರುತ್ತವೆ. ಮಹಿಳೆಯರ ಕೆಲವು ಇಷ್ಟಾರ್ಥಗಳು ಪೂರ್ಣಗೊಂಡು ಸಂತಸವಾಗುವುದು. ವಿದೇಶಿ ವ್ಯವಹಾರಗಳನ್ನು ಮಾಡುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಕಚೇರಿ ಕೆಲಸದ ನಿಮಿತ್ತವಾಗಿ ದೂರ ಪ್ರದೇಶದಲ್ಲಿ ಇದ್ದವರಿಗೆ ಹತ್ತಿರಕ್ಕೆ ವರ್ಗಾವಣೆ ಸಿಗುವ ಸಾಧ್ಯತೆ ಇದೆ. ಹಣದ ಒಳಹರಿವು ತಕ್ಕಮಟ್ಟಿಗೆ ಇರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ತುರ್ತು ವಿಷಯಕ್ಕಾಗಿ ಸಂಬಂಧಿಕರ ನೆರವನ್ನು ಪಡೆಯಬೇಕಾಗುತ್ತದೆ. ಅನಗತ್ಯ ಸುತ್ತಾಟದಿಂದ ದೇಹಾಲಸ್ಯ ಆಗಬಹುದು. ಕೆಲವು ಅರೆಕಾಲಿಕ ನೌಕರರಿಗೆ ಕಾಯಂ ನೌಕರಿ ಒದಗುವ ಸಾಧ್ಯತೆ ಇದೆ. ಆತ್ಮಗೌರವ ಸ್ವಲ್ಪ ಹೆಚ್ಚಾಗಿ ವ್ಯಾಪಾರ ವ್ಯವಹಾರಗಳಿಗೆ ಧಕ್ಕೆ ತರಬಹುದು. ಹಣದ ಒಳಹರಿವು ಸಮಾಧಾನಕರವಾಗಿರುತ್ತದೆ. ತಾಂತ್ರಿಕ ಶಿಕ್ಷಣವನ್ನು ಮಾಡುತ್ತಿರುವವರಿಗೆ ಹೆಚ್ಚಿನ ಯಶಸ್ಸು ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನೆರೆಹೊರೆಯವರೊಂದಿಗೆ ವಿನಾ ಕಾರಣ ವೈಮನಸ್ಯ ಮೂಡಬಹುದು. ಸಂಯಮದ ಮಾತುಗಳಿಂದಲೇ ಈ ತೊಂದರೆಯನ್ನು ನಿವಾರಿಸಿಕೊಳ್ಳಬಹುದು. ಅಧ್ಯಯನದಲ್ಲಿ ಆಸಕ್ತಿಯು ಸ್ವಲ್ಪ ಕಡಿಮೆಯಾಗುವ ಸಂದರ್ಭವಿದೆ. ಉದ್ಯೋಗ ಕ್ಷೇತ್ರದಲ್ಲಿ ನಿಮ್ಮ ಪ್ರತಿಭೆಗೆ ಗೌರವ ದೊರೆಯುತ್ತದೆ. ರೈತಾಪಿ ವರ್ಗದವರು ಸಾಮಾನ್ಯ ಬೆಳೆಯನ್ನು ಮತ್ತು ಉತ್ತಮ ಬೆಲೆಯ ನಿರೀಕ್ಷೆ ಮಾಡಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಆಸ್ತಿ ವಿಷಯಕ್ಕೆ ಸಂಬಂಧಿಸಿದಂತೆ ಮನಃಸ್ತಾಪ ಎದುರಾಗುವ ಸಂದರ್ಭವಿದೆ. ಮಹಿಳೆಯರಿಗೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶಗಳಿವೆ. ಜಮೀನಿನಲ್ಲಿ ಹೆಚ್ಚಿನ ಕೃಷಿ ಕೆಲಸಗಳನ್ನು ಆರಂಭಿಸುವಿರಿ. ಅಪೇಕ್ಷಿಸಿದ್ದ ಸಾಲ ಇದೀಗ ಹಣಕಾಸು ಸಂಸ್ಥೆಗಳಿಂದ ದೊರೆಯುತ್ತದೆ. ವಿದೇಶಿ ಕಂಪನಿಯೊಂದು ನಿಮಗೆ ಪಾಲುದಾರಿಕೆಗೆ ಆಹ್ವಾನ ನೀಡಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಸ್ಥಿರಾಸ್ತಿಯ ಬೆಲೆಯಲ್ಲಿ ಏರಿಕೆಯನ್ನು ಕಾಣಬಹುದು. ಹೂ ವ್ಯಾಪಾರಿಗಳಿಗೆ ವ್ಯಾಪಾರ ವೃದ್ಧಿಸಿ ಆದಾಯ ಹೆಚ್ಚುತ್ತದೆ. ನೌಕರಿಯಲ್ಲಿರುವವರು ಅಧಿಕಾರಿಗಳ ಸೂಚನೆಯಂತೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಹಿತ ಮಿತವಾದ ಮಾತುಗಳಿಂದ ನೆರೆಹೊರೆಯವರನ್ನು ಗೆಲ್ಲುವಿರಿ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಉದ್ಯೋಗದಲ್ಲಿ ಅಭಿವೃದ್ಧಿಗೊಂಡು ಆರ್ಥಿಕವಾಗಿ ಚೇತರಿಸಿಕೊಳ್ಳುವಿರಿ. ಉದ್ದಿಮೆದಾರರು ತಾಂತ್ರಿಕ ಯಂತ್ರೋಪಕರಣಗಳನ್ನು ಖರೀದಿ ಮಾಡುವ ಯೋಗವಿದೆ. ಹಿರಿಯ ಅಧಿಕಾರಿಗಳಿಗೆ ಹೆಚ್ಚಿನ ರೀತಿಯ ಅಧಿಕಾರ ದೊರೆಯುವ ಹಾಗೂ ಇರುವಲ್ಲೇ ಮೇಲ್ದರ್ಜೆಗೇರುವ ಸಂದರ್ಭವಿದೆ. ಯೋಗ್ಯ ವಯಸ್ಕರಿಗೆ ವಿವಾಹ ಸಂಬಂಧ ಒದಗುವ ಸಾಧ್ಯತೆ ಇದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಕೆಲಸಗಾರರ ಕೊರತೆಯಿಂದಾಗಿ ಉದ್ದಿಮೆಗಳಲ್ಲಿ ತಯಾರಿಕೆಗೆ ಬಹಳ ಅಡಚಣೆ ಉಂಟಾಗುತ್ತದೆ. ಕೃಷಿ ಕ್ಷೇತ್ರದಲ್ಲಿನ ಯಂತ್ರೋಪಕರಣಗಳನ್ನು ತಯಾರಿಸುವವರಿಗೆ ಅಭಿವೃದ್ಧಿ ಇರುತ್ತದೆ. ಚಿನ್ನಾಭರಣಗಳ ವ್ಯಾಪಾರವನ್ನು ಆರಂಭಿಸಬೇಕೆಂದು ಇಚ್ಛಿಸುವವರು ಈಗ ಆರಂಭಿಸುವುದು ಬೇಡ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ವಾರಾಂತ್ಯಕ್ಕೆ ದೈವ ದರ್ಶನಕ್ಕಾಗಿ ಹೋಗಿ ಬರುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹೊಸದಾಗಿ ಕಟ್ಟಿಸುತ್ತಿರುವ ಮನೆಯ ಕೆಲಸ ಪೂರ್ಣಗೊಂಡು ಮನಸ್ಸಿಗೆ ನೆಮ್ಮದಿ ಕೊಡುತ್ತದೆ. ಮಕ್ಕಳ ವಿವಾಹದ ವಿಷಯದಲ್ಲಿ ನಿಮ್ಮ ಸಂಬಂಧಿಕರಿಂದ ಕೆಲವು ಒತ್ತಾಯಗಳು ಬರಬಹುದು. ಸಮಾಜಮುಖಿ ಕೆಲಸಗಳನ್ನು ಮಾಡುತ್ತಿರುವವರಿಗೆ ಜನರಿಂದ ಸಹಾಯಹಸ್ತ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಧಾನ್ಯಗಳ ಸಗಟು ವ್ಯಾಪಾರವನ್ನು ಮಾಡುತ್ತಿರುವವರಿಗೆ ವ್ಯವಹಾರದಲ್ಲಿ ಅಭಿವೃದ್ಧಿ ಇದ್ದೇ ಇರುತ್ತದೆ. ಕೈಗೆತ್ತಿಕೊಂಡ ಕೆಲಸಗಳನ್ನು ಶಕ್ತ್ಯಾನುಸಾರ ಮಾಡಿ ಪೂರೈಸುವಿರಿ. ಸರ್ಕಾರದಿಂದ ಆಗಬೇಕಾದ ಕೆಲಸಗಳಲ್ಲಿ ಮುನ್ನಡೆಯನ್ನು ಕಾಣುವಿರಿ. ಶೀತ ಬಾಧೆ ನಿಮ್ಮನ್ನು ಬಾಧಿಸಬಹುದು. ಹಣದ ಒಳಹರಿವು ತೃಪ್ತಿದಾಯಕವಾಗಿರುತ್ತದೆ. ಒಡಹುಟ್ಟಿದವರ ಜೊತೆಗಿನ ಸಂಬಂಧ ಕಡಿಮೆಯಾಗಬಹುದು.

ಪದಬಂಧ 2765



ಮೇಲಿನಿಂದ ಕೆಳಕ್ಕೆ

1. ಬೆಳ್ಳಿತೆರೆಯಲ್ಲಿ ಹೊಳೆಯುವ ನಕ್ಷತ್ರಗಳ ಬಂಧುವಲಯ 5
2. ಶಿರವನ್ನು ಒಡೆಯುವ ಕ್ರೂರಿ 5
3. ಮೊದಲ ಬಾರಿಗೆ ವೇದಿಕೆ ಏರಿ ನೃತ್ಯ ಪ್ರದರ್ಶನ 5
8. ನಡೆಯುವ ಅವಯವದ ತಳ ಭಾಗ 4
9. ಹೊಸದಾಗಿ ಹೊಮ್ಮಿದ ಆಂತರ್ಯದ ಆಶಯ 4
10. ರಾಸದಲ್ಲಿ ಬರುವ ದಾನವ 3
12. ಪುಸ್ತಕಕ್ಕೆ ಮೊದಲು ಹಾಕುವ ಮಣೆ 3
13. ಬೆಡಗಿಗೆ ಹೆಸರಾದ ಉತ್ತರ ನಾಡಿನ ಪಂಗಡ 5
14. ಕಾಡಿನ ಊಟಕ್ಕೆ ಮೇಲಿನವರೂ ಬರುತ್ತಾರೆ 5
16. ಪ್ರವಾಹದಂತೆ ಬರುವ ಸುತ್ತಮುತ್ತಲಿನ ಜನರ ಗುಂಪು 5

ಎಡದಿಂದ ಬಲಕ್ಕೆ

1. ತಂದೆಯ ತಂದೆ, ಮತ್ತವರ ತಂದೆ ಕುಲ ಹಿರಿಯರು 5
3. ಮನೆಯನ್ನು ಗುಡಿಸಿ, ಸಾರಿಸಿದ ಮೇಲೆ ನೆಲದಲ್ಲಿ ಮೂಡಿಸುವ ಚಿತ್ರಕಲೆ 3
4. ಮಗನನ್ನು ಅಕ್ಕರೆಯಿಂದ ಕರೆಯುವ ಆರ್ಯ ಒಕ್ಕಣೆ 3
5. ಆಸ್ತಿ ಪಾಸ್ತಿಯನ್ನು ಲೆಕ್ಕ ಪುಸ್ತಕದಲ್ಲಿ ಎಣಿಸುವವ 3
6. ಮೇಲ್ಹಾವಣಿಯಿಲ್ಲದೆ ಮುಕ್ತ ಪ್ರದರ್ಶನದ ನಾಟಕ ವೇದಿಕೆ 5
7. ಪ್ರದರ್ಶನಕ್ಕೆ ಸಜ್ಜಾದ ಎತ್ತರದ ರಂಗ 3
9. ಅಮೇರಿಕೆಯ ಹೊಸನೀರಿನ ಅದ್ಭುತ ಜಲಪಾತ 4
11. ಮಂಗಗಳ ಮುಖಂಡ ಈಶ್ವರ ರೂಪಿ 3
13. ಬೀದಿಯಲ್ಲಿ ತಿರುಗಾಡುವ ವೃಷಭ 3
15. ಕಾಯಿಸಿದಾಗ ಮೇಲ್ಪದರೆ ಕಟ್ಟಿದ ಕ್ಷೀರ 4
17. ಅತಿಥಿಗಳನ್ನು ಕೂರಿಸಿ ಮಾತನಾಡಿಸಲು ಮನೆಯ ಮುಂಬಾಗಿಲಿನ ಆಂಗ್ಲ ಕೋಣೆ 3
18. ಸುಖದಲ್ಲಿ ಮೆರೆಸುವ ಐಶಾರಾಮಿ ಬದುಕಿನ ವೈಭವ 5
19. ನಾಡಿನಲ್ಲಿ ಹುಟ್ಟಿದ ಸಾಹಿತ್ಯ ಭಂಟ ಪ್ರಶಸ್ತಿಗೆ ಪಾತ್ರ 3
20. ಮೋದಕಹಸ್ತ ಗಣಪತಿ ಏರುವ ವಾಹನ 3
21. ಕಾಂಚಾಣಕ್ಕೆ ಒದಗುವ ಅಂಧತ್ವ 3
22. ಹರಿವ ನೀರಿಗಾಗಿ ನಡೆಯುವ ಜಗಳ 5

ಪದಬಂಧ ಉತ್ತರ -2764

ಮೇಲಿಂದ ಕೆಳಕ್ಕೆ

1. ಅವತಾರ 2.ದಮನ 3.ಮುಸುಕು 4.ಯದುವರ 7.ದನಿಯ 9.ಲಕುಮಿ 10.ನಿರೀಶ 11.ತಿನಿಸು 12.ಸುದಿನ 13.ತ್ರಸರ 18.ಪಿಪಾಸು 20.ಗವಾರ 21.ಪಿತಾಮಹ 22.ಮಾಯಗಾರ 24.ರಜತ 25.ಸಕಾಲ

ಎಡದಿಂದ ಬಲಕ್ಕೆ

1. ಅಥರ್ವವೇದ 3.ಮುಕುಂದಪ್ರಿಯ 5.ಮನಸು 6.ತಾಳವಾದನ 8.ಕುಲಬಾಂಧವ 10.ನಿಯತಿ 12.ಸುಮಿತ್ರ 14.ಶಾರ್ವರೀ 15.ನಿಗದಿ 16.ಸರಣಿ 17.ಶಪಿಸು 19.ನಗರ 23.ತಾರಕಾಸುರ 25.ಸರಸಮಯ 26.ಜಟಕಾ 27.ಹರಿಸಂಜಾತ 28.ಲಕ್ಷಾಧೀಶ್ವರ

ಯುದ್ಧ ಕಾಲದ ಹೆಣ್ಣೋಟದ ಕಥನ

ಎಂ.ಮಹೇಂದ್ರ



ದೇಹವೇ ದೇಶ
ಲೇ: ಗರಿಮಾ ಶ್ರೀವಾಸ್ತವ
ಅನುವಾದ: ವಿಕ್ರಮ ವಿಸಾಜಿ
ಪ್ರ: ಛಂದ ಪುಸ್ತಕ, ಬೆಂಗಳೂರು
ಸಂ: 9945939436

ಪು: 216 ₹250

ಒಳನೋಟ

ವಿಕ್ರಮ ವಿಸಾಜಿ ಅನುವಾದಿಸಿದ 'ದೇಹವೇ ದೇಶ' ಕೃತಿ ಯುದ್ಧ ಕಾಲದ ಮಹಿಳೆಯರ ಅನುಭವ ಕಥನ. ಹಿಂದಿಯಲ್ಲಿ ಇದನ್ನು ರಚಿಸಿದವರು ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರೊ. ಗರಿಮಾ ಶ್ರೀವಾಸ್ತವ. ಈ ಕಥನವು 1992ರಿಂದ 1995ರ ವರೆಗೆ ಪೂರ್ವ ಯುರೋಪಿನ ಕ್ರೊವೇಷ್ಯಾ, ಸರ್ಬಿಯಾ, ಹರ್ಜೆಗೊವಿನಾ ಮತ್ತು ಬೋಸ್ನಿಯಾ ದೇಶಗಳಲ್ಲಿ ನಡೆದ ಯುದ್ಧದಿಂದಾಗಿ ನೊಂದ ಮಹಿಳೆಯರ ದುರಂತ ಕತೆಗಳನ್ನು ಒಳಗೊಂಡಿದೆ.

ಗರಿಮಾ ಅವರು 2010ರಲ್ಲಿ ಕ್ರೊವೇಷ್ಯಾಕ್ಕೆ ಶೈಕ್ಷಣಿಕ ಪ್ರವಾಸಕ್ಕಾಗಿ ತೆರಳಿದ್ದರು. ಶೈಕ್ಷಣಿಕ ಕೆಲಸಗಳ ಜೊತೆಗೆ ಯುದ್ಧಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಅಲ್ಲಿನ ಮಹಿಳೆಯರನ್ನು ಸಂದರ್ಶಿಸಿ ಅವರ ಯಾತನೆ, ದುಃಖ, ಕಷ್ಟ ಮತ್ತು ಅಸಹಾಯಕತೆಯನ್ನು ಡೈರಿಯಲ್ಲಿ ದಾಖಲಿಸಿಕೊಂಡರು. ಪತ್ರಿಕಾ ಕಚೇರಿಗಳಿಗೆ ಅಲೆದಾಡಿ ಮಾಹಿತಿ ಸಂಗ್ರಹಿಸಿದರು. ಸರ್ಕಾರಿ ದಾಖಲೆಗಳಿಗಾಗಿ ಎಡತಾಕಿದರು. ಇದೆಲ್ಲದರ ಪರಿಣಾಮವೇ ಅವರ ಕೃತಿ 'ದೇಹ್ ಹೀ ದೇಶ್'. ಯುದ್ಧಪೀಡಿತ ಮಹಿಳೆಯರ ಈ ಕತೆಗಳು ಮನಸ್ಸನ್ನು ಘಾಸಿಗೊಳಿಸುತ್ತವೆ. ಯುದ್ಧೋತ್ತರ ಕಾಲದಲ್ಲೂ ಅಲ್ಲಿನ ಸರ್ಕಾರಗಳು ಈ ಮಹಿಳೆಯರನ್ನು ಹೀನಾಯವಾಗಿ ನಡೆಸಿಕೊಂಡಿದ್ದರ ಚಿತ್ರಣವೂ ಇಲ್ಲಿದೆ. ಯುದ್ಧಗಳು ನಡೆಯುವುದು ದೇಶಗಳ ನಡುವೆ ಅಲ್ಲ, ಬದಲಿಗೆ ಅವು ನಡೆಯುವುದು ಮಹಿಳೆಯರ ದೇಹದ ಮೇಲೆ ಮತ್ತು ಮಕ್ಕಳ ಕನಸುಗಳ ಮೇಲೆ ಎಂಬ ರೂಪಕ ಇಡೀ ಪುಸ್ತಕದಲ್ಲಿ ಹರಡಿಕೊಂಡಿದೆ.

ಡೈರಿ ಸಾಹಿತ್ಯ ಕನ್ನಡದಲ್ಲಿ ಅಷ್ಟಾಗಿ ಪ್ರಚಲಿತವಾಗಿಲ್ಲ. ಹಿಂದಿಯಲ್ಲಿ ಇದಕ್ಕೆ ಅದರದೇ ಆದ ಪ್ರಾಮುಖ್ಯವಿದೆ. ದುರಂತ ಕಥನಗಳ ಜೊತೆಗೆ ಸ್ನೇಹಿತರ ನಡುವಿನ ಮಾತುಕತೆಗಳು, ಇಮೇಲ್‌ಗಳು, ಕವಿತೆಗಳು, ಪ್ರವಾಸ ಕಥನದ ತುಣುಕುಗಳು, ನಾಟಕದ ತುಣುಕುಗಳು ಹತ್ತು ಹಲವು ನಿರೂಪಣೆಗಳು ಸೇರಿ ಒಂದು ವೈವಿಧ್ಯಮಯ ಬರವಣಿಗೆಗೆ ಇಲ್ಲಿ ಅವಕಾಶವಾಗಿದೆ. ಬರವಣಿಗೆಯ ಏಕತಾನತೆಯನ್ನು ಮುರಿಯಲು ಲೇಖಕಿ ಹಲವು ಪ್ರಯೋಗಗಳನ್ನು ಮಾಡಿದಂತಿದೆ. ಇದೆಲ್ಲವೂ ಇಷ್ಟೇ ಆಪ್ತವಾಗಿ ಕನ್ನಡದಲ್ಲಿ ಕಾಣಿಸಿಕೊಂಡಿದೆ. ಎಲ್ಲಕ್ಕೂ ಮಿಗಿಲಾಗಿ ನಾವೆಲ್ಲೂ ಕೇಳಿರದ ಓದಿರದ ಕ್ರೊವೇಷ್ಯನ್ ಕವಿತೆಗಳು ಕೃತಿಯನ್ನು ಆವರಿಸಿಕೊಂಡಿವೆ. ಈ ಕವಿತೆಗಳು ಕೂಡ ಹಿಂಸೆ ಮತ್ತು ಯುದ್ಧದ ಭೀಕರತೆಯನ್ನು ನಿರೂಪಿಸಲು ಗರಿಮಾ ಅವರಿಗೆ ಒಂದು ಮಾರ್ಗವಾಗಿ ಒದಗಿವೆ. ಕವಿ ಇವಾನ್ ಗೊರಾನ್ ಕೆವಾಚಿಚ್ ಕವಿತೆ ಇದಕ್ಕೊಂದು ಸಾಕ್ಷಿ:

ದಿನದ ಬೆಳಕು ಮತ್ತು ರಾತ್ರಿಯ ಕತ್ತಲೆಯಲ್ಲಿ
ಬರೀ ರಕ್ತವಿದೆ
ಮನಸ್ಸು ಸದಾ ವಿಚಲಿತ, ಉಸಿರಾಟದಲ್ಲಿ
ಅಸಹಜ ಏರಿಳಿತ
ನನ್ನ ಮಿಂಚುವ, ಮುಗ್ಧ, ಕುತೂಹಲಕಾರಿ
ಕಣ್ಣುಗಳೀಗ ಸಾಯುತ್ತಿವೆ
ನನ್ನದೇ ಅಂಗೈಯಲ್ಲಿ.

ಹಿಂಸೆಗೊಳಗಾಗುವುದು, ನಿರಾಶ್ರಿತರಾಗುವುದು ಮತ್ತು ಶೋಷಣೆಯ ಹಲವು ಅನುಭವಗಳೊಂದಿಗೆ ಕ್ರೊವೇಷ್ಯಾದ ಕವಿತೆಗಳು ತುಂಬಿಹೋಗಿವೆ. ಇದು ಪ್ರವಾಸ ಕಥನದ ಮಾದರಿಯಲ್ಲಿದ್ದರೂ ಕೊಡುವ ಅನುಭವ ಮಾತ್ರ ವಿಭಿನ್ನವಾದದ್ದು. ಸಾಮಾನ್ಯವಾಗಿ ಪ್ರವಾಸ ಕಥನವೆಂದರೆ ಅಲ್ಲಿನ ಪ್ರೇಕ್ಷಣೀಯ ಸ್ಥಳಗಳು, ತಿಂಡಿ ತಿನಿಸುಗಳು, ಭೌಗೋಳಿಕ ಸೌಂದರ್ಯ ಹಾಗೂ ಸಂಗ್ರಹಾಲಯಗಳ ವಿವರ, ಮೋಜುಮಸ್ತಿಗಳ ಆಗರವೇ ಆಗಿರುತ್ತವೆ. ಆದರೆ ಗರಿಮಾ ಅವರು ಹೊತ್ತುಕೊಂಡು ಬಂದದ್ದು ಮನುಕುಲದ ಗಾಯಗಳನ್ನು. ನಾಗರಿಕ ಲೋಕದ ಅನಾಗರಿಕ ನಡೆಗಳನ್ನು. ಮುರುಟಿಹೋದ ಕನಸುಗಳನ್ನು, ಲೆಕ್ಕಕ್ಕೆ ಸಿಗದ ನರಕಗಳನ್ನು. ಅತ್ಯಾಚಾರ, ಲೈಂಗಿಕ ಶೋಷಣೆ, ವೃದ್ಧರ ಕೊಲೆ, ಮಕ್ಕಳ ನರಳಾಟ ಮತ್ತು ಮಾನವ ಕಳ್ಳ ಸಾಗಣೆಕೆಯ ಚಿತ್ರಗಳನ್ನು.


ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಈಗ 'ಆಘಾತ ಅಧ್ಯಯನಗಳು' (Trauma Studies) ವಿಸ್ತಾರವಾದ ನೆಲೆ ಪಡೆಯುತ್ತಿವೆ. ಯುದ್ಧ ಮತ್ತು ಯುದ್ಧೋತ್ತರ ಕಾಲದ ದೈಹಿಕ ಮತ್ತು ಮಾನಸಿಕ ಆಘಾತಗಳ ಅಧ್ಯಯನ ಇದರ ಗುರಿ. ಕನ್ನಡದಲ್ಲಿ ಇಂಥ ಅಧ್ಯಯನಕ್ಕೆ ಬೇಕಾದ ಹಲವು ಕೃತಿಗಳು ಅನುವಾದಗೊಂಡಿವೆ. ವಿಸಾಜಿ ಅವರ ಈ ಅನುವಾದ ಹೊಸ ಸೇರ್ಪಡೆಯಾಗಬಲ್ಲದು. ಜೊತೆಗೆ ಇಂಥ ಪರಿಸ್ಥಿತಿಯಲ್ಲಿ ಸರ್ಕಾರಗಳು ಮತ್ತು ನಾಗರಿಕ ಸಮಾಜ ತೆಗೆದುಕೊಳ್ಳಬೇಕಾದ ಮಾನವೀಯ ನಿರ್ಧಾರಗಳನ್ನು ಕುರಿತು ಕೃತಿ ಬೆಳಕು ಚೆಲ್ಲಿದೆ. ಟ್ರಾಮಾ ಸ್ಟಡೀಸ್‌ನಲ್ಲಿ ವಿಶಿಷ್ಟ ಛಾಪು ಮೂಡಿಸಿರುವ ಕ್ಯಾಥಿ ಕ್ಯಾರತ್ ಅವರ ವಿಚಾರಗಳನ್ನು ಗರಿಮಾ ತಮ್ಮ ಪ್ರಸ್ತಾವದಲ್ಲಿ ಸೇರಿಸುವುದರ ಮೂಲಕ ಇಂಥ ಕೃತಿಗಳ ಓದಿಗೆ ಬೇಕಾದ ಒಂದು ಹಿನ್ನೆಲೆಯನ್ನು ಒದಗಿಸಿದ್ದಾರೆ. ಎಲ್ಲವನ್ನೂ ಧ್ವಂಸಗೊಳಿಸುವುದರ ಮೂಲಕ ಮಾನಸಿಕ ಆಘಾತ ಉಂಟು ಮಾಡುವುದಷ್ಟೇ ಅಲ್ಲ, ಮನುಷ್ಯರ ಅಸ್ತಿತ್ವವೂ ಮುರುಟಿಹೋಗುತ್ತದೆ.

ಈ ಕೃತಿ ಹೊಸದಾಗಿ ಕಟ್ಟಬೇಕಾದ ಇತಿಹಾಸದ ಒಂದು ಮಾದರಿಯ ಬಗ್ಗೆ ಕೂಡ ಸುಳಿವು ಕೊಟ್ಟಿದೆ. ಯುದ್ಧದಲ್ಲಿ ಸೋಲು ಗೆಲುವುಗಳ ಸರಳ ಇತಿಹಾಸದಾಚೆಗೆ ನಿರೂಪಿಸಬೇಕಾದ ಜನರ ಸಂಕಟಗಳನ್ನು ಹಿಡಿದಿಟ್ಟಿದೆ. ಕ್ರೌರ್ಯ, ಅತ್ಯಾಚಾರ ಮತ್ತು ಲೈಂಗಿಕ ಶೋಷಣೆಯಿಂದ ಬಿಡಿಸಿಕೊಳ್ಳಲು ಸಾಧ್ಯವಾಗದ ಹೆಣ್ಣುಮಕ್ಕಳ ಅನುಭವಗಳು ಇತಿಹಾಸದ ಪುಟಗಳಲ್ಲಿ ಕಾಣಸಿಗುವುದಿಲ್ಲ. ಇತಿಹಾಸವು ಹಕ್ಕು ಸ್ಥಾಪಿಸದ ಮನುಷ್ಯರ ನರಳಾಟವನ್ನು ಈ ಕೃತಿ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಯುದ್ಧ ಮಾಡಿದವರಿಗಿಂತ ಯುದ್ಧಕ್ಕೆ ಬಲಿಯಾದವರ ಸಂಕಟವನ್ನು ನಿರೂಪಿಸಿದೆ. ಹಲವು ರೋಗಗಳಿಂದ ನರಳುತ್ತಿರುವ, ಎಲ್ಲ ದುರಂತಗಳನ್ನು ಮೀರಿ ಮತ್ತೆ ಬದುಕು ಕಟ್ಟಿಕೊಳ್ಳಲು ಹೆಣಗುತ್ತಿರುವ ಹಲವು ಕತೆಗಳು ಮನಸ್ಸನ್ನು ಆರ್ದ್ರಗೊಳಿಸುತ್ತವೆ.

ಇದೊಂದು ಸಹಜ ಅನುವಾದ. ಓದಿಸಿಕೊಳ್ಳುವ, ಅನುಭವಗಳನ್ನು ಎದೆಗೆ ನಾಟಿಸುವ ಅನುವಾದ. ಗದ್ಯ ಮತ್ತು ಪದ್ಯಗಳ ಮಿಶ್ರಣವಾಗಿರುವ ಈ ಕೃತಿಯನ್ನು ವಿಸಾಜಿ ಅವರು ಸೂಕ್ಷ್ಮವಾಗಿ ಕನ್ನಡೀಕರಿಸಿದ್ದಾರೆ. ಈ ಬಗೆಯ ಹೊಸ ಸಾಹಿತ್ಯ, ಯುದ್ಧಗಳ ನಿರೂಪಣೆ, ಯುದ್ಧೋತ್ತರ ಕಾಲದ ಮಾನಸಿಕ ಆಘಾತಗಳ ಕಥನಗಳು ಕನ್ನಡಕ್ಕೆ ಬರುವುದು ಅಗತ್ಯ. ಡೈರಿ ಸಾಹಿತ್ಯ ಪ್ರಕಾರವೊಂದು ಕನ್ನಡದಲ್ಲಿ ಹೊಸ ಉಸಿರಾಟದೊಂದಿಗೆ ಹೊಮ್ಮಬೇಕಾದ ಅಗತ್ಯವನ್ನು ಕನ್ನಡ ಬರಹಗಾರರು ಮನಗಂಡರೆ ಒಳ್ಳೆಯದು. ಕನ್ನಡದ ಸಂವೇದನೆಯನ್ನು ಹಿಗ್ಗಿಸುವ ಅನೇಕ ಅನುವಾದ ಕೃತಿಗಳು ಕನ್ನಡದಲ್ಲಿ ಪ್ರಕಟಗೊಳ್ಳುತ್ತಿವೆ. ಕನ್ನಡದಲ್ಲೀಗ ಅನುವಾದಗಳ ಸುಗ್ಗಿ. ಹೌದು, ಇದು ಅನುವಾದಗಳ ಯುಗವಾಗಿದೆ. ❖

ಮೊದಲ ಓದು

ನಿಘಂಟಿನ ಹೊರಗೆ ಕಿಟೆಲ್ ಸಾಹಿತ್ಯ ಗಂಟು



ಫರ್ಡಿನೆಂಡ್ ಕಿಟೆಲ್ ವಾಚಿಕೆ
ಸಂಪಾದಕರು: ಪ್ರೊ.ಎ.ವಿ.ನಾವಡ
ಪ್ರ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಸಂ: www.kuvempubhashabharathi.org

ಪು: 316 ₹200

ವಸಾಹತುಶಾಹಿ ಆಳ್ವಿಕೆಯ ಸಂದರ್ಭದಲ್ಲಿ ಮಿಷನರಿ ಕೆಲಸಗಳಿಗಾಗಿ ಬಂದ ಯುರೋಪಿಯರಲ್ಲಿನ ಕೆಲವರು ಭಾರತದ ಸಂಸ್ಕೃತಿಯ ಬಹುತ್ವ, ಇಲ್ಲಿನ ಭಾಷೆಗಳಿಗೆ ಆಕರ್ಷಿತರಾಗಿದ್ದರು. ಭಾಷೆಗಳನ್ನು ಕಲಿಯುವುದು, ಅರ್ಥ ಮಾಡಿಕೊಳ್ಳುವುದು ಅವರಿಗೆ ವ್ಯಾವಹಾರಿಕವಾಗಿಯೂ ಅಗತ್ಯವಾಗಿತ್ತು. ಇಂತಹ ಕೆಲವರಲ್ಲಿ ಭಾರತೀಯ ಭಾಷೆಗಳಿಂದ ನಿಜವಾಗಿಯೂ ಆಕರ್ಷಿಸಲ್ಪಟ್ಟವರಲ್ಲಿ ರೆವರೆಂಡ್ ಫರ್ಡಿನಾಂಡ್ ಕಿಟೆಲ್ ಒಬ್ಬರು. ಕಿಟೆಲ್ ಎಂದಾಕ್ಷಣ ಕನ್ನಡಿಗರಿಗೆ ನೆನಪಾಗುವುದು ನಿಘಂಟು.

ಇದಕ್ಕೆ ಕಾರಣವಿದೆ. ಕಿಟೆಲ್ ಅವರ ಇತರೆ ಕೆಲಸಗಳಿಗಿಂತ ನಿಘಂಟಿಗೆ ಹೆಚ್ಚು ಪ್ರಚಾರ ಸಿಕ್ಕಿತ್ತು. ಆದರೆ ಕಿಟೆಲ್ ಅವರು ನಿಘಂಟು ರಚಿಸುವ ಕಾರ್ಯ ಮಾತ್ರ ಮಾಡಿದುದಲ್ಲ. ಛಂದೋಬದ್ಧ ಪದ್ಯಗಳನ್ನು ಬರೆದಿರುವ ಅವರು ಕಾವ್ಯ ರಚನೆಯಲ್ಲೂ ಸಿದ್ಧಹಸ್ತರಾಗಿದ್ದರು. ಗ್ರಂಥ ಸಂಪಾದನೆ, ವ್ಯಾಕರಣ ಗ್ರಂಥ ಹಾಗೂ ಪಠ್ಯಪುಸ್ತಕ ರಚನೆಯಲ್ಲೂ ತೊಡಗಿಸಿಕೊಂಡಿದ್ದರು. ಅನುವಾದದ ಕೃಷಿ ಜೊತೆಗೆ ಧಾರ್ಮಿಕ ಸಾಹಿತ್ಯದಲ್ಲೂ ಕಿಟೆಲ್ ಛಾಪು ಮೂಡಿಸಿದ್ದರು. ಈ ಅಂಶಗಳನ್ನು ದಾಖಲೆಗಳ ಸಹಿತ ನೀಡುವ ಕೃತಿಯೇ ಇದು. ಮಿಷನರಿಗಳು ಮಾಡಿದ ಕನ್ನಡದ ಕೆಲಸದ ಬಗ್ಗೆ ಸಂಶೋಧನೆಯಲ್ಲಿ ನಿರತರಾಗಿರುವ ಎ.ವಿ. ನಾವಡ ಅವರು, ಮಂಗಳೂರಿನ ಬಾಸೆಲ್ ಮಿಷನ್‌ನ ಕೆ.ಟಿ.ಸಿ ಗ್ರಂಥಾಲಯ ಹಾಗೂ ಮತ್ತಿತರ ಕಡೆಗಳಲ್ಲಿ ಲಭ್ಯವಿರುವ ದಾಖಲೆಗಳನ್ನು ತೆಗೆದು ಸಂಪಾದಿಸಿ ಸಂಕಲಿಸಿ ಈ ಕೃತಿಯಲ್ಲಿ ನೀಡಿದ್ದಾರೆ. ಕಿಟೆಲ್ ಅವರ ಕನ್ನಡ ಪಠ್ಯಪುಸ್ತಕದ ಆಶಯ, ಶಬ್ದಮಣಿದರ್ಪಣವನ್ನು ಆಕರವಾಗಿಟ್ಟುಕೊಂಡು ಕಿಟೆಲ್ ಅವರು ರಚಿಸಿದ ವ್ಯಾಕರಣಗ್ರಂಥ, ಅವರ ರಚನೆಯ ಬಿಡಿಕವಿತೆಗಳ ಮಾಹಿತಿ ಹಾಗೂ ಸಂಗ್ರಹ ಇಲ್ಲಿದೆ.

'A Grammar of the Kannada Language' ಎಂಬ ಬೃಹತ್ ಗ್ರಂಥ ಪ್ರಕಟವಾಗಿ ಮಂಗಳೂರಿನಿಂದ ಜರ್ಮನಿಗೆ ತಲುಪುವಷ್ಟರಲ್ಲಿ ಕಿಟೆಲ್ ಅವರಿಗೆ ಸಂಪೂರ್ಣ ಕುರುಡು ಆವರಿಸಿತ್ತು. ತಾನು ತೀರಿಕೊಳ್ಳುವ ಮುನ್ನಾದಿನ ಸಂಜೆ ಆ ಪುಸ್ತಕವನ್ನು ಕೈಯಲ್ಲಿ ಎತ್ತಿಕೊಂಡು ಅದರ ಸ್ಪರ್ಶಸುಖವನ್ನು ಅನುಭವಿಸಿ ಕಣ್ಣೀರು ಸುರಿಸಿದ್ದರಂತೆ' ಹೀಗೆ ಪ್ರಸ್ತಾವನೆಯಲ್ಲಿ ಉಲ್ಲೇಖವಾಗಿರುವ ಈ ಅಂಶ ಕನ್ನಡದ ಮೇಲೆ ಕಿಟೆಲ್ ಅವರಿಗಿದ್ದ ಆಸಕ್ತಿಯನ್ನು ತೋರುತ್ತದೆ. ಕ್ರೈಸ್ತ ಸುವಾರ್ತಾ ಪ್ರಚಾರಕ್ಕಾಗಿ ಭಾರತಕ್ಕೆ ಬಂದಿದ್ದರೂ, ದ್ರಾವಿಡ ಭಾಷಾವಲಯದಲ್ಲಿ ಕನ್ನಡದ ಕೆಲಸ ತೀವ್ರವಾಗಿ ಜರುಗಬೇಕೆನ್ನುವ ಕಿಟೆಲ್ ಅವರ ಇರಾದೆ ಪ್ರಸ್ತುತ ಕಾಲದ ತಿಳಿವಳಿಕೆಯಾಗಬೇಕು ಎನ್ನುವುದು ಕಿಟೆಲ್ ವಾಚಿಕೆ ಸಿದ್ಧಪಡಿಸಿರುವುದರ ಹಿಂದಿನ ಉದ್ದೇಶವಾಗಿದೆ. ಕಿಟೆಲ್ ಅವರ ಮತ್ತಷ್ಟು ಕೃತಿಗಳು ಕನ್ನಡಿಗರ ಕೈಗೆ, ಕಣ್ಣಿಗೆ ದಕ್ಕಬೇಕು ಎನ್ನುವುದು ಒಟ್ಟು ಕೃತಿಯ ಆಶಯವಾಗಿದೆ. ನಾವಡರ ಶ್ರಮವೂ ಇಲ್ಲಿ ಎದ್ದು ಕಾಣುತ್ತದೆ.

ಬದುಕಿನ ಪೂರ್ಣತೆಗೆ ಹಂಬಲಿಸುವ ಕವಿತೆಗಳು

ನಿಂಗಪ್ಪ ಮುದೇನೂರು



ನಿನಗಾಗಿ ಬರೆದ ಕವಿತೆಗಳು
ಲೇ: ಎಚ್.ಎಸ್. ಮುಕ್ತಾಯಕ್ಕ
ಪ್ರ: ಸಂಗಾತ ಪುಸ್ತಕ, ಗದಗ
ಸಂ: 9341757653

ಪು: 188 ₹200

ಅವಲೋಕನ

'ನಾನು ಕಾಯುತ್ತೇನೆ ನಿನ್ನ ಎರಡು ಮಾತಿಗಾಗಿ, ನನ್ನ ತುಟಿಯಂಚಿನಲ್ಲಿ ಅರಳಬಹುದಾದ ಕಿರುನಗೆಗಾಗಿ, ಮತ್ತೆ ನೀನು ನನ್ನ ಹೆಸರ ಕರೆದಾಗ ಇಡೀ ಸೃಷ್ಟಿಯೇ ಒಂದುಕ್ಷಣ ನಿಂತು ಬಿಡುವ ಅನುಭೂತಿಗಾಗಿ' ಬಹುಶಃ 12ನೇ ಶತಮಾನದ ಅಕ್ಕ ಈಗ ಬದುಕಿದ್ದರೆ ಹೀಗೇ ಬರೆಯುತ್ತಿದ್ದಳೇನೋ? ಅಲ್ಲಿ ಅಕ್ಕ ಇದ್ದರೆ ಇಲ್ಲಿ ಮುಕ್ತಾಯಕ್ಕ ಇರುವರು. ಅಲ್ಲಿ ಚನ್ನಮಲ್ಲಿಕಾರ್ಜುನನೊಂದಿಗೆ ಸಂವಾದಿಸಬಲ್ಲ ಮುಕ್ತ ಸ್ವಾತಂತ್ರವನ್ನು, ಸಂವಿಧಾನವನ್ನು ಪಡೆದವಳು ಅಕ್ಕ. ಇಂದು ಅಂಥದೇ ಸ್ವಾತಂತ್ರ, ಸಂವಿಧಾನವನ್ನು ಪಡೆದು ಹೆಣ್ಣೊಬ್ಬಳು ಬರೆಯಬಲ್ಲಳು. ಇಡೀ ಸೃಷ್ಟಿಯ ಒಂದು ಪೂರ್ಣತೆಯ ಅನುಭೂತಿಗಾಗಿ ಹಂಬಲಿಸಬಲ್ಲಳು ಎಂಬುವ ಸಂದೇಶವನ್ನು 'ನಿನಗಾಗಿ ಬರೆದ ಕವಿತೆಗಳು' ಸಂಕಲನ ನೀಡುತ್ತದೆ.

ಮುಕ್ತಾಯಕ್ಕ ಯಾರಿಗಾಗಿ ಈ ಕವಿತೆಗಳನ್ನು ಬರೆದಿರಬಹುದು ಎಂಬ ಪ್ರಶ್ನೆ ಓದುಗನಲ್ಲಿ ಮೂಡುವುದುಂಟು. ಕೂಡಿಹರಿದ ನದಿಯ ಭಾವ ಅಥವಾ ಕಡಲು ಸೇರಿದ ನದಿಯ ನಿಶ್ಚಲ ಮನಃಸ್ಥಿತಿ ಅಕ್ಕನಿಗೆ ಇರುವಂತೆ ಮುಕ್ತಾಯಕ್ಕ ಅವರೂ ಸಾಹೀರ್‌ನನ್ನು ಅಮೃತಾ ಪ್ರೀತಂಳನ್ನು ಎದೆಗವಚಿಕೊಂಡು ಹಾಡಿದ ತಾಯ ಕರುಣೆಯಂತಿದೆ ಈ ಸಂಕಲನ. ಅಕ್ಕನ ಸ್ವಗತದಂತಹ ಭಾವದ ಕವಿತೆಗಳು ಇಲ್ಲಿವೆ. ಪರಿವಿಡಿ ಇಲ್ಲದ, ಶೀರ್ಷಿಕೆಗಳಿಲ್ಲದ, ತಾನೇ ನುಡಿದ ಭಾವಕೋಶದ ಮಾತುಗಳಷ್ಟೇ ಇಲ್ಲಿ ಮೂಡಿನಿಂತಿವೆ. ಮೊದಲ ಪದ್ಯವೇ ಅಪೂರ್ವವಾದ ಬೆಳಕನ್ನು ಹೊಂದಿದೆ:

'ನೀನು ದೂರವಿರುವೆ, ಆದರೂ ದೂರವೇನಿಲ್ಲ' ಪದ್ಯವೂ ಮಾತು, ಕನಸು, ಕವಿತೆಯಿಂದ ಮನುಷ್ಯ ಹೃದಯಕ್ಕೆ ಹತ್ತಿರವಾಗಬಹುದು ಎನ್ನುವ ಸಂದೇಶವನ್ನು ಹೊತ್ತಿದೆ. ಯಾವುದೂ ಒಂಟಿಯಲ್ಲದ, ಜೊತೆ ಇರದಿದ್ದರೂ ಅಪೂರ್ವ ಸೆಳೆತದಲ್ಲಿರುವ ಅಂತಃಕರಣದ ಭಾವ ಈ ಪದ್ಯದ್ದು. ಮೌನವು ಹಾಡುತ್ತಿರುವ ರಾತ್ರಿ ಈ ಕವಯತ್ರಿಗೆ ಸುಂದರವಾಗಿ ಕಾಣುತ್ತದೆ. ಹಾಗೇ ಪ್ರೇಮ ನಿವೇದನೆಯ ಮೊದಲ ರಾತ್ರಿಯಲ್ಲಿ ಹೃದಯ ಸಂವೇದನೆಗೊಳಿಸುವ ಗಳಿಗೆಯೊಂದನ್ನು ಇಲ್ಲಿ ದನಿಯಾಗಿಸಿದೆ.

ಮುಕ್ತಾಯಕ್ಕ ಅವರ ಬರವಣಿಗೆ ಎಂದರೆ ಅದು ಒಂದು ಬಗೆಯ ಮುಕ್ತವಾದ ಛಂದಸ್ಸು. ಮನುಷ್ಯನ ಸುಖವನ್ನು, ದುಃಖವನ್ನು ಕಟ್ಟಿಕೊಡಲು ಈ ಪ್ರಪಂಚದಲ್ಲಿ ಇರುವುದು ಒಂದೇ - ಅದು ಕವಿತೆ ಎನ್ನುವ ಭಾವ ಅದರದು. ಹಗಲು ಮತ್ತು ರಾತ್ರಿ ಎರಡೂ ಅವರ ಕಾವ್ಯದಲ್ಲಿ ರೂಪಕಗಳಂತೆ ಬರುತ್ತವೆ. ರಾತ್ರಿ, ಮೌನವನ್ನು ಗರ್ಭೀಕರಿಸಿಕೊಂಡು ಹಾಡಿದರೆ, ಹಗಲು, ಮಾತನ್ನು ಎಳೆ ಬಿಸಿಲ ಕೋಲಿನ ಮೇಲೆ ಶಾವಿಗೆ ಬಿಟ್ಟು ಕುಳಿತುಕೊಂಡಂತೆ ಆ ಕಾವ್ಯ ಮೂಡಿನಿಂತಿದೆ. ಪುಟ್ಟ ಪುಟ್ಟ ತಾಣಗಳಲ್ಲಿ ನಿಂತು ದಣಿವಾರಿಸಿಕೊಂಡಂತೆ, ಮತ್ತೆ ಜೀವ ಚೈತನ್ಯ ಪಡೆದು ದಾರಿ ಸಾಗಿದಂತೆ ಇಲ್ಲಿನ ಕವಿತೆಗಳಿವೆ.


'ಒಂದು ದಿನ ನೀನು ಸಮುದ್ರಕ್ಕೆ ನನ್ನನ್ನು ಪರಿಚಯಿಸಿದೆ' ಎಂಬ ಕವಿತೆಯನ್ನು ನೋಡಿ. ಇದೇ ಕವಿತೆಯ ಕೊನೆಗೆ ಸಮುದ್ರವೇ ತನ್ನ ಮೀನು, ಚಿಪ್ಪು, ಮುತ್ತುಗಳನ್ನೆಲ್ಲ ಬಿಟ್ಟು ಇವರನ್ನ ಹಿಂಬಾಲಿಸುವ ಘನತೆ ಇದೆಯಲ್ಲ? ಇದೊಂದು ರೀತಿಯಲ್ಲಿ ಸಿದ್ಧಾರ್ಥ ರಾಜತ್ವ, ಅರಮನೆ, ಸುಖ ವೈಭವಗಳ ಬಿಟ್ಟು ತನ್ನ ಕನಸುಣಿಯಾದ ತಂದೆ ಶುದ್ಧೋಧನನಿಗೂ ಹೇಳದೆ ಏಕಾಂಗಿಯಾಗಿ ಕಾಡಿಗೆ ಹೋದುದನ್ನೂ ನೆನಪಿಸುತ್ತದೆ. ಕಡಲಿನ ಧ್ಯಾನದ ಜೊತೆ ನಕ್ಷತ್ರಗಳ ಮೇಲೆ ಕುಳಿತು ಸುಖ ದುಃಖದ ಮಾತುಗಳನ್ನು ಆಡುವುದಿರಲಿ ಪೂಜೆಗೆ, ಪ್ರಕೃತಿಗೆ, ಸುಂದರ ಸವಿ ಬೆಳಗಿಗೆ, ಬದುಕಿನ ಕವಿತೆಯಡೆಗೆ ಈ ಕವಿತೆಗಳ ಭಾವ ಆರ್ದ್ರವಾಗಿ ಒದಗಿನಿಂತಿದೆ. ಅಲ್ಲಿಗೇ ಇದು ಕೊನೆಯಾಗುವುದಿಲ್ಲ. ಮತ್ತೆ ಬಾಳಿಗೆ ವಸಂತವಾಗಿ ಬರುವ, ಹೊಸ ಕನಸಾಗಿ ಬರುವ, ರೆಂಬೆ ಕೊಂಬೆಗೆ ಹೂ ಹಣ್ಣು ಮುಡಿಸುವ ಚೈತನ್ಯಶೀಲ ಮನಃಸ್ಥಿತಿ ಇಲ್ಲಿನ ಕವಿತೆಗಳದಾಗಿದೆ.

ಸಹೃದಯ ಓದುಗರನ್ನು ಅರಳಿಸಿ ನಿಲ್ಲಿಸುವ, ಹೃದಯ ಸಂವಾದಕ್ಕೆ ಅಣಿಗೊಳಿಸುವ ಎಲ್ಲ ಕ್ಷಣಗಳು ಇಲ್ಲಿನ ಪದ್ಯಗಳಲ್ಲಿ ಹರಡಿಕೊಂಡಿವೆ. 'ಯಾರು ಕಾಯುವರು ಮಿಲನದ ಗಳಿಗೆತನಕ. ನಾನು ಚುಕ್ಕಿಯಾಗಿ ಮಿನುಗಲುಬಹುದು ಅಲ್ಲಿಯತನಕ' ಎನ್ನುವ ಸಾಲಿನಲ್ಲಿ ಯಾವ ವಿಶ್ರಾಂತಿಯನ್ನು ಬಯಸದ, ಸದಾ ಕ್ರಿಯಾಶೀಲತೆಯಲ್ಲಿ ಮಗ್ನವಾಗಿರುವ ಜೇಡನಂತೆ, ಗೀಜಗನ ಹಕ್ಕಿಯಂತೆ ಇಲ್ಲವೇ ಗಾಂಧಿ ತಾತನಂತೆ ಇಲ್ಲಿನ ಧ್ಯಾನವಿದೆ.

ಮುಕ್ತಾಯಕ್ಕ ಅವರಿಗೆ ಯಾವುದೇ ಬಂಧನಗಳಿಲ್ಲ. ಸಾಹಿರ್‌ನನ್ನು ಹೃದಯದಲ್ಲಿ ಕಾಪಿಟ್ಟು ಪ್ರೀತಿಸಿದ ಅಮೃತ ಪ್ರೀತಂಳಿಗೂ ಯಾವುದೇ ಬಂಧನಗಳಿಲ್ಲ. ದುಃಖ ಕಳೆದುಕೊಳ್ಳುವ ದಾರಿಯನ್ನು ಸ್ಪಷ್ಟವಾಗಿ ಈ ಮಾತೆಯರು ಕಂಡುಕೊಂಡಿದ್ದಾರೆ. ಇಂತಹ ಕವಿತೆಗಳನ್ನು ಓದುವಾಗ ಸ್ಪಷ್ಟವಾಗಿ ಕಾಣಿಸುವ ಒಂದು ಗುಣವೆಂದರೆ ಹೇಳುವ ಸಂಗತಿಯನ್ನು ನೇರವಾಗಿ ಹೇಳುವುದು. ತಾನು ಅನುಭವಿಸಿದ್ದನ್ನು ಪ್ರತೀ ಸಾಂಸ್ಕೃತಿಕಗೊಳಿಸಿ ಅವಳು ಮಾತನಾಡುವುದನ್ನು ಕೇಳಿ: 'ನಾನು ದೂರವಿದ್ದರೇನು ನನ್ನನ್ನು ನೀನು ನಿನ್ನ ನೆನಪುಗಳಲ್ಲಿ ಹುಡುಕು/ಅಲ್ಲಿರುವೆ ನಿನ್ನ ಕನಸುಗಳಲ್ಲಿ ಇಣುಕುವೆ' ಎನ್ನುತ್ತಾ ಎದೆ ಮಿಡಿತದ ಹಾಡಾಗುವ, ನಮ್ಮ ಸ್ಮರಣೆಗೆ ದಕ್ಕುವ ಇಂತಹ ಭೇದವಿರದ, ಲಿಂಗ ತಾರತಮ್ಯವಿರದ ಸೌಹಾರ್ದಯುತ ನೆಲೆ ನಿನಗಾಗಿ ಬರೆದ ಕವಿತೆಗಳಿಗೆ ದಕ್ಕಿದೆ.

ಎದೆಯಲ್ಲಿ ಗೂಡುಕಟ್ಟುವ ಹಕ್ಕಿಗಳ ಹಾಗೆ ಬಂದು ನಿಲ್ಲುವ ಇಲ್ಲಿನ ಕವಿತೆಗಳನ್ನು ಓದುತ್ತಾ, ಸವಿಯುತ್ತಾ ಹೋಗುವುದರಲ್ಲಿ ಒಂದು ಆನಂದವಿದೆ. ಹಕ್ಕಿಗಳು ಎಲ್ಲಿಂದಲೇ ಬರಲಿ, ಆದರೆ ತಾಯಿಯಾಗುವ, ಮರಿಗಳಿಗೆ ಗುಟುಕು ನೀಡುವ ಜೀವನ ವಿಧಾನ ಮಾತ್ರ ಒಂದೇ. ಕವಿತೆಯ ಬಾಳೂ ಹಕ್ಕಿಯಂತೆಯೇ. ಬೇಂದ್ರೆಯವರ 'ಗರಿ' ಕವಿತೆಗಳನ್ನು ಓದುವಾಗ ಈ ದಿಗಂತದ ಕಾಣ್ಕೆ ನಮಗೆ ಮನನವಾಗುತ್ತದೆ. ನೆಲ ಮುಗಿಲಿನ ಸಾಂಗತ್ಯ ನಮಗೆ ಅರ್ಥವಾಗುತ್ತದೆ. ಹಾಗೇ ಮುಕ್ತಾಯಕ್ಕ ಅವರ ಕವಿತೆಗಳ ಬಾಳು ಹಕ್ಕಿಯ ತೆರದಲ್ಲಿ ಇರುವಂತಹದ್ದು. ಎಂಥದೇ ವಿಷಾದವಿದ್ದರೂ ಈ ಕವಿತೆ ಬೆಚ್ಚಗಿನೆದೆಯ ಕಾವು ನೀಡುವ, ಸಾಂತ್ವನಗೊಳಿಸುವ ಅವ್ವನ ಸೆರಗಿನೊಡಲಿನ ಕಾಂತಿಯಂತೆ. ಇಂತಹ ಕವಿತೆಗಳನ್ನು ಮುಕ್ತಾಯಕ್ಕ ಕನ್ನಡ ಸಾಹಿತ್ಯಕ್ಕೆ ನೀಡುತ್ತಾ ಬಂದಿರುವರು. ಅವರ ಗಜಲ್‌ಗಳ ಸವಿಪಾಕವೊಂದು ಇಲ್ಲಿನ ಕವಿತೆಗಳಲ್ಲಿ ಮಡುಗಟ್ಟಿದೆ. ನಾನು ನೀನಾಗುವ, ನೀನು ನಾನಾಗುವ, ಕೊನೆಗೆ ಜೇನಾಗುವ ಸವಿ ಇಲ್ಲಿನದಾಗಿದೆ. ❖

ಲೌಕಿಕದ ನೋಟ, ಅಧ್ಯಾತ್ಮದ ಆಯಾಮ




ತೋಚಿದ್ದು ಗೀಚಿದ್ದು
ಲೇ: ಸುರೇಶ ಎಸ್.
ಪ್ರ: ಕನ್ನಡ ಪ್ರಕಾಶನ, ಗಜೇಂದ್ರಗಡ
ಸಂ: 080 23310081

ಪು: 200 ₹140

ತೋಚಿದ್ದು ಗೀಚಿದ್ದು... ನೆನೆದಿದ್ದು ಮರೆತಿದ್ದು... ಅದೇ ಬರವಣಿಗೆ. ಹೀಗೆ ಚುಟುಕು ಕವನ ಸಂಕಲನದ ಒಟ್ಟಾರೆ ಆಶಯ ಮತ್ತು ವಸ್ತುವನ್ನು ಅಂಥದ್ದೇ ಸಾಲಿನಲ್ಲಿ ಹೇಳಿದ್ದಾರೆ ಸುರೇಶ್ ಎಸ್. ಹೌದು, ಬಹುತೇಕ ಸಾಲುಗಳು ತೋಚಿದಂತೇ ಗೀಚಿದ ಹಾಗೆಯೇ ಇವೆ. ಅನೇಕವು ಅರ್ಥವತ್ತಾಗಿಯೂ ಇವೆ. ಲೌಕಿಕದ ನೋಟಗಳು, ಸಾಂಸಾರಿಕ ವಸ್ತುಗಳು, ಅಧ್ಯಾತ್ಮದ ಆಯಾಮಗಳು, ಗಾಢ ಚಿಂತನೆಗಳು ಪುಟ್ಟ ಸಾಲುಗಳಲ್ಲಿ ಹರಳುಗಟ್ಟಿವೆ. 'ಮಡದಿ ಮೂದಲಿಸಿದಾಗ ಮಕ್ಕಳು ಸಿಡುಕಿದಾಗ ಮಾತಿಗೆ ಬೆಲೆ ಇಲ್ಲವಾದಾಗ ಶ್ವಾನವೂ ಮೂಸದಿದ್ದಾಗ ಬಾಳಿಗೆ ಸಿದ್ಧ ಪಥ – ವಾನಪ್ರಸ್ಥ...', ಪಾಣಿಗ್ರಹಣ– ಪ್ರಪಂಚದ ಅತ್ಯಂತ ಪ್ರಬಲ ವಶೀಕರಣ, ವೈಕುಂಠ ಸಮಾರಾಧನೆ ಎಂದರೆ 'ವೈಕುಂಠದ ಪಾಯಸ ನಾಲಗೆಗೆ ಬಿದ್ದ ಮಾರನೆಯ ದಿನ ಆಸ್ತಿ ಪತ್ರಗಳ ಹುಡುಕಾಟ...', ಸತ್ತಾಗ ಒಂಟಿ ದೀಪಕ್ಕೆ ಎಳ್ಳೆಣ್ಣೆ... ಹೇಗೆ ಬದುಕಿದರೂ ಕೊನೆಗೆ ಮಣ್ಣೇ... ಹೀಗೆ ಲೌಕಿಕ– ಪಾರಮಾರ್ಥಿಕ ಚಿಂತನೆಗಳು, ಅಲ್ಲಲ್ಲಿ ತುಂಟ ಪಂಚ್‌ಗಳು ಓದಿಸಿಕೊಂಡು ಹೋಗುತ್ತವೆ.

'ಅತ್ತೆ ಕಾಟ ಕೊಡುತ್ತಾಳೆ ಎಂದು ಯಾಕೆ ದೂರುತಿ? ಮುಂದೆ ಅತ್ತೆಯಾಗುವುದಕ್ಕೆ ಇದೇ ಅಲ್ಲವೇ ತರಬೇತಿ' ಎಂದೂ ಇಲ್ಲಿನ ಚುಟುಕು ಕೇಳುತ್ತದೆ. 'ಸಮಯದ ಪರಿವೆ ಇಲ್ಲದ ಸಮಯದ ಗೊಂಬೆಗಳಾದೆವು' ಎನ್ನುವ ಪದ್ಯ ಇಂದಿನ ವಾಸ್ತವವನ್ನು ಢಾಳಾಗಿ ಕಟ್ಟಿಕೊಡುತ್ತದೆ. ಪುಂಡಲೀಕ ಕಲ್ಲಿಗನೂರು ಅವರ ರೇಖಾಚಿತ್ರಗಳೂ ಕವನಗಳ ಆಶಯವನ್ನು ದೃಶ್ಯೀಕರಿಸಿವೆ. ದಾನದಲ್ಲಿ ಶ್ರೇಷ್ಠ ದಾನ ಸಮಾಧಾನ ಎನ್ನುತ್ತಾ ಕವಿ, ಪದ್ಯಪಾನವೇ ಸಮಾಜಕ್ಕೆ ಶ್ರೇಯಸ್ಕರ ಎಂದು ಬಹುತೇಕ ಕವಿತೆಗಳಲ್ಲಿ ಹೇಳಿದ್ದಾರೆ.

ಜನಜೀವನ ಪ್ರಭಾವಿಸಿದ ತೀರ್ಪುಗಳು



ದೇಶದ ಪಥ ಬದಲಿಸಿದ 25 ಪ್ರಮುಖ ತೀರ್ಪುಗಳು
ಲೇ: ವೈ.ಜಿ. ಮುರಳೀಧರನ್
ಪ್ರ: ನವಕರ್ನಾಟಕ ಪ್ರಕಾಶನ
ಸಂ: 080-22161900

ಪು: 112 ₹130

ನ್ಯಾಯಾಲಯದ ತೀರ್ಪುಗಳು ಜನಜೀವನದ ದೃಷ್ಟಿಕೋನ ಮತ್ತು ಸಾಮಾಜಿಕ ಬದಲಾವಣೆಗೆ ದೊಡ್ಡ ಕಾರಣಗಳಾಗುತ್ತವೆಯೇ? ಈ ಪ್ರಶ್ನೆಗೆ ಹೌದು ಎಂಬ ಉತ್ತರ ಈ ಕೃತಿಯಲ್ಲಿ ಸಿಗುತ್ತದೆ.


ಈಗ ನಾವು ತೀರಾ ಸರಳ ಎಂದು ಪರಿಭಾವಿಸುವ ವಿಷಯಗಳೆಲ್ಲವೂ ಸುಪ್ರೀಂ ಕೋರ್ಟ್ ನ್ಯಾಯಪೀಠದಿಂದ ಬಂದದ್ದು ಎಂದರೆ ಅಚ್ಚರಿಯೆನಿಸಬಹುದು. ಉದಾಹರಣೆಗೆ ಶಿಕ್ಷಣ ಮೂಲಭೂತ ಹಕ್ಕು ಎಂದು ಈಗ ಇರುವ ನಿಯಮ. ಅದಕ್ಕಾಗಿ ಕುಮಾರಿ ಮೋಹಿನಿ ಜೈನ್ ಎಂಬುವವರು ನಡೆಸಿದ ಕಾನೂನು ಹೋರಾಟ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಕ್ಯಾಪಿಟೇಷನ್ ಶುಲ್ಕಕ್ಕೆ ಕಡಿವಾಣ ಹಾಕಿ, ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಘೋಷಿಸಿದ ತೀರ್ಪು ಇದರ ಹಿಂದೆ ಇದೆ. ವಸತಿ ಮೂಲಭೂತ ಹಕ್ಕು ಎನ್ನುವಲ್ಲಿಯೂ ಓಲ್ಗಾ ಟೆಲಿಸ್ ಮತ್ತು ಬಾಂಬೆ ಮುನ್ಸಿಪಲ್ ಕಾರ್ಪೊರೇಷನ್ ನಡುವಿನ ಪ್ರಕರಣದ ತೀರ್ಪು ಇದೆ.

ಉದ್ಯೋಗದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಸಂಬಂಧಿಸಿ ಸುಪ್ರೀಂಕೋರ್ಟ್ ನೀಡಿದ ತೀರ್ಪು, ಈ ವಿಷಯಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳ ಪ್ರಕಟಣೆಗೆ ಕಾರಣವಾಯಿತು. ದಯಾಮರಣ ಕುರಿತು ಅತಿ ಸೂಕ್ಷ್ಮ ಎನ್ನಿಸುವಂತಹ ನಿರ್ಣಯ ತೆಗೆದುಕೊಂಡದ್ದೂ ಕೂಡಾ ಗಮನಾರ್ಹ ತೀರ್ಪು. ನೋಟಾ (ಯಾರಿಗೂ ಮತ ಇಲ್ಲ) ಅನ್ನುವುದು ಪ್ರಚಲಿತದಲ್ಲಿದೆಯಲ್ಲ? ಅದರ ಹಿಂದೆಯೂ ಪಿಯುಸಿಎಲ್ ಎಂಬ ಸಂಘಟನೆ ಸುಪ್ರೀಂ ಕೋರ್ಟ್‌ವರೆಗೂ ಹೋಗಿ ವಾದಿಸಿದ ಕಥೆ ಇದೆ. ಅಭ್ಯರ್ಥಿಗಳ ಮೇಲೆ ನಂಬಿಕೆ ಇಲ್ಲದವರೂ ಚುನಾವಣಾ ವ್ಯವಸ್ಥೆಯಲ್ಲಿ ತಮ್ಮ ಅಭಿಪ್ರಾಯ ದಾಖಲಿಸಲು ಅವಕಾಶ ನೀಡುವಂತಹ ವ್ಯವಸ್ಥೆ ಕೋರ್ಟ್‌ನ ತೀರ್ಪಿನಿಂದಾಗಿಯೇ ಜಾರಿಗೆ ಬಂತು.

ಆಡಳಿತದಲ್ಲಿ ಅಧಿಕಾರಿಗಳ ಹಸ್ತಕ್ಷೇಪಕ್ಕೆ ತಡೆಯೊಡ್ಡಿದ ತೀರ್ಪು, ಅಪರಾಧಿಗಳನ್ನು ಚುನಾವಣೆಯಿಂದಲೇ ಹೊರಗಿಟ್ಟದ್ದು ಇಂಥ ವಿಶೇಷವೆನಿಸುವ 25 ತೀರ್ಪುಗಳು ಒಂದಕ್ಕಿಂತ ಒಂದು ಕುತೂಹಲಕಾರಿ ವಿವರಣೆಗಳನ್ನು ಒಳಗೊಂಡಿವೆ. ಇಂಥ ನೂರಾರು ತೀರ್ಪುಗಳಿರಬಹುದು. ಆದರೆ ಇತಿಮಿತಿಯೊಳಗೆ ಗರಿಷ್ಠ ವಿವರ ಕಟ್ಟಿಕೊಡುವ ಪ್ರಯತ್ನ ಇಲ್ಲಿದೆ. ಕಾನೂನು, ಆಡಳಿತ ಹಾಗೂ ರಾಜ್ಯಶಾಸ್ತ್ರ ವಿದ್ಯಾರ್ಥಿಗಳು ಓದಬೇಕಾದ ಸರಳ ವಿವರಣೆಯ ಪುಸ್ತಕ.

ಎಷ್ಟೊಂದು ಮಸಾಲೆ ದೋಸೆ!

ಅಭಿಲಾಷ್ ಪಿ.ಎಸ್.



ಘಮಘಮ ಮಸಾಲೆ ದೋಸೆ
(ಮಸಾಲೆ ದೋಸೆಗೆ ಸಂಬಂಧಿಸಿದ ಹಿರಿಯ ಲೇಖಕರ ಆಯ್ದ ಬರಹಗಳು)
ಸಂಪಾದಕ: ವೈ.ಎನ್.ಗುಂಡೂರಾವ್
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಸಂ: 9019190502

ಪು: 152 ₹150

ಒಳನೋಟ

ಕಾದ ಕಾವಲಿಯ ಮೇಲೆ ತಣ್ಣೀರು ಚುಮುಕಿಸಿ, ಎದ್ದ ಹಬೆಯೊಳಗೆ ಹಿಟ್ಟು ಹಾಕಿ, ಗಿರ್‍ರೆಂದು ತಿರುಗಿಸಿ ಮೇಲೊಂದಿಷ್ಟು ಅಭ್ಯಂಜನವಾಗಿ (ಸ್ಪೆಷಲ್ಲಾದರೆ ತುಪ್ಪ), ಸಾಫ್ಟ್/ರೋಸ್ಟ್ ಆಗಿ ಸುತ್ತಿಬರುವ ಮಸಾಲೆ ದೋಸೆ ಸುತ್ತ ಅದೆಷ್ಟೋ ಕಥೆಗಳಿವೆ, ಸಂಬಂಧಗಳಿವೆ, ನೆನಪುಗಳಿವೆ. ಅಂತಹ ಅನುಭವಗಳ ಆಯ್ದ ಬರಹಗಳ ಕೃತಿ 'ಘಮಘಮ ಮಸಾಲೆ ದೋಸೆ'.

ಇಲ್ಲಿ ಸವಿದವರ ಪಟ್ಟಿ ದೊಡ್ಡದೇ ಇದೆ. ವಿ.ಸೀ ಅವರಿಂದ ಹಿಡಿದು ಪು.ತಿ.ನ, ನಿಸಾರ್ ಅಹಮದ್‌ವರೆಗೆ ಹಲವರು ಇಲ್ಲಿ ದೋಸೆ ಮೆಲ್ಲಲು ಕೂತಿದ್ದಾರೆ. ಕೃತಿಯ ಆರಂಭದಲ್ಲೇ ಮಸಾಲೆ ದೋಸೆಗೆ ದೋಸೆಗಳ ರಾಜನ ಪಟ್ಟವನ್ನು ನೀಡಿರುವ ಸಂಪಾದಕ ವೈ.ಎನ್.ಗುಂಡೂರಾವ್, ವಿದ್ಯಾರ್ಥಿ ಭವನದ ಮಸಾಲೆ ದೋಸೆಯ ನೆನಪಿನ ಬುತ್ತಿ ಬಿಚ್ಚಿಡುತ್ತಾರೆ. ವಿದ್ಯಾರ್ಥಿ ಭವನಕ್ಕೆ ದೋಸೆ ಮೆಲ್ಲಲು ಬರುತ್ತಿದ್ದ ಸಾಹಿತಿಗಳ ಪಟ್ಟಿ ಅಲ್ಲಿನ ಮೆನುವಿಗಿಂತ ದೊಡ್ಡದಿದೆ ಎನ್ನುವುದನ್ನು ಗುಂಡೂರಾವ್ ದಾಖಲಿಸುತ್ತಾರೆ. ಡಿ.ವಿ.ಜಿ ಅವರ ಹಾವಭಾವವೇ ಇಲ್ಲಿನ ಆರ್ಡರ್! ಒಟ್ಟಾರೆ ವಿದ್ಯಾರ್ಥಿ ಭವನ, ಎಂ.ಟಿ.ಆರ್., ಕೃಷ್ಣ ಭವನ ಇತ್ಯಾದಿ ಇತ್ಯಾದಿ ಮಸಾಲೆ ದೋಸೆಯ ಲೋಕಕ್ಕೂ ಸಾಹಿತ್ಯ ಲೋಕಕ್ಕೂ ಇದ್ದ ಸಂಪರ್ಕಕೊಂಡಿಯನ್ನು ವಿಸ್ತೃತವಾಗಿ ಅವರಿಲ್ಲಿ ವಿವರಿಸಿದ್ದಾರೆ.

ಮುಖ್ಯಮಂತ್ರಿಯಾಗಿದ್ದಾಗ ಎಸ್.ಎಂ.ಕೃಷ್ಣ ಅವರು ಇದೇ ಹೋಟೆಲ್‌ನಲ್ಲಿ ಮಸಾಲೆ ದೋಸೆ ಸವಿದು, ವಿಪಕ್ಷಗಳ ಕೈಯಿಂದ ಟೀಕೆಯ ತುಪ್ಪ ಸುರಿಸಿಕೊಂಡಿದ್ದ ಬಗ್ಗೆಯೂ ಎಚ್.ಎಲ್. ಕೇಶವಮೂರ್ತಿ ಉಲ್ಲೇಖಿಸಿದ್ದಾರೆ.

ಯಾವು'ದೋ ಸೆ'ಳೆತ ಎಂಬ ಲೇಖನದಲ್ಲಿ ಶತಾವಧಾನಿ ಆರ್.ಗಣೇಶ್, 'ದೋಸೆಯ ನಿರ್ಮಿತಿ ಕಲೆಗಳ ಕಲೆ' ಎನ್ನುತ್ತಾ, 'ರುಬ್ಬುವುದೊಂದು ಕಲೆ, ಹುಯ್ಯುವುದೊಂದು ಕಲೆ, ಇದಕ್ಕೆ ತಕ್ಕ 'ಪಕ್ಕವಾದ್ಯ'ಗಳನ್ನು (ಚಟ್ನಿ, ಪಲ್ಯ ಇತ್ಯಾದಿ) ರೂಪಿಸಿಕೊಳ್ಳುವುದು ಮತ್ತೊಂದು ಕಲೆ. ರಸಿಕತೆಯಿಂದ ಸವಿಯುವುದುದಂತೂ ಮಹಾಕಲೆ' ಎನ್ನುತ್ತಾ ದೋಸೆಯ ಹಲವು ಮಗ್ಗುಲುಗಳನ್ನು ವರ್ಣಿಸಿದ್ದಾರೆ.

ವಿ.ಸೀ ಅವರು ದೋಸೆಯ ಹಿರಿಮೆಯನ್ನು ಹೀಗೆ ವಿವರಿಸುತ್ತಾರೆ. 'ಉಳಿದ ಎಲ್ಲವನ್ನೂ ಹತ್ತು ಜನರಿಗಾಗಿ ಒಟ್ಟಿಗೆ ಮಾಡುತ್ತಾರೆ. ನಿಮಗಾಗಿಯೇ ಪ್ರತ್ಯೇಕವಾಗಿ ಮಾಡುವುದಿಲ್ಲ. ಹತ್ತು ಜನಕ್ಕೆ ಮಾಡಿದುದರಲ್ಲಿ ನಿಮಗೂ ಭಾಗ; ಹತ್ತರಲ್ಲಿ ನೀವು ಹನ್ನೊಂದು. ದೋಸೆ ಹಾಗಲ್ಲ. ನೀವು ಹೇಳಿದಂತೆ ನಿಮಗೇ ಪ್ರತ್ಯೇಕವಾಗಿ ಅದನ್ನು ಮಾಡಿಕೊಡುತ್ತಾರೆ. ಎರಡು ವ್ಯಕ್ತಿತ್ವಗಳಿಗೆ ಬೆಲೆ ಇಲ್ಲಿ. ದೋಸೆಗೆ, ನಿಮಗೆ'. ವಿ.ಸೀ ಅವರಂತೆ ನೀವೆಂದಾದರೂ ಯೋಚಿಸಿದ್ದೀರಾ? ಅಷ್ಟೇ ಅಲ್ಲ, ಯಾರನ್ನೂ, ಯಾವುದನ್ನೂ ಹೊಗಳದ ಹೆಂಗಸಿನ ಮನೋವೃತ್ತಿ ಮಸಾಲೆ ದೋಸೆಯ ಮುಂದೆ ಮಂಕಾಗುವುದನ್ನೂ ವಿ.ಸೀ ಮೆಲ್ಲನೆ ಕುಟುಕುತ್ತಾರೆ. ಮನೋರೋಗಕ್ಕೂ ಮಸಾಲೆ ದೋಸೆಯೇ ಮದ್ದು ಎನ್ನುವುದನ್ನೂ ಅನುಭವಗಳ ಮೂಲಕ ಕಟ್ಟಿಕೊಡುತ್ತಾರೆ.

ಪು.ತಿ.ನ ಅವರಿಗೆ ಮಸಾಲೆ ದೋಸೆಯೊಂದು ಕಾವ್ಯ. 'ಇಂಗಿನ ಕಹಿ, ಮೆಂತ್ಯದ ಒಗಚು, ಹಸಿಶುಂಠಿ, ಹಸಿಮೆಣಸಿನ ಕಾಯಿ, ಮೆಣಸುಗಳ ವಿಶಿಷ್ಟವಾದ ಖಾರ, ಪಲ್ಯದ ಕಾಯಿಗಳ ವಿವಿಧ ಮಾಧುರ್ಯ, ಹಿಟ್ಟುಗಳ ಹುದುಗಿನ ಹಿತವಾದ ಹುಳಿ, ತುಪ್ಪದ ಕಂಪು, ಬೆಣ್ಣೆಯ ವಿಪುಲಾರ್ಥತೆ–ಈ ಸಮೃದ್ಧ ರಸಗಳನ್ನು ಹೊಂದಿಸಿ, ಸುತ್ತಲೂ ಕೆನ್ನಾಲಗೆಯನ್ನು ಚಾಚಿ ಕಾವಲೆಯ ಮೇಲಿರುವ ಭಕ್ಷ್ಯವನ್ನು ರುಚಿ ನೋಡಲು ಹವಣಿಸುವ ಅಗ್ನಿದೇವನನ್ನು ನೀರಿನಿಂದ ದಟ್ಟಿಸುತ್ತಾ, ಕಣ್ಣಿಗೆ ನಾಲಗೆಯ ಹರಿತವನ್ನು ಕೊಟ್ಟು ಒಂದು ಕ್ಷಣವೂ ಹಿಂಚು ಮುಂಚಿಲ್ಲದಂತೆ ಸಿದ್ಧ ಕ್ಷಣದಲ್ಲಿ ಎಲೆಗಿಳಿಸುವ ಕುಶಲ ಬಾಣಸಿಗನ ಕುಶಲ ಕೃತಿ ಈ ಮಸಾಲೆ ದೋಸೆ'. ಪು.ತಿ.ನ ಅವರು ಹೀಗೆನ್ನುವಾಗ ನಾಲಿಗೆಯೊಮ್ಮೆ ತಿಂದ ಮಸಾಲೆ ದೋಸೆಯನ್ನು ನೆನಪಿಸಿಕೊಳ್ಳದೆ ಇದ್ದೀತೇ? ಇಲ್ಲಿರುವ ಎಲ್ಲ 'ಮಸಾಲೆ ದೋಸೆ'ಯ ರುಚಿ ಒಂದಕ್ಕಿಂತ ಒಂದು ಭಿನ್ನ, ಘಮವೂ ಅಷ್ಟೇ. ಪುಸ್ತಕ ಓದಿದ ಬಳಿಕ ಒಂದು ಗರಿಗರಿ ಮಸಾಲೆ ದೋಸೆ ಆರ್ಡರ್ ಮಾಡೋಣ ಎಂದೆನಿಸದೇ ಇರದು. ❖


ಬಂಡವಾಳವಾದ

10ನೇ ಪುಟದಿಂದ...

ಈ ಮಾಹಿತಿಯನ್ನು ಆಧರಿಸಿ ಒಂದು ಮಾನಸಿಕ ಸಮರ ಸಾಧನವನ್ನು ಸಿದ್ಧಪಡಿಸಿ, ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಬಳಸಿ ಅಮೆರಿಕದ ಮತದಾರರು ಡೊನಾಲ್ಡ್ ಟ್ರಂಪ್ ಅವರನ್ನು ಆಯ್ಕೆ ಮಾಡುವಂತೆ ಮನವೊಲಿಸುವ ಪ್ರಯತ್ನ ಮಾಡಿದ್ದು ಜಗತ್ತಿನ ಮೊತ್ತಮೊದಲ ದತ್ತಾಂಶ ಹಗರಣವೆಂದೇ ಈಗ ಕುಖ್ಯಾತ.

ಭಾರತದಲ್ಲಿ ನಡೆಯುವ ಚುನಾವಣೆಗಳಲ್ಲಿ ಕೂಡ ಈ ಮಾದರಿ ಬಳಕೆಯಾದರೆ ಆಶ್ಚರ್ಯಪಡಬೇಕಿಲ್ಲ. ಆದರೆ, ಮಾರ್ಕ್ ಜುಕರ್‌ಬರ್ಗ್‌ನಂಥ ಪ್ರಭಾವಿ ಟೆಕ್ ನಾಯಕನನ್ನು ಭಾರತದಂಥ ದೇಶಗಳಲ್ಲಿ ವಿಚಾರಣೆಗೆ ಒಳಪಡಿಸಲು ಸಾಧ್ಯವಿದೆಯೇ? 2018ರಲ್ಲಿ ಕೇಂಬ್ರಿಡ್ಜ್ ಅನಾಲಿಟಿಕಾದ ಮಾಹಿತಿ ಹಂಚಿಕೆಯ ಹಗರಣದ ಸಂಬಂಧ ಜುಕರ್‌ಬರ್ಗ್ ಅಮೆರಿಕದ ಕಾಂಗ್ರೆಸ್‌ನ ವಿಚಾರಣೆ ಎದುರಿಸಿದ್ದು ಮತ್ತು ವಿಚಾರಣೆ ವೇಳೆ ಸ್ವತಃ ಒಪ್ಪಿಕೊಂಡ ಸತ್ಯಗಳನ್ನು ನಾವು ಮರೆಯುವಂತಿಲ್ಲ.

'ನನ್ನಿಂದ ತಪ್ಪಾಗಿದೆ, ಕ್ಷಮಿಸಿ. ಫೇಸ್‌ಬುಕ್ ಆರಂಭಿಸಿದ್ದು ನಾನು, ಇಲ್ಲಿ ನಡೆಯುವುದಕ್ಕೆಲ್ಲವೂ ನಾನೇ ಹೊಣೆಗಾರ. ಸುಳ್ಳು ಸುದ್ದಿಯ ಹರಡುವಿಕೆ, ಚುನಾವಣಾ ಸಮಯದಲ್ಲಿ ವಿದೇಶಿ ಹಸ್ತಕ್ಷೇಪ, ದ್ವೇಷ ಭಾಷಣ ಮತ್ತು ಮಾಹಿತಿ ಗೌಪ್ಯತೆಯ ದುರ್ಬಳಕೆಗೆ ಫೇಸ್‌ಬುಕ್ ಬಳಕೆಯಾಗುತ್ತಿರುವುದನ್ನು ತಡೆಗಟ್ಟುವಲ್ಲಿ ನನ್ನ ಪ್ರಯತ್ನ ಸಾಲದೆಂದು ನನಗೀಗ ಸ್ಪಷ್ಟವಾಗಿದೆ' ಎಂಬ ಆತನ ಹೇಳಿಕೆ ತಾಂತ್ರಿಕ ತೊಡಕಿನಿಂದ ಉಂಟಾದ ಅಸಹಾಯಕತನವೇ ಅಥವಾ ಗೊತ್ತಿದ್ದೇ ಮಾಡಿದ ಅನೈತಿಕ ಮಾರುಕಟ್ಟೆ ತಂತ್ರಗಾರಿಕೆಯೇ?



ಈ ಕಣ್ಗಾವಲಿನ ಬಂಡವಾಳಶಾಹಿಯ ರತ್ನಗಳು ಈಗ ಸುದ್ದಿಯನ್ನು ಹಂಚುವ, ವೈರಲ್ ಮಾಡುವ ಪ್ರಮುಖ ವೇದಿಕೆಗಳಾಗಿವೆ. ಸುದ್ದಿ ಪತ್ರಿಕೆಗಳು, ನಿಯತಕಾಲಿಕೆಗಳು, ಟಿ.ವಿ. ವಾಹಿನಿಗಳಿಗಿಂತ ವೇಗವಾಗಿ ಮತ್ತು ಬೃಹತ್ ಪ್ರಮಾಣದಲ್ಲಿ ಜಗತ್ತಿನೆಲ್ಲೆಡೆ ವಿವಿಧ ಸಾರ್ವಭೌಮ ರಾಷ್ಟ್ರಗಳ ಆಂತರಿಕ ವಿಚಾರಗಳೆಲ್ಲವೂ ಅಮೆರಿಕ ಮೂಲದ ಈ ಟೆಕ್ ಮೊಘಲ್‌ಗಳ ನಿಯಂತ್ರಣದಲ್ಲಿರುವ ವೇದಿಕೆಗಳಲ್ಲಿ ಹಂಚಿಕೆಯಾಗುತ್ತಲಿವೆ.

ಮಾರಿಯಾ ರೆಸ್ಸಾ ಹೇಳುವಂತೆ, ಈ ಕಾರ್ಪೊರೇಟ್ ಕಂಪನಿಗಳು ಭಾರತ, ಶ್ರೀಲಂಕಾ, ಮ್ಯಾನ್ಮಾರ್ ಮತ್ತಿತರ ದೇಶಗಳಲ್ಲಿ ಸಾಂಪ್ರದಾಯಿಕ ಸುದ್ದಿ ಮಾಧ್ಯಮ ಸಂಸ್ಥೆಗಳ ಆದಾಯಕ್ಕೆ ಕತ್ತರಿ ಹಾಕುತ್ತಿರುವುದಷ್ಟೇ ಅಲ್ಲದೆ ಮಾರುಕಟ್ಟೆಗಳು ಮತ್ತು ಚುನಾವಣೆಗಳ ಅಡಿಪಾಯಗಳನ್ನೇ ಅಲುಗಾಡಿಸುತ್ತಿವೆ. ಇಂಥ ಕಂಪನಿಗಳೊಂದಿಗೆ ರಾಜಕೀಯ ಪಕ್ಷಗಳು ಒಳ ಒಪ್ಪಂದಗಳನ್ನು ಮಾಡಿಕೊಂಡಿದ್ದೇ ಆದಲ್ಲಿ ಪ್ರಜಾತಂತ್ರ ವ್ಯವಸ್ಥೆಗೆ ದೊಡ್ಡ ಕೊಡಲಿಪೆಟ್ಟು ಬೀಳಲಿದೆ. ಈ ಹಿನ್ನೆಲೆಯಲ್ಲಿ 'ಚಿಲುಮೆ' ಪ್ರಕರಣ ಮತ್ತು ಕೇಂಬ್ರಿಡ್ಜ್ ಅನಾಲಿಟಿಕಾ ದತ್ತಾಂಶ ಹಗರಣ ನಮಗೆಲ್ಲರಿಗೂ ಎಚ್ಚರಿಕೆಯ ಗಂಟೆಯಾಗಬೇಕು. ಹಿಂದೊಮ್ಮೆ ಕಾಸಿಗಾಗಿ ಸುದ್ದಿ ಭಾರತೀಯ ಚುನಾವಣಾ ವ್ಯವಸ್ಥೆಗೆ ತೀವ್ರ ಸವಾಲು ಒಡ್ಡಿತ್ತು. ಈಗ ಈ ಬೃಹತ್ ಕಾರ್ಪೊರೇಟ್‌ಗಳು ಮತ್ತು ಪ್ರಬಲ ರಾಜಕೀಯ ಶಕ್ತಿ ಕೇಂದ್ರಗಳ ಕಣ್ಗಾವಲಿನ ಜೊತೆಯಾಟ ಪ್ರಜಾತಂತ್ರ ವ್ಯವಸ್ಥೆಗೆ ಹೊಸ ವಿಪತ್ತನ್ನು ತಂದೊಡ್ಡಿರುವುದು ಸ್ಪಷ್ಟ. ❖

ಕಥೆ
ಜ್ಯೋತಿ ಅವರ ಮಾಮನ ದಾಳ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಅಕ್ಷತಾ ಕೃಷ್ಣಮೂರ್ತಿ ಅವರ ನದಿಗೂ ಕೆಲಸಗಳಿವೆ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಇಂಗ್ಲಿಷ್‌ನಲ್ಲಿ ವಿನೋದ

1. You are between city ಇದನ್ನು ನಾಲ್ಕೇ ಅಕ್ಷರಗಳಲ್ಲಿ ಬರೆಯಬಲ್ಲಿರಾ?
2. ಯಾವ ಎರಡು KEY ಗಳಿಂದ ಯಾವುದೇ ಬಾಗಿಲನ್ನು ತೆಗೆಯಲು ಸಾಧ್ಯವಿಲ್ಲ?
3. ಇಲ್ಲಿ ಕೊಟ್ಟ ಚೌಕಾಕೃತಿಯಲ್ಲಿ ಚೌಕಾಕಾರದಲ್ಲಿ ಇಂಗ್ಲಿಷ್ 26 ಅಕ್ಷರಗಳನ್ನು ನಾಲ್ಕೇ ಗೆರೆಗಳಲ್ಲಿ ಬರೆಯಬಲ್ಲಿರಾ?

ಅಕ್ಷರ ಆಟ

ನೀ ಎಷ್ಟು ಬಲ್ಲೆ?: 'ನೀ' ಎಂಬ ಅಕ್ಷರದಿಂದ ಪ್ರಾರಂಭವಾಗುವ ಎರಡಕ್ಷರದ ಎಂಟು ಪದಗಳನ್ನು ಪಟ್ಟಿ ಮಾಡಿ.

1 ನೀ–	4 ನೀ–	7 ನೀ–
2 ನೀ–	5 ನೀ–	8 ನೀ –
3 ನೀ –	6 ನೀ –	

ಗಣಿತದಲ್ಲಿ ಗರ್ದಿ ಗಮ್ಮತ್ತು

ಲೆಕ್ಕ ಮಾಡು – ಮೋಜು ನೋಡು

ಇಲ್ಲಿ ಕೊಟ್ಟಿರುವ ಪ್ರತಿ ಚೌಕದಲ್ಲಿ 0ಯಿಂದ 9ರವರೆಗೆ ಅಂಕಿಗಳನ್ನು ಒಮ್ಮೆ ಮಾತ್ರ ತುಂಬಿ ಒಂದು ಸಂಕಲನ ಲೆಕ್ಕ ಸರಿ ಹೊಂದಿಸಿ.

+	☐	☐	☐
	☐	☐	☐
☐	☐	☐	2

ವಿಶೇಷ ಸೂಚನೆ: ಸಹಾಯಕ್ಕಾಗಿ ಒಂದು ಅಂಕಿಯನ್ನು ನಾವೇ ತುಂಬಿದ್ದೇವೆ.

ಕಾಣದಂತೆ ಮಾಯವಾದವು ನಮ್ಮ ಮಕ್ಕಳ ಆಟಗಳು

ಹಳ್ಳಿಗಳಲ್ಲಿ ಮಕ್ಕಳ ಆಟಗಳು ಸಾಕಷ್ಟು ಬಳಕೆಯಲ್ಲಿದ್ದವು. ಅವು ಸುಲಭವಾಗಿ ಆಡಬಹುದಾದ ದುಬಾರಿಯಲ್ಲದ ಮನರಂಜನೆ ನೀಡುವ ದೇಹಕ್ಕೂ ಬುದ್ಧಿಗೂ ವ್ಯಾಯಾಮ ಕೊಡಬಲ್ಲ ಆಟಗಳಾಗಿದ್ದವು. ಈಗ ಅವು ಮಾಯವಾಗಿವೆ. ಈಗಿನ ಮಕ್ಕಳಿಗೆ ಇಂಥ ಆಟಗಳು ಇದ್ದವು ಎಂಬ ನೆನಪಿಗೆ ಈ ಆಟಗಳ ಪಟ್ಟಿ

(ವಿಶೇಷ ಸೂಚನೆ: ಆಟಗಳ ಬಗ್ಗೆ ಹೆಚ್ಚಿನ ವಿವರಣೆ ಬೇಕಿದ್ದಲ್ಲಿ ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಧಾರವಾಡ ಇವರ ಮಕ್ಕಳ ಜನಪದ ಆಟಗಳು ಪುಸ್ತಕ ನೋಡಿ.)

- ಕಣ್ಣಿಗೆ ಬಟ್ಟೆ ಕಟ್ಟಿ ಹಿಡಿಯುವ ಆಟ/ ಕಣ್ಕಟ್ಟಿ ಮುಟ್ಟಾಟ
- ಕತ್ತೆಗೆ ಬಾಲ ಹಚ್ಚುವ ಆಟ
- ಕರಕಂದುಕ
- ಕಲ್ಲೋ ಮಣ್ಣೋ ಆಟ
- ಕಪ್ಪೆ ಗುಪ್ಪೆಯಾಟ/ ಗುಬ್ಬಿ ಮನೆಯಾಟ
- ಕಪ್ಪೆ ಜಿಗಿತದ ಆಟ
- ಕಲರ್ ಕಲರ್ ವಾಟ್ ಕಲರ್
- ಕಳ್ಳ ಪೊಲೀಸ್ ಆಟ
- ಕಾರೆ ಬೀರೆ ಆಟ
- ಕಾಲೆಳೆಯೋ ಆಟ
- ಕಾಲ್‌ಚೆಂಡಿನಾಟ
- ಕಾವಲುಗಾರನ ಕೋಲು/ ನಾಯಿ ಮೂಳೆ ಆಟ
- ಕೀಗೊಂಬೆ ಆಟ/ ಸಿಹಿ– ಕಹಿ ಆಟ
- ಕೆರೆ – ದಡ ಆಟ
- ಕೊಳದ ಕಪ್ಪೆ
- ಕಂಬಳಿ ಹುಳುವಿನ ಓಟ
- ಕುಂಟರ ದಾಳಿ
- ಕುಂಟಾಟ/ ಕುಂಟಿ ಮುಟ್ಟು ಬಾ

ಡಿಶ್ಯಾ ಚಿತ್ರಕಥೆ: ನರಿ ಮತ್ತು ಹುಳಿ ದ್ರಾಕ್ಷಿ


• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ




ಅಡವಿಯಲ್ಲಿ ಒಂದು ದಿನ ನರಿಯು ತುಂಬಾ ಹಸಿದಿತ್ತು. ಹಸಿವಿನಿಂದ ಕಂಗಾಲಾಗಿ, ತಿನ್ನಲು ಏನಾದರೂ ಸಿಗುವುದೇ ಎಂದು ಹುಡುಕುತ್ತಾ ಅಲೆಯುತ್ತಿತ್ತು



ಹಾಗೆ ಅಲೆದಾಡುತ್ತಿದ್ದ ನರಿಗೆ ದ್ರಾಕ್ಷಿಹಣ್ಣಿನ ತೋಟ ದೂರದಿಂದ ಗೋಚರಿಸಿತು. ನಿಧಾನಕ್ಕೆ ಹತ್ತಿರ ಹೋಗಿ ದ್ರಾಕ್ಷಿ ಹಣ್ಣನ್ನು ತಿನ್ನಲು ಯತ್ನಿಸಿತು. ಆದರೆ, ದ್ರಾಕ್ಷಿ ಗೊಂಚಲು ತುಂಬಾ ಎತ್ತರದಲ್ಲಿತ್ತು. ಎಟಕುತ್ತಿರಲಿಲ್ಲ



ತುಂಬಾ ಹಸಿದಿದ್ದ ನರಿಯು ದ್ರಾಕ್ಷಿ ಗೊಂಚಲು ಕೀಳಲು ಎತ್ತರಕ್ಕೆ ಜಿಗಿಯಿತು. ಎಷ್ಟು ಜಿಗಿದರೂ ದ್ರಾಕ್ಷಿ ಎಟುಕಲೇ ಇಲ್ಲ. ನರಿಗೆ ತುಂಬಾ ಬೇಸರವಾಯಿತು



ಹಲವಾರು ಬಾರಿ ಜಿಗಿದ ನರಿಗೆ ಸುಸ್ತಾಯಿತು. ಇನ್ನು ವ್ಯರ್ಥ ಶ್ರಮಪಡಬಾರದು ಎಂದುಕೊಂಡಿತು. ಕೊನೆಗೆ ತನಗೆ ಸಿಗದ ದ್ರಾಕ್ಷಿಯು ತುಂಬಾ ಹುಳಿ ಎಂದು ಹೇಳಿಕೊಳ್ಳುತ್ತಾ, ನಿಧಾನವಾಗಿ ಕಾಡಿಗೆ ವಾಪಸ್ ಹೋಯಿತು.

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲಾಕ್ಷರಗಳಿಗೆ ಪಕ್ಕದಲ್ಲಿ ಕೊಟ್ಟಿರುವ ಸುಳಿವು ಆಧರಿಸಿ ಎರಡು ಅಕ್ಷರಗಳ ಹೊಸ ಪದ ರಚಿಸಿ

	ಮ	ಗ	ಸುಳಿವು
1			ಮಣ್ಣಿನಲ್ಲಿ ಸಣ್ಣ ಕೊಡ
2			ನಾಸಿಕ
3			ಮಾತು ಬಾರದವ
4			ತೀರು
5			ಕಂದ

ಅದಲು ಬದಲು ಕಂಚಿ ಕದಲು

ಇಲ್ಲಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಬೇರೊಂದು ಪದ ಮಾಡಿ

1. ಗುಟ್ಟುಮುರಿ
2. ಮನಗೆದ್ದು
3. ಗಡಿಕನ್ನ
4. ಜಾಲತಾಣ



ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ : 1 ಕಿವಿ 2 ಕೀವು 3 ಕವಿ 4 ಕೋವಿ 5 ಕಾವು

ಅದಲು ಬದಲು: 1 ನರಕಮಯ 2 ಬಸರಿಮರ 3 ಸೋಸರವಿ 4 ದಯಾಪರ

ಪದಸಂಕಲನ : 1 ಸರಿಸಮಾನ 2 ಕಂಬಳಿಹುಳ 3 ಕಲಾಭವನ 4 ಮಾನವಕುಲ 5 ಮರಕುಟಿಗ 6 ಅವಲೋಕನ 7 ಜಗದಗಲ 8 ಕನವರಿಕೆ



ಭೂತಂ ತೆಯ್ಯಂ



ವೀರ ಕಾಳಿ ತೆಯ್ಯಂ



ಕಿಜಕ್ಕರ ಚಾಮುಂಡಿ ತೆಯ್ಯಂ



ಕಂದಕರ್ಣನ್ ತೆಯ್ಯಂ

ತೆಯ್ಯಂಗಳ ಅಂಗಳದಲ್ಲಿ

ತೆಯ್ಯಂ ಅಥವಾ ತೆಯ್ಯಾಟ್ಟಂ ಉತ್ತರ ಕೇರಳದ ಧಾರ್ಮಿಕ ಸಂಸ್ಕಾರಗಳನ್ನೊಳಗೊಂಡ ಪ್ರಸಿದ್ಧ ನೃತ್ಯ ಕಲೆ. ಇದು ಕೊಲತನಾಡು ಪ್ರದೇಶದಲ್ಲಿ ಪ್ರಚಲಿತದಲ್ಲಿದೆ. ತೆಯ್ಯಂನ ಸೊಬಗನ್ನು ಕಣ್ತುಂಬಿಕೊಳ್ಳಲು ಹೋದಾಗಿನ ಅನುಭವದ ಟಿಪ್ಪಣಿಯೊಂದು ಇಲ್ಲಿದೆ.

ಚಿತ್ರ-ಲೇಖನ: ಶಶಿಧರಸ್ವಾಮಿ ಆರ್. ಹಿರೇಮಠ



ಕಂದನಾರ್ ಕೆಲನ್ ತೆಯ್ಯಂ

'ಕಾಂತಾರ'...'ಕಾಂತಾರ'...! ಸದ್ಯ ಎಲ್ಲಲ್ಲೂ ಈ ಚಲನಚಿತ್ರದ್ದೇ ಮಾತು. ಈ ಸಿನಿಮಾದ ಅಂತ್ಯದಲ್ಲಿ ಬರುವ ದೈವಾರಾಧನೆಯ ದೃಶ್ಯಗಳಲ್ಲಿ 'ಪಂಜುರ್ಲಿ' ಮತ್ತು 'ಗುಳಿಗ' ದೈವದ ಅಬ್ಬರ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿ ಎದ್ದು ನಿಂತು ಕೈಮುಗಿಯುವಂತೆ ಮಾಡುತ್ತದೆ. ದೈವದ ಶಕ್ತಿಯೇ ಅಂಥದ್ದು. ಇದು ಕನ್ನಡದ ಕಾಂತಾರದ ಸನ್ನಿವೇಶವಾದರೆ ನಾನು ಈಗ ಹೇಳ ಹೊರಟಿರುವುದು ತುಳುನಾಡಿನ ದೈವಾರಾಧನೆಯಂತೆಯೇ ಕೇರಳದ ಕೊಲತನಾಡಿನಲ್ಲಿ ನಡೆಯುವ ತೆಯ್ಯಂ ಕುರಿತು.

ನಾನು ಕೊಲತನಾಡು ತಲುಪಿದಾಗ ತಡರಾತ್ರಿ 2 ಗಂಟೆಯಾಗಿತ್ತು. ಆ ಸರಿರಾತ್ರಿಯಲ್ಲೂ ಜನಸಾಗರವೇ ಅಲ್ಲಿ ತುಂಬಿತ್ತು. ನೋಡುಗರು ತಮ್ಮ ಉಸಿರು ಬಿಗಿಹಿಡಿದುಕೊಂಡು 'ಕಂಟಾರ್ ಕೇಳನ್ ತೆಯ್ಯಂ'ನ ನಿರೀಕ್ಷೆಯಲ್ಲಿದ್ದರು. ಸಣ್ಣ ದೇವಸ್ಥಾನದ ಮುಂದಿರುವ ಆವರಣದ ಜಾಗದಲ್ಲಿ ಜನರು ಭಕ್ತಿಯಿಂದ ಭಾವಪರವಶರಾಗಿ ನಿಂತು ನೋಡುತ್ತಿದ್ದರು. ಪುರೋಹಿತರು ತಾಳೆಗರಿಗಳ ಪಂಜುಗಳನ್ನು ಬೆಳಗಿಸಿ, ಗಾಳಿಯಲ್ಲಿ ಬೆಂಕಿಯನ್ನು ಹಾರಿಸುತ್ತಾ ಅಲ್ಲಿ ಹಾಕಿರುವ ಒಣತೆಂಗಿನಗರಿಗಳ ರಾಶಿಗೆ ಬೆಂಕಿಯನ್ನು ಹಾಕಿದರು. ಅದು ಮೇಲಕ್ಕೆ ಚಿಮ್ಮಿ ಹೊತ್ತಿ ಉರಿಯತೊಡಗಿತು. ಇದ್ದಕ್ಕಿದ್ದಂತೆ ಚೆಂಡೆ, ಮದ್ದಳೆ, ದುಡಿ ಹಿಮ್ಮೇಳದ ಸದ್ದು ಜೋರಾಯಿತು. ಆಗ ಪಾತ್ರಿಗೆ ದೈವದ ಆವೇಶವಾಯಿತು. ತಕ್ಷಣವೇ ಇಬ್ಬರು ಪುರೋಹಿತರು 'ಕಂಟಾರ್ ಕೇಳನ್ ತೆಯ್ಯಂ' ಹಿಡಿದುಕೊಂಡು ಬಂದರು. ಆ ತೆಯ್ಯಂ ಉರಿಯುವ ಬೆಂಕಿಯ ರಾಶಿಯಲ್ಲಿ ಜಿಗಿದು ಇತ್ತ ಬಂದು, ಮತ್ತೆ ಮರಳಿ ಆ ಬೆಂಕಿಯ ರಾಶಿಗೆ ಜಿಗಿದಾಡುತ್ತಾ ಬೆಂಕಿಯೊಂದಿಗೆ ಆಟವಾಡಿತು. ನೆರೆದಿದ್ದವರೆಲ್ಲರೂ ವಿಸ್ಮಯ ಭಾವವನ್ನು ಮನದಲ್ಲಿ ತುಂಬಿಕೊಂಡು ಆಶೀರ್ವಾದಕ್ಕಾಗಿ ಕಾಯುತ್ತಿದ್ದರು. ಹೌದು, ಈ ದೈವದ ಆಚರಣೆಯೇ ಹಾಗೆ. ಅದು ತುಳುನಾಡಿನ ಭೂತಾರಾಧನೆಯ ದೈವವಾದರೂ ಸರಿಯೇ ಅಥವಾ ಕೊಲತನಾಡಿನ ತೆಯ್ಯಂ ಆದರೂ ಸರಿಯೇ. ಇದೊಂದು ರೋಮಾಂಚನ ಅನುಭವ.



ವಿಷ್ಣುಮೂರ್ತಿ

ತೆಯ್ಯಂ ಅಥವಾ ತೆಯ್ಯಾಟ್ಟಂ ಉತ್ತರ ಕೇರಳದ ಧಾರ್ಮಿಕ ಸಂಸ್ಕಾರಗಳನ್ನೊಳಗೊಂಡ ಪ್ರಸಿದ್ಧ ನೃತ್ಯ ಕಲೆ. ಇದು ಕೊಲತನಾಡು (ಈಗಿನ ಕಾಸರಗೋಡು ಮತ್ತು ಕಣ್ಣೂರು ಜಿಲ್ಲೆಗಳು) ಪ್ರದೇಶದಲ್ಲಿ ಪ್ರಚಲಿತದಲ್ಲಿದೆ. ಶತಮಾನಗಳಷ್ಟು ಹಳೆಯದಾದ ಸಂಪ್ರದಾಯ, ಪರಂಪರೆ ಮತ್ತು ರೂಢಿಗಳೊಂದಿಗೆ ಬಳಕೆಯಲ್ಲಿರುವ ಈ ವಿಧಿವಿಧಾನ ಕೈಂಕರ್ಯ ಬಹುಮಟ್ಟಿಗೆ ಎಲ್ಲಾ ಜಾತಿ ವರ್ಗದವರ ಮೇಲೆ ತನ್ನ ಛಾಪನ್ನು ಮೂಡಿಸಿದೆ. ತೆಯ್ಯಂ ಎಂಬುವುದು ದೈವಂ ಎಂಬ ಸಂಸ್ಕೃತ ಶಬ್ದದ ಅಪಭ್ರಂಶ. ಅಂದರೆ ದೈವಂ ಶಬ್ದದ ಮಲಯಾಳಂ ರೂಪವೇ ತೆಯ್ಯಂ. ನೃತ್ಯ ಮತ್ತು ಸಂಗೀತದ ಅಪರೂಪ ಸಂಯೋಜನೆ ಇದಾಗಿದೆ. ದೇವಕೂತ್ತು ತೆಯ್ಯಂ ಅನ್ನು ಹೊರತುಪಡಿಸಿ ಎಲ್ಲ ತೆಯ್ಯಂಗಳನ್ನು ಪುರುಷರು ನಿರ್ವಹಿಸುತ್ತಾರೆ. ಅಂದರೆ ದೇವಕೂತ್ತು ತೆಯ್ಯಂ ಮಹಿಳೆಯರು ನಡೆಸುವ ಏಕೈಕ ತೆಯ್ಯಂ ಆಚರಣೆಯಾಗಿದೆ. ಇದನ್ನು ತೆಕ್ಕುಂಬಾಡ್ ಕೂಲಂ ದೇವಸ್ಥಾನದಲ್ಲಿ ಮಾತ್ರ ನಡೆಸಲಾಗುತ್ತದೆ.

ತೆಯ್ಯಂ ಇಲ್ಲಿನ ಮೂಲ ನಿವಾಸಿ ಮತ್ತು ಆದಿವಾಸಿ ಬುಡಕಟ್ಟುಗಳ ಆರಾಧನಾ ಸಂಪ್ರದಾಯ. ತೆಯ್ಯಂ ನೃತ್ಯದ ಹೊಣೆಗಾರಿಕೆಯನ್ನು ಇಲ್ಲಿನ ಪ್ರತ್ಯೇಕ ಪಾನನ್, ವೇಲನ್ ಹಾಗೂ ಮಲಯನ್ ಸಮುದಾಯಕ್ಕೆ ಪರಶುರಾಮ ವಹಿಸಿಕೊಟ್ಟ. ಆತನೇ ಈ ಉತ್ಸವಗಳ ಜನಕ ಎಂಬ ನಂಬಿಕೆ ಇಲ್ಲಿನ ಜನರದ್ದು.

ಪ್ರಾಚೀನ ಕಾಲದಲ್ಲಿ 500ಕ್ಕೂ ಹೆಚ್ಚು ತೆಯ್ಯಂಗಳನ್ನು ಪ್ರದರ್ಶಿಸಲಾಗುತ್ತಿತು. ಈಗ ಅವುಗಳ ಆಚರಣೆಗಳ ಸಂಖ್ಯೆ 120 ಮಾತ್ರ. ಭೂತಂ, ಗುಳಿಕನ್ (ತೆಕ್ಕನ್ ಗುಳಿಕನ್), ಕಂದನಾರ್ ಕೆಲನ್, ಕಂದಕರ್ಣನ್, ಕಿಜಕ್ಕರ ಚಾಮುಂಡಿ, ಕುಟ್ಟಿಚಾತನ್, ತೈಪರದೇವತಾ, ವೀರಕಾಳಿ, ವಿಷ್ಣುಮೂರ್ತಿ, ಭಗವತಿ, ಅಕ್ಕ ಚಾಮುಂಡಿ, ಆಲಿ ತೆಯ್ಯಂ, ಬ್ರಾಹ್ಮಣಮೂರ್ತಿ, ಪಟ್ಟೆನ್ ಚಾಮುಂಡಿ, ತೀಚಾಮುಂಡಿ, ರಕ್ತಚಾಮುಂಡಿ ತೆಯ್ಯಂಗಳು ಪ್ರಸಿದ್ಧ. ಅಕ್ಟೋಬರ್‌ನಲ್ಲಿ ಪ್ರಾರಂಭವಾಗಿ ಮಾರ್ಚ್ ತಿಂಗಳವರೆಗೆ ಈ ತೆಯ್ಯಂ ದೈವಾಚರಣೆಗಳು ಕಾಸರಗೋಡು ಮತ್ತು ಕಣ್ಣೂರು ಜಿಲ್ಲೆಯ ಪ್ರದೇಶಗಳಲ್ಲಿ ನಡೆಯುತ್ತವೆ.



ನಾಕೌಟ್ ತಲುಪಿದ ಫ್ರಾನ್ಸ್

ಕೈಲಿಯನ್ ಎಂಬಾಪೆ ಎರಡು ಗೋಲು

ದೋಹಾ (ರಾಯಿಟರ್ಸ್): ಫ್ರಾನ್ಸ್ ತಂಡವು ಈ ಬಾರಿಯ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 16ರ ಘಟ್ಟ ತಲುಪಿದ ಮೊದಲ ತಂಡ ಎನಿಸಿಕೊಂಡಿತು. ಎರಡು ಗೋಲು ಗಳಿಸಿದ ತಾರಾ ಆಟಗಾರ ಕೈಲಿಯನ್ ಎಂಬಾಪೆ ಗೆಲುವಿನ ರೂವಾರಿಯಾದರು.

ಶನಿವಾರ ರಾತ್ರಿ ಇಲ್ಲಿ ನಡೆದ ಡಿ ಗುಂಪಿನ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಫ್ರಾನ್ಸ್ 2–1ರಿಂದ ಡೆನ್ಮಾರ್ಕ್ ತಂಡಕ್ಕೆ ಸೋಲುಣಿಸಿತು. ಗುಂಪಿನಲ್ಲಿ ಆರು ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನದೊಂದಿಗೆ ನಾಕೌಟ್‌ಗೆ ಅರ್ಹತೆ ಪಡೆಯಿತು.

ಜಿದ್ದಾಜಿದ್ದಿನ ಪಂದ್ಯದ ಮೊದಲಾರ್ಧ ಗೋಲುರಹಿತವಾಗಿತ್ತು. 61ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿದ ಎಂಬಾಪೆ ಫ್ರಾನ್ಸ್ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಆದರೆ ಇದಾದ ಏಳು ನಿಮಿಷದಲ್ಲೇ ಡೆನ್ಮಾರ್ಕ್ ತಿರುಗೇಟು ನೀಡಿತು. ಆ್ಯಂಡ್ರಿಯಾಸ್ ಕ್ರಿಸ್ಟೆನ್ಸನ್ ಹೆಡರ್ ಮೂಲಕ ಗಳಿಸಿದ ಗೋಲು ಸಮಬಲಕ್ಕೆ ಕಾರಣವಾಯಿತು. ಫ್ರಾನ್ಸ್ ಗೋಲುಕೀಪರ್ ಹ್ಯುಗೊ ಲಾರಿಸ್ ಅವರನ್ನು ವಂಚಿಸಿದ ಚೆಂಡು ಗೋಲ್‌ಪೋಸ್ಟ್ ಸೇರಿತು.

86ನೇ ನಿಮಿಷದಲ್ಲಿ ಅಂಟೊನಿಯೊ ಗ್ರೀಜ್‌ಮನ್ ನೀಡಿದ ಕ್ರಾಸ್‌ನಲ್ಲಿ ಸುಂದರ ಗೋಲು ಹೊಡೆದ ಎಂಬಾಪೆ ಫ್ರಾನ್ಸ್ ಅಭಿಮಾನಿಗಳ ಸಂಭ್ರಮಕ್ಕೆ ಕಾರಣರಾದರು.

ಮುಖ್ಯಾಂಶಗಳು

- 2–1ರಿಂದ ಡೆನ್ಮಾರ್ಕ್ ತಂಡಕ್ಕೆ ಸೋಲುಣಿಸಿದ ಫ್ರಾನ್ಸ್
- ಡಿ ಗುಂಪಿನಲ್ಲಿ 6 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನ

ಗೋಲುಗಳ ವಿವರ

ಫ್ರಾನ್ಸ್–2
ಕೈಲಿಯನ್ ಎಂಬಾಪೆ (61 ಮತ್ತು 86ನೇ ನಿಮಿಷ)

ಡೆನ್ಮಾರ್ಕ್–1
ಆ್ಯಂಡ್ರಿಯಾಸ್ ಕ್ರಿಸ್ಟೆನ್ಸನ್ (68ನೇ ನಿಮಿಷ)



ಕೈಲಿಯನ್ ಎಂಬಾಪೆ– ಎಎಫ್‌ಪಿ ಚಿತ್ರ

ಸೌದಿ ಅರೇಬಿಯಾಕ್ಕೆ ಸೋಲಿನ ಕಹಿ; ರಾಬರ್ಟ್, ಯೊಟ್ ಜಿಲಿನಸ್ಕಿ ಗೋಲು

16ರ ಘಟ್ಟದ ಸನಿಹ ಪೋಲೆಂಡ್

ಅಲ್ ರೆಯಾನ್, ಕತಾರ್ (ರಾಯಿಟರ್ಸ್): ವಿಶ್ವಕಪ್ ಟೂರ್ನಿಯಲ್ಲಿ ತಮ್ಮ ಮೊದಲ ಗೋಲು ದಾಖಲಿಸಿದ ರಾಬರ್ಟ್ ಲೆವಾಂಡೊವಸ್ಕಿ ನೆರವಿನಿಂದ ಪೋಲೆಂಡ್ ಸೌದಿ ಅರೇಬಿಯಾ ಎದುರು ಗೆದ್ದಿತು. ಇದರೊಂದಿಗೆ ನಾಕೌಟ್ ಹಂತದ ಸನಿಹಕ್ಕೆ ಸಾಗಿತು.

ಶನಿವಾರ ನಡೆದ ಸಿ ಗುಂಪಿನ ಪಂದ್ಯದಲ್ಲಿ ಪೋಲೆಂಡ್ 2–0ಯಿಂದ ಸೌದಿಗೆ ಸೋಲುಣಿಸಿತು. ತನ್ನ ಮೊದಲ ಪಂದ್ಯದಲ್ಲಿ ಲಯೊನೆಲ್ ಮೆಸ್ಸಿಯ ಅರ್ಜೆಂಟೀನಾ ತಂಡವನ್ನು ಮಣಿಸಿದ್ದ ಸೌದಿ ಆತ್ಮವಿಶ್ವಾಸದ ಆಗಸದಲ್ಲಿತ್ತು. ಈ ಪಂದ್ಯದಲ್ಲಿಯೂ ಹುಮ್ಮಸ್ಸಿನೊಂದಿಗೆ ಕಣಕ್ಕಿಳಿದಿತ್ತು. ಆದರೆ, ಪೋಲೆಂಡ್ ಆಟಗಾರರು ಯಾವುದೇ ಹಂತದಲ್ಲಿಯೂ ಹಿಡಿತ ಸಡಿಲು ಮಾಡಲಿಲ್ಲ.

ತನ್ನ ಮೊದಲ ಪಂದ್ಯದಲ್ಲಿ ಮೆಕ್ಸಿಕೊ ಎದುರು ಡ್ರಾ ಮಾಡಿಕೊಂಡಿದ್ದ ಪೋಲೆಂಡ್ ತಂಡಕ್ಕೆ ಸೌದಿ ಅರೇಬಿಯಾ ಎದುರಿನ ಜಯವು ಮಹತ್ವದ್ದಾಗಿದೆ. ತಂಡದ ಖಾತೆಯಲ್ಲಿ ಈಗ ಒಟ್ಟು ನಾಲ್ಕು ಅಂಕಗಳಿವೆ. ತನ್ನ ಮೂರನೇ ಮತ್ತು ಕೊನೆಯ ಪಂದ್ಯದಲ್ಲಿ ಅರ್ಜೆಂಟೀನಾವನ್ನು ಎದುರಿಸಲಿದೆ. ಅದರಲ್ಲಿ ಡ್ರಾ ಸಾಧಿಸಿದರೂ ಪೋಲೆಂಡ್ ತಂಡವು ನಾಕೌಟ್ ಹಂತ ತಲುಪುವುದು.

ಪಂದ್ಯದ 39ನೇ ನಿಮಿಷ ಪಿಯೊಟ್ ಜಿಲಿನಸ್ಕಿ ಮೊದಲ ಗೋಲು ಹೊಡೆದರು. ಇದರೊಂದಿಗೆ ತಂಡವು ಮೊದಲಾರ್ಧದಲ್ಲಿ 1–0 ಮುನ್ನಡೆ ಗಳಿಸಿತು.

ಎರಡನೇ ಅವಧಿಯಲ್ಲಿ ಸೌದಿ ಆಟಗಾರರು ಒಂದಿಷ್ಟು ಪ್ರತಿರೋಧ ಒಡ್ಡಿದರು. ಚುರುಕಾದ ಪಾಸ್‌ಗಳನ್ನು ನೀಡಿದರು. ಸುಮಾರು ಐದು ಬಾರಿ ಗೋಲ್‌ಪೋಸ್ಟ್ ಸನಿಹ ಹೋಗಿ ವಿಫಲರಾದರು. ಪೋಲೆಂಡ್ ರಕ್ಷಣಾ ಆಟಗಾರರು 'ಉಕ್ಕಿನ ಗೋಡೆ'ಯಂತೆ ಅಡ್ಡ ನಿಂತಿದ್ದರಿಂದ ಸೌದಿ ಆಟಗಾರರ ಪ್ರಯತ್ನಗಳು ಫಲಗೊಡಲಿಲ್ಲ.

82ನೇ ನಿಮಿಷದಲ್ಲಿ ಲೆವಾಂಡೊವಸ್ಕಿ ಕಾಲ್ಚಳಕ ಮೆರೆದರು. ತಮ್ಮ ಮೊಣಕಾಲಿನೆತ್ತರಕ್ಕೆ ಬಂದ ಚೆಂಡನ್ನು ಕಿಕ್ ಮಾಡಿ ಗುರಿ ಸೇರಿಸಿದರು.

ಈ ಹಿಂದಿನ ವಿಶ್ವಕಪ್ ಟೂರ್ನಿಗಳೂ ಸೇರಿದಂತೆ ಲೆವಾಂಡೊವಸ್ಕಿ ಒಟ್ಟು ನಾಲ್ಕು ಪಂದ್ಯಗಳನ್ನು ಆಡಿದ್ದಾರೆ. ಆದರೆ ಗೋಲು ಗಳಿಸಿರಲಿಲ್ಲ. ಅವರ ಆಸೆ ಇಲ್ಲಿ ಈಡೇರಿತು.



ಪೋಲೆಂಡ್‌ನ ರಾಬರ್ಟ್ ಲೆವಾಂಡೊವಸ್ಕಿ ಚೆಂಡನ್ನು ಗೋಲ್‌ಪೋಸ್ಟ್‌ಗೆ ಕಿಕ್ ಮಾಡುವುದನ್ನು ತಪ್ಪಿಸಲು ಯತ್ನಿಸಿದ ಸೌದಿ ಅರೇಬಿಯಾದ ಗೋಲ್‌ಕೀಪರ್ ಮೊಹಮ್ಮದ್ ಅಲ್ ಒವೈಸ್–ಎಎಫ್‌ಪಿ ಚಿತ್ರ

12 ವರ್ಷಗಳ ಬಳಿಕ ವಿಶ್ವಕಪ್ ಟೂರ್ನಿಯಲ್ಲಿ ಆಸ್ಟ್ರೇಲಿಯಾಕ್ಕೆ ಜಯ

ಡ್ಯೂಕ್ ಗೋಲು: ಟುನೀಷಿಯಾಗೆ ಸೋಲು

ಅಲ್ ವಕ್ರಾ, ಕತಾರ್ (ರಾಯಿಟರ್ಸ್): ಮಿಚೆಲ್ ಡ್ಯೂಕ್, ಹೆಡರ್ ಮೂಲಕ ಗಳಿಸಿದ ಸೊಗಸಾದ ಗೋಲಿನ ಬಲದಿಂದ ಆಸ್ಟ್ರೇಲಿಯಾ ತಂಡವು ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಜಯದ ಸಂಭ್ರಮ ಆಚರಿಸಿತು.

ಶನಿವಾರ ಇಲ್ಲಿಯ ಅಲ್ ಜನಾಬ್ ಕ್ರೀಡಾಂಗಣದಲ್ಲಿ ನಡೆದ ಡಿ ಗುಂಪಿನ ಹಣಾಹಣಿಯಲ್ಲಿ ಕಾಂಗರೂ ನಾಡಿನ ಬಳಗ 1–0ಯಿಂದ ಟುನೀಷಿಯಾ ತಂಡಕ್ಕೆ ಸೋಲುಣಿಸಿತು. ವಿಶ್ವಕಪ್ ಟೂರ್ನಿಯಲ್ಲಿ ಇದು ಆಸ್ಟ್ರೇಲಿಯಾ ತಂಡಕ್ಕೆ 12 ವರ್ಷಗಳ ಬಳಿಕ ದೊರೆತ ಮೊದಲ ಜಯವಾಗಿದೆ. 2010ರಲ್ಲಿ ಸರ್ಬಿಯಾ ತಂಡವನ್ನು ಮಣಿಸಿದ ಬಳಿಕ ಆ ತಂಡಕ್ಕೆ ಗೆಲುವು ಒಲಿದಿರಲಿಲ್ಲ.

ಈ ಗೆಲುವಿನೊಂದಿಗೆ ಆಸ್ಟ್ರೇಲಿಯಾದ ನಾಕೌಟ್ ಪ್ರವೇಶಕ್ಕೆ ಬಲ ಲಭಿಸಿತು. ಸದ್ಯ ಮೂರು ಪಾಯಿಂಟ್ಸ್ ಗಳಿಸಿರುವ ತಂಡವು ವಿಶ್ವ ಚಾಂಪಿಯನ್ ಫ್ರಾನ್ಸ್ ತಂಡಕ್ಕಿಂತ ಮೂರು ಪಾಯಿಂಟ್ಸ್ ಹಿಂದಿದೆ.

ಪಂದ್ಯದ 23ನೇ ನಿಮಿಷದಲ್ಲಿ ಕ್ರೇಗ್ ಗುಡ್‌ವಿನ್ ಎಡಗಡೆದಿಂದ ನೀಡಿದ ಕ್ರಾಸ್ ಟುನೀಷಿಯಾದ ಡಿಫೆಂಡರ್‌ನನ್ನು ದಾಟಿತು. ಆಗ ಅತ್ಯಂತ ಚುರುಕಿನಿಂದ ಮಿಚೆಲ್ ಚೆಂಡನ್ನು ಹೆಡರ್ ಮಾಡಿದರು. ಗೋಲ್‌ಕೀಪರ್ ಆಯಮೆನ್ ದಹಮನ್ ಅವರನ್ನು ವಂಚಿಸಿದ ಚೆಂಡು ಅತ್ಯಂತ ವೇಗವಾಗಿ ಗುರಿ ಸೇರಿತು.

ಮೊದಲಾರ್ಧ ಮುಕ್ತಾಯಕ್ಕೆ ಮೊದಲು ಟುನೀಷಿಯಾ ತಂಡಕ್ಕೆ ಗೋಲು ಗಳಿಸುವ ಎರಡು ಅವಕಾಶಗಳಿದ್ದವು. ಮೊಹಮ್ಮದ್ ದ್ರೇಗರ್ ಅವರು ಒಡ್ಡ ಚೆಂಡನ್ನು ಆಸ್ಟ್ರೇಲಿಯಾದ ಹ್ಯಾರಿ ಶೌಟರ್ ಬ್ಲಾಕ್ ಮಾಡಿದರು. ಎರಡನೇ ಪ್ರಯತ್ನದಲ್ಲಿ ನಾಯಕ ಯೂಸುಫ್ ಸಾಕ್ನಿ ನಡೆಸಿದ ಪ್ರಯತ್ನದಲ್ಲಿ ಚೆಂಡು ಗೋಲ್‌ಪೋಸ್ಟ್‌ನಿಂದ ದೂರ ಹೋಯಿತು.

68ನೇ ನಿಮಿಷದಲ್ಲಿ ಟುನಿಷೀಯಾ ತನ್ನ ಪ್ರಮುಖ ಆಟಗಾರ ವಹಾಬಿ ಖಜ್ರಿ ಅವರನ್ನು ಬದಲಿ ಆಟಗಾರನಾಗಿ ಕರೆತಂದರೂ ಆಸ್ಟ್ರೇಲಿಯಾದ ಡಿಫೆನ್ಸ್ ವಿಭಾಗವನ್ನು ಭೇದಿಸಲು ಆಗಲಿಲ್ಲ. ಟ್ಯೂನಿಷಿಯಾದ ಮೂವರು ಆಟಗಾರರು ಈ ಪಂದ್ಯದಲ್ಲಿ ಹಳದಿ ಕಾರ್ಡ್ ದರ್ಶನ ಮಾಡಿದರು.

ಇದೇ ಕ್ರೀಡಾಂಗಣದಲ್ಲಿ ತನ್ನ ಮೊದಲ ಪಂದ್ಯ ಆಡಿದ್ದ ಆಸ್ಟ್ರೇಲಿಯಾ ತಂಡವು 1–4ರಿಂದ ಫ್ರಾನ್ಸ್ ತಂಡಕ್ಕೆ ಮಣಿದಿತ್ತು.

ಟುನೀಷಿಯಾ ತಂಡವು ಮುಂದಿನ ಪಂದ್ಯದಲ್ಲಿ ಫ್ರಾನ್ಸ್ ಎದುರು ಆಡಲಿದೆ. ಆಸ್ಟ್ರೇಲಿಯಾ ತಂಡಕ್ಕೆ ಡೆನ್ಮಾರ್ಕ್ ಸವಾಲು ಎದುರಾಗಿದೆ.

ಮುಖ್ಯಾಂಶಗಳು

- ಆಸ್ಟ್ರೇಲಿಯಾದ ನಾಕೌಟ್ ಹಂತ ಪ್ರವೇಶಕ್ಕೆ ಬಲ
- ಟುನೀಷಿಯಾದ ಮೂವರು ಆಟಗಾರರಿಗೆ ಹಳದಿ ಕಾರ್ಡ್
- 2010ರಲ್ಲಿ ಸರ್ಬಿಯಾಗೆ ಸೋಲುಣಿಸಿದ್ದ ಆಸ್ಟ್ರೇಲಿಯಾ

ಗೋಲುಗಳ ವಿವರ

ಆಸ್ಟ್ರೇಲಿಯಾ 1 (ಮಿಚೆಲ್ ಡ್ಯೂಕ್, 23ನೇ ನಿಮಿಷ)

ಟ್ಯೂನಿಷಿಯಾ 0



ಇಂಗ್ಲೆಂಡ್‌ನ ಜಾನ್ ಸ್ಟೋನ್ಸ್ (ಎಡ) ಮತ್ತು ಅಮೆರಿಕದ ಕ್ರಿಸ್ಟಿಯನ್ ಪುಲಿಸಿಚ್ ನಡುವೆ ಚೆಂಡಿಗಾಗಿ ಪೈಪೋಟಿ– ಎಎಫ್‌ಪಿ ಚಿತ್ರ

ಅಮೆರಿಕ–ಇಂಗ್ಲೆಂಡ್ ಪಂದ್ಯ ಡ್ರಾ

ಅಲ್ ಖೋರ್, ಕತಾರ್ (ಎಎಫ್‌ಪಿ): ವಿಶ್ವಕಪ್ ಟೂರ್ನಿಯಲ್ಲಿ ಅಮೆರಿಕ ತಂಡವನ್ನು ಸೋಲಿಸುವ ಇಂಗ್ಲೆಂಡ್ ತಂಡದ ಕನಸು ಇಲ್ಲಿಯೂ ಈಡೇರಲಿಲ್ಲ. ಅಲ್ ಬೈತ್ ಕ್ರೀಡಾಂಗಣದಲ್ಲಿ ದಿಟ್ಟ ಆಟವಾಡಿದ ಅಮೆರಿಕ ಗೋಲುರಹಿತ ಡ್ರಾ ಸಾಧಿಸಿತು.

ಶುಕ್ರವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ ಗೆದ್ದಿದ್ದರೆ ಸುಲಭ ವಾಗಿ 16ರ ಘಟ್ಟ ತಲುಪುತ್ತಿತ್ತು. ನ.29ರಂದು ನಡೆಯುವ ವೇಲ್ಸ್ ಎದುರಿನ ಬಿ ಗುಂಪಿನ ಪಂದ್ಯದಲ್ಲಿ ಗೆಲುವು ಅಥವಾ ಡ್ರಾ ಸಾಧಿಸಿದರೆ ಹ್ಯಾರಿ ಕೇನ್ ನಾಯಕತ್ವದ ತಂಡ ನಾಕೌಟ್ ತಲುಪಲಿದೆ.

ಇಂಗ್ಲೆಂಡ್‌ಗೆ ಈ ಪಂದ್ಯದಲ್ಲಿ ಒಂದು ಬಾರಿ ಮಾತ್ರ ಚೆಂಡನ್ನು ಗುರಿಯ ಹತ್ತಿರಕ್ಕೆ ಸಾಗಿಸಲು ಸಾಧ್ಯವಾಯಿತು. ಮೊದಲಾರ್ಧದ ಅವಧಿಯಲ್ಲಿ ಚೆಂಡು ಹೆಚ್ಚು ಹೊತ್ತು ಅಮೆರಿಕ ಆಟಗಾರರ ನಿಯಂತ್ರಣದಲ್ಲಿತ್ತು.ಅಮೆರಿಕ ತಂಡವೂ ಎರಡ್ಮೂರು ಅವಕಾಶಗಳನ್ನು ಸೃಷ್ಟಿಸಿಕೊಂಡಿತ್ತು. ಆದರೆ ಯಶಸ್ಸು ಸಾಧ್ಯವಾಗಲಿಲ್ಲ. ಪಂದ್ಯದ 87ನೇ ನಿಮಿಷದಲ್ಲಿ ಇಂಗ್ಲೆಂಡ್ ಮಾರ್ಕಸ್ ರ‍್ಯಾಷ್‌ಫೋರ್ಡ್‌ಗೆ ಗೋಲು ಗಳಿಸುವ ಉತ್ತಮ ಅವಕಾಶವಿತ್ತು. ಆದರೆ ಎದುರಾಳಿ ಗೋಲ್‌ಕೀಪರ್ ಮ್ಯಾಟರ್ ಟರ್ನರ್ ತಡೆಗೋಡೆಯನ್ನು ದಾಟಲು ಸಾಧ್ಯವಾಗಲಿಲ್ಲ.

ಈ ಹಿಂದೆ ಎರಡು ಬಾರಿ ಮುಖಾಮುಖಿಯಾಗಿದ್ದಾಗ ಅಮೆರಿಕ ಒಂದು ಬಾರಿ 1–0ಯಿಂದ ಗೆದ್ದರೆ, ಮತ್ತೊಂದು ಬಾರಿ 1–1ರಿಂದ ಡ್ರಾ ಸಾಧಿಸಿತ್ತು.

ಎಸ್‌ಯುವಿ ಕಾರಿನಲ್ಲಿ 'ಏಕಾಂಗಿ' ಪ್ರಯಾಣ

ನಾಝಿ ತಮ್ಮ ಕಾರನ್ನು ಕೂಡ ವಿಶೇಷವಾಗಿ ವಿನ್ಯಾಸಗೊಳಿಸಿದ್ದಾರೆ. ಅದರಲ್ಲಿ ಸುಸಜ್ಜಿತವಾದ ಅಡುಗೆಮನೆ ಇದೆ.

ಮೆಸ್ಸಿ ನೋಡಲು ಐದು ಮಕ್ಕಳ ತಾಯಿಯ ಪಯಣ

ದುಬೈ (ಪಿಟಿಐ): ಅರ್ಜೆಂಟೀನಾ ಆಟಗಾರ ಲಯೊನೆಲ್ ಮೆಸ್ಸಿ ಅವರ ಆಟ ನೋಡಲು ಕೇರಳದ ಐವರು ಮಕ್ಕಳ ತಾಯಿ ನಾಝಿ ನೌಶಿ ಎಂಬುವವರು ತಮ್ಮ ಎಸ್‌ಯುವಿ ಕಾರಿನಲ್ಲಿ 'ಏಕಾಂಗಿ ಪ್ರಯಾಣ' ಮಾಡಿ ಇಲ್ಲಿಗೆ ಬಂದಿದ್ದಾರೆ.

ನಾಝಿ ಅವರು ಅಕ್ಟೋಬರ್ 15ರಿಂದಲೇ ಕೇರಳದಿಂದ ಕೊಲ್ಲಿ ರಾಷ್ಟ್ರಗಳ ಪ್ರವಾಸ ಆರಂಭಿಸಿದ್ದರು. ಯುನೈಟೆಡ್ ಅರಬ್ ಎಮಿರೇಟ್ಸ್ ತಲುಪಿದ್ದಾರೆ ಎಂದು ಖಲೀಜ್ ಟೈಮ್ಸ್ ಪತ್ರಿಕೆಯು ವರದಿ ಮಾಡಿದೆ.

'ನನ್ನ ಅಚ್ಚುಮೆಚ್ಚಿನ ಹೀರೊ ಮೆಸ್ಸಿ ಆಡುವುದನ್ನು ನೋಡಲು ಇಲ್ಲಿಗೆ ಬಂದೆ. ಸೌದಿ ಅರೇಬಿಯಾ ತಂಡದ ವಿರುದ್ಧ ಮೆಸ್ಸಿಯ ಅರ್ಜೆಂಟೀನಾ ತಂಡವು ಸೋತಿದ್ದು ಮನಸ್ಸಿಗೆ ಬಹಳ ನೋವಾಯಿತು. ಆದರೆ ಮುಂದಿನ ಹಂತದಲ್ಲಿ ತಂಡ ಪುಟಿದೇಳುತ್ತದೆ. ವಿಶ್ವಕಪ್ ಗೆಲ್ಲುತ್ತದೆ' ಎಂದು ನಾಝಿ ಹೇಳಿದ್ದಾರೆ.

ತಮ್ಮ ಎಸ್‌ಯುವಿ ವಾಹನದಲ್ಲಿ ಏಕಾಂಗಿಯಾಗಿ ಅವರು ಕೊಲ್ಲಿ ರಾಷ್ಟ್ರಗಳಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಮಸ್ಕತ್‌ನಿಂದ ಆರಂಭಿಸಿ ಹೆಟ್ಟಾ ಬಾರ್ಡರ್ ಮುಖಾಂತರ ಪ್ರಯಾಣ ಮಾಡಿರುವ ಅವರು ವಿಶ್ವದ ಅತಿ ಎತ್ತರದ ಕಟ್ಟಡ ಬುರ್ಜ್ ಖಲೀಫಾ ನೋಡಲು ದುಬೈನಲ್ಲಿ ತಂಗಿದ್ದಾರೆ.

'ನನ್ನ ವಾಹನಕ್ಕೆ ಪ್ರೀತಿಯಿಂದ ಓಳ್ ಎಂದು ಹೆಸರಿಟ್ಟಿದ್ದೇನೆ. ಅಡುಗೆ ಮಾಡಲು ಮತ್ತು ತಂಗಲು ವ್ಯವಸ್ಥೆ ಇದರಲ್ಲಿಯೇ ಇದೆ. ಅಕ್ಕಿ, ಹಿಟ್ಟು, ಮಸಾಲೆ ಪದಾರ್ಥ ಹಾಗೂ ಒಣ ಆಹಾರ ಪದಾರ್ಥಗಳನ್ನು ಸಂಗ್ರಹಿಸಿಕೊಂಡಿದ್ದೇನೆ' ಎಂದು ತಿಳಿಸಿದ್ದಾರೆ.

ಓಳ್ ಎಂದರೆ ಮಲೆಯಾಳಿಯಲ್ಲಿ 'ಅವಳು' ಎಂದರ್ಥ.

ಇಂದಿನ ಪಂದ್ಯ

ಜಪಾನ್	ಕೋಸ್ಟರಿಕಾ	ಮಧ್ಯಾಹ್ನ 3.30
ಬೆಲ್ಜಿಯಂ	ಮೊರೊಕ್ಕೊ	ಸಂಜೆ 6.30
ಕ್ರೊವೇಷ್ಯಾ	ಕೆನಡಾ	ರಾತ್ರಿ 9.30
ಸ್ಪೇನ್	ಜರ್ಮನಿ	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್

ಸೌದಿ ಆಟಗಾರರಿಗೆ ರೋಲ್ಸ್ ರಾಯ್ಸ್ ಕಾರು

ಬಲಿಷ್ಠ ಅರ್ಜೆಂಟೀನಾ ತಂಡವನ್ನು ಸೋಲಿಸಿದ್ದ ಸೌದಿ ಅರೇಬಿಯಾದ ಫುಟ್‌ಬಾಲ್ ಆಟಗಾರರಿಗೆ ಭರ್ಜರಿ ಕಾಣಿಕೆ ಲಭಿಸಲಿದೆ.

ಸೌದಿಯ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಅಲ್ ಸೌದ್ ಅವರು ತಂಡದ ಪ್ರತಿಯೊಬ್ಬ ಆಟಗಾರನಿಗೂ ರೋಲ್ಸ್ ರಾಯ್ಸ್ ಫ್ಯಾಂಟಮ್ ಕಾರು ಕಾಣಿಕೆ ನೀಡಲಿದ್ದಾರೆ.

ಈ ಐಷಾರಾಮಿ ಕಾರಿನ ಬೆಲೆಯು ₹ 4.94 ಕೋಟಿ ಇದೆ. ಲಯೋನೆಲ್ ಮೆಸ್ಸಿಯವರಂತಹ ದಿಗ್ಗಜ ಆಟಗಾರ ಇರುವ ಅಗ್ರಶ್ರೇಯಾಂಕದ ಅರ್ಜೆಂಟೀನಾ ತಂಡವನ್ನು ಸೌದಿಯು 2–1ರಿಂದ ಸೋಲಿಸಿತ್ತು. ಕೊನೆಯ ಶ್ರೇಯಾಂಕದ ಸೌದಿ ತಂಡಕ್ಕೆ ವಿಶ್ವಕಪ್ ಇತಿಹಾಸದಲ್ಲಿಯೇ ಇದು ಅತ್ಯಂತ ದೊಡ್ಡ ಗೆಲುವು.

ಈ ಪಂದ್ಯದ ಸಂಭ್ರಮಾಚರಣೆಗಾಗಿ ಸೌದಿಯಲ್ಲಿ ಸಾರ್ವತ್ರಿಕ ರಜೆ ಘೋಷಿಸಲಾಗಿತ್ತು ಎಂದು ವಿಯಾನ್ ವೆಬ್‌ಸೈಟ್ ವರದಿ ಮಾಡಿದೆ.



ಐಎಸ್‌ಎಲ್ ಫುಟ್‌ಬಾಲ್ ಟೂರ್ನಿ: ಗೋವಾ ಪರಾಭವ

ಜೆವಿ ಮಿಂಚು: ಬಿಎಫ್‌ಸಿ ಗೆಲುವು


ಮಡಗಾಂವ್: ಸತತ ನಾಲ್ಕು ಸೋಲುಗಳಿಂದ ಕಂಗೆಟ್ಟಿದ್ದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವಿನ ಹಾದಿಗೆ ಮರಳಿತು.

ಶನಿವಾರ ಇಲ್ಲಿಯ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ 2–0ಯಿಂದ ಬಲಿಷ್ಠ ಎಫ್‌ಸಿ ಗೋವಾ ತಂಡಕ್ಕೆ ಸೋಲುಣಿಸಿತು.

ಎರಡು ಗೋಲು ಗಳಿಸಿದ ಜೆವಿ ಹೆರ್ನಾಂಡೆಜ್ ಗೆಲುವಿನ ರೂವಾರಿ ಎನಿಸಿದರು. 27ನೇ ನಿಮಿಷದಲ್ಲಿ ರಾಯ್‌ಕೃಷ್ಣ ನೆರವಿನಿಂದ ಚೆಂಡನ್ನು ಗುರಿ ಸೇರಿಸಿದ ಜೆವಿ, 57ನೇ ನಿಮಿಷದಲ್ಲೂ ಕಾಲ್ಚಳಕ ತೋರಿದರು. ಎರಡನೇ ಗೋಲು ಗಳಿಸಲು ಅವರಿಗೆ ಉದಾಂತ ಸಿಂಗ್ ನೆರವು ನೀಡಿದರು.

ಈ ಗೆಲುವಿನೊಂದಿಗೆ ಬಿಎಫ್‌ಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಎಂಟನೇ ಸ್ಥಾನಕ್ಕೇರಿತು. ಸದ್ಯ ತಂಡದ ಬಳಿ 7 ಪಾಯಿಂಟ್‌ಗಳಿವೆ. ಈ ಪಂದ್ಯಕ್ಕೂ ಮೊದಲು ತಂಡವು 10ನೇ ಸ್ಥಾನದಲ್ಲಿತ್ತು. ಚೆಟ್ರಿ ಬಳಗವು ಮುಂದಿನ ಪಂದ್ಯದಲ್ಲಿ ಡಿ. 3ರಂದು ಎಟಿಕೆ ಮೋಹನ್ ಬಾಗನ್ ಸವಾಲು ಎದುರಿಸಲಿದೆ.

ದಿನದ ಇನ್ನೊಂದು ಪಂದ್ಯದಲ್ಲಿ ಎಟಿಕೆ ಮೋಹನ್ ಬಾಗನ್ ತಂಡವು ಹೈದರಾಬಾದ್ ಎಫ್‌ಸಿ ತಂಡವನ್ನು 1–0ಯಿಂದ ಹಾಲಿ ಚಾಂಪಿಯನ್ ಸೋಲಿಸಿತು.



ಬಿಎಫ್‌ಸಿನ ಆಟಗಾರರ ಗೆಲುವಿನ ಸಂಭ್ರಮ– ಟ್ವಿಟರ್ ಚಿತ್ರ

ಐಒಎ ಅಧ್ಯಕ್ಷ ಹುದ್ದೆಗೆ ಸ್ಪರ್ಧೆ: ಉಷಾ

ನವದೆಹಲಿ (ಪಿಟಿಐ): ದಿಗ್ಗಜ ಅಥ್ಲೀಟ್ ಪಿ.ಟಿ. ಉಷಾ ಅವರು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸಲಿದ್ದಾರೆ. ಶನಿವಾರ ಅವರು ಟ್ವೀಟ್ ಮೂಲಕ ಈ ವಿಷಯ ತಿಳಿಸಿದ್ದಾರೆ.

ಡಿಸೆಂಬರ್ 10ರಂದು ಐಒಎಗೆ ಚುನಾವಣೆ ನಿಗದಿಯಾಗಿದೆ. 58 ವರ್ಷದ ಉಷಾ, ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದರು. 1984ರ ಒಲಿಂಪಿಕ್ಸ್‌ನ 400 ಮೀ. ಹರ್ಡಲ್ಸ್ ಫೈನಲ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದರು.

ಕಬಡ್ಡಿ: ಪುಣೇರಿಗೆ ಜಯ

ಹೈದರಾಬಾದ್: ಪಂಕಜ್ ಮೋಹಿತೆ ಮತ್ತು ಅಸ್ಲಂ ಇನಾಮದಾರ್ ಅವರ ಮಿಂಚಿನ ಆಟದಿಂದಾಗಿ ಪುಣೇರಿ ಪಲ್ಟನ್ ತಂಡವು ಪ್ರೊ ಕಬಡ್ಡಿ ಪಂದ್ಯದಲ್ಲಿ ಜಯಿಸಿತು.

ಶನಿವಾರ ಇಲ್ಲಿ ನಡೆದ ಪಂದ್ಯದಲ್ಲಿ ಪುಣೇರಿ ತಂಡವು 38–25ರಿಂದ ತೆಲುಗು ಟೈಟನ್ಸ್ ವಿರುದ್ಧ ಜಯಿಸಿತು.

ಪುಣೇರಿ ತಂಡದ ರೇಡರ್‌ಗಳಾದ ಪಂಕಜ್ ಹಾಗೂ ಅಸ್ಲಂ ತಲಾ ಎಂಟು ಅಂಕಗಳನ್ನು ಗಳಿಸಿದರು. ಅವರೊಂದಿಗೆ ಆಕಾಶ್ ಶಿಂಧೆ (5) ಕೂಡ ಮಿಂಚಿದರು. ಇದರಿಂದಾಗಿ ತಂಡವು ಪಾರಮ್ಯ ಮೆರೆಯಿತು. ಮೊದಲಾರ್ಧದಲ್ಲಿ ಪುಣೇರಿ ತಂಡವು 14–10ರಿಂದ ಮುನ್ನಡೆ ಸಾಧಿಸಿತ್ತು. ನಂತರದ ಅವಧಿಯಲ್ಲಿ ಮತ್ತಷ್ಟು ವೇಗವಾಗಿ ಅಂಕಗಳನ್ನು ಗಳಿಸಿತು.

ಮುಂಬಾಗೆ ಜಯ: ಇನ್ನೊಂದು ಪಂದ್ಯದಲ್ಲಿ ಗುಮಾನ್ ಸಿಂಗ್ ಮತ್ತು ಆಶಿಶ್ ಅವರ ಅಮೋಘ ಆಟದ ಬಲದಿಂದ ಯು ಮುಂಬಾ ತಂಡವು 49–41ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಗೆದ್ದಿತು. ಮುಂಬಾ ತಂಡದ ಗುಮಾನ್ ಸಿಂಗ್ (14) ಹಾಗೂ ಆಶಿಶ್ (13) ಮಿಂಚಿದರು. ಬೆಂಗಾಲ್ ತಂಡದ ಮಣಿಂದರ್ ಸಿಂಗ್ (13) ಉತ್ತಮವಾಗಿ ಆಡಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಯುಪಿ ಯೋಧಾಸ್ ತಂಡವು 35–33ರಿಂದ ಪಟ್ನಾ ಪೈರೇಟ್ಸ್ ತಂಡವನ್ನು ಪರಾಭವಗೊಳಿಸಿತು. ಯೋಧಾಸ್ ತಂಡದ ಪರ ಪ್ರದೀಪ್ ನರ್ವಾಲ್ ಅಮೋಘ 15 ಪಾಯಿಂಟ್ಸ್ ಗಳಿಸಿದರು.

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	18	12	4	2	69
ಜೈಪುರ	17	11	6	0	59
ಬೆಂಗಳೂರು	17	10	6	1	58
ಯುಪಿ	17	9	6	2	55
ಡೆಲ್ಲಿ	17	9	8	0	50
ಮುಂಬಾ	17	9	8	0	49

'ಚಾಲೆಂಜರ್ಸ್ ಕಪ್' ಬ್ಯಾಸ್ಕೆಟ್‌ಬಾಲ್ ಟೂರ್ನಿ

ಸೆಮಿಫೈನಲ್‌ಗೆ ಜೈನ್, ಮೈಕಾ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ಹಾಗೂ ಮೈಸೂರಿನ ಮೈಕಾ ಕಾಲೇಜು ತಂಡಗಳು ಇಲ್ಲಿ ನಡೆಯುತ್ತಿರುವ 'ಚಾಲೆಂಜರ್ಸ್ ಕಪ್' ಅಂತರರಾಜ್ಯ ಪದವಿ ಕಾಲೇಜು ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿವೆ.

ಮೈಸೂರು ವಿಶ್ವವಿದ್ಯಾಲಯದ ಬ್ಯಾಸ್ಕೆಟ್‌ಬಾಲ್ ಅಂಗಳದಲ್ಲಿ ಶನಿವಾರ ನಡೆದ ಲೀಗ್ ಹಂತದ ಪಂದ್ಯಗಳಲ್ಲಿ ಮೈಕಾ ತಂಡವು 80–78 ಪಾಯಿಂಟ್ ಅಂತರದಲ್ಲಿ ಸೇಲಂನ ಎವಿಎಸ್ ಕಾಲೇಜು ವಿರುದ್ಧ ರೋಚಕ ಗೆಲುವು ದಾಖಲಿಸಿದರೆ, ಜೈನ್ ವಿಶ್ವವಿದ್ಯಾಲಯ ತಂಡವು 64–15ರಿಂದ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು ತಂಡವನ್ನು ಮಣಿಸಿತು.

ಮೈಕಾ ತಂಡದ ಪರ ಕ್ಷಿತಿಜ್ (22 ಪಾಯಿಂಟ್) ಹಾಗೂ ಜೈನ್ ವಿಶ್ವವಿದ್ಯಾಲಯದ ಜೋಶ್ವಾ (12 ಪಾಯಿಂಟ್) ಮಿಂಚಿನ ಆಟವಾಡಿದರು.

ಸೆಮಿಗೆ ಲೊಯೊಲಾ, ಸತ್ಯಭಾಮ: ಚೆನ್ನೈನ ಲೊಯೊಲಾ ಕಾಲೇಜು ತಂಡದವರು 66–51 ಪಾಯಿಂಟ್‌ಗಳಿಂದ ಬೆಂಗಳೂರಿನ ನಿಟ್ಟೆ ಮೀನಾಕ್ಷಿ ತಂಡದ ವಿರುದ್ಧ ಜಯಗಳಿಸಿ ನಾಲ್ಕರ ಘಟ್ಟಕ್ಕೆ ಪ್ರವೇಶಿಸಿದರು. ಲೊಯೊಲಾ ಪರ ವೈಶಾಖ್ 17 ಪಾಯಿಂಟ್ ಕಾಣಿಕೆ ನೀಡಿದರೆ, ಬೆಂಗಳೂರು ತಂಡದ ಮದನ್ ಮಣಿ 15 ಪಾಯಿಂಟ್ ಕಲೆ ಹಾಕಿದರು.

ಮತ್ತೊಂದು ಪಂದ್ಯದಲ್ಲಿ ಚೆನ್ನೈನ ಸತ್ಯಭಾಮ ವಿಶ್ವವಿದ್ಯಾಲಯ ತಂಡದವರು 81–51 ಪಾಯಿಂಟ್‌ಗಳಿಂದ ಸೇಲಂನ ಎವಿಎಸ್ ಕಾಲೇಜು ತಂಡದವರನ್ನು ಮಣಿಸಿದರು. ಮಿಂಚಿನ ಆಟವಾಡಿದ ಸತ್ಯಭಾಮ ತಂಡದ ಪ್ರವೀಣ್ 25 ಪಾಯಿಂಟ್ ತಂದುಕೊಟ್ಟರು.



24x7 Helpline: 77106 44444 | www.sachisaheli.in | Available at all medical & general stores
Karnataka S.S.: Rakesh Enterprises (Banglore) : 23579251, Shree Rama sales (Yellapur) : 9449138897, 9845149088, Bagalkot : 9448227557, 9743831913, 9449624037, Bangalore : 9845474878, 26617033, 9449723416, 9448081790, 22257385, 26677013, 22874575, 9449647135, 22235533, 9036021900, 9845350230, 9448219410, 8147573584, 8022870983, 8050741006, 22876452, Belgaum : 4206784, 4203187, 2462656, 9243219520, 4205691, 9902713070, 9916313433, Bellary : 272810, 274640, 9844059284, 227195, Bidar : 230200, 9902237421, Bijapur : 9343234482, 9036542764, 9035107399, Chikkaballapura : 9845616394, 9980420024, 9845366649, 9845623253, Chikmagalur : 9242899048, Chitradurga : 9880031266, Dakshina Kannada : 9480842900, 2496963, 9844077991, 9480842900, 9448452134, 9739641159, 9448123933, Davanagere : 295021, 9880708064, 235741, 9845035121, Dharwad : 2221201, 2221331, 4258371, 2221344, 9900430413, Gadag : 9343938893, Gulbarga : 9845808570, 9343834519, 9242239281, 8088175001, 9449618981, Hassan : 9448957465, 9448885697, Haveri : 9844323973, 8147498820, 9448232120, 9739144449, Hubli : 9449068491, Kolar : 224583, Koppal : 220713, Mandya : 223951, Mysore : 8214000156, 9980615431, 8050655443, Raichur : 9900932939, 9880336111, 9983661742, Ramanagara : 9686815278, Shimoga : 222642, 270738, 271692, 228944, 9480473867, Tumkur : 4014475, 9632446447, Udupi : 9483153633, 9483153633, 9880143804, Uttara Kannada : 9916250217, 9980872214, Vijayapura : 8352258886